ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್, ಇತ್ಯಾದಿ



ಡಾ. ಶ್ರೀನಿವಾಸ ಹಾವನೂರ

ಕನ್ನಡದಲ್ಲಿ
ಕ್ರೈಸ್ತ, ಸಾಹಿತ್ಯ, ಹನಿಗತೆ, ಕಂಪ್ಯೂಟರ್, ಇತ್ಯಾದಿ

ಶ್ರೀನಿವಾಸ ಹಾವನೂರ

ಅನನ್ಯ ಪ್ರಕಾಶನ
ನಜರಾಬಾದ ಮೈಸೂರು–೧೦

Kannadadalli Kraista Sahitya, Hanigate, Kampyutar, Ityadi – Collection of literary esssays on Christian Literature in Kannada, Short-short St ory, Computer application on literature and other topics. By Dr. Shrinivasa Havanur, Professor and Head, Department of Kannada, Mangalore University, Mangalore-574 152, published in June 1982 by Ananya Prakashana, Nazarabad, Mysore-570 010 Pages : 164 (12 + 152) Price : Rs. 16/-

•

ಮುಖಚಿತ್ರ :

ಸಮುದ್ರದ ಕಲ್ಲುಬಂಡೆಯ ಮೇಲೆ ಹಬ್ಬಿದ ಪಾಚಿಯನ್ನು ಸೂಕ್ಷ್ಮವಾಗಿ ಎತ್ತಿ ತೆಗೆದು ಮೂಡಿಸಿದ್ದು. ಇನ್ನೂ ಫಲಬಿಡಬೇಕಾದ ಸಂಶೋಧನೆಯ ಪ್ರತೀಕ.

•

ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್, ಇತ್ಯಾದಿ :
ಡಾ. ಶ್ರೀನಿವಾಸ ಹಾವನೂರ
ಅನನ್ಯ ಪ್ರಕಾಶನ, ನಜರಾಬಾದ, ಮೈಸೂರು-೧೦
ಹರ್ಷ ಪ್ರಿಂಟರ್ಸ್, 15ನೇ ತಿರುವು, ಬಸವೇಶ್ವರ ರಸ್ತೆ, ಮೈಸೂರು-೪
ರೂ. ೧೬/-

ಪ್ರಕಾಶಕರ ಮಾತು

'ಹೊಸಗನ್ನಡದ ಅರುಣೋದಯ'ದಿಂದ ಸುವಿಖ್ಯಾತರಾದ ನಿಷ್ಠ ಸಂಶೋಧಕ ಡಾ. ಶ್ರೀನಿವಾಸ ಹಾವನೂರ ಅವರ ಅನೇಕ ಮಹತ್ವದ ಹಾಗೂ ಸ್ವೋಪಜ್ಞತೆಯಿಂದ ಕೂಡಿದ ಲೇಖನಗಳಲ್ಲಿ ಸದ್ಯ ಕೆಲವನ್ನು ಮಾತ್ರ ಇಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸುತ್ತಿದ್ದೇವೆ; ಅವರು ಶ್ರಮ ವಹಿಸಿ ವಿದೇಶಗಳಿಂದಲೂ ತಂದ ಹಲವು ಮಾಹಿತಿಗಳ, ಆಕರಗಳ ಪ್ರಯೋಜನ ಇಲ್ಲಿರುವುದು ಕನ್ನಡಕ್ಕೆ ಉಪಕಾರ.

ತಮ್ಮ ಈ ಲೇಖನಗಳನ್ನು ನಮ್ಮ ಪ್ರಕಾಶನದಲ್ಲಿ ಪ್ರಕಟಣೆಗೆ ಕೊಟ್ಟ ಡಾ. ಹಾವನೂರ ಅವರಿಗೆ ನಾನು ತುಂಬ ಕೃತಜ್ಞಳು.

ಮುನ್ನುಡಿ ಬರೆದುಕೊಟ್ಟ ಡಾ. ಎಂ. ಚಿದಾನಂದಮೂರ್ತಿ ಅವರಿಗೆ ನನ್ನ ವಿಶೇಷ ನೆನಕೆ ಸಲ್ಲಬೇಕು.

ಅಚ್ಚುಕಟ್ಟಾಗಿ ಮುದ್ರಿಸಿದ ಹರ್ಷ ಮುದ್ರಣಾಲಯದವರಿಗೂ, ಕೆ ಬಿ ಕೆ ಮತ್ತು ರವಿ ಅವರಿಗೂ ಕೃತಜ್ಞತೆಗಳು.

– ಹೇಮಾ

ಮುನ್ನುಡಿ

ಡಾ॥ ಶ್ರೀನಿವಾಸ ಹಾವನೂರ ಅವರು ನನ್ನ ಮಿತ್ರರಾಗಿರುವ ಕಾರಣದಿಂದ ಈ ಮುನ್ನುಡಿ ಬರೆಯುವುದು ಕಷ್ಟವಾಗಿದೆ ; ಒಳ್ಳೆಯ ಮಾತುಗಳನ್ನು ಬರೆದಿದ್ದರೆ ಅದಕ್ಕೆ ಸ್ನೇಹ ಕಾರಣ ಎಂದು ಓದುಗರು ಶಂಕಿಸಬಹುದೆಂಬ (ನಿಷ್ಕಾರಣ ?) ಅನುಮಾನ ನನ್ನದು. ಒಮ್ಮೆ ಮುನ್ನುಡಿ ಬರೆಯಲು ಒಪ್ಪಿಕೊಂಡ ಮೇಲೆ, ಡಾ॥ ಹಾವನೂರರೇ "ಈ ಚಳುವಳಿಯ ಗಡಿಬಿಡಿಯಲ್ಲಿ ನಿಮಗೆ ಆಗದಿದ್ದರೆ ಬಿಡಿ, ಪರವಾ ಇಲ್ಲ" ಎಂದು ಹೇಳಿದ್ದನ್ನೇ ನೆಪಮಾಡಿಕೊಂಡು ನಾನು ಮುನ್ನುಡಿಯ ಕಾರ್ಯದಿಂದ ಸುಲಭವಾಗಿ ತಪ್ಪಿಸಿಕೊಳ್ಳಬಹುದಿತ್ತು. ಆದರೆ ಒಳ್ಳೆಯ ಪುಸ್ತಕಕ್ಕೆ ನಾಲ್ಕು ಮಾತು ಬರೆದು ಆ ಪುಸ್ತಕದ ಜೊತೆ ನಾನೂ ಬಹುಕಾಲ ಇರುವ ಅವಕಾಶವನ್ನು ತಪ್ಪಿಸಿಕೊಳ್ಳುವ ಮನಸ್ಸು ಬರಲಿಲ್ಲ. ನಿಜ ಹೇಳುವುದಾದರೆ ನನಗೆ ಈ ಪುಟ್ಟ ಪುಸ್ತಕವನ್ನು ಓದಲು ಸಮಯವಿರಲಿಲ್ಲ. ಕೆಲವನ್ನು ನಗರ ಸಾರಿಗೆ ಬಸ್ಸಿನಲ್ಲಿ ಓದಿದೆ; ಒಂದೆರಡನ್ನು ಪೋಲಿಸ್ ಠಾಣೆಯಲ್ಲಿ ಓದಿದೆ. ಜೈಲಲ್ಲಿ ಸಮಯವಿರುತ್ತದೆಯೆಂದು ಇದನ್ನು ಜೈಲಿಗೂ ಕೊಂಡೊಯ್ದಿದ್ದೆ. ಅಲ್ಲಿ ಕೊನೆಯ ಪಕ್ಷ ಮೂರು ದಿನಗಳಾದರೂ ಕಳೆಯಬೇಕೆಂದು ನಿರ್ಧರಿಸಿಕೊಂಡಿದ್ದಾಗ ನಮ್ಮ ವಕೀಲರು – ನಮಗೆ ಸ್ವಲ್ಪ ನಿರಾಸೆಯಾಗುವಂತೆ – ಇನ್ನೂ ಒಂದೂವರೆ ದಿನಗಳು ಇರುವಂತೆಯೇ ಜಾಮೀನು ಮೇಲೆ ಬಿಡುಗಡೆ ಮಾಡಿಸಿ ಅಲ್ಲಿ ಇದನ್ನು ಓದಿ ಮುಗಿಸುವ ನನ್ನ ಸಂಕಲ್ಪಕ್ಕೆ ಅಡ್ಡಿಯಾದರು. ಇದೆಲ್ಲ ಅನಗತ್ಯ ಸ್ವಕೀಯ ಕಥನವೆಂದು ಯಾರಾದರೂ ಭಾವಿಸುವ ಮೊದಲೇ ಹೇಳಿಬಿಡುವುದು ಅಗತ್ಯ ನನ್ನ ಬದುಕಿನ ಅತ್ಯಂತ ದೈಹಿಕ ಆಯಾಸ ಮಾನಸಿಕ ಉದ್ರೇಕಗಳ (tensions) ಸಂದರ್ಭಗಳಲ್ಲಿ ಈ ಪುಸ್ತಕದ ಸಂಪ್ರಬಂಧಗಳು ನನಗೆ ತೃಪ್ತಿಯನ್ನು ತಂದುಕೊಟ್ಟುವು.

ಮೂಲತಃ ಕನ್ನಡದ ನಿಷ್ಠಾವಂತ ವಿದ್ಯಾರ್ಥಿಯಾಗಿದ್ದರೂ ಬಹುಕಾಲ ಬೊಂಬಾಯಿಯ ಪ್ರತಿಷ್ಠಿತ ವೈಜ್ಞಾನಿಕ ಸಂಶೋಧನ ಸಂಸ್ಥೆಯೊಂದರ ಪ್ರಧಾನ ಗ್ರಂಥಪಾಲಕರಾಗಿದ್ದುಕೊಂಡು, ತಮ್ಮ ಉದ್ಯೋಗವನ್ನು ನಿರ್ವಂಚನೆಯಿಂದ ನಿರ್ವಹಿಸುತ್ತ ಕನ್ನಡ ಸಂಶೋಧನೆಗಳನ್ನು ನಿಷ್ಠೆ ಶ್ರದ್ಧೆಯಿಂದ ಮುಂದುವರಿಸಿದರು. ರಜದ ದಿನಗಳಲ್ಲಿ ಧಾರವಾಡ ಬೆಂಗಳೂರು ಮೈಸೂರುಗಳಿಗೆ ಬಂದಾಗ ರಾಶಿ ರಾಶಿ ಪುಸ್ತಕಗಳನ್ನು ತಮ್ಮ ಸ್ವಂತ ಬಳಕೆಗಾಗಿ ಖರೀದಿಮಾಡಿ ಕೊಂಡೊಯ್ದು ತಮ್ಮ ಸಂಶೋಧನಾಸಕ್ತಿಯ ಚಿಲುಮೆ ಸದಾ ಜೀವಂತವಿರುವಂತೆ ನೋಡಿಕೊಂಡರು. ಇಂಗ್ಲೆಂಡಿಗೆ ಹಲವು ಬಾರಿ ಹೋಗಿ ಅಲ್ಲಿನ ಪುಸ್ತಕಭಂಡಾರಗಳಲ್ಲಿ ಹುದುಗಿರುವ ಕನ್ನಡ ಸಂಶೋಧನ ಸಾಮಗ್ರಿಯನ್ನು ಹೊರತಂದರು. ವೈಜ್ಞಾನಿಕ ಸಂಸ್ಥೆಯೊಂದರ ಗ್ರಂಥಪಾಲಕರು ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿ ಆಹ್ವಾನದ ಮೇಲೆ ನೇಮಕವಾದದ್ದು ಕನ್ನಡ ಅಧ್ಯಯನದ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯೆಂದೇ ನನ್ನ ಭಾವನೆ.

ಅವರಿಗೆ ಕರಗತವಾಗಿರುವ ಗ್ರಂಥಾಲಯ ವಿಜ್ಞಾನ ಪರಿಣತಿ, ಅವರು ಗ್ರಂಥಪಾಲಕರಾಗಿದ್ದ ವೈಜ್ಞಾನಿಕ ಸಂಸ್ಥೆಯ ಬಹುಕಾಲದ ನಿಕಟ ಒಡನಾಟ ಇವು ಅವರ ಕನ್ನಡ ಸಂಶೋಧನೆಯ ಮೇಲೆ ಒಂದೆರಡು ಚಿಕ್ಕ ಮಿತಿಗಳನ್ನು ಹಾಕಿವೆ, ಇನ್ನು ಹಲವಾರು ಆರೋಗ್ಯಕರ ಪರಿಣಾಮಗಳನ್ನು ಬೀರಿವೆ. ('ಮಿತಿ', 'ದೋಷ' ಬೇರೆ ಬೇರೆ). ಅವುಗಳನ್ನು ನಾನು ನನ ಮಿತಿಗೊಳಪಟ್ಟಂತೆ ಹೀಗೆ ಗುರುತಿಸಲು ಯತ್ನಿಸುತ್ತೇನೆ. ಹಾವನೂರರಿಂದ ಗ್ರಂಥ ಸಂಪಾದನೆಯ ಸಮಸ್ಯೆಗಳು, ಹಳಗನ್ನಡ ಕಾವ್ಯವಿಚಾರ ಇಂತಹ ಸಂಶೋಧನೆಗಳನ್ನು ನಾವು ನಿರೀಕ್ಷಿಸಬಾರದು; ಅಥವಾ ಅವರ ಬರಹಗಳು ಕೃತಿಯ ರಸಾಸ್ವಾದನೆಗೆ ನೇರವಾಗಿ ಸಹಾಯ ಮಾಡುತ್ತವೆಯೆನ್ನುವುದೂ ಕಷ್ಟ. ಅವರದು ಸಾಹಿತ್ಯ ಸಂಶೋಧನೆಯಲ್ಲೂ ಮುಖ್ಯವಾಗಿ ಐತಿಹಾಸಿಕವಾದ ವೈಜ್ಞಾನಿಕ ದೃಷ್ಟಿ. ಹೊಸ ಸಂಗತಿಗಳನ್ನು ದಾಖಲು ಮಾಡುವುದು, ಮಾಹಿತಿಯನ್ನು ಸಂಗ್ರಹಿಸುವುದು, ವರ್ಗೀಕರಿಸಿ ವಿಶ್ಲೇಷಿಸುವುದು, ಅಗತ್ಯವಾದರೆ ಹೆಚ್ಚಿನ ಸಂಶೋಧನೆಗೆ ಅನುವು ಮಾಡಿಕೊಡುವುದು, 'ಇದು ಹೀಗಿದೆ, ಇದರಿಂದ ಏನು ಉಪಯೋಗವೋ ಅದು ಓದುಗರಿಗೆ ಬಿಟ್ಟದ್ದು' ಎಂಬ ನಿರ್ಲಿಪ್ತ ಭಾವನೆ, ಬರಹದಲ್ಲಿ ನೀರಸವೆನ್ನಬಹುದಾದಷ್ಟು ವಸ್ತುನಿಷ್ಠತೆ, ಭಾವಾವೇಶ ರಾಹಿತ್ಯ, ಉತ್ಪ್ರೇಕ್ಷೆಯ ಅಭಾವ ಇವು ಅವರ ಬರಹಗಳ ಗುಣಗಳು; ಯಾವನೇ ಶ್ರೇಷ್ಠ ಸಂಶೋಧಕ ಇಟ್ಟುಕೊಳ್ಳಬೇಕಾದ ಆದರ್ಶಗಳು. ಸಂಶೋಧನೆಯ ನಿಜವಾದ ಹಂಬಲವಿರುವ ಯಾವನೇ ವ್ಯಕ್ತಿ ತಾನು ಇರುವ ಪ್ರದೇಶ, ತನಗೆ ಲಭ್ಯ ಸಾಮಗ್ರಿ ಮತ್ತು ಕಾಲಗಳನ್ನೇ ಬಳಸಿಕೊಂಡು ಮುಂದುವರಿಯುತ್ತಾನೆಯೇ ಹೊರತು ಅವುಗಳ ಬಗ್ಗೆ ಗೊಣಗುವುದಿಲ್ಲ ಎಂಬುದಕ್ಕೆ ಡಾ. ಹಾವನೂರ ಉಜ್ವಲ ಸಾಕ್ಷಿಯಾಗಿದ್ದಾರೆ. ''ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದಕ್ಕೆ ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ.''

ಇಲ್ಲಿಯ ಹನ್ನೆರಡು ಸಂಪ್ರಬಂಧಗಳಲ್ಲಿ ಒಂದೊಂದನ್ನೂ ಕುರಿತು ವಿಚಾರ ಮಾಡಲು ಇದು ಸೂಕ್ತ ಜಾಗ ಅಲ್ಲವಾದರೂ ಕೆಲವು ಸಂಗತಿಗಳನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಮೊದಲ ಸಂಪ್ರಬಂಧವಾದ ''ಕನ್ನಡ ಸಾಹಿತ್ಯ ಚರಿತ್ರೆಯ ಕಾಲ ವಿಭಾಗ – ಒಂದು ಸಮನ್ವಯ''ದಲ್ಲಿ ಸಾಹಿತ್ಯ ಚರಿತ್ರೆಯನ್ನು ವರ್ಗೀಕರಿಸುವಲ್ಲಿ ಒಂದು ಸಮನ್ವಯ ಮಾರ್ಗವನ್ನು ತೋರಿಸಲಾಗಿದೆ. ಹಳಗನ್ನಡ, ನಡುಗನ್ನಡಗಳೆಂಬ ಸ್ಥೂಲ ಭೇದಗಳನ್ನಿಟ್ಟುಕೊಂಡು ಅವುಗಳಲ್ಲಿ ಉದಯಕಾಲ, ಮಧ್ಯಕಾಲ, ಸಂಧ್ಯಾಕಾಲಗಳೆಂಬ ಕಾಲಾನುಕ್ರಮ ವರ್ಗಗಳನ್ನು ತೋರಿಸಿ ಆಯಾ ವರ್ಗಗಳ ಕೆಲವು ವೈಲಕ್ಷಣ್ಯಗಳನ್ನು ಎತ್ತಿ ತೋರಿಸಿದೆ. ಹಳಗನ್ನಡ ಯುಗದಲ್ಲಿಯೇ ಸ್ಪಷ್ಟ ವೈಲಕ್ಷಣ್ಯಗಳನ್ನುಳ್ಳ ಪೂರ್ವದ ಹಳಗನ್ನಡವನ್ನು ಸೇರಿಸಿರುವುದಾಗಲಿ, ಹಳಗನ್ನಡ ಯುಗದ ಮಧ್ಯಕಾಲದಲ್ಲಿ ರಾಷ್ಟ್ರಕೂಟರ ಹೆಸರನ್ನು ಕೈಬಿಟ್ಟಿರುವುದಾಗಲಿ ಸಮರ್ಥನೀಯವಲ್ಲ. ''ಹದಿನೆಂಟನೆಯ ಶತಮಾನದ ಕನ್ನಡ ಸಾಹಿತ್ಯ'' ಎಂಬ ಸಂಪ್ರಬಂಧದಲ್ಲಿ ಸಾಹಿತ್ಯ ಚರಿತ್ರೆಯಲ್ಲಿ ಅಷ್ಟು

ಪ್ರಮುಖವಲ್ಲವೆಂದು ಭಾವಿಸಲಾದ ಒಂದು ಶತಮಾನದ ಸಾಹಿತ್ಯದ ಒಳ್ಳೆಯ ಸಮೀಕ್ಷೆ ದೊರಕುತ್ತದೆ. ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯವನ್ನು ಕುರಿತಂತೆ ಮೂರು ಬರಹಗಳು ಈ ಪುಸ್ತಕದ ಅತ್ಯಂತ ಆಕರ್ಷಕ ಭಾಗ. ಹೊಸಗನ್ನಡ ಸಾಹಿತ್ಯದ ಉದಯಕ್ಕೆ ಪೂರ್ವಪೀಠಿಕೆಯಾಗಿ ಬಂದ ಕನ್ನಡ ಕ್ರೈಸ್ತ ಸಾಹಿತ್ಯದ ಅನ್ಯತ್ರ ದೊರಕದ ಅತ್ಯಂತ ಅಧಿಕೃತ ದಾಖಲೆ ಇಲ್ಲಿ ದೊರಕುತ್ತದೆ. ಮೊದಲ ಕ್ರೈಸ್ತ ಬರಹದ ಮಾದರಿಗಳೂ ಇಲ್ಲುಂಟು. ಮೊದಲ ಕ್ರೈಸ್ತ ಮಿಶನರಿ, ಮೊದಲ ಕನ್ನಡ ಪುಸ್ತಕ, ಅಚ್ಚಾದ ಮೊದಲ ಕನ್ನಡ ಕೃತಿ, ಮೊದಲ ಕನ್ನಡ ಪತ್ರಿಕೆ, ಮೊದಲ ಕನ್ನಡ ಡಾಕ್ಟೋರಲ್ ಪ್ರಶಸ್ತಿ, ಇತ್ಯಾದಿ ಎಷ್ಟೋ ಅಪೂರ್ವ ವಿಷಯಗಳು ಇಲ್ಲಿ ದೊರಕುತ್ತವೆ. ಇಲ್ಲಿನ ಹೆಚ್ಚಿನ ಮಾಹಿತಿ ಡಾ. ಹಾವನೂರರ ಸ್ವಂತ ಸಂಶೋಧನೆ. ಕೆಲವು ಸಂಸ್ಥೆ, ಪತ್ರಿಕೆಗಳ ಸಂಕ್ಷಿಪ್ತ ನಾಮಗಳನ್ನು ವಿಸ್ತರಿಸಿ ಕೊಡುವ ಅಗತ್ಯವಿತ್ತೆಂದು ತೋರುತ್ತದೆ. ಪು. ೩೫ರಲ್ಲಿ "ೀ" ದೀರ್ಘ ಸಂಜ್ಞೆ ಸವೆರಿಯ ಕೈಬರಹದಲ್ಲಿ (1739) ಕಾಣದಿರಲು ಕಾರಣವನ್ನು ಪ್ರಶ್ನಿಸಲಾಗಿದೆ. ಅಂದಿನ ಹಸ್ತ ಪ್ರತಿಗಳಲ್ಲಿ ಆ ಚಿಹ್ನೆ ಇರಲಿಲ್ಲವೆಂಬುದು ಗಮನಾರ್ಹ. ಪು. ೪೨ರಲ್ಲಿ ಬರುವ ಬಿ. ಎಚ್. ರೈಸ್ (ಶಾಸನಪಿತಾಮಹ ಬಿ. ಎಲ್. ರೈಸರ ತಂದೆ) ಹೆಸರಲ್ಲಿ ಬೆಂಗಳೂರಿನ ಅವಿನ್ಯೂ ರಸ್ತೆಯಲ್ಲಿ ಒಂದು ಚರ್ಚ್ ಇರುವುದನ್ನು ಡಾ. ಹಾವನೂರರ ಗಮನಕ್ಕೆ ತರಲು ಬಯಸುತ್ತೇನೆ. ಒಂದು ಸಂಪ್ರಬಂಧದಲ್ಲಿ ಐ. ಮಾ. ಮುತ್ತಣ್ಣನವರ ಗ್ರಂಥವೊಂದರ ಸಮೀಕ್ಷೆಯನ್ನು ಮಾಡುತ್ತ ಅದರ ಹಲವಾರು ದೋಷಗಳನ್ನು ತಿದ್ದಿ ಮತ್ತೆ ಹಲವು ಹೊಸ ಅಂಶಗಳನ್ನು ಎತ್ತಿ ತೋರಿಸಲಾಗಿದೆ. 19–20ನೇ ಶತಕದ ಸಂಧಿಯುಗದಲ್ಲಿದ್ದ ಶ್ರೀಕಂಠೇಶಗೌಡರ ಕಾಲದ ಕನ್ನಡ ಸಾಹಿತ್ಯದ ಸಮೀಕ್ಷೆ ಒಂದು ಪ್ರೌಢ ಬರಹದ ಮಾದರಿ. ಕನ್ನಡ ಕಾದಂಬರಿಗಳ ಮೊದಲ ಹೆಜ್ಜೆಗುರುತುಗಳನ್ನು ತೋರಿಸುವ ಬರಹ ಈ ಸಂಕಲನದ ಇನ್ನೊಂದು ತೌಲಿಕ ಸಂಪ್ರಬಂಧ. 'Novel' ಪದಕ್ಕೆ 'ಕಾದಂಬರಿ' ಪದವು ಸಂವಾದಿಯಾಗಿ ಬಳಕೆಯಾಗಲು ಮರಾಠಿ ಸಾಹಿತ್ಯ ಕಾರಣವೆಂಬುದನ್ನು ಸಾಧಾರವಾಗಿ ತೋರಿಸಿಕೊಟ್ಟು ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳನ್ನು ಗುರುತಿಸಿದ್ದಾರೆ. ಸರಳ ನಿರ್ಣಯಗಳನ್ನು ಕೊಡುವ ಈ ಬರಹದ ಹಿಂದೆ ಅಪಾರ ಶ್ರಮವಿದೆಯೆಂಬಲ್ಲಿ ಅನುಮಾನವಿಲ್ಲ. ಕನ್ನಡದಲ್ಲಿ ಹನಿಗತೆಗಳ ಸ್ವರೂಪ, ಚರಿತ್ರೆ ಬಹು ಸಮರ್ಪಕವಾಗಿ ಮೂಡಿಬಂದಿದೆ. ಸಾಹಿತ್ಯಾಭ್ಯಾಸಕ್ಕೆ ಕಂಪ್ಯೂಟರಿನಿಂದ ಒದಗುವ ಸಹಾಯವನ್ನು ಕುರಿತಂತೆ ಎರಡು ಬರಹಗಳಿವೆ. ಮತ್ತು ಸಾಹಿತ್ಯದ ಅಧ್ಯಯನಕ್ಕೆ ಕಂಪ್ಯೂಟರ್ ಸಹಾಯವನ್ನು ಬಳಸಿಕೊಂಡ ಆದ್ಯರಾಗಿದ್ದಾರೆ ಡಾ. ಹಾವನೂರ. ವಿಷ್ಣುವನ್ನು ಕಥನಾಯಕನನ್ನಾಗಿ ತನ್ನ ಕೃತಿಗಳಿಗೆ ಆರಿಸಿಕೊಂಡ ಮುದ್ದಣ ಆಳದಲ್ಲಿ ಶಿವ ಪಕ್ಷಪಾತಿಯಾಗಿದ್ದನೆಂಬುದನ್ನೂ ಶಿವನೇ ಕವಿಯ 'ಆರಾಧ್ಯದೈವತ'ನಾಗಿದ್ದನೆಂಬುದನ್ನೂ ಕಂಪ್ಯೂಟರ್ ತೋರಿಸಿಕೊಟ್ಟುದನ್ನು ಒಂದು ಸಂಪ್ರಬಂಧದಲ್ಲಿ ಎತ್ತಿ ಹಿಡಿದ್ದಾರೆ. ಇದು ಕವಿಯ ಕಾವ್ಯಾಭ್ಯಾಸಕ್ಕಲ್ಲದಿದ್ದರೂ ಕವಿಯ ವೈಯಕ್ತಿಕ ಬದುಕನ್ನು, ಮನಸ್ಸಿನ ವೈರುಧ್ಯವನ್ನು ತಿಳಿಯುವುದಕ್ಕಾದರೂ ಸಹಾಯಕವಾಗುತ್ತದೆ. ಕಂಪ್ಯೂಟರ್

ಕೆಲವೊಮ್ಮೆ ನಮ್ಮ ಸಾಮಾನ್ಯ ಅಧ್ಯಯನಗಳು ತಂದುಕೊಡುವ ನಿರ್ಣಯಗಳಿಗಿಂತ ಬೇರೆಯದೇ ಆದ ತೀರ್ಮಾನಗಳನ್ನು ಒದಗಿಸುವುದಕ್ಕೆ ಹಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಕಂಪ್ಯೂಟರ್ ಅಧ್ಯಯನವನ್ನು ಬೇಂದ್ರೆಯವರಿಗೆ ಸಂಬಂಧಿಸಿದಂತೆ ನಡೆಸಿರುವುದನ್ನು ಇನ್ನೊಂದು ಸಂಪ್ರಬಂಧದಲ್ಲಿ ಪ್ರಸ್ತಾಪಿಸಿದ್ದರೂ ಆ ಅಧ್ಯಯನದ ಫಲಗಳನ್ನು ಅಲ್ಲಿ ಕೊಟ್ಟಿಲ್ಲ.

ಹೀಗೆ, ಈ ಸಂಪ್ರಬಂಧ ಸಂಕಲನ ಕನ್ನಡ ಸಂಶೋಧನ ಪ್ರಪಂಚಕ್ಕೆ ಒಂದು ವಿಶಿಷ್ಟ ವಿನೂತನ ಕೊಡುಗೆ ಆಗಿದೆ. ಡಾ. ಹಾವನೂರ ಹಲವು ಹೊಸ ಸಂಗತಿಗಳನ್ನು ದಾಖಲು ಮಾಡುವಲ್ಲಿ ಅತ್ಯಂತ ವಿಶ್ವಾಸಾರ್ಹ ಸಂಶೋಧಕರಾಗಿದ್ದಾರೆ. ಮುಂದಿನ ಸಂಶೋಧಕರು ಬೇರೆ ಬೇರೆ ಕ್ಷೇತ್ರಗಳಲ್ಲಿ ಡಾ. ಹಾವನೂರ ಅವರನ್ನು ಬಳಸಿಕೊಳ್ಳಲೇ ಬೇಕಾದಂತಹ ಬರಹಗಳು ಇಲ್ಲಿವೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಕರ್ನಾಟಕದಿಂದ ದೂರವಿದ್ದ ಅವರು ಈಗ ಕರ್ನಾಟಕಕ್ಕೆ, ಸಂಶೋಧನ ವಿಭಾಗಕ್ಕೇ ಬಂದಿರುವುದರಿಂದ ಅವರಿಂದ ನಾವು ಇನ್ನೂ ಹೆಚ್ಚು ಪ್ರಮಾಣದ ಸಂಶೋಧನೆಗಳನ್ನು ನಿರೀಕ್ಷಿಸುವುದಲ್ಲದೆ ಕನ್ನಡ ಸಂಶೋಧನೆಗೆ ಹೆಚ್ಚಿನ ಚಾಲನೆಯೂ ಹೊಸ ದಿಕ್ಕೂ ಮತ್ತು ಆಯಾಮಗಳೂ ಅವರಿಂದ ಲಭ್ಯವಾಗುತ್ತವೆಯೆಂದು ನಿರೀಕ್ಷಿಸುತ್ತೇವೆ.

ಬೆಂಗಳೂರು
8–6–1982

–ಎಂ. ಚಿದಾನಂದಮೂರ್ತಿ

ತಮ್ಮ ವಿದ್ವತ್ತು, ಔದಾರ್ಯ, ನಿರ್ಮಲಾಂತಃಕರಣಗಳನ್ನು
ನನಗೆ ಧಾರಾಳವಾಗಿ ನೀಡಿದ

ದಿ. ಪ್ರೊ. ಸಿ. ಎಮ್. ಕುಲಕರ್ಣಿ ಅವರಿಗೆ

ಈ ಲೇಖನಗಳನ್ನು ಕುರಿತು ಒಂದಿಷ್ಟು ವಿವರಣೆ

'ಹೊಸಗನ್ನಡದ ಅರುಣೋದಯ' ದಲ್ಲಿ (ಮೈಸೂರು ವಿ. ವಿ., ೧೯೭೪) ಬಂದಿರುವ ಹಲವಾರು ಅಂಶಗಳು ಇಲ್ಲಿಯ ೩–೪ ಲೇಖನಗಳಲ್ಲಿ ಮತ್ತೆ ಕಾಣಿಸಿಕೊಂಡಿವೆ. 'ಅರುಣೋದಯ'ವು ಒಂದು ಬೃಹದ್ಗ್ರಂಥ. ಒಂದು ವಿಷಯದ ಮೇಲಿನ ಎಲ್ಲ ಮಾಹಿತಿ ಹಲವು ಹತ್ತು ಕಡೆ ಹಂಚಿ ಹೋಗಿದೆ (ಉದಾ. ಗೆ ಕ್ರೈಸ್ತ ವಾಙ್ಮಯದ ಕುರಿತು). ಅಂಥದೊಂದು ವಿಷಯದ ಸಾರ ಪರಿಚಯವಾಗುವ ದೃಷ್ಟಿಯಿಂದ ಬರೆದ ಲೇಖಗಳಲ್ಲಿ ಈ ಪುನರಾವೃತ್ತಿ ಕಂಡುಬರುತ್ತದೆ. ಅಲ್ಲದೆ, ಯಾವದೊಂದು ವಿವೇಚನೆಯ ಮುಂದುವರಿದ ಶೋಧನೆಯನ್ನು ಹೇಳಬೇಕಾದ ಪ್ರಸಂಗದಲ್ಲಿಯೂ ಪುನರಾವೃತ್ತಿ ಅನಿವಾರ್ಯ.

ಕ್ರೈಸ್ತ ಸಾಹಿತ್ಯವನ್ನು ಕುರಿತ ಲೇಖವನ್ನು ಮೂಲತಃ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದವರ ಅನುಜ್ಞೆಯ ಮೇರೆಗೆ ಬರೆಯಲಾಯಿತು. ಅದನ್ನು ತುಸು ನವೀಕರಿಸಿ ಇಲ್ಲಿ ಸೇರಿಸಿದೆ.

ಐ. ಮಾ. ಮುತ್ತಣ್ಣನವರ ಪುಸ್ತಕದ ಪರಾಮರ್ಶೆಯನ್ನು ಇಲ್ಲಿ ಕೊಟ್ಟಿದೆ. ಆ ಗ್ರಂಥವನ್ನು ಆಧರಿಸಿ, ಅನೇಕರು ತಮ್ಮ ಹೊಸ ವಿಚಾರಗಳನ್ನು ಮಂಡಿಸುತ್ತ ಇದ್ದಾರೆ. ಆಗೀಗ ಅದರಿಂದ ಅವತರಣಿಕೆಗಳನ್ನು ಉದ್ಧರಿಸುತ್ತಾರೆ. ಆ ಗ್ರಂಥವು ಎಷ್ಟರಮಟ್ಟಿಗೆ ಪ್ರಾಮಾಣ್ಯ ಎಂಬುದರ ಸ್ಪಷ್ಟ ಕಲ್ಪನೆ ಇರಲೆಂದು ಈ ಪರಾಮರ್ಶೆ ಬಂದಿದೆ.

ಕನ್ನಡದ ಆರಂಭದ ಕಾದಂಬರಿಗಳನ್ನು ಕುರಿತ ಪ್ರಜಾವಾಣಿಯ ಲೇಖನಮಾಲೆಯಲ್ಲಿ (ಜೂನ್–ಜುಲೈ ೧೯೭೩) ಹಾಗೂ ಇತರ ಕೆಲವಡೆ, ತಮಗೆ ಕಂಡುಬಂದ ಆರಂಭಕಾಲದ ಕಾದಂಬರಿಗೆ 'ಪ್ರಥಮ' ಎಂಬ ಹಣೆಪಟ್ಟಿ ಹಚ್ಚುವುದು ಕಂಡುಬಂದಿತು. ಈ 'ಪ್ರಥಮ'ತ್ವ ಎಷ್ಟರ ಮಟ್ಟಿಗೆ ನ್ಯಾಯವಾದುದು ಮತ್ತು ಯಾವ ಸಂದರ್ಭದಲ್ಲಿ – ಎಂಬುದನ್ನು ವಿಶದಗೊಳಿಸುವುದು ಅಗತ್ಯವಿದ್ದಿತು. ಅಂತಾಗಿ 'ಮೊದಲ ಕಾದಂಬರಿಗಳ ಚಾರಿತ್ರಿಕ ಹಿನ್ನೆಲೆ'ಯ ಲೇಖದ ಸೇರ್ಪಡೆ.

ಶ್ರೀಕಂಠೇಶಗೌಡರ ಮೇಲಿನ ಲೇಖದಲ್ಲಿ ಮೈಸೂರು ದೊರೆಗಳ ಹೆಸರು 'ಚಾಮರಾಜ' ಎಂದು ತಪ್ಪಾಗಿ ಬಂದಿದೆ. ಸರಿಯಾದ ಹೆಸರು 'ಚಾಮರಾಜೇಂದ್ರ'.

ಇಲ್ಲಿಯ ಎರಡು ಲೇಖಗಳಲ್ಲಿ ಕಂಪ್ಯೂಟರ್ ಸಹಾಯದ ಪ್ರಸ್ತಾಪವಿದೆ. ಈ ಕೆಲಸದಲ್ಲಿ ಸಾಕಷ್ಟು ಪ್ರಗತಿಯಾಗಿದ್ದು, ಕನ್ನಡ ಸಾಹಿತ್ಯಕ್ಕೆ ಅನ್ವಯಿಸಿ ಪುಸ್ತಕವೊಂದು ಪ್ರತ್ಯೇಕವಾಗಿ ಸಿದ್ಧಗೊಳ್ಳುತ್ತಲಿದೆ.

– ಶ್ರೀ. ಹಾ.

ಜೂನ್ ೧೯೮೨

ಪರಿವಿಡಿ

ಕನ್ನಡ ಸಾಹಿತ್ಯ ಚರಿತ್ರೆಯ ಕಾಲವಿಭಾಗ - ಒಂದು ಸಮನ್ವಯ

ಕಿಟೆಲ್ಲರು ಕ್ರಿ. ಶ. ೧೮೭೫ರಲ್ಲಿ ಕನ್ನಡ ಸಾಹಿತ್ಯೇತಿಹಾಸದ ಮೊದಲ ಸಮೀಕ್ಷೆಯನ್ನು ಬರೆದರು. ಹಾಗೆ ಬರೆಯುವಾಗ ಅವಸ್ಥಾ ಭೇದಗಳನ್ನು ಕಲ್ಪಿಸಿದರು. ಅನಂತರ ಹಲವಾರು ವಿದ್ವಾಂಸರು, ಈ ಕುರಿತು ವಿವೇಚನೆ ಮಾಡಿರುವರಾದರೂ[1] ತಕ್ಕಮಟ್ಟಿಗೆ ಸರ್ವಸಮ್ಮತವಾದ ವಿಧಾನವೊಂದು ಹೊರಹೊಮ್ಮಲಿಲ್ಲ. ಇನ್ನು ಮುಂದಾದರೂ ಹಾಗೆ ಆಗುವ ಲಕ್ಷಣವಿಲ್ಲ! ಏಕೆಂದರೆ ಇದರಲ್ಲಿ ಹೊಸ ಅಂಶಗಳು ಬೆಳಕಿಗೆ ಬರುವ ಪ್ರಮೇಯವಿಲ್ಲ; ಹಾಗೂ ವಿದ್ವಾಂಸರು ಹೇಳಬೇಕಾದ್ದನ್ನೆಲ್ಲ ಹೇಳಿ ಮುಗಿಸಿದ್ದಾರೆ. ಆದಕಾರಣ ಇದುವರೆಗೆ ವ್ಯಕ್ತವಾದ ಅಭಿಪ್ರಾಯಗಳಲ್ಲಿಯೇ ಸಮನ್ವಯವನ್ನು ಸಾಧಿಸಲು ಈ ಲೇಖದಲ್ಲಿ ಪ್ರಯತ್ನಿಸಲಾಗಿದೆ.

ತರ್ಕಶಾಸ್ತ್ರದ ಪ್ರಕಾರ ಯಾವುದೊಂದು ವಿಭಾಗ ಕ್ರಮದಲ್ಲಿ ಉದ್ದಕ್ಕೂ ಸಾಮಾನ್ಯ ಗುಣಧರ್ಮ (Common Characteristic) ಇರಬೇಕಾಗುತ್ತದೆ. ಮತತತ್ವ, ಅಂತಃಪ್ರೇರಣೆ, ಪ್ರಮುಖ ಕವಿಪ್ರಭಾವ, ಭಾಷಾಸ್ವರೂಪ, ಸಾಹಿತ್ಯರೂಪ–ಮೊದಲಾದ ಗುಣಧರ್ಮಗಳಲ್ಲಿ ಒಂದನ್ನು ಎತ್ತಿಕೊಂಡು ಬೇರೆ ಬೇರೆ ವಿದ್ವಾಂಸರು ಅವಸ್ಥಾ ಭೇದಗಳನ್ನೇನೊ ಕಲ್ಪಿಸಿದರು. ಇವು ಒಟ್ಟಿನಲ್ಲಿಯಾದರೂ ಸರ್ವಗ್ರಾಹ್ಯವಾಗದಿದ್ದುದರ ಏಕಮೇವ ಕಾರಣವೆಂದರೆ, ನಮ್ಮ ೧೫೦೦ ವರ್ಷಗಳ, ಸುದೀರ್ಘ ಪರಂಪರೆಯ ಸಾಹಿತ್ಯಸೃಷ್ಟಿಯಲ್ಲಿ ಕಂಡುಬರುವ ಸಂಕೀರ್ಣತೆ. ಹನ್ನೆರಡನೆಯ ಶತಮಾನದಿಂದ ಈ ಸಂಕೀರ್ಣತೆಯು ಹೆಚ್ಚುತ್ತ ಹೋಗಿ, ೧೯ನೆಯ ಶತಕದಷ್ಟೊತ್ತಿಗೆ ಪರಾಕಾಷ್ಠೆಯನ್ನು ಮುಟ್ಟಿತು. ಹಾಗಿದ್ದರೂ ಕಥಾವಸ್ತು, ರಚನಾಕ್ರಮ ಹಾಗೂ ಭಾಷೆ–ಇವುಗಳ ದೃಷ್ಟಿಯಿಂದ ನೋಡಿದಾಗ ಅತ್ಯಂತ ಸ್ಥೂಲವಾದರೂ, ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡಗಳೆಂಬ ಅವಸ್ಥಾಭೇದಗಳು ನಿಚ್ಚಳವಾಗಿ ಗೋಚರವಾಗುತ್ತವೆ. ಐದನೆಯ ಶತಮಾನದಿಂದ (ಹಲ್ಮಿಡಿಯ ಶಾಸನ ಕಾಲದಿಂದ) ಹಳಗನ್ನಡ ಸಾಹಿತ್ಯವು ಆರಂಭವಾಯಿತು. ಹನ್ನೆರಡನೆಯ ಶತಮಾನದಲ್ಲಿ ವಚನಕಾರರು ಕಾಣಿಸಿಕೊಂಡಂದಿನಿಂದ ನಡುಗನ್ನಡ ಕಾಲವು ಮೊದಲಾಯಿತು. ಮುಂದೆ ಪಾಶ್ಚಾತ್ಯ ಸಂಪರ್ಕದಿಂದಾಗಿ ೧೯ನೆಯ

ಶತಮಾನದ ಆರಂಭ ಕಾಲದಿಂದ ಹೊಸಗನ್ನಡ ಯುಗವು ಸ್ಪಷ್ಟವಾಗಿ ತಲೆದೋರಿತು.* ಈ ವಿಷಯವಾಗಿ ಭಿನ್ನಾಭಿಪ್ರಾಯಗಳಿಗೆ ಅವಕಾಶವೇ ಇಲ್ಲವೆನ್ನಬಹುದು.

ಯಾವುದೊಂದು ಯುಗವು ಇಂಥ ಕಾಲಾವಧಿಯಿಂದ ಆರಂಭವಾಯಿತು-ಎಂದಾಗ ಅದರ ಹಿಂದಿನ ಯುಗವು ಪರಿಸಮಾಪ್ತಿ ಹೊಂದಿತೆಂದು ಅರ್ಥವಲ್ಲ! ನಡುಗನ್ನಡ ಯುಗವು ಆರಂಭವಾದ ೧೨ನೆಯ ಶತಮಾನದಲ್ಲಿ ಹಳಗನ್ನಡ ಸಾಹಿತ್ಯ ನಿರ್ಮಿತಿಯು ಯಾವ ದೃಷ್ಟಿಯಿಂದಲೂ ಇಳಿಮುಖವಾಗಿರಲಿಲ್ಲ. ನಮ್ಮ ಸಾಹಿತ್ಯದಲ್ಲಿಯ ಮತಪ್ರಾಬಲ್ಯದ ದೃಷ್ಟಿಯಿಂದ ನೋಡಿದಾಗಲೂ ಈ ಅಂಶವು ಎದ್ದು ಕಾಣುವಂತಿದೆ. 'ಜೈನ, ವೀರಶೈವ, ಬ್ರಾಹ್ಮಣ–ಇವು ಒಂದರ ಹೊರತು ಇನ್ನೊಂದು ಎಂದಾಗದೇ, ಒಂದರೊಡನೆ ಇನ್ನೊಂದು ಎಂಬಂತೆ ಸಮ್ಮಿಶ್ರವಾಗಿ ಹರಿದಿವೆ. ಈ ದೃಷ್ಟಿಯಿಂದ....ಈ ಮೂರು ಯುಗಗಳನ್ನು ಜೈನ ಪ್ರಾರಂಭಯುಗ, ವೀರಶೈವ ಪ್ರಾರಂಭಯುಗ, ಬ್ರಾಹ್ಮಣ ಪ್ರಾರಂಭಯುಗ ಎಂದು ಕರೆದರೆ ಹೆಚ್ಚು ವಸ್ತುಸ್ಥಿತಿಯ ನಿದರ್ಶಕವಾದೀತು.'[2]

ಹುಟ್ಟು ಇದ್ದಲ್ಲಿ ಬೆಳವಣಿಗೆ ಅಥವಾ ಏರಿಕೆ ಮತ್ತು ಪರಿಸಮಾಪ್ತಿಯು ಕಾಲ ಕ್ರಮೇಣ ಕಂಡುಬರುವುದು ಜಗತ್ತಿನ ನಿಯಮವಾಗಿದೆ. ಸಾಹಿತ್ಯಸೃಷ್ಟಿಗೂ ಇದು ಅನ್ವಯಿಸುತ್ತದೆ. ಹಳಗನ್ನಡ ಸಾಹಿತ್ಯವು ೫ನೇ ಶತಮಾನದ ಮಧ್ಯದಿಂದ ಆರಂಭವಾಗಿ ತನ್ನ ವೈಭವದ ದಿನಗಳನ್ನು ಕಂಡು, ಕಳೆದ ಶತಮಾನದ ವರೆಗೆ ಹರಿದು ಬಂದಿತು. ಅಲ್ಲಿಗೆ ನಿಂತಿತು. ನಡುಗನ್ನಡ ಸಾಹಿತ್ಯವು ೧೨ನೇ ಶತಮಾನದಿಂದ ಆರಂಭವಾಗಿ, ಕುಮಾರವ್ಯಾಸ/ ರತ್ನಾಕರವರ್ಣಿಯರ ಕಾಲಾವಧಿಯಲ್ಲಿ ಏರಿಕೆಯ ಸ್ಥಿತಿಯಲ್ಲಿದ್ದು, ಅದು ಕೂಡ ಕಳೆದ ಶತಮಾನದ ವರೆಗೆ ಸಾಗಿಬಂದಿತು. ಇನ್ನು ಹತ್ತೊಂಬತ್ತನೆಯ ಶತಕದ ಮಧ್ಯಭಾಗದಿಂದ ಹೊಸಗನ್ನಡ ಸಾಹಿತ್ಯವು ತಲೆಯೆತ್ತಿ ಇಂದು ಊರ್ಜಿತ ಸ್ಥಿತಿಯಲ್ಲಿದೆಯೆಂಬುದು ತಿಳಿದ ವಿಷಯ.

ಇವು ಮೂರು ಯುಗ ಅಥವಾ ಅವಸ್ಥೆಗಳಲ್ಲಿ, ಭಾಷೆಯು ವಿಭಾಗಕ್ರಮದ ತಳ ಹದಿಯಾಗಿ, ಮುಖ್ಯ ಗುಣಧರ್ಮವಾಗಿ ಮೇಲುನೋಟಕ್ಕೆ ತೋರಬಹುದು. ಆದರೆ ಭಾಷೆಯೊಂದೇ ಇಲ್ಲಿಯ ವಿಭಾಗಕ್ರಮದ ತಳಹದಿಯಾಗಿಲ್ಲ. ಸಾಹಿತ್ಯ ಸ್ವರೂಪವೂ ಈ ಯುಗಗಳಲ್ಲಿ ಬೇರೆಯಾಗಿದ್ದುದನ್ನು ಗುರುತಿಸಲು ಸಾಧ್ಯವಿದೆ.

ಹಳಗನ್ನಡದ ಭಾಷೆಯು ನಡುಗನ್ನಡದಕ್ಕಿಂತ ಪ್ರೌಢವಾದುದು. ಆಗಿನ ಅನೇಕ ಶಬ್ದಪ್ರಯೋಗಗಳು ನಡುಗನ್ನಡದಲ್ಲಿ ಕಂಡುಬರಲಾರವು. ಸಾಹಿತ್ಯಸ್ವರೂಪದ ದೃಷ್ಟಿ ಯಿಂದ ನೋಡಿದಾಗ ಹಳಗನ್ನಡದಲ್ಲಿ ಚಂಪೂ ಕಾವ್ಯಗಳೂ, ಬಾಣನ ಮಾದರಿಯ ಗದ್ಯವೂ ಪದ್ಯರಚನೆಯಲ್ಲಿ ಕಂದ, ಅಕ್ಷರವೃತ್ತಗಳೂ ಹೆಚ್ಚಾಗಿ ಕಂಡುಬರುತ್ತವೆ. ಅಂತೂ ಹಳಗನ್ನಡದ್ದು ಮಾರ್ಗಪದ್ಧತಿಯ ವಸ್ತುಕ ಕಾವ್ಯರಚನೆಯೆಂದು ಸ್ಥೂಲವಾಗಿ ಹೇಳ

---

* ಇದಕ್ಕೂ ನೂರಿನ್ನೂರು ವರ್ಷಗಳ ಹಿಂದೆ ದೊರೆತ ಕ್ರೈಸ್ತ ಹಸ್ತಪ್ರತಿಗಳು ಕೆಲವಿವೆ.

ಬಹುದು. ನಡುಗನ್ನಡವು ವಿಷಯವಿನ್ಯಾಸದ ದೃಷ್ಟಿಯಿಂದ 'ವರ್ಣಕ'ದ ಹಾದಿಯನ್ನು ಹಿಡಿಯಿತು. ವಚನ, ರಗಳೆ, ಷಟ್ಪದಿ, ಸಾಂಗತ್ಯಗಳು, ಹಾಡು-ಕೀರ್ತನೆಗಳು ಈ ಯುಗದ ಕಾವ್ಯರಚನೆಗೆ ವಾಹಕಗಳಾದುವು. ನಡುಗನ್ನಡ ಸಾಹಿತ್ಯವು ಜನಸಾಮಾನ್ಯರನ್ನೂ ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದುದಿದೆ. ಹೊಸಗನ್ನಡವಂತೂ ಗದ್ಯಪ್ರಧಾನವಾದುದು (ಪದ್ಯದ ಜೊತೆಗೇ!). ಹಿಂದಿನ ಕಂದ-ವೃತ್ತಗಳು, ಷಟ್ಪದಿ, ಸಾಂಗತ್ಯಗಳು ಕಣ್ಮರೆಯಾದುವು. ಧಾರ್ಮಿಕ ಮಹತ್ವವು ಲುಪ್ತವಾಗಿ ಲೌಕಿಕ ವಿಚಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಹೊಸ ಹೊಸ ಸಾಹಿತ್ಯರೂಪಗಳು (ಸಣ್ಣಕತೆ, ಪ್ರಬಂಧ, ಪತ್ರಿಕೆ ಇತ್ಯಾದಿ) ಉದ್ಭವವಾದುದು ಇನ್ನೊಂದು ಮಹತ್ತ್ವದ ಅಂಶವಾಗಿದೆ.

ಹೀಗೆ ಹಳಗನ್ನಡ, ನಡುಗನ್ನಡ ಈ ಯುಗಗಳು ತಮ್ಮವೇ ಆದ ಲಕ್ಷಣಗಳನ್ನು ಹೊಂದಿ, ಒಂದಕ್ಕೊಂದು ಸೇರಿಕೊಂಡು ಮುಂದೆ ಸಾಗಿ ಹೊಸಗನ್ನಡ ಯುಗವು ಆರಂಭವಾಗುವ ಹೊತ್ತಿಗೆ ನಿಚ್ಚಿತವಾಗಿ ಪರಿಸಮಾಪ್ತಿ ಹೊಂದಿದುವು. ಇವು ಎರಡೂ ಯುಗಗಳಲ್ಲಿ ಉದೀಯ, ಮಧ್ಯ ಹಾಗೂ ಸಂಧ್ಯಾ-ಎಂಬ ಮೂರು ಕಾಲವಿಭಾಗಗಳನ್ನು ಮಾಡಿಕೊಂಡು, ಅವುಗಳ ಸ್ಥೂಲ ವರ್ಷಾವಧಿಯನ್ನು ಗೊತ್ತುಪಡಿಸಿ, ಆ ಆ ವಿಭಾಗಗಳಲ್ಲಿ ಕಂಡುಬರುವ ಸಾಹಿತ್ಯಿಕ ಲಕ್ಷಣಗಳನ್ನು ಸಂಕ್ಷೇಪವಾಗಿ ರೂಪಿಸುತ್ತೇವೆ.

ಹಳಗನ್ನಡ ಯುಗ

ಉದೀಯಕಾಲ	ಕ್ರಿ.ಶ.	೪೫೦–೮೦೦
ಮಧ್ಯಕಾಲ		೮೦೦–೧೩೦೦
ಸಂಧ್ಯಾಕಾಲ		೧೩೦೦–೧೯೦೦

ಹಳಗನ್ನಡದ ಉದೀಯ ಕಾಲ : ಕನ್ನಡವು ಗ್ರಂಥಸ್ಥವಾಗುವ ಸ್ಥಿತಿಯಲ್ಲಿದ್ದಾಗ ಸಂಸ್ಕೃತ ಪ್ರಾಕೃತಗಳ ಪೋಷಣೆಯನ್ನು ಆದ್ಯಾವತ್ತಾಗಿ ಪಡೆಯಿತು.* ಪ್ರಾಯಶಃ ತಮಿಳನ್ನು ಉಳಿದು ಭಾರತದ ಎಲ್ಲ ಪ್ರಾದೇಶಿಕ ಭಾಷಾ ಸಾಹಿತ್ಯಗಳಿಗೆ ಸಂಸ್ಕೃತ, ಪ್ರಾಕೃತಗಳ ನೆರವು ಇದ್ದೇ ಇದೆ. ಆ ಕಾಲದ ವೈದಿಕ ಪರಂಪರೆಯವರು ಸಂಸ್ಕೃತ ಕಾವ್ಯ ಶಾಸ್ತ್ರಗಳನ್ನು ವಿಶೇಷವಾಗಿ ಅಭ್ಯಸಿಸಿದ್ದರೆ, ಜೈನರು ಸಂಸ್ಕೃತ–ಪ್ರಾಕೃತಗಳೆರಡನ್ನೂ ಬಲ್ಲವರಾಗಿದ್ದರು. ಈ ಭಾಷೆಗಳನ್ನು ಅರಿಯದ ಸಾಮಾನ್ಯ ಕನ್ನಡಿಗನಿಗಾಗಿ ಗ್ರಂಥರಚನೆ ಮಾಡಲು ಜೈನರೇ ಹೆಚ್ಚಾಗಿ ಮುಂದೆ ಬಂದರು.

ಈ ಉದೀಯ ಕಾಲವು ಕವಿರಾಜಮಾರ್ಗಪೂರ್ವದ್ದೆಂದು ತಿಳಿಯಬಹುದು. ಕವಿರಾಜಮಾರ್ಗವು ತನಗಿಂತ ಹಿಂದಿನ ಕಾವ್ಯಪರಂಪರೆಗೆ ಲಕ್ಷಣಗ್ರಂಥವಾಗಿ ಇದೆ

---

* ಕನ್ನಡವು ತನ್ನ ಕೆಳನೆರೆಯಲ್ಲಿಯೆ ಇದ್ದ ತಮಿಳು ಸಾಹಿತ್ಯದ ಪ್ರಭಾವಕ್ಕೆ ಏಕೆ ಒಳಗಾಗಲಿಲ್ಲ? ಆ ಕಾಲದಲ್ಲಿ ಕವಿಗಳನ್ನು ಪೋಷಿಸಿದ್ದ ಕದಂಬ, ಚಳುಕ್ಯ, ರಾಷ್ಟ್ರಕೂಟ ರಾಜರು ನಾಡಿನ ಉತ್ತರಭಾಗದಲ್ಲಿ ಇದ್ದುದು ಕಾರಣವಾಗಿರಬಹುದು.

ಅಲ್ಲದೆ ಭಾಷಾದೃಷ್ಟಿಯಿಂದ ಯಾವುದನ್ನು 'ಪೂರ್ವದ ಹಳಗನ್ನಡ' ವೆಂದು ಕರೆಯಲಾಗುತ್ತಿತ್ತೋ ಅದರ ದೀರ್ಘೀಕರಣ (ಸಂದಾನ್, ಬಂದೋನ್) ಮುಂತಾದ ಲಕ್ಷಣಗಳು ಪಂಪ ರನ್ನಾದಿಗಳ ಕಾವ್ಯಗಳಲ್ಲಿ ಕಾಣುವುದಿಲ್ಲ.*

ಈ ಕಾಲದ ಗ್ರಂಥಗಳು ದೊರೆತಿಲ್ಲ. ಅವು ಸಂಸ್ಕೃತಪ್ರಚುರವಾಗಿರಬೇಕು. ಜೊತೆಗೆ ಕೆಲವು ಶಾಸನಗಳಲ್ಲಿ ಸರಳವಾದ ಅಚ್ಚಗನ್ನಡ ಸರಣಿಯೂ ತೋರಿಬಂದಿದೆ. ಆದರೆ ದೇಸಿ ಮತ್ತು ಸಂಸ್ಕೃತದ ಸಾಮರಸ್ಯವನ್ನೊಂದಿದ ಸಾಹಿತ್ಯಮಾರ್ಗವು ಇನ್ನೂ ಹುಟ್ಟಿರಲಿಲ್ಲ. ಈ ಉದೀಯ ಕಾಲದ ಕವಿಗಳೆಂದರೆ, ಕಾವ್ಯಟೀಕಾಕಾರನಾದ ದುರ್ವಿನೀತ, ಜೈನ ವ್ಯಾಖ್ಯಾನಕಾರನಾದ ತುಂಬಲೂರಾಚಾರ್ಯ, ಕಾಳಿದಾಸನ 'ಕುಮಾರಸಂಭವ'ವನ್ನು ಅನುವಾದಿಸಿದ ಮತ್ತು ಕೇಶಿರಾಜನಿಗೆ ಲಕ್ಷಣ ಪದ್ಯಗಳನ್ನು ಒದಗಿಸಿದ ಅಸಗ ಹಾಗೂ ಮಾಳವೀಮಾಧವದ ಕರ್ತೃ ಕನ್ನಮಯ್ಯ.

ಹಳಗನ್ನಡದ ಮಧ್ಯಕಾಲ (೮೦೦–೧೩೦೦) : ಒಂಬತ್ತನೆಯ ಶತಮಾನದಿಂದ ಹಳಗನ್ನಡವು ನಮಗೆ ಪರಿಚಿತವಿರುವ ಮಾರ್ಗಕಾವ್ಯದ ಹಾದಿಯನ್ನು ತಲುಪಿದ್ದಿತು. ಪ್ರೌಢವಾದ, ಬಿಗಿಯಾದ ಬಂಧವು ಆಗಿನ ಕಾವ್ಯಗಳ ವೈಶಿಷ್ಟ್ಯ. ರಾಜಕೀಯವಾಗಿ ಈ ಕಾಲವು ವೈಭವದ ಸ್ಥಿತಿಯಲ್ಲಿದ್ದಿತು. ದಕ್ಷಿಣದಲ್ಲಿ ಗಂಗರೂ ಉತ್ತರದಲ್ಲಿ ಕಲ್ಯಾಣದ ಚಳುಕ್ಯ ಮತ್ತು ಕುಲಚುರಿಗಳೂ ಸಾಮರ್ಥ್ಯದಿಂದ ರಾಜ್ಯವಾಳಿ ಜನತೆಯ ಉತ್ಕರ್ಷಕ್ಕೆ ಕಾರಣರಾದರು. ಈ ಅವಧಿಯ ಹತ್ತನೆಯ ಶತಮಾನವಂತೂ ಕವಿರತ್ನತ್ರಯದಿಂದ ಕೂಡಿದ್ದಾಗಿ ಕನ್ನಡ ಸಾಹಿತ್ಯದ ಸ್ವರ್ಣಯುಗವೆಂದು ಅನ್ವರ್ಥಕವಾಗಿ ಕರೆಯಲ್ಪಟ್ಟಿದೆ. ಚಂಪೂ ಸಾಹಿತ್ಯರೂಪವು ರಾಜಮಾರ್ಗವಾಗಿ ಪರಿಣಮಿಸಿದುದು ಇದೇ ಕಾಲದಲ್ಲಿ. ಅದರಂತೆ ಲೌಕಿಕ, ಧಾರ್ಮಿಕವೆಂಬ ಗಂಡಭೇರುಂಡಗಳು ಕಾವ್ಯಸಂಪ್ರದಾಯದಲ್ಲಿ ಒಡಮೂಡಿದುವು. ಒಂದನೆಯ ಗುಣವರ್ಮನು ಇದನ್ನು ಆರಂಭಿಸಿರಬಹುದಾದರೂ ಪಂಪನೇ ಇದನ್ನು ನೆಲೆಗೊಳಿಸಿದವನು. ಈ ಕಾಲದ ಲೌಕಿಕ ಕಾವ್ಯಗಳಲ್ಲಿ (ಪಂಪಭಾರತ, ಗದಾಯುದ್ಧ) ಐತಿಹಾಸಿಕ ಧ್ವನಿಯು ಕೇಳಬಂದುದು ಒಂದು ವಿಶೇಷವಾಗಿದೆ. 'ನೇರವಾದ ಚಾರಿತ್ರಿಕ ಕಾವ್ಯಗಳಿಗಿಂತ ಬೇರೆಯಾದ ಈ ಸರಣಿಯು ಕನ್ನಡ ಹಾಗೂ ಭಾರತೀಯ ಸಾಹಿತ್ಯಕ್ಕೆ ಅಪೂರ್ವವಾಯಿತು.'[3]

ಈ ಮಧ್ಯಕಾಲವಲ್ಲಿಯೇ ವಚನ ಸಾಹಿತ್ಯದ ಉಜ್ವಲ ಬೆಳಕು ಹೊಮ್ಮಿತಾದರೂ ಚಂಪೂಕಾವ್ಯರಚನೆಯು ಮಸಕಾಗಲಿಲ್ಲ. ನೇಮಿಚಂದ್ರ, ಜನ್ನ, ರುದ್ರಭಟ್ಟ, ಚೌಂಡರಸ ಮೊದಲಾದವರು ಪ್ರೌಢಕಾವ್ಯ ಪರಂಪರೆಯಿಂದ ವಿಚಲಿತರಾದವರಲ್ಲ.

---

* ಪೂರ್ವದ ಹಳಗನ್ನಡದ ಲಕ್ಷಣಗಳು ಸ್ವತಂತ್ರವಾದ ಅವಸ್ಥೆಯೊಂದನ್ನು ಕಲ್ಪಿಸುವಷ್ಟು ವಿಶಿಷ್ಟವಾಗಿ ಇಲ್ಲ. ಮೂಲತಃ ಅದು ಹಳಗನ್ನಡವೇ. ಈ ಸಂದರ್ಭದಲ್ಲಿ ಮಾಸ್ತಿಯವರು ಹೇಳಿದ್ದ 'ಭಾಷಾ ಅವಸ್ಥೆಗಳು ಒಂದರ ಪಕ್ಕದಲ್ಲಿ ಒಂದು ನಿಂತರೆ ಅವಳಿ–ಜವಳಿಯಂತೆ ಕಾಣಬಾರದು. ದೂರದ ಜ್ಞಾತಿಗಳು ಎಂಬಂತೆ ಕಾಣಬೇಕು' ಎಂಬ ಮಾತನ್ನು ಗಮನಿಸಬಹುದು (ನಮ್ಮ ನುಡಿ, ಪು. ೨೩).

ಹಳಗನ್ನಡದ ಸಂಧ್ಯಾಕಾಲ (೧೩೦೦–೧೯೦೦) : ನಡುಗನ್ನಡ ಸಾಹಿತ್ಯವು ಪ್ರಬಲಿಸುತ್ತ ನಡೆದಂತೆ ಹಳಗನ್ನಡ ಸಾಹಿತ್ಯರಚನೆಯು ಮೊದಲಿನ ಏರಿಕೆಯ ಸ್ಥಿತಿಯಲ್ಲಿ ಉಳಿಯಲಿಲ್ಲ. ಈ ಅಸ್ತಮಾನದ ಅವಧಿಯ 'ಹಳಗನ್ನಡ' ಕವಿಗಳಲ್ಲಿ ತ್ರಿಮತಸ್ಥರು ಸಮಾನವ್ಯವಸಾಯಿಗಳಾಗಿದ್ದರು. ಹದಿನಾರನೆಯ ಶತಮಾನದಿಂದ ಹಳಗನ್ನಡ ಪ್ರಕಾರವು ಗೌಣಸ್ಥಾನದಲ್ಲಿದ್ದಿತು. ಆಗ ಷಡಕ್ಷರಿಯು ಮಾತ್ರ ಅದರ ಕೈವಾರಿಯಾದನು. ಮುಂದಿನ ಶತಮಾನದಲ್ಲಿದ್ದ ಚಿಕದೇವರಾಯನ ಆಸ್ಥಾನ ಕವಿಗಳೆಲ್ಲ ನಡುಗನ್ನಡಪ್ರಿಯರೇ ಆಗಿದ್ದರೂ, ತಿರುಮಲೆಯಾರ್ಯ ಮತ್ತು ಚಿಕ್ಕುಪಾಧ್ಯಾಯರು ತುಸು ಮಟ್ಟಿಗೆ ಹಳಗನ್ನಡ ರಚನೆಯತ್ತ ಮನಸ್ಸು ಮಾಡಿದರು. ಆ ಮುಂದೆ ಹತ್ತೊಂಬತ್ತನೆಯ ಶತಮಾನದ ಮುದ್ದಣನು ಬರೆದ ಎರಡು ಗದ್ಯಗ್ರಂಥಗಳು ಒಟ್ಟಿನಲ್ಲಿ ಹಳಗನ್ನಡದ ಜಾಡನ್ನೇ ಹಿಡಿದಿವೆ. ಅದರಂತೆ ಮೈಸೂರಿನ ಆಸ್ಥಾನದಲ್ಲಿದ್ದ ಬಸವಪ್ಪಶಾಸ್ತ್ರಿ ಮತ್ತು ಅಯ್ಯಾಶಾಸ್ತ್ರಿ—ಇವರು ಹೊಸಗನ್ನಡದ ಮುಂಬೆಳಗು ಸ್ಪಷ್ಟವಾಗಿ ತೋರುತ್ತಿದ್ದ ಕಾಲಕ್ಕೆ ಸಹ ಚಂಪೂವಿನ ಪ್ರೌಢಸರಣಿಯಲ್ಲಿ ಕಾವ್ಯ ರಚಿಸುವ ಒಲವನ್ನು ತೋರಿದರಾದರೂ ಅಲ್ಲಿಗೆ ಹಳಗನ್ನಡ ಯುಗವು ಮುಕ್ತಾಯವಾಯಿತು.

ನಡುಗನ್ನಡ ಯುಗ

ಉದಯ ಕಾಲ	೧೧೫೦–೧೩೫೦
ಮಧ್ಯಕಾಲ	೧೩೫೦–೧೬೦೦
ಸಂಧ್ಯಾಕಾಲ	೧೬೦೦–೧೯೦೦

ಉದಯ ಕಾಲ : ನಡುಗನ್ನಡ ಸಾಹಿತ್ಯದ ಆವಿರ್ಭಾವಕ್ಕೆ ಮತತತ್ವದ ವಿಚಾರಗಳನ್ನು ಸಾಮಾನ್ಯ ಜನತೆಯತ್ತ ಕೊಂಡೊಯ್ಯುವ ತೀವ್ರ ಹಂಬಲವೇ ಕಾರಣ. ವೀರಶೈವ ವಚನಕಾರರೇ ನಡುಗನ್ನಡದ ಆದ್ಯ ಪ್ರವರ್ತಕರು. ವಚನ ವಾಣಿಯು ಕಸುವಿನಿಂದ ಮೊಳಗಿತಾದರೂ, ಬಹುಕಾಲದ ವರೆಗೆ ಮುಂದುವರಿಯಲಿಲ್ಲ. ನಡುಗನ್ನಡಕ್ಕೆ ನಾಂದಿಯನ್ನು ಹಾಡಿ ವಚನಕಾರರು ತೆರೆಯ ಹಿಂದೆ ಸರಿದರು. ಎಂದರೆ, ಮುಂದಿನ ಒಂದೆರಡು ಶತಮಾನಗಳ ವರೆಗೆ ಆ ಮಟ್ಟದಲ್ಲಿ ವಚನವಾಣಿ ಕೇಳಬರಲಿಲ್ಲ.

ಆದರೆ ಅದೇ ಕಾಲದ ಹರಿಹರ, ರಾಘವಾಂಕರು ಬೇರೊಂದು ಹಾದಿಯನ್ನು ತುಳಿದು ನಡುಗನ್ನಡ ಕಾವ್ಯಮಾರ್ಗವನ್ನು ನೆಲೆಗೊಳಿಸಿದರು. ಒಬ್ಬ ರಗಳೆಯನ್ನು ಪ್ರಚುರಗೊಳಿಸಿದರೆ, ಇನ್ನೊಬ್ಬನು ಷಟ್ಪದಿಯನ್ನು ತನ್ನ ಪ್ರತಿಭೆಗೆ ವಾಹಕವಾಗಿ ಮಾಡಿಕೊಂಡನು.

ಹಳಗನ್ನಡದ ಮಧ್ಯಕಾಲವು (೧೦ – ೧೩ ಶತಮಾನ) ಹೇಗೆ ಜೈನ ಪ್ರಾಬಲ್ಯದ ಕಾಲವೋ, ನಡುಗನ್ನಡ ಯುಗದ ಉದಯ ಕಾಲವು ವೀರಶೈವ ಪ್ರಾಬಲ್ಯದ ಕಾಲ

ವೆನ್ನುವುದು ಸ್ಪಷ್ಟವಾಗಿದೆ. ಈ ಕಾಲದ ನಡುಗನ್ನಡ ಕವಿಗಳು ಆಗಿನವರಂತೆ ಸ್ವಂತಿಕೆಯನ್ನೂ ಹೊಸತನವನ್ನೂ ತಮ್ಮ ಕೃತಿಗಳಲ್ಲಿ ಮೆರೆದಿದ್ದಾರೆ.

ನಡುಗನ್ನಡದ ಮಧ್ಯಕಾಲ (೧೩೫೦ – ೧೬೦೦) : ವಿಜಯನಗರದ ರಾಜ್ಯ ಸ್ಥಾಪನೆಯ ಕಾಲದಿಂದ ಇದನ್ನು ಗಣಿಸುವುದು ಸೂಕ್ತವಾಗಿದೆ. ಈ ಕಾಲದಲ್ಲಿ ತ್ರಿಮತಸ್ಥರು ಸಮಾನವಾಗಿ ಸಾಹಿತ್ಯ ಸೇವೆಯನ್ನು ಕೈಕೊಂಡಿದ್ದಾರೆ. ಅದಕ್ಕಾಗಿ ಆಯ್ದುಕೊಂಡ ಪ್ರಮುಖ ಛಂದೋಬಂಧಗಳೆಂದರೆ ಷಟ್ಪದಿ, ಸಾಂಗತ್ಯ ಮತ್ತು ಹಾಡುಗಳು.

ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿದ್ದ ನೂರೊಂದು ವಿರಕ್ತರ ಮೂಲಕ ವೀರಶೈವ ಸಾಹಿತ್ಯಕ್ಕೆ ವಿಶೇಷ ಪೋಷಣೆ ದೊರೆಯಿತು. ಆಗಿನ ವೀರಶೈವ ಕವಿಗಳಲ್ಲಿ ಚಾಮರಸ, ನಿಜಗುಣಶಿವಯೋಗಿ ಮತ್ತು ವಿರೂಪಾಕ್ಷಪಂಡಿತ ಇವರು ಪ್ರಮುಖರೆನಿಸಿದ್ದಾರೆ.

ಜನತೆಯನ್ನು ಒಲಿಸಿಕೊಳ್ಳಲು ಕಾವ್ಯಮಾರ್ಗವು ಸುಕರವಾಗಬೇಕೆನ್ನುವುದು ಈ ವೇಳೆಗೆ ಜೈನರಿಗೂ ವೇದ್ಯವಾಗತೊಡಗಿತು. ಅವರು ಕೂಡ ಹಾಡುಗಬ್ಬಕ್ಕೆ ತಿರುಗಿದರು. ಕಲ್ಯಾಣಕೀರ್ತಿ, ಶಿಶುಮಾಯಣರು ಸಾಂಗತ್ಯದಲ್ಲಿ ಕೃತಿರಚನೆ ಮಾಡಿದ್ದಾರೆ. ತೀರ್ಥಂಕರರ ಚರಿತ್ರೆಗೆ ಚಂಪೂ ಮಾರ್ಗವೇ ಇರಬೇಕೆಂಬ ಪರಿಸ್ಥಿತಿ ಹೊರಟು ಹೋಯಿತೇನೊ : ಮೂರನೆಯ ಮಂಗರಸನು ನೇಮಿಜಿನೇಶನ ಕಥೆಯನ್ನು ಸಾಂಗತ್ಯದಲ್ಲಿ ಬರೆದನು. ಭರತೇಶ ವೈಭವವಂತೂ ಸಾಂಗತ್ಯವನ್ನು ಷಟ್ಪದಿಯ ಸಮಾನ ಸ್ಥಾನಕ್ಕೆ ಕೊಂಡೊಯ್ದಿತು. ರತ್ನಾಕರಸಿದ್ಧನ ಈ ವರ್ಣಕ ಕಾವ್ಯವು ನಡುಗನ್ನಡ ಕಾಲದ ಶ್ರೇಷ್ಠ ಕೊಡುಗೆಯಾಗಿದೆ.

ಬ್ರಾಹ್ಮಣ ಸಾಹಿತ್ಯವು, ವಿಶೇಷತಃ ಭಾಗವತ ವಾಙ್ಮಯವು, ಈ ಕಾಲದಲ್ಲಿ ವಿಸ್ತಾರವನ್ನು ಪಡೆಯಿತು. ಬ್ರಾಹ್ಮಣ ಪಂಡಿತ - ಕವಿಗಳು ಕನ್ನಡದ ವಿಷಯಕವಾದ ತಮ್ಮ ಬಿಗುಮಾನವನ್ನು ಬದಿಗಿರಿಸಿ, ಜನಸಮ್ಮುಖವಾದ ಕಾವ್ಯಗಳನ್ನು ರಚಿಸ ತೊಡಗಿದರು. ಕುಮಾರವ್ಯಾಸ, ಚಾಟುವಿಠಲ, ಕುಮಾರವಾಲ್ಮೀಕಿ, ಲಕ್ಷ್ಮೀಶ — ಇವರು ತಮ್ಮ ಕಾವ್ಯಗಳ ಮೂಲಕ ಭಾಗವತ ಭಕ್ತಿಯನ್ನು ಬೆಳಗಿದರು.

ನೀತಿಬೋಧೆಯನ್ನು ಕತೆಗಳ ಮೂಲಕ ಹೇಳುವ ಕ್ರಮವು ವಡ್ಡಾರಾಧನೆಯಲ್ಲಿಯೂ ಧರ್ಮಾಮೃತದಲ್ಲಿಯೂ ಕಾಣಿಸಿಕೊಂಡಿದೆಯಷ್ಟೆ. ನಡುಗನ್ನಡದ ಏರಿಕೆಯ ಕಾಲದಲ್ಲಿ ಈ ಕ್ರಮವು ಚೆನ್ನಾಗಿ ನೆಲೆಗೊಂಡಿತು. ಭಾಸ್ಕರನ ಜೀವಂಧರ ಚರಿತೆಯು ಈ ದಿಶೆಯಲ್ಲಿ ಒಂದು ನಿಚ್ಚಳ ಹೆಜ್ಜೆಯಾಗಿದೆ.

ಇವೆಲ್ಲಕ್ಕಿಂತ ಹೆಚ್ಚಿನ ಮಹತ್ವದ ಸಾಧನೆಯೆಂದರೆ ದಾಸವಾಙ್ಮಯದ ಪ್ರಾದುರ್ಭಾವ. ಶ್ರೀಪಾದರಾಜರಿಂದ ಮೊದಲ್ಗೊಂಡ ಈ ವಾಙ್ಮಯಪ್ರಕಾರವು ವ್ಯಾಸರಾಯರ ಅಧಿಷ್ಠಾನದಲ್ಲಿ ವೈಭವದಿಂದ ಮೊಳಗಿತು. ಆದ್ಯ ವಚನಕಾರರು ಯಾವ

ಔನ್ನತ್ಯವನ್ನು ಹೊಂದಿದ್ದರೊ ಅದೇ ಎತ್ತರದಲ್ಲಿ ಪುರಂದರದಾಸ, ಕನಕದಾಸರೂ ವಾದಿರಾಜರೂ ಸಾವಿರಾರು ಹಾಡುಗಳನ್ನು ರಚಿಸಿ ಜನಮನದ ಪರಿಶುದ್ಧಿಗೆ ಕಾರಣ ರಾದರು.

ನಡುಗನ್ನಡದ ಸಂಧ್ಯಾಕಾಲ (೧೬೦೦ – ೧೯೦೦) : ವಿಜಯನಗರ ಸಾಮ್ರಾಜ್ಯದ ಅಳಿಗಾಲದಿಂದಾಗಿ ಕನ್ನಡ ಸಂಸ್ಕೃತಿ ಸಂವರ್ಧನೆಗೆ ಪೆಟ್ಟು ಬಿದ್ದಿತಲ್ಲದೆ, ಸಾಹಿತ್ಯ ನಿರ್ಮಿತಿಯ ಮೇಲೂ ಅದು ಪರಿಣಾಮ ಮಾಡಿತು. ಮೈಸೂರಿನ ಚಿಕ್ಕದೇವರಾಯ ಹಾಗೂ ಮುಮ್ಮಡಿ ಕೃಷ್ಣರಾಜರ ಆಳಿಕೆಯಲ್ಲಿ ಮಾತ್ರ ಸಾಹಿತ್ಯ ರಚನೆಗೆ ತುಸು ಪ್ರೇರಣೆ – ಪೋಷಣೆ ದೊರೆಯಿತು. ಮೈಸೂರಿನ ಆಸ್ಥಾನವನ್ನುಳಿದು, ಬೇರೆಡೆಗೆ ನಡುಗನ್ನಡ ಕಾವ್ಯ ನಿರ್ಮಿತಿಗೆ ಮನಸ್ಸು ಮಾಡಿದ ಕವಿಗಳು ಕೇವಲ ಬೆರಳೆಣಿಕೆಯಲ್ಲಿದ್ದಾರೆ. ಅವರಲ್ಲಿ ಧ್ರುವನಕ್ಷತ್ರದಂತೆ ಶೋಭಿಸುತ್ತಿದ್ದವನೆಂದರೆ ಸರ್ವಜ್ಞನೇ. ಅವನ ಮೂಲಕ ತ್ರಿಪದಿಯು ಸಾಹಿತ್ಯರಂಗದಲ್ಲಿ ಉನ್ನತ ಪೀಠಕ್ಕೇರಿತು. ವೀರಶೈವರಲ್ಲಿ ನಿಜಗುಣ ಶಿವಯೋಗಿಗಳು ಹಾಡಿನ ಪರಂಪರೆಯನ್ನು ರೂಢಿಸಿದ್ದರು. ಅವರ ಅನಂತರ, ಎಂದರೆ ಈ ಕಾಲದಲ್ಲಿ ಭಕ್ತಿಭಾವದ ಪದಗಳನ್ನು ಹಾಡಿದವರು — ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ ಮುಂತಾದವರು.

ಬ್ರಾಹ್ಮಣರಲ್ಲಿ ಭಾಗವತ ಪಂಥೀಯರೂ ಹರಿದಾಸರೂ ವರ್ಣಕ ರೀತಿಯಲ್ಲಿ ಕಾವ್ಯ ಮತ್ತು ಕೀರ್ತನೆಗಳ ರಚನೆಗೆ ತೊಡಗಿದ್ದುದನ್ನು ನೋಡಿದ್ದೇವೆ. ಆದರೆ ಅದ್ವೈತಿಗಳು ಹಾಗೂ ಶ್ರೀವೈಷ್ಣವರು ಸಾಹಿತ್ಯರಂಗದಲ್ಲಿ ತಡವಾಗಿಯಾದರೂ ಕಾಲಿರಿಸಿದುದು ಈ ಕಾಲದಲ್ಲಿಯೇ. ಅದ್ವೈತ ತತ್ವದ ತಿರುಳನ್ನು ಮಹಲಿಂಗರಂಗನು 'ಸುಲಿದ ಬಾಳೆಯ ಹಣ್ಣಿನಂದದಿ' ತೆರೆದು ತೋರಿಸಿದನಲ್ಲದೆ, ಶ್ರೀವೈಷ್ಣವ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತುದು ಚಿಕ್ಕದೇವರಾಯನಿಂದಾಗಿ. ಅವನ ಹೆಸರಿನ ಬಿನ್ನಪವು ಒಂದು ಮಹತ್ವದ ಕೃತಿ.

ಈ ಕಾಲಾವಧಿಯಲ್ಲಿ ಕವಯಿತ್ರಿಯರು ಮೊದಲ ಬಾರಿಗೆ ಎದ್ದು ತೋರುತ್ತಾರೆ (ಸಂಚಿಯ ಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ). ಲಭ್ಯವಿರುವ ಮೊದಲ ಕನ್ನಡ ನಾಟಕ 'ಮಿತ್ರವಿಂದಾಗೋವಿಂದ'ವು ಇದೇ ಕಾಲದ್ದು. ಕನ್ನಡ ಸಾಹಿತ್ಯವು ವೈವಿಧ್ಯ ವಿಸ್ತಾರಗಳನ್ನು ಪಡೆದಿದ್ದುದಕ್ಕೆ ಇನ್ನಷ್ಟು ನಿದರ್ಶನಗಳಿವೆ. ಯಕ್ಷಗಾನಗಳ ಹುಟ್ಟು, ಬೆಳವಣಿಗೆಗೆ ಇದೇ ಕಾಲಾವಧಿಯು ನಿಮಿತ್ತವಾಯಿತು. ಎಲ್ಲ ಪ್ರಮುಖ ಯಕ್ಷಗಾನ ಕವಿಗಳು ಈ ಕಾಲಾವಧಿಯಲ್ಲಿಯೆ ಬಾಳಿದವರಾಗಿದ್ದಾರೆ. ಹದಿನಾರನೇ ಶತಮಾನದಲ್ಲಿ ವಿಶೇಷವಾಗಿ ಬೆಳಗಿದ್ದ ದಾಸಸಾಹಿತ್ಯಕ್ಕೆ ಮುಂದೆ ೧೫೦ ವರ್ಷಗಳ ವರೆಗೆ ಮಹತ್ವದ ಕಾಣಿಕೆಯನ್ನು ಸಲ್ಲಿಸಿದವರಿರಲಿಲ್ಲ. ಅಭಿನವಪುರಂದರ ದಾಸರೆನ್ನಿಸಿದ ವಿಜಯದಾಸರಿಂದ ದಾಸಪೀಳಿಗೆಯು ಮತ್ತೆ ಶಾಖೋಪಶಾಖೆಯಾಗಿ ಬೆಳೆಯಿತು. ಅಪೂರ್ವವಾದ ಇನ್ನೊಂದು ಗ್ರಿಮೆಯೆಂದರೆ ನೇರವಾದ ಚಾರಿತ್ರಿಕ

ಕಾವ್ಯಗಳ ರಚನೆ. ಚಿಕದೇವರಾಯ ವಂಶಾವಳಿ, ಕಂಠೀರವನರಸರಾಜವಿಜಯ, ಕೆಳದಿನೃಪವಿಜಯ ಮೊದಲಾದುವನ್ನು ಈ ದೃಷ್ಟಿಯಿಂದ ನೆನೆಯಬೇಕು.

ಹತ್ತೊಂಬತ್ತನೆಯ ಶತಮಾನದಲ್ಲಿ ಹೊಸಗನ್ನಡ ಸಾಹಿತ್ಯವು ಮೆಲ್ಲನೆ ಕಾಣಿಸ ತೊಡಗಿದಂದಿನಿಂದ ನಮ್ಮ ಸಾಹಿತ್ಯದಲ್ಲಿನ ಸಂಕೀರ್ಣತೆಯು ಗಾಢವಾಗುತ್ತ ನಡೆಯಿತು. ಆದರೂ ಹಳಗನ್ನಡ ಕ್ರಮಕ್ಕಿಂತ ನಡುಗನ್ನಡದ್ದೇ ಒಟ್ಟಿನಲ್ಲಿ ಮೇಲುಗೈ – ೧೮೮೦ರ ವರೆಗೆ. ಕ್ರಿ.ಶ. ೧೮೨೦ ರಿಂದ ೧೮೮೦ರ ವರೆಗಿನ ಹೊಸಗನ್ನಡ ಸಾಹಿತ್ಯನಿರ್ಮಿತಿಯು,* ಕ್ರೈಸ್ತ ಪುಸ್ತಕಗಳು, ಪಠ್ಯಪುಸ್ತಕಗಳು, ಇತರ ಅನುವಾದಗಳ ಮಟ್ಟಿಗೆ ಸೀಮಿತವಾಗಿತ್ತು, ಅನಂತರ ಸ್ವತಂತ್ರ ವಿಚಾರಸರಣಿಯ ಸಾಹಿತ್ಯರಚನೆಯಾಗಿ ಹೊಸ ಹೊಸ ಸಾಹಿತ್ಯ ರೂಪಗಳು ತಲೆದೋರಿದಾಗ, ಹಳಗನ್ನಡ, ನಡುಗನ್ನಡ ಸಾಹಿತ್ಯ ನಿರ್ಮಿತಿಗೆ 'ಪೆನ್ಶನ್' ದೊರೆಯಿತು. ಹೊಸಗನ್ನಡದ ಮಹಾಪೂರದಲ್ಲಿ ಈ ಹಳೆಯ ನೀರು ಅಂತರ್ಗತವಾಯಿತು.

ಮೇಲೆ ಹೇಳಿದ ವಿಚಾರಗಳನ್ನೂ ಇನ್ನೂ ಕೆಲವನ್ನೂ ಪಟ್ಟಿಕೆಯ ರೂಪದಲ್ಲಿ ಕೊಡಲಾಗಿದೆ. ಇದೊಂದು ಸ್ಥೂಲ ನೋಟ. ಇದರ ಅವಲೋಕನದಿಂದ ಸುದೀರ್ಘವಾದ ಕನ್ನಡ ವಾಙ್ಮಯೇತಿಹಾಸದ ಅಭ್ಯಾಸವು ಸುಕರವಾಗುವುದೆಂದು ಆಶಿಸಿದೆ.

ಹಳಗನ್ನಡಯುಗ : ೪೫೦–೧೭೦೦

ಉದಯಕಾಲ: ೪೫೦-೮೦೦

ಲಕ್ಷಣಗಳು

ರಾಜ್ಯಗಳು : ಕದಂಬ, ಬದಾಮಿ, ಚಳುಕ್ಯ, ರಾಷ್ಟ್ರಕೂಟರು

ಮತಗಳು : ಜೈನ, ವೈದಿಕ

ಭಾಷೆ : ಪೂರ್ವದ ಹಳಗನ್ನಡ

ಶೈಲಿ : ಸಂಸ್ಕೃತಭೂಯಿಷ್ಠ, ಸಂಸ್ಕೃತ, ಪ್ರಾಕೃತಗಳ ವಿಶೇಷ ನೆರವು

ಟೀಕಾ ಮತ್ತು ಗದ್ಯಗ್ರಂಥಗಳ ಹೆಚ್ಚಳ

ನಡುಗನ್ನಡಯುಗ : ೧೧೫೦–೧೭೦೦

ಉದಯಕಾಲ : ೧೧೫೦–೧೩೫೦

ಲಕ್ಷಣಗಳು

ರಾಜ್ಯಗಳು- ಕಲಚುರಿ, ಹೊಯ್ಸಳ, ದೇವಗಿರಿ ಯಾದವರು

ವಚನಕಾರರಿಂದ ಆರಂಭ

ಮತಪ್ರಸಾರ ದೃಷ್ಟಿ — ವೀರಶೈವ, ಜೈನರಲ್ಲಿ

ಸಾಹಿತ್ಯ ಕ್ರಮೇಣ ಜನಾಭಿಮುಖವಾಗ ತೊಡಗಿದುದು.

ಕಾವ್ಯರೂಪಗಳು : ವಚನ, ರಗಳೆ, ಷಟ್ಪದಿ

ಭಾಷೆ : ವ್ಯಂಜನಾಂತದಿಂದ ಸ್ವರಾಂತ, ಪ → ಹಕಾರ, ಬಿಂದುವಿಕಲ್ಪ

---

* ಮುದ್ರಣವು ಅಸ್ತಿತ್ವದಲ್ಲಿ ಬಂದಂದಿನಿಂದ, ಹೊಸಗನ್ನಡಯುಗದ ಆರಂಭವನ್ನು ಗಣಿಸಬಹುದಾದರೂ, ಕ್ರಿ.ಶ. ೧೬೬೦ ರಿಂದಲೇ ಕೆಲವು ಮಿಶನರಿ ಜನರು ಸ್ವಮತೀಯ ಸಾಹಿತ್ಯ ರಚಿಸಿದ್ದಾರೆ. ಇದೂ ಹೊಸಗನ್ನಡ ಸಾಹಿತ್ಯದ ಒಂದು ಅಂಗವೇ ಎನ್ನಬಹುದು.

ಪ್ರಮುಖ ಕವಿ – ಕೃತಿಗಳು

ದುರ್ವಿನೀತ – ಕಿರಾತಾರ್ಜುನೀಯ ಟೀಕೆ
ತುಂಬಲೂರಾಚಾರ್ಯ – ಚೂಡಾಮಣಿ (ವ್ಯಾಖ್ಯಾನ)
ಅಸಗ – ಕರ್ಣಾಟಕ ಕುಮಾರಸಂಭವ
ಕನ್ನಮಯ್ಯ – (ಕರ್ಣಾಟ) ಮಾಳವೀ ಮಾಧವ

ಮಧ್ಯಕಾಲ : ೮೦೦–೧೩೦೦

ಲಕ್ಷಣಗಳು

ರಾಜ್ಯಗಳು : ಕಲ್ಯಾಣ ಚಳುಕ್ಯ, ಕಲಚುರಿ, ಗಂಗ, ಹೊಯ್ಸಳರು
ಮತಗಳು : ಜೈನ, ಬ್ರಾಹ್ಮಣ, ವೀರಶೈವ
ಕಾವ್ಯರೂಪಗಳು : ಚಂಪೂ, ಕಂದ-ವೃತ್ತ, ಗದ್ಯ
ಪ್ರೌಢಕಾವ್ಯ ರಚನೆ – 'ಮಾರ್ಗ'ಕಾವ್ಯಕ್ಕೆ ಪ್ರಾಶಸ್ತ್ಯ
ಮತಧರ್ಮ – ಕಾವ್ಯಧರ್ಮಗಳ ಬೆಸುಗೆ

ಪ್ರಮುಖ ಕವಿ–ಕೃತಿಗಳು

ನೃಪತುಂಗ/ಶ್ರೀವಿಜಯ – ಕವಿರಾಜ ಮಾರ್ಗ
ಗುಣವರ್ಮ ೧ – ಹರಿವಂಶ, ಶೂದ್ರಕ
ಶಿವಕೋಟ್ಯಾಚಾರ್ಯ – ವಡ್ಡಾರಾಧನೆ
ಪಂಪ – ಭಾರತ, ಆದಿಪುರಾಣ
ಪೊನ್ನ – ಶಾಂತಿಪುರಾಣ,ಭುವನೈಕರಾಮಾಭ್ಯುದಯ

ಪ್ರಮುಖ ಕವಿ-ಕೃತಿಗಳು

ಅಲ್ಲಮಪ್ರಭು – ವಚನಗಳು
ಬಸವೇಶ್ವರ – ,,
ಚೆನ್ನಬಸವ – ,,
ಅಕ್ಕಮಹಾದೇವಿ – ,,
ಸಿದ್ಧರಾಮ – ,,
ಹರಿಹರ – ಗಿರಿಜಾಕಲ್ಯಾಣ, ರಗಳೆಗಳು
ರಾಘವಾಂಕ– ಹರಿಶ್ಚಂದ್ರಕಾವ್ಯ
ಪಾಲ್ಕುರಿಕೆ ಸೋಮ- ರಗಳೆಗಳು
ಕುಮುದೇಂದು– ರಾಮಾಯಣ

ಮಧ್ಯಕಾಲ : ೧೩೫೦–೧೬೦೦

ಲಕ್ಷಣಗಳು

ವಿಜಯನಗರದ ವೈಭವಕಾಲ
ದಾಸಪರಂಪರೆಯ ಆರಂಭ
ಭಾಗವತ ಪಂಥದ ಕಾವ್ಯರಚನೆ
ತ್ರಿಮಸ್ಥರ ಸಮಾನ ಸಾಹಿತ್ಯಕಾರ್ಯ
ಸಾಂಗತ್ಯ, ಹಾಡುಗಳ ಮೇಲ್ಮೆ
ಧರ್ಮ– ನೀತಿ ಬೋಧೆಯ ಕಥೆಗಳು

ಪ್ರಮುಖ ಕವಿ–ಕೃತಿಗಳು

ಭೀಮಕವಿ – ಬಸವ ಪುರಾಣ
ಲಕ್ಕಣ್ಣ ದಂಡೇಶ – ಶಿವತತ್ವಚಿಂತಾಮಣಿ
ಚಾಮರಸ – ಪ್ರಭುಲಿಂಗಲೀಲೆ
ನಿಜಗುಣಶಿವಯೋಗಿ – ಕೈವಲ್ಯಪದ್ಧತಿ, ಪರಮಾರ್ಥ ಪ್ರಕಾಶಿಕೆ, ವಿವೇಕ ಚಿಂತಾಮಣಿ
ಗುಬ್ಬಿಯ ಮಲ್ಲಣ್ಣ – ಭಾವಚಿಂತಾರತ್ನ

ಚಾವುಂಡರಾಯ – ಚಾವುಂಡರಾಯ ಪುರಾಣ	ನಂಜುಂಡ – ಕುಮಾರರಾಮ ಸಾಂಗತ್ಯ
ರನ್ನ – ಗದಾಯುದ್ಧ, ಅಜಿತಪುರಾಣ	ಕುಮಾರವ್ಯಾಸ – ಕರ್ಣಾ. ಮಹಾಭಾರತ
ನಾಗವರ್ಮ – ಛಂದೋಂಬುಧಿ,ಕರ್ನಾಟಕ ಕಾದಂಬರಿ	ಕುಮಾರವಾಲ್ಮೀಕಿ – ತೊರವೆ ರಾಮಾಯಣ
ದುರ್ಗಸಿಂಹ – ಪಂಚತಂತ್ರ	ಶ್ರೀಪಾದರಾಯ – ಹಾಡುಗಳು
ನಾಗಚಂದ್ರ – ಪಂಪರಾಮಾಯಣ, ಮಲ್ಲಿನಾಥಪುರಾಣ	ಚಾಟುವಿಠಲ – ಭಾಗವತ
ನಯಸೇನ – ಧರ್ಮಾಮೃತ	ಪುರಂದರದಾಸ – ಹಾಡು, ಸುಳಾದಿಗಳು
ನಾಗವರ್ಮ ೨ – ಭಾಷಾಭೂಷಣ, ಕಾವ್ಯಾವಲೋಕನ	ಕನಕದಾಸ – ಮೋಹನತರಂಗಿಣಿ, ಹಾಡುಗಳು
ನೇಮಿಚಂದ್ರ – ಲೀಲಾವತಿ ಪ್ರಬಂಧ, ನೇಮಿನಾಥಪುರಾಣ	ವಾದಿರಾಜಸ್ವಾಮಿ – ಹಾಡುಗಳು
ರುದ್ರಭಟ್ಟ – ಜಗನ್ನಾಥವಿಜಯ	ಲಕ್ಷ್ಮೀಶ – ಜೈಮಿನಿಭಾರತ
ಜನ್ನ – ಅನಂತನಾಥ ಪುರಾಣ, ಯಶೋಧರ ಚರಿತೆ	ಕಲ್ಯಾಣಕೀರ್ತಿ – ಕಾಮನಕಥೆ ಇತ್ಯಾದಿ
ಆಂಡಯ್ಯ – ಕಬ್ಬಿಗರ ಕಾವ	ಶಿಶುಮಾಯಣ – ತ್ರಿಪುರದಹನಸಾಂಗತ್ಯ
ಸೋಮರಾಜ – ಉದ್ಭಟಕಾವ್ಯ	ಮಂಗರಸ - ಜಯನೃಪಕಾವ್ಯ, ನೇಮಿಜಿನೇಶಸಂಗತಿ
ಕೇಶಿರಾಜ – ಶಬ್ದಮಣಿದರ್ಪಣ	ಸಾಳ್ವ– ಭಾರತ, ರಸರತ್ನಾಕರ
ಚೌಂಡರಸ – ಅಭಿನವ ದಶಕುಮಾರಚರಿತ್ರೆ	ರತ್ನಾಕರವರ್ಣಿ– ಭರತೇಶವೈಭವ

ಸಂಧ್ಯಾಕಾಲ : ೧೩೦೦–೧೯೦೦

ಲಕ್ಷಣಗಳು

ಮಧ್ಯಕಾಲದ ಕೃತಿ-ಪರಂಪರೆ ಮುಂದುವರಿದದ್ದು

ಮತಗಳು : ವೀರಶೈವ, ಜೈನ, ಶ್ರೀವೈಷ್ಣವ

ರಾಜ್ಯಗಳು : ವಿಜಯನಗರ, ಮೈಸೂರರಸರು

ಸಂಧ್ಯಾಕಾಲ– ೧೬೦೦–೧೯೦೦

ಲಕ್ಷಣಗಳು

ಮೈಸೂರರಸರಿಂದ ಸಾಹಿತ್ಯಪೋಷಣೆ

ಚಾರಿತ್ರಿಕ ಕಾವ್ಯರಚನೆ

ಯಕ್ಷಗಾನ ಕೃತಿಗಳು

ಶ್ರೀವೈಷ್ಣವ, ಮಾಧ್ವ, ಅದ್ವೈತಿಗಳ

	ವಿಶೇಷ ಕಾವ್ಯರಚನೆ ತ್ರಿಪದಿ, ಹಾಡುಗಳು, ಗದ್ಯಪ್ರಕಾರಗಳಿಗೆ ಪ್ರಾಶಸ್ತ್ಯ ಕವಯತ್ರಿಯರು ಕಾಣಿಸಿಕೊಂಡದ್ದು
ಪ್ರಮುಖ ಕವಿ–ಕೃತಿಗಳು	**ಪ್ರಮುಖ ಕವಿ–ಕೃತಿಗಳು**
ಹಸ್ತಿಮಲ್ಲ – ಪೂರ್ವಪುರಾಣ	ಸರ್ವಜ್ಞ – ತ್ರಿಪದಿಗಳು
ವೃತ್ತವಿಲಾಸ – ಧರ್ಮಪರೀಕ್ಷೆ, ಶಾಸ್ತ್ರ ಸಾರ	ಗೋವಿಂದವೈದ್ಯ – ಕಂಠೀರವ ನರಸರಾಜ ವಿಜಯ
ಸುರಂಗಕವಿ – ತ್ರಿಷಷ್ಟಿ ಪುರಾತನ ಚರಿತ್ರೆ	ಚಿಕದೇವರಾಜ – ಬಿನ್ನಪ ಇ.
ಭಟ್ಟಾಕಳಂಕ – ಕರ್ನಾ. ಶಬ್ದಾನುಶಾಸನ ಪ್ರಕಾಶಿಕೆ	ಸಿಂಗರಾರ್ಯ – ಮಿತ್ರವಿಂದಾಗೋವಿಂದ ನಾಟಕ
ಷಡಕ್ಷರದೇವ – ರಾಜಶೇಖರ ವಿಳಾಸ ಶಬರಶಂಕರವಿಳಾಸ, ವೃಷಭೇಂದ್ರ ವಿಜಯ	ಹೊನ್ನಮ್ಮ – ಹದಿಬದೆಯ ಧರ್ಮ
ತಿರುಮಲಾರ್ಯ – ಅಪ್ರತಿಮ ವೀರಚರಿತೆ, ಚಿಕದೇವರಾಯ ವಂಶಾವಳಿ	ಹೆಳವನಕಟ್ಟೆ ಗಿರಿಯಮ್ಮ – ಹಾಡುಗಳು, ಕಥನಗಳು
ಚಿಕ್ಕುಪಾಧ್ಯಾಯ – ದಿವ್ಯಸೂರಿಚರಿತ್ರೆ, ಇ.	ಲಿಂಗಣ್ಣ – ಕೆಳದಿನೃಪವಿಜಯ
ಬಸವಪ್ಪಶಾಸ್ತ್ರಿ – ದಮಯಂತಿ ಸ್ವಯಂ ವರ, ಕರ್ನಾ. ಶಾಕುಂತಲ	ಪ್ರಸನ್ನವೆಂಕಟದಾಸ – ಹಾಡುಗಳು
ಮುದ್ದಣ – ಅದ್ಭುತರಾಮಾಯಣ, ರಾಮಾಶ್ವಮೇಧ	ವಿಜಯದಾಸ – ಹಾಡು, ಸುಳಾದಿಗಳು ಜಗನ್ನಾಥದಾಸ – ಹರಿಕಥಾಮೃತಸಾರ ಪಾರ್ತಿಸುಬ್ಬ – ಯಕ್ಷಗಾನಗಳು ಅಳಿಯಲಿಂಗರಾಜ – ಯಕ್ಷಗಾನಗಳು

ಟಿಪ್ಪಣಿಗಳು

1. ಡಿ.ಕೆ. ರಾಜೇಂದ್ರರು 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ' ಗ್ರಂಥದಲ್ಲಿ ಇವೆಲ್ಲ ಅಭಿಪ್ರಾಯಗಳನ್ನು ಕ್ರೋಡೀಕರಿಸಿದ್ದಾರೆ ಪುಟ ೩೮ – ೬೬
2. ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ (೨ನೇ ಆವೃತ್ತಿ), ಪುಟ ೪೧
3. ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯದ ಇತಿಹಾಸ, ಪುಟ. ೬೯

ಹದಿನೆಂಟನೆಯ ಶತಮಾನದ ಕನ್ನಡ ಸಾಹಿತ್ಯ

The numerous authors of this period do not otherwise call for special notice; and the troublous times of Mahratta invasions and Muhammadan usurpation were not favourable to the progress of literature.

—ಬಿ. ಎಲ್. ರೈಸ್ ೧೮ನೇ ಶತಮಾನದ ಸಾಹಿತ್ಯವನ್ನು ಕುರಿತು ಹೇಳಿದ ಮಾತಿದು. (Mysore A Gazetteer Rev. Ed. Vol. I P 502) ಇನ್ನೊಬ್ಬ ರೈಸ್ (E.P.) ಇಂಗ್ಲಿಶ್‌ನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ಮೇಲಿನ ಗ್ರಂಥವನ್ನು ಬರೆದವರು—ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಅವರು ೧೭, ೧೮ ಈ ಶತಮಾನಗಳನ್ನು ವಿವೇಚಿಸಿದ ಇಡಿಯಾದ ಪ್ರಕರಣದಲ್ಲಿ, ೧೮ನೇ ಶತಮಾನದ ಇಬ್ಬರು ಲೇಖಕರನ್ನು ಮಾತ್ರ ಪ್ರಸ್ತಾಪಿಸಿದ್ದಾರೆ.

ಈ ನಿಲುಮೆಯು ಈಚಿನ ವರೆಗೂ ನಡೆದುಕೊಂಡು ಬಂದಿದೆ. ಡಾ ನಗೇಂದ್ರ ಸಂಪಾದಿತ Indian Literature ಎಂಬ ಗ್ರಂಥದಲ್ಲಿ ಆದ್ಯ ರಂಗಾಚಾರ್ಯರು ಕನ್ನಡ ವಾಙ್ಮಯದ ಬಗ್ಗೆ ಬರೆಯುತ್ತ ೧೮–೧೯ನೇ ಶತಮಾನಗಳ ಕುರಿತು ಹೀಗೆ ಹೇಳಿದುದಿದೆ:

After the 17th century we do not come across any Kannada work deserving our serious notice till we come to the modern period, For almost two hundred years i. e. till the end of the 19th century Kannada literature as such, simply ceased to exist.

ಹೀಗೆ ಕನ್ನಡ ಸಾಹಿತ್ಯಸೃಷ್ಟಿಯ ಮಾನದಿಂದ ೧೮ನೇ ಶತಮಾನವು ಬರಡು ಇಲ್ಲವೆ ಕಗ್ಗತ್ತಲೆಯ ಕಾಲ ಎಂಬ ಸಾಮಾನ್ಯ ಭಾವನೆ ಕಂಡುಬರುತ್ತದೆ. ಒಂದೂವರೆ ಸಾವಿರ ವರ್ಷಗಳಷ್ಟು ಸುದೀರ್ಘ ಕಾಲದ ನಮ್ಮ ಸಾಹಿತ್ಯ ಚರಿತ್ರೆಯು ಎಲ್ಲ ಕಾಲಕ್ಕೂ ಉಜ್ವಲವಾಗಿಯೆ ಇದ್ದಿರಬೇಕೆಂಬ ನಿಯಮವೇನೂ ಇಲ್ಲ. ಇಳಿಮುಖದ ಹಲವು ಕಾಲಾವಧಿಗಳು ಇದ್ದೇ ಇವೆ. ಹದಿನೆಂಟನೆಯ ಶತಮಾನಕ್ಕೆ ಅನ್ವಯಿಸಿದಾಗ ಈ ಮಾತು ಎಷ್ಟರ ಮಟ್ಟಿಗೆ ಸತ್ಯ, ಎಷ್ಟರ ಮಟ್ಟಿಗೆ ಸಮರ್ಥನೀಯ ಎಂಬುದನ್ನು ನೋಡುವುದೇ ಈ ಲೇಖನದ ಉದ್ದೇಶವಾಗಿದೆ.

ಬಿ. ಎಲ್. ರೈಸರೆನ್ನುವಂತೆ ಅಂದಿನ ರಾಜಕೀಯ ಸ್ಥಿತಿಯು ತುಂಬ ಅಸ್ಥಿರವಾಗಿದ್ದಿತು. ಮೈಸೂರ ದೊರೆ ಚಿಕದೇವರಾಯನು ತೀರಿಕೊಂಡ ಮೇಲೆ (೧೭೦೪), ಹಗೂ ಔರಂಗಜೇಬನ ಮರಣಾನಂತರ ಉತ್ತರ ಕರ್ನಾಟಕದಲ್ಲಿ ಮೊಗಲರ ಸತ್ತೆ ನಿರ್ನಾಮವಾದ ಮೇಲೆ ಈ ಅಸ್ಥಿರ ವಾತಾವರಣ ಉಂಟಾಯಿತು. ಹದಿನೆಂಟನೇ ಶತಮಾನದಲ್ಲಿ ಏಳು ಜನ ಅರಸರು ಆಗಿ ಹೋದರೂ, ಚಿಕದೇವರಾಯನ ಯೋಗ್ಯತೆಯವರು ಅವರಲ್ಲಿ ಹೊರಡಲಿಲ್ಲ. ಆದರಿಂದಾಗಿ ಈ ಶತಮಾನದ ಪೂರ್ವಾರ್ಧದ ಮೈಸೂರಿನಲ್ಲಿ ದಳವಾಯಿಗಳ ಕೈಮೇಲಾದರೆ, ಉತ್ತರಾರ್ಧದಲ್ಲಿ (೧೭೬೦ರಿಂದ) ಹೈದರ-ಟೀಪೂ ಇವರ ರಾಜ್ಯಭಾರ ಮೊದಲಾಯಿತು.

ಇತ್ತ ನಾಡಿನ ಉತ್ತರಕ್ಕೆ ಮೊಗಲ ಹಾಗೂ ಬಹಮನೀ ಮುಸ್ಲಿಮರ ಉಚ್ಚಾಟನೆಯಾದುದೇ ತಡ, ಮರಾಟರೂ ನಿಜಾಮರೂ ಒಳಪ್ರವೇಶಿಸಿ ಅಷ್ಟಷ್ಟು ಪ್ರದೇಶಗಳನ್ನು ಆಕ್ರಮಿಸಿದರು. ಚಿಕ್ಕಪುಟ್ಟ ಸಂಸ್ಥಾನಗಳಂತೂ ಇದ್ದೇ ಇದ್ದವು, ಈ ಮಧ್ಯೆ ಎಲ್ಲೆಲ್ಲಿಯೂ ಬ್ರಿಟಿಶರ ಚಂಚುಪ್ರವೇಶ. ಅಂತೂ ಈ ಶತಮಾನದುದ್ದಕ್ಕೆ ನಾಡಿನ ಎಲ್ಲೆಡೆಗಳಲ್ಲಿ ಚಿಕ್ಕಪುಟ್ಟ ಕದನಗಳು ನಡದೇ ಇದ್ದುವು. ಯಾವ ಒಬ್ಬ ರಾಜನೂ ನಾಡಿನಲ್ಲಿ ಪ್ರಬಲಸ್ಥಿತಿಯಲ್ಲಿರಲಿಲ್ಲ. ಶರಣರು, ದಾಸರು, ಸರ್ವಜ್ಞನಂತಹ ಒಬ್ಬಿಬ್ಬರನ್ನು ಬಿಟ್ಟರೆ, ನಮ್ಮ ಕವಿಕೋಗಿಳೆಗಳಿಗೆ ರಾಜಾಶ್ರಯವೆಂಬ ಮಾಮರದ ಆಸರೆಯಿಲ್ಲದೆ ನಡೆಯುವಂತಿಲ್ಲ! ಅದಿಲ್ಲವಾಗ, ಸಾಹಿತ್ಯ, ಕಲೆಗಳ ಪೋಷಣೆ, ಸಂಸ್ಕೃತಿ – ಸಂವರ್ಧನೆ ಇವನ್ನು ಅಪೇಕ್ಷಿಸುವುದೇ ತಪ್ಪೇನೊ.

ನಾಡಿನ ಇಂಥ ಧಗಧಗಿಯ ಸ್ಥಿತಿಯೇ ಕೆಲವೊಂದು ಬಾರಿ ಸಾಹಿತ್ಯ ನಿರ್ಮಾಣಕ್ಕೆ ಕಾರಣವಾದೀತು. ವಿದೇಶೀಯ ದಬ್ಬಾಳಿಕೆಯಿಂದಾಗಿ ಆರ್ಷೇಯ ಪರಂಪರೆಗೆ ಆಘಾತ ವುಂಟಾದಾಗ ಭಗವದ್ಭಕ್ತರು ನಮ್ಮ ಧರ್ಮಾಭಿಮುಖವಾದ ಕಾವ್ಯಮಾಧ್ಯಮದಿಂದ ಜನತೆಯನ್ನು ಎಚ್ಚರಿಸಬಯಸಿದ್ದುದು ಸಹಜವೇ. ಹದಿನೆಂಟನೆಯ ಶತಮಾನದಲ್ಲಿ ಕಂಡುಬಂದ ದಾಸವಾಙ್ಮಯಸೃಷ್ಟಿಗೆ ಇದೂ ಒಂದು ಅಪ್ರತ್ಯಕ್ಷ ಕಾರಣವಾಗಿದೆ.

ಕರ್ಣಾಟಕ ಕವಿಚರಿತೆಯ ಮೂರನೇ ಸಂಪುಟ, ಮತ್ತಿತರ ಆಧಾರಗಳಿಂದ ಹೇಳುವುದಾದರೆ, ಆ ಶತಮಾನದಲ್ಲಿ ಸುಮಾರು ಇನ್ನೂರು ಜನರು ೩೫೦ಕ್ಕೆ ಮಿಕ್ಕಿದ ಗ್ರಂಥಗಳನ್ನು ರಚಿಸಿದ್ದಾರೆ! ಬಹುಸಂಖ್ಯಾತ ಕವಿಗಳು ಮೈಸೂರ ಸಂಸ್ಥಾನದ ಪರಿಸರದಲ್ಲಿದ್ದವರು. ಇವರಲ್ಲಿ ಹಲವು ರಾಜವಂಶೀಯರು, ಇತರ ಪ್ರತಿಷ್ಠಿತರು ಕಾಣಸಿಗುತ್ತಾರೆ. ಕಳಲೆಯ ಅಧಿಪತಿಯಾದ ವೀರರಾಜ ಮತ್ತು ಅವನ ಮಕ್ಕಳಾದ ನಂಜರಾಜ ದೇವರಾಜರು ಸ್ವತಃ ಗ್ರಂಥಗಳನ್ನು ಬರೆದೊ, ಬರೆಯಿಸಿಯೊ ಸಾಹಿತ್ಯ ಕಾರ್ಯವನ್ನು ಪೋಷಿಸಿದ್ದಾರೆ. ರಾಣೀವಾಸದ ಚೆಲುವಾಂಬೆ, ಕತ್ತಿ ಗೋಪಾಲರಾಜೇ ಅರಸು, ಶಾಲ್ಯದ ಕೃಷ್ಣರಾಜ, ಇವರು ರಾಜವಂಶೀಯರಾದರೆ, ನಿರ್ವಾಣ ಮಂತ್ರಿ, ಜಕ್ಕಣಾಮಾತ್ಯ, ವೆಂಕಾಮಾತ್ಯ. ಚೆನ್ನರಾಜಪ್ಪ, ಶರಜಾನಾಗ ಇವರು ಮಂತ್ರಿವರ್ಗದಲ್ಲಿ ಬರುತ್ತಾರೆ.

ಇವರ ಜೊತೆಗೆ ಕೆಳದಿಯ ಲಿಂಗಣ್ಣ, ಕೊಡಗಿನ ವೀರರಾಜೇಂದ್ರ, ಜಾಯಗೊಂಡದ ದೇಸಾಯಿ ಇವರನ್ನೂ 'ಸಾಹಿತ್ಯ ಸೇವಕ'ರಲ್ಲಿ ಪರಿಗಣಿಸಬೇಕು.

ಕಾವ್ಯವಸ್ತುವಿನ ದೃಷ್ಟಿಯಿಂದ ಮೌಲಿಕವೆನ್ನುವದು ಈ ಶತಮಾನದ ಕೃತಿಗಳಲ್ಲಿ ಇರಲಿಕ್ಕಿಲ್ಲ. ಅವೇ ರಾಮಾಯಣ, ಮಹಾಭಾರತ ಪ್ರಸಂಗಗಳು; ಅಷ್ಟಾದಶ ಪುರಾಣ ಗಳಲ್ಲಿ ಬಂದಿರುವ ಮಾಹಾತ್ಮ್ಯದ ಕಥೆಗಳು; ಶ್ರೀವೈಷ್ಣವ, ಜೈನ, ವೀರಶೈವ ಮತಗಳಿಗೆ ಸಂಬಂಧಿಸಿದ ಸಂಸ್ಕೃತ ಗ್ರಂಥಗಳ ಟೀಕಾನುವಾದ ಹಾಗೂ ಶತಕ ಸ್ತೋತ್ರಗಳು, ಇವುಗಳೇ ಕಂಡುಬರುತ್ತವೆ. ಆದರೆ ತಿಮ್ಮಾರ್ಯನ ಶ್ರೀರಾಮಕಥಾಭ್ಯುದಯ (ಆನಂದ ರಾಮಾಯಣ)ದಂತಹ ಕೃತಿಗಳಲ್ಲಿ ಕಾವ್ಯಸತ್ವ ಚೆನ್ನಾಗಿ ಹೊರಹೊಮ್ಮಿದೆ. ಈ ಮೊದಲು ಚಂಪೂವಿನಲ್ಲಿ ಬಂದ ವಿಷಯವನ್ನು ಕೆಲ ಕವಿಗಳು ಷಟ್ಪದಿಯಲ್ಲಿಯೊ ಸಾಂಗತ್ಯದಲ್ಲಿಯೊ ಬರೆದರೆನ್ನುವುದರಲ್ಲಿ ಜನ ಸಾಮಾನ್ಯ ದೃಷ್ಟಿಯಿದೆ. ಕೆಲವು ವೈದ್ಯ ಹಾಗೂ ಜ್ಯೋತಿಷ್ಯಕ್ಕೆ ಸಂಬಂಧಿಸಿದ ಕೃತಿಗಳು ಅನುವಾದಗೊಂಡಿವೆ. ಅದರಂತೆ ಜಯದೇವನ ಗೀತಗೋವಿಂದ ಮತ್ತು ಕಾಳಿದಾಸನ ರಘುವಂಶಗಳು ಕನ್ನಡದಲ್ಲಿ ಕಾಣಿಸಿಕೊಂಡದ್ದು ಮೆಚ್ಚಬೇಕಾದ ಅಂಶವಾಗಿದೆ.

ಈ ಶತಮಾನವಲ್ಲಿ ಹಳಗನ್ನಡ, ನಡುಗನ್ನಡ ಇವೆರಡೂ ಸಾಹಿತ್ಯ ಸ್ವರೂಪಗಳು ಕಂಡುಬಂದರೂ ಅವುಗಳಲ್ಲಿ ನಡುಗನ್ನಡದ್ದೇ ಮೇಲುಗೈ. ರಾಮಾಯಣದ ಕರ್ತೃ ವೆಂಕಾ ಮಾತ್ಯ, ಕೆಳದಿ ನೃಪವಿಜಯದ ಲಿಂಗಣ್ಣ ಇವರು ಕೆಲವರು ಮಾತ್ರ ಪ್ರೌಢಸರಣಿಯಲ್ಲಿ ಕಾವ್ಯರಚನೆ ಮಾಡಿದರು. ಬತ್ತೀಸ ಪುತ್ಥಳಿ ಕತೆಗಳಂತಹ ಲಲಿತ ವಿಷಯವನ್ನು ಚಂಪೂ ವಿನಲ್ಲಿ ಬರೆದ ದೇವಕವಿ ಹಾಗೂ ಈ ಹಿಂದೆ ವರ್ಣಕ ರೀತಿಯಲ್ಲಿದ್ದ ಹಾಲಾಸ್ಯ ಪುರಾಣ ವನ್ನು ವಸ್ತುಕ ಕಾವ್ಯವನ್ನಾಗಿ ಮಾರ್ಪಡಿಸಿ ಬರೆದ ಇಮ್ಮಡಿಯ ಮುರಿಗೆಯ ಸ್ವಾಮಿ ಇವರಿಬ್ಬರ ವಿಶಿಷ್ಟ ಮಾರ್ಗವನ್ನು ಬಿಟ್ಟರೆ ಉಳಿದವರೆಲ್ಲರೂ ನಡುಗನ್ನಡದ ರೀತಿಯಲ್ಲಿ, ಅಂದರೆ ಷಟ್ಪದಿ, ಸಾಂಗತ್ಯ, ಚೌಪದಿ, ಹಾಡಿನ ರೂಪಗಳಲ್ಲಿಯೇ ತಮ್ಮ ಕಾವ್ಯ ನಿರ್ಮಿತಿಯ ಒಲವನ್ನು ತೋರಿದ್ದಾರೆ. ಲಕ್ಷ್ಮಕವಿ, ಬಬ್ಬೂರು ರಂಗ, ತಿಮ್ಮಾಮಾತ್ಯ, ಹೆಳವನಕಟ್ಟೆ ಗಿರಿಯಮ್ಮ ಮತ್ತು ಶರಜಾನಾಗ (ಶುಕಸಪ್ತತಿಯ ಕರ್ತೃ) ಇವರುಗಳು ಇಂಥ ಗ್ರಂಥರಚನೆಯಲ್ಲಿ ಪ್ರಮುಖರು.

ಯಕ್ಷಗಾನದ ಹಾಡಿನ ರಚನೆಗೂ ಈ ಶತಮಾನದಲ್ಲಿ ಹೆಚ್ಚಿನ ಪುರಸ್ಕಾರ ದೊರೆ ಯಿತು. ಯಕ್ಷಗಾನ ಕವಿ ಪರಂಪರೆಯಲ್ಲಿ ದೊರೆತ ಮೊದಲ ಹೆಸರು ವಾರಂಬಳ್ಳಿಯ ವಿಷ್ಣುವಿನದು. ಈತ ೧೬ನೆಯ ಶತಮಾನದವ. ಹದಿನೆಂಟನೆಯ ಶತಮಾನವಲ್ಲಿ ಯಕ್ಷಗಾನ ಕೃತಿ ರಚನೆಯು ವಿಸ್ತಾರವನ್ನು ಪಡೆಯಿತು. ವಾದಗ್ರಸ್ತನಾದ ಪಾರ್ತಿಸುಬ್ಬ ಅಥವಾ ಅಜಪುರದ ಸುಬ್ಬನು ಇದೇ ಶತಮಾನದವನು. ಅವನಿಂದ ರಚಿತವಾದ ಕೆಲವು ರಾಮಾಯಾಣ ಪ್ರಸಂಗಗಳು ಹಾಗೂ ರುಕ್ಮಿಣೀ ಸ್ವಯಂವರ, ಪಾರಿಜಾತಾದಿ ಪ್ರಸಂಗ ಗಳು, ಇವುಗಳಿಂದ ಯಕ್ಷಗಾನ ಸಾಹಿತ್ಯವು ಪುಷ್ಟಿಯನ್ನು ಹೊಂದಿತು. ತಿಪ್ಪಣಾರ್ಯ ಸಾಂಬಯ್ಯ, ಚೆನ್ನಪ್ಪ, ಭಾಳಾಕ್ಷ, ವೆಂಕಟ (ಅಜಪುರದ ಸುಬ್ಬನ ಮಗ) ಮತ್ತು

ಹಟ್ಟಿಯಂಗಡಿ ರಾಮಭಟ್ಟ ಇವರು ಈ ಶತಮಾನದ ಕೆಲವು ಪ್ರಸಿದ್ಧ ಯಕ್ಷಗಾನ ಕವಿಗಳು. ರಾಮಭಟ್ಟನ ಪ್ರಸಂಗಗಳು ಇಂದಿಗೂ ಪ್ರಯೋಗವಾಗುತ್ತಿವೆ.

ಪೌರಾಣಿಕ ಕೃತಿಗಳಲ್ಲದೆ ಐತಿಹಾಸಿಕ ವಿಷಯಗಳನ್ನು ಯಕ್ಷಗಾನಕ್ಕೆ ಅಳವಡಿಸಿಕೊಳ್ಳುವ ಮನೋಧರ್ಮವು ವ್ಯಕ್ತವಾದುದು ಹದಿನೆಂಟನೆಯ ಶತಮಾನದಲ್ಲಿಯೇ.ವೈದಿಕ ಪುರಾಣಗಳನ್ನು ಸ್ವೀಕರಿಸಲೊಲ್ಲದ ಕೆಲವು ಜೈನರೂ, ಶಿವಶರಣರ ಕಥೆಗಳಿಗೆ ಪ್ರಾಶಸ್ತ್ಯ ಕೊಡಬಯಸಿದ ಹಲವು ವೀರಶೈವರೂ ಆ ಬಗೆಯ ಕೃತಿಗಳಿಗೆ ಮನಸ್ಸುಗೊಟ್ಟರು. ಆದಿಪರಮೇಶ್ವರ ಪುರಾಣ (ಬೊಮ್ಮಯ್ಯ), ಕರಿಭಂಟನ ಕತೆ (ಭಾಳಾಕ್ಷ), ಚೋರಕಥೆ (ಕಸ್ತೂರಿಸಿದ್ಧ) ಮತ್ತು ಶಿವಶರಣಲೀಲಾಮೃತ (ಚನ್ನಪ್ಪ)ಇವು ಐತಿಹಾಸಿಕ ಕಥಾವಸ್ತುಗಳನ್ನೊಳಗೊಂಡ ಯಕ್ಷಗಾನ ಪ್ರಸಂಗಗಳು. ಹೀಗೆ ಹದಿನೆಂಟನೆಯ ಶತಮಾನದ ಕೊನೆಯ ಹೊತ್ತಿಗೆ ಯಕ್ಷಗಾನ ಪ್ರಸಂಗಗಳ ಸ್ವರೂಪವು ಸ್ಥಿರಗೊಂಡಿದ್ದಿತು. ಮತ್ತು ಮುಖ್ಯವಾದ ಕಥಾನಕಗಳು ರಂಗಸ್ಥಳದ ಮೇಲೆ ಬೆಳಕು ಕಂಡಿದ್ದುವು.

ಮತೀಯ ದೃಷ್ಟಿಯು ತನ್ನ ಪ್ರಭಾವವನ್ನು ಹದಿನೆಂಟನೆಯ ಶತಮಾನದ ಸಾಹಿತ್ಯದಲ್ಲಿಯೂ ಸಾಕಷ್ಟು ಬೀರಿದೆ. ಶಾಲ್ಯದ ಕೃಷ್ಣರಾಜ, ಚಿದಾನಂದಾವಧೂತ ಮತ್ತು ಶಂಕರ ನಾರಾಯಣಯೋಗಿಗಳು ಅದ್ವೈತ ತತ್ವಗಳನ್ನು ಬೆಳಕಿಗೆ ತಂದರು. ನಂಜರಾಜನು ವೀರಶೈವ ಪುರಾಣಗಳನ್ನು ಟೀಕೆಯೊಡನೆ ಕನ್ನಡಿಸುವ ಇಲ್ಲವೆ ಕಾವ್ಯರೂಪದಲ್ಲಿ ವಿವರಿಸುವ ಕಾರ್ಯವನ್ನು ಕೈಕೊಂಡನಲ್ಲದೆ ಇತರರಿಗೆ ಪ್ರೋತ್ಸಾಹವಿತ್ತನು. ಶಂಕರಕವಿ, ಮೈಲಾರ ಬಸವಪ್ಪ, ಗುರುಸಿದ್ಧ—ಇವರ ವೀರಶೈವ ಸಾಹಿತ್ಯ ಕಾರ್ಯವನ್ನೂ ಇಲ್ಲಿ ನೆನೆಯಬಹುದು. ದೇವಾಂಗ ಮತದ ಕೈವಾರಿಗಳಾಗಿ ಮುದ್ದುಸಂಗ ಮುಂತಾದವರು ಟೀಕೆ, ಹಾಡುಗಳನ್ನು ರಚಿಸಿದ್ದಾರೆ. ತಂತಮ್ಮ ವಿಶಿಷ್ಟ ಮತಗಳ ಹೆಚ್ಚಳವನ್ನು ತೋರಿಸುವ ಪರಿಪಾಠದ ನಿದರ್ಶನವಿದು.

ಹದಿನೆಂಟನೆಯ ಶತಮಾನದ ಇನ್ನೊಂದು ವೈಶಿಷ್ಟ್ಯವೆಂದರೆ ಚಾರಿತ್ರಿಕ ಕಾವ್ಯ ರಚನೆ. ಮೈಸೂರಿನ ದೊರೆ, ಮಂತ್ರಿಗಳ ಪ್ರೋತ್ಸಾಹವೇ ಇದರ ಸೆಲೆಯಾಗಿದೆ. ಈ ಹಿಂದೆ ಕಾವ್ಯಗಳಲ್ಲಿ ಚಾರಿತ್ರಿಕ ಅಂಶಗಳು ಸೂಚ್ಯವಾಗಿ ಇಲ್ಲವೆ ಸಾಂಕೇತಿಕವಾಗಿ ಕಂಡುಬಂದಿದ್ದರೆ, ೧೭ನೆಯ ಶತಮಾನದ ಉತ್ತರಾರ್ಧದಿಂದ, ಅವು ನೇರವಾಗಿ ನಿರೂಪಿತವಾಗಿವೆ. ಅಂತೂ ಕುಮಾರರಾಮನ ಸಾಂಗತ್ಯ (೧೬ನೇ ಶತ) ದಿಂದ ಮೊದಲಾದ ಐತಿಹಾಸಿಕ ಕಾವ್ಯ ರಚನೆಯು ಚಿಕದೇವರಾಜನ ಕಾಲದಲ್ಲಿ ಪ್ರಾಶಸ್ತ್ಯವನ್ನು ಪಡೆಯಿತು. ಅವನ ಮಂತ್ರಿ ತಿರುಮಲೆಯಾರ್ಯನ ಚಿಕದೇವರಾಯ ವಂಶಾವಳಿಯು ಸುಸ್ಪಷ್ಟವಾದ ಚಾರಿತ್ರಿಕ ಬರೆಹವಾಗಿದೆ. ಚಿಕದೇವರಾಯನಿಂದಲೇ ರಚಿತವಾದುದೆಂದು ಹೇಳಲಾದ 'ಶೂದ್ರಾಚಾರ ನಿರ್ಣಯ' ಎಂಬೊಂದು ಸಂಸ್ಕೃತ ಶಾಸ್ತ್ರಗ್ರಂಥವಿದೆ. ಆದರೆ ಇದರ ಮೊದಲ ಪ್ರಕರಣವು ಮೈಸೂರರಸರ ಚರಿತ್ರೆಗೆ ಮೀಸಲು ! ಈ ಬಗೆಯ ವಂಶಾವಳಿಯ ಕಥನವು ಎಷ್ಟರ ಮಟ್ಟಿಗೆ ನೆಲೆಗೊಂಡಿತ್ತೆನ್ನುವುದಕ್ಕೆ ಇದೊಂದು ನಿದರ್ಶನ. ಹದಿನೆಂಟನೆಯ ಶತಮಾನದಲ್ಲಿ ರಚಿತವಾದ ಇತರ ಕಾವ್ಯಗಳಲ್ಲಿಯೂ ಮೈಸೂರರಸರ ಪ್ರಸ್ತಾಪ ಹೆಚ್ಚು ಕಡಿಮೆ

ಇದ್ದೇ ಇದೆ. ನೂರೊಂದನ ಸೌಂದರ ಕಾವ್ಯವೆಂಬ ಪೌರಾಣಿಕ ಕೃತಿಯಲ್ಲಿ ಮೈಸೂರ ದೊರೆಗಳ ಚರಿತ್ರೆಯು ಅರ್ಧಕ್ಕಿಂತ ಹೆಚ್ಚು ಪಾಲನ್ನು ಪಡೆದಿದೆ.

ಮೈಸೂರರಸರಲ್ಲದೆ ಬಿಳಗಿ, ಕೆಳದಿ, ಕೊಡಗು ಈ ರಾಜಮನೆತನಗಳ ಬಗ್ಗೆಯೂ ಚಾರಿತ್ರಿಕ ಕಾವ್ಯಗಳು ಈ ಶತಮಾನದಲ್ಲಿ ರಚಿತವಾಗಿವೆ. ಅಲ್ಲದೆ ಪಾರ್ಶ್ವನೆಂಬವನು ಕೊಲ್ಲಾಪುರದ ಸಾಮಂತರಾಜರ ಚರಿತ್ರೆಯನ್ನು (ಭಾಮಿನೀ ಷಟ್ಪದಿಯಲ್ಲಿ) ಬರೆದಿದ್ದಾನೆ. ಮುಂದಿನ ಅಂದರೆ ೧೯ನೇ ಶತಮಾನದಲ್ಲಿ ಇಂಥ ಚಾರಿತ್ರಿಕ ಕೃತಿರಚನೆಯು ಇನ್ನಷ್ಟು ಮುಂದುವರಿಯುವುದಕ್ಕೆ ಆಸ್ಪದವುಂಟಾಯಿತು.

'ಉಕ್ತಿವಿಲಾಸ'ಗಳ ಪರಂಪರೆಯು ಹದಿನೆಂಟನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೊಡುಗೆಯೆನ್ನಬಹುದು. ಖ್ಯಾತನಾಮ ಮುಮ್ಮಡಿ ಕೃಷ್ಣರಾಜರ (೧೯ನೇ ಶತ) ಅನೇಕ ಗದ್ಯಕೃತಿಗಳು ಕೃಷ್ಣರಾಜ ವಾಣೀವಿಲಾಸ ಕೃಷ್ಣರಾಜೋಕ್ತಿವಿಲಾಸ ಎಂಬ ಸದರಿನಲ್ಲಿ ರಚಿತವಾಗಿ ಪ್ರಸಿದ್ಧವಾಗಿವೆಯಷ್ಟೆ. ಅವರ ಉಗಮವನ್ನು ನಾವು ೧೮ನೆಯ ಶತಮಾನದಲ್ಲಿಯೇ ಕಾಣುತ್ತೇವೆ. ಕಳಲೆಯ ವೀರರಾಜ, ನಂಜರಾಜರು, ರಾಣಿ ಚೆಲುವಾಂಬೆ, ಕತ್ತಿ ಗೋಪಾಲರಾಜ ಇವರ ಹೆಸರಿನಲ್ಲಿ ಇಂಥ ಉಕ್ತಿ ಅಥವಾ ವಾಣೀ ವಿಲಾಸಗಳು ಬೆಳಕು ಕಂಡಿವೆ. ಚಾಮರಾಜೋಕ್ತಿ ವಿಲಾಸವೆಂಬ ರಾಮಾಯಣದ ಪ್ರಸಿದ್ಧ ಗದ್ಯಾನುವಾದವು ಇದೇ ಕಾಲದ್ದು.

ಮೇಲಣ ಸಾಹಿತ್ಯ ಚಟುವಟಿಕೆಗಳು ನಾಡಿನ ದಕ್ಷಿಣ ಭಾಗಕ್ಕೆ ಮೀಸಲಾಗಿದ್ದರೆ ಉತ್ತರದ ಆಗಿನ ನಿಜಾಮ ಕರ್ನಾಟಕದಲ್ಲಿ ದಾಸಸಾಹಿತ್ಯವು ತಲೆದೋರಿತು. ಗದ್ವಾಲ ಸಂಸ್ಥಾನ ಮತ್ತು ರಾಯಚೂರ ಜಿಲ್ಲೆಯ ಪರಿಸರದಲ್ಲಿ ಹಲವು ದಾಸ ಶ್ರೇಷ್ಠರು. ನಕ್ಷತ್ರ ಪುಂಜದಂತೆ ಕಾಣಿಸಿಕೊಂಡರು. ಆ ಬೆಳಕು ನೆರೆಯಲ್ಲಿಯ ಬಳ್ಳಾರಿ, ಧಾರವಾಡ ಜಿಲ್ಲೆ ಗಳ ಮೇಲೂ ಪ್ರಸರಿಸಿತು. ಹದಿನಾರನೆಯ ಶತಮಾನದಲ್ಲಿ ವ್ಯಾಸರಾಯ-ಪುರಂದರ ದಾಸರಿಂದ ವೈಭವದ ತುತ್ತತುದಿಯನ್ನು ಮುಟ್ಟಿದ ದಾಸವಾಹಿನಿಯು ೧೭ನೆಯ ಶತಮಾನದಲ್ಲಿ ಹರಿಗಡಿದಿದ್ದಿತು. ಮಹಿಪತಿದಾಸ, ಪ್ರಸನ್ನವೆಂಕಟದಾಸರನ್ನು ಬಿಟ್ಟರೆ ಮೇಲ್ಮಟ್ಟದ ದಾಸರು ಆ ಶತಮಾನದಲ್ಲಿ ಕಂಡುಬರಲಿಲ್ಲ. ಆದರೆ ಮುಂದಿನ ಶತಮಾನ ದಲ್ಲಿ ಮಾತ್ರ ದಾಸವೈಭವವು ಮರುಕಳಿಸಿತು. ಅದರ ಪುರಸ್ಕರ್ತರೆಂದರೆ ವಿಜಯದಾಸರು (೧೬೮೨–೧೭೫೫). ದಿವ್ಯ ದಾರ್ಶನಿಕರಾಗಿದ್ದ ಅವರು ನಾಡಿನಲ್ಲೆಲ್ಲ ಸಂಚರಿಸಿ ಜನತೆಗೆ ಹರಿಭಕ್ತಿಯನ್ನೂ ಸನ್ಮಾರ್ಗವನ್ನೂ ಬೋಧಿಸಿದರು. ಅಗಣಿತವಾದ ಕೀರ್ತನೆ, ಸುಳಾದಿ ಗಳನ್ನು ರಚಿಸಿದ ಹಾಗೂ ನೂರಾರು ಜನ ಶಿಷ್ಯರನ್ನು ಪಡೆದಿದ್ದ ವಿಜಯದಾಸರು ಹಲವು ದೃಷ್ಟಿಯಿಂದ ದ್ವಿತೀಯ ಪುರಂದರದಾಸರೇ ಆಗಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ದಾಸಕೂಟವು ಭರದಿಂದ ಮುನ್ನಡೆಯಿತು.

ವಿಜಯದಾಸರ ವಿಶಾಲ ಶಿಷ್ಯವರ್ಗದಲ್ಲಿ ಗೋಪಾಲದಾಸ, ಮೋಹನದಾಸ, ವ್ಯಾಸ ವಿಠಲ ಮತ್ತು ಜಗನ್ನಾಥದಾಸ ಇವರು ಅಗ್ರೇಸರರು. ಒಬ್ಬೊಬ್ಬರೂ ಮಹಾ ಮಹಿಮರು. ಇವರೆಲ್ಲರಲ್ಲಿ ಕವನ ಸ್ಫೂರ್ತಿಯು ಸಹಜವಾಗಿ ಹೊರಹೊಮ್ಮಿ ಸಾವಿರಾರು

ಹಾಡುಗಳ ಸೃಷ್ಟಿಯಾಯಿತು. ಕೀರ್ತನಗಳಲ್ಲದೆ ಕಥನ ಕವನಗಳನ್ನೂ ರಚಿಸಿದವರಿದ್ದಾರೆ. ರಘುಪತಿವಿಠಲರೆಂಬವರು ತಮ್ಮ 'ಅಧ್ಯಾತ್ಮಮಾಲಾ' ಕೃತಿಯಲ್ಲಿ ಮಾಧ್ವತತ್ವ ವಿವೇಚನೆಯನ್ನು ಗದ್ಯದಲ್ಲಿ ನಿರೂಪಿಸಿದುದು ಒಂದು ವಿಶೇಷ.

ಜಗನ್ನಾಥದಾಸರ 'ಹರಿಕಥಾಮೃತಸಾರ'ವು ಕನ್ನಡ ಸಾಹಿತ್ಯದ ಶಾಶ್ವತ ಕೃತಿಗಳಲ್ಲಿ ಒಂದಾಗಿದೆ. ಭಕ್ತಿಮಾರ್ಗದಲ್ಲಿ ತುಂಬು ಜೀವನವನ್ನು ನಡೆಯಿಸಿ, ಪ್ರತಿಭೆಯು ಪರಿಪಕ್ವ ಸ್ಥಿತಿಯಲ್ಲಿದ್ದಾಗ ರಚಿಸಿದ ಕಾವ್ಯವಿದು. ಜಗನ್ನಾಥದಾಸರು ತತ್ವವಿವೇಚನೆಗೆ ಸಾಮಾಜಿಕ ದೃಷ್ಟಾಂತಗಳನ್ನು ಕೊಟ್ಟು, ತಿಳಿಯಾದ ಶೈಲಿಯಲ್ಲಿ ವಿಷಯವನ್ನು ಮಂಡಿಸಿ ಕಾವ್ಯ-ಧರ್ಮವನ್ನೂ ಉಳಿಸಿಕೊಂಡಿದ್ದಾರೆ. ಮುಂದಿನ ಹರಿದಾಸರ ಮೇಲೆ ಈ ಕೃತಿಯು ತನ್ನ ಪ್ರಭಾವವನ್ನು ಬೀರಿರುವುದರಿಂದ ಇದನ್ನು ಮೇರುಕೃತಿಯೆಂದು ತಿಳಿಯಬೇಕು. ಅಂತೆಯೇ ಮುಂದಿನ ಶತಮಾನದಲ್ಲಿ ಅದಕ್ಕೆ ಅನೇಕರು ಟೀಕೆಯನ್ನು ಬರೆದುದಿದೆ.

ವಿಜಯದಾಸರ ಮತ್ತು ಅವರ ಅನಂತರದ ದಾಸರ ಚರಿತ್ರೆ ಹಾಗೂ ಕೃತಿಗಳು ಗೋರಾಬಾಳ ಹನುಮಂತರಾವ, ಬೇಲೂರ ಕೇಶವದಾಸ, ನಾರಾಯಣರಾವ ಕಲಮದಾನಿ ಮೊದಲಾದವರ ವಿಶೇಷ ಪ್ರಯತ್ನದ ಮೂಲಕ ಈಚೆಗೆ ಬೆಳಕಿಗೆ ಬಂದಿವೆ. 'ಕವಿಚರಿತೆ'ಯಲ್ಲಿ ಹೆಚ್ಚೆಂದರೆ ೩೦ ಜನ ದಾಸರ ಹೆಸರುಗಳಷ್ಟೇ ಉಕ್ತವಾಗಿವೆ. ಆದರೆ ಮೇಲಣವರ ಪ್ರಯತ್ನದಿಂದಾಗಿ ೧೮-೧೯ನೆಯ ಶತಮಾನಗಳಲ್ಲಿ ಬಾಳಿದ ದಾಸರ ಸಂಖ್ಯೆ ಮುನ್ನೂರರ ಗಡುವನ್ನು ಮುಟ್ಟಿದೆ. ಇವೆಲ್ಲರ ಹಾಡುಗಳು ಈ ಮುನ್ನವೇ ಮುದ್ರಿತವಾಗಿ ಅವುಗಳ ಸಮೀಕ್ಷೆ ವಿಮರ್ಶೆಗಳು ನಡೆದು ಹೋಗಿದ್ದರೆ, ಈ ಶತಮಾನವನ್ನು ಕತ್ತಲೆಯ ಕಾಲವೆಂದು ಯಾರೂ ಹೇಳುತ್ತಿರಲಿಲ್ಲವೇನೊ !

ಈ ಶತಮಾನದ ಬಹುದೊಡ್ಡ ವೈಶಿಷ್ಟ್ಯವೆಂದರೆ ಗದ್ಯದ ಪ್ರಾದುರ್ಭಾವ. ಕನ್ನಡ ಸಾಹಿತ್ಯದಲ್ಲಿ ಗದ್ಯದ ನಡೆಯು ಪದ್ಯದಷ್ಟೇ ಪ್ರಾಚೀನವೆಂದು ತೋರಿದರೂ, ಅದು ಮೇಲ್ನಡೆಯದು. ಚಂಪೂ, ರಗಳೆಗಳಲ್ಲಿ ಕಿಂಚಿತ್ ಪಾಲನ್ನು ಪಡೆದ ಗದ್ಯ, ಪದ್ಯಛಾಯೆಯದೇ ಆದ ವಚನಗದ್ಯ, ಕೆಲವು ಶಾಸನಗಳ ಗದ್ಯ—ಹೀಗೆ ಎಲ್ಲವೂ ಅಂಶತಃ ಕಂಡುಬರುವ ಗದ್ಯ ರಚನೆಯಲ್ಲದೇ ಅದಕ್ಕೆ ನಿಶ್ಚಿತ ಪರಂಪರೆಯಿರಲಿಲ್ಲ. ಮೇಲ್ಕಂಡ ಚಿಕದೇವರಾಯವಂಶಾವಳಿಯು ಗದ್ಯರಚನೆಯಲ್ಲಿ ಒಂದು ದೊಡ್ಡ ಹೆಜ್ಜೆಯಾಗಿದೆ. ಹದಿನೇಳನೆಯ ಶತಮಾನದ ಕೊನೆಯಲ್ಲಿ ರಚಿತವಾದ ಈ ಕೃತಿಯ ಅನಂತರ, ಮುಂದಿನ ಶತಮಾನದಲ್ಲಿ ಸುಮಾರು ೫೦ ಗ್ರಂಥಗಳು ಕಂಡುಬರುತ್ತವೆ. ಪಾಶ್ಚಿಮಾತ್ಯ ಸಂಪರ್ಕ ಅಥವಾ ಮುದ್ರಣದ ಅನುಕೂಲತೆಯೊದಗಿದ ಮೇಲೆಯೇ ಗದ್ಯಾವತಾರವಾಯಿತೆಂದೇನೂ ಅಲ್ಲ.

ಈ ಶತಮಾನದ ಗದ್ಯ ಸಾಹಿತ್ಯ ನಿರ್ಮಿತಿಯಲ್ಲಿ ಕ್ರೈಸ್ತರ ಪಾಲೂ ಸಾಕಷ್ಟಿದೆ. ಕ್ರಿ.ಶ. ೧೭೩೭ರಲ್ಲಿ ಸವೆರ್ರಿ ಎಂಬವನು ಬರೆದಿರಬಹುದಾದ ಸು. ೧೨೦೦ ಪುಟಗಳಷ್ಟು ಕ್ರೈಸ್ತ ಮತೀಯ ಬರವಣಿಗೆ ಇದೆ (ವಿವರಗಳಿಗೆ ಮುಂದಿನ ಲೇಖವನ್ನು ನೋಡುವುದು).

ಗದ್ಯದ ಪ್ರಾದುರ್ಭಾವಕ್ಕೆ ಕಾಗದದ ಬಳಕೆಯು ಹೆಚ್ಚುತ್ತ ನಡೆದುದೂ ಕೆಲ ಮಟ್ಟಿಗೆ ಕಾರಣವಾಗಿದೆ. ಹಿಂದಿನ ಕಾಲದ ಭೂರ್ಜಪತ್ರ ಮತ್ತು ತಾಡವೋಲೆಗಳು ದುರ್ಮಿಳವೂ ಬರೆಯಲು ಕಷ್ಟಸಾಧ್ಯವೂ ಆಗಿದ್ದುವು. ಮಧ್ಯಯುಗದಲ್ಲಿ, ಲೆಕ್ಕಪತ್ರ, ವಂಶಾವಳಿ ಬಖೈರು ಮುಂತಾದುವನ್ನು ಬರೆದಿಡಲು ಬಟ್ಟೆಯ ಉಪಯೋಗವೂ ಇದ್ದಿತು. ದೊಡ್ಡ ಬಟ್ಟೆಗೆ ಇದ್ದಲಿ ಬಣ್ಣ ಲೇಪಿಸಿ, ಬಳಪದಿಂದ ಬರೆಯಲಾದ ಇವುಗಳಿಗೆ ಕಡತಗಳೆನ್ನುತ್ತಿದ್ದರು. ಆದರೆ ಸುಲಭವಾಗಿ ಅಳಿಸಬರುವಂತಿದ್ದ ಇವು ಶಾಶ್ವತವಲ್ಲ. ಅದೇ ಚಿಂದಿಬಟ್ಟೆ, ನಾರುಗಳಿಂದ ತಯಾರಿಸಲಾಗುತ್ತಿದ್ದ ಕಾಗದವು ಹೆಚ್ಚು ಅನುಕೂಲದ್ದಾಗಿ ತೋರಿಬಂದಿತು. ಅದರ ತಯಾರಿಕೆಯು ಹತ್ತನೆಯ ಶತಮಾನದಲ್ಲಿ ಮುಸಲ್ಮಾನರ ಮೂಲಕ ಆರಂಭವಾಯಿತು. ಹನ್ನೆರಡನೆಯ ಶತಮಾನದಲ್ಲಿ, ಗುಜರಾತದಲ್ಲಿ ಕಾಗದದ ಬಳಕೆ ಇತ್ತೆಂಬುದಕ್ಕೆ ಸ್ಪಷ್ಟವಾದ ಉಲ್ಲೇಖವಿದೆ. ಮುಸ್ಲಿಮರ ಪ್ರಭಾವವು ದೇಶದಲ್ಲಿ ಹಬ್ಬುತ್ತ ನಡೆದಂತೆ ಕಾಗದದ ಬಳಕೆಯೂ ಹೆಚ್ಚುತ್ತ ನಡೆಯಿತು. ಆಗಿನ ಸಂಪ್ರದಾಯನಿಷ್ಠರಿಗೆ ಮಾತ್ರ ಕಾಗದವು ಅಪವಿತ್ರವೆನಿಸಿದ್ದಿತು. ಮತ್ತು ತಾಳಿಕೆಯ ದೃಷ್ಟಿಯಿಂದ ಅವರಿಗೆ ತಾಡವೋಲೆಯೇ ಹೆಚ್ಚು ಸೂಕ್ತವಾಗಿ ಕಂಡಿದ್ದಿತು.

ಕರ್ನಾಟಕದಲ್ಲಿ ಕಾಗದದ ಬಳಕೆ ಎಂದಿನಿಂದ ಮೊದಲಾಯಿತೆಂದು ಹೇಳುವುದು ಸಾಧ್ಯವಿಲ್ಲ. ಆದರೆ ೧೪ನೆಯ ಶತಮಾನದ ಕೊನೆಯಲ್ಲಿ ರಚಿತವಾದ 'ಮಂಗಾಭಿದಾನ' ಕೋಶದಲ್ಲಿ ಮತ್ತು ೧೬ನೆಯ ಶತಮಾನದ 'ಚೆನ್ನಬಸವ ಪುರಾಣ'ದಲ್ಲಿ 'ಕಾಗದ' ಶಬ್ದವು ಕಾಣಿಸಿಕೊಂಡಿದೆ. ಆ ಕಾಲಕ್ಕೆ ಕಾಗದವು ಒಂದು ಗೃಹಕೈಗಾರಿಕೆಯಾಗಿ ತಯಾರಾಗುತ್ತಿದ್ದಿತೆನ್ನಬಹುದು. ಉತ್ತರ ಕರ್ನಾಟಕದ ಕೆಲವು ಮುಸ್ಲಿಂ ಮನೆತನಗಳ ಅಡ್ಡಹೆಸರು 'ಕಾಗಜ' ಎಂದು ಈಗಲೂ ಇರುವುದನ್ನು ಗಮನಿಸಬೇಕು. ಅಂತೂ ವಿಜಯನಗರದ ಅರವೀಡು ರಾಜಮನೆತನದ ಬಹುಮನಿ ಸಂಸ್ಥಾನ ಮತ್ತು ಮೈಸೂರು ಸಂಸ್ಥಾನ ಇವುಗಳ ರಾಜ್ಯಾಡಳಿತ ಕಾಲದಲ್ಲಿ ಕಾಗದವನ್ನು ವಿಶೇಷವಾಗಿ ಬಳಸುತ್ತಿದ್ದರೆನ್ನಬಹುದು. ಸುಪ್ರಸಿದ್ಧವಾದ 'ರಾಮರಾಯನ ಬಖೈರ'ನ್ನು ಪ್ರಥಮತಃ ಕಾಗದದ ಮೇಲೆಯೇ ಬರೆದಿರಬೇಕೆಂದು ಊಹಿಸುತ್ತೇವೆ. ಮುಂದೆ ೧೮ನೆಯ ಶತಮಾನದ ಹೊತ್ತಿಗೆ ಕಾಗದದ ವಿಷಯಕ್ಕಿದ್ದ ಮೈಲಿಗೆಯ ಭಾವನೆಯು ಕಡಿಮೆಯಾಗಿ ಅದನ್ನು ಎಲ್ಲ ವರ್ಗಗಳ ಜನರೂ ಬಳಸಹತ್ತಿದರು. ಎರಡನೇ ಕಂಠೀರವ ನರಸರಾಜರ ೧೭೦೯ನೆಯ ವರ್ಷದ ಒಂದು ಶಾಸನವು ಕಾಗದದ ಮೇಲೆಯೆ ಇದ್ದಿತೆಂಬುದು ಮೇಲಣ ಮಾತಿಗೆ ಪುಷ್ಟಿಯನ್ನು ಕೊಡಬಲ್ಲದು.

ಹದಿನೆಂಟನೆಯ ಶತಮಾನದಲ್ಲಿ ಗದ್ಯವನ್ನು ಪುರಾಣ ಮತ್ತು ಶಾಸ್ತ್ರಗ್ರಂಥಗಳ ಟೀಕಾನುವಾದಕ್ಕಾಗಿಯೇ ಮುಖ್ಯವಾಗಿ ಬಳಸಲಾಯಿತು. ಮೈಸೂರು ಆಸ್ಥಾನದಲ್ಲಿದ್ದ ವೀರಶೈವ ಹಾಗೂ ಶ್ರೀವೈಷ್ಣವ ವಿದ್ವಾಂಸರು ವಿಶೇಷವಾಗಿ ಇಂಥ ಟೀಕಾಗದ್ಯಗಳನ್ನು ರಚಿಸಿದರು. ಅದೇ ಜೈನ ಹಾಗೂ ಅದ್ವೈತಿಗಳ ಗದ್ಯಕೃತಿಗಳು ಸಂಖ್ಯಾಮಾನದಿಂದ

ಅಷ್ಟಾಗಿ ಕಂಡುಬರುವುದಿಲ್ಲ. ಇನ್ನು, ಚಾರಿತ್ರಿಕ ನಿರೂಪಣೆಗೆ ಗದ್ಯವು ಹೆಚ್ಚು ಹೃದ್ಯವಾಗುತ್ತಿದ್ದಿತೇನೋ ನಿಜ. ಹಾಗೆಂದು ಭಾವಿಸಿ ಕೃತಿರಚನೆ ಮಾಡಿದ ತಿರುಮಲೆಯಾರ್ಯನ ಗದ್ಯಪರಂಪರೆಯನ್ನು ಆ ಮುಂದಿನ ಚಾರಿತ್ರಿಕ ಲೇಖಕರಲ್ಲಿ ಅನುಸರಿಸಿದವರು ಒಬ್ಬಿಬ್ಬರು ಮಾತ್ರ. (ಉದಾ. ಗೆ ಶಾನುಭೋಗ ವೆಂಕಟರಮಣಯ್ಯನ ಮೈಸೂರು ರಾಜರ ಚರಿತ್ರೆ. ಇದು ಚಿಕದೇವರಾಜ ವಂಶಾವಳಿಗಿಂತ ನೂರು ವರ್ಷಗಳ ಅನಂತರ ರಚಿತವಾದದ್ದು. ಇದರ ಬರವಣಿಗೆಯು ಇಂದಿನ ಗದ್ಯಕ್ಕೆ ಹೆಚ್ಚು ಸಮೀಪವಾಗಿದೆ.)

ಆದರೆ ಗದ್ಯವನ್ನು ಜ್ಯೋತಿಷ್ಯ, ವೈದ್ಯಕೀಯ, ವ್ಯಾಕರಣ ಮುಂತಾದ ಶಾಸ್ತ್ರ ವಿಷಯಗಳ ನಿರೂಪಣೆಗೆ ತೆಗೆದುಕೊಂಡುದು ಗದ್ಯದ ಮುನ್ನಡೆಯ ಲಕ್ಷಣವಾಗಿದೆ. ಕಳಲೆಯ ವೀರರಾಜೋಕ್ತಿ ವಿಲಾಸ ಎನಿಸಿದ ವೈದ್ಯ ಸಂಹಿತಾರ್ಣವವೂ ತಿಮ್ಮರಾಜೇಗೌಡನ ಸ್ತ್ರೀ ವೈದ್ಯವೂ ಈ ಮಾತಿಗೆ ನಿದರ್ಶನವಾಗಿವೆ. ಶಬ್ದಮಣಿದರ್ಪಣಕ್ಕೆ ಗದ್ಯದಲ್ಲಿ ಟೀಕೆಯನ್ನು ಬರೆದ ನಿಟ್ಟೂರ ನಂಜಯ್ಯನು ಇದೇ ಕಾಲದವನು. ಗೀತಗೋವಿಂದ, ಸೌಂದರ್ಯಲಹರಿ ಇವುಗಳೂ ಗದ್ಯರೂಪದಲ್ಲಿ ಅನುವಾದಗೊಂಡವು.

ಹೀಗೆ ಹದಿನೆಂಟನೆಯ ಶತಮಾನದ ಸಾಹಿತ್ಯವು ಸಂಖ್ಯಾಮಾನದಿಂದ ಗಣನೀಯವಾಗಿದೆ. ದಾಸಸಾಹಿತ್ಯ ಮತ್ತು ಯಕ್ಷಗಾನ ಕೃತಿಗಳ ವಿಸ್ತಾರವನ್ನು ಕಾಣುತ್ತೇವೆ. ಕೆಲವು ಹೊಸ ಪರಂಪರೆಗಳನ್ನು ಈ ಶತಮಾನವು ಒಳಗೊಂಡಿದೆ. ಮುಖ್ಯತಃ ಗದ್ಯದ ವಿಶೇಷ ಮುನ್ನಡೆಯು ಕಂಡುಬಂದಿದೆ. ಜೊತೆಗೆ ಕನ್ನಡ ಕವಿಗಳು ಚಾರಿತ್ರಿಕ ದೃಷ್ಟಿಕೋಣವನ್ನು ಬೆಳೆಯಿಸಿಕೊಂಡದ್ದನ್ನು ನಾವು ಕಾಣಬಹುದು. ಮೇಲ್ಮಟ್ಟದ ಕವಿಗಳು ಹುಟ್ಟಲಿಲ್ಲ, ಎಂಬ ಮಾತು ಸ್ಥೂಲವಾಗಿ ಮಾತ್ರ ಅನ್ವಯಿಸುವಂತಹದು. ವಿಜಯದಾಸರು, ಜಗನ್ನಾಥದಾಸರು ಮತ್ತು ಚಿದಾನಂದಾವಧೂತರು ಮೇಲ್ಮಟ್ಟದ ಕವಿಗಳೆನ್ನುವವರಲ್ಲಿ ಸಂದೇಹವಿಲ್ಲ. ಈ ಕವಿಗಳೆಲ್ಲ ಪರಂಪರಾಗತ ವಿಷಯವುಳ್ಳ ಧಾರ್ಮಿಕ ಕೃತಿಗಳನ್ನೇ ರಚಿಸಿದ್ದರೂ ಅವುಗಳಲ್ಲಿ ಸ್ವಂತಿಕೆ ಇದೆ. ಆದಕಾರಣ ಹದಿನೆಂಟನೆಯ ಶತಮಾನವು ಇತರ ಶತಮಾನಗಳಿಗೆ ಹೋಲಿಸಿದಾಗ ಮಾತ್ರ ಅಷ್ಟೊಂದು ಸತ್ವಪೂರ್ಣವಾಗಿ ತೋರಲಿಕ್ಕಿಲ್ಲ. ಆದರೆ, ಒಟ್ಟಿನ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ವೈಶಿಷ್ಟ್ಯದಿಂದ ಕೂಡಿದೆ.

ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ - ೧
ಸ್ಥೂಲ ನೋಟ

ನಮ್ಮ ನಾಡಿಗೆ ಪಾಶ್ಚಾತ್ಯ ಮಿಶನರಿಗಳ ಸಂಪರ್ಕ ಮೊದಲಾದದ್ದು – ಗೋವೆಯ ಮೂಲಕ ; (೧೭ನೆಯ ಶತಮಾನ). ಅಲ್ಲಿಂದ ನೆರೆಯ ಕನ್ನಡ ಜಿಲ್ಲೆಗಳಲ್ಲಿ ಕೆಥಲಿಕ್ ಪಾದ್ರಿಗಳು ಬಂದು ಹೋಗುತ್ತಿದ್ದರಲ್ಲದೆ, ಮಿಶನ್ ಕೇಂದ್ರಗಳನ್ನು ತೆರೆದಿರಲಿಲ್ಲ. ಅದರಂತೆ ತಮಿಳುನಾಡಿನ ಮಿಶನರಿ ಜನರೂ ಮೈಸೂರು ಸಂಸ್ಥಾನದ ಊರುಗಳನ್ನು ಆಗೀಗ ಸಂದರ್ಶಿಸುತ್ತಿದ್ದರು. ಈ ಸ್ಥಿತಿಯಲ್ಲಿ ಗೋವೆಯಲ್ಲಿದ್ದ ಒಬ್ಬ ಮಿಶನರಿಯು ಕ್ರಿ. ಶ. ೧೬೪೯ರಲ್ಲಿ ಮೈಸೂರು ನಗರಕ್ಕೆ ಬಂದು ಕಂಠೀರವ ನರಸರಾಜರ ಉದಾರ ಅನುಮತಿಯಿಂದ ಅಲ್ಲಿ ನೆಲೆಯೂರಿದನು. ಆಗಿನಿಂದ ಮತಾಂತರ ಕಾರ್ಯವು ನಿತಾಂತ ವಾಗಿ ನಡೆದು, ಬ್ರಿಟಿಶರು ರಾಜ್ಯವಾಳತೊಡಗಿದ ೧೮೦೦ನೆಯ ವರ್ಷದಷ್ಟೊತ್ತಿಗೆ ನಾಡಿನಲ್ಲಿ ಸಹಸ್ರಾರು ಕ್ರಿಸ್ತೀಯರು ಕಾಣಿಸಿಕೊಂಡರು. ಇವರೆಲ್ಲ ಕೆಥಲಿಕ್ ಪಂಗಡಕ್ಕೆ ಸೇರಿದವರು. ಕ್ರಿ. ಶ. ೧೮೧೯ರಲ್ಲಿ ಮೊದಲ ಬಾರಿಗೆ ಪ್ರೊಟೆಸ್ಟಂಟ್ ಮಿಶನರಿಯ ಆಗಮನವಾಯಿತು. ಆಮೇಲೆ ಮತಾಂತರ ಕಾರ್ಯವು ಪ್ರೊಟೆಸ್ಟಂಟರಿಂದಲೂ ಮುಂದು ವರಿಯಿತು.

ಮತಪ್ರಸಾರದ ಹಿನ್ನೆಲೆ : ಮತಪ್ರಸಾರಕ್ಕೆಂದು ನಮ್ಮಲ್ಲಿಗೆ ಬಂದಿದ್ದ ಮಿಶನರಿಯವರು ವಿವಿಧ ಸಂಸ್ಥೆಗಳಿಂದ ಪೋಷಿತರು. ಸೊಸೈಟಿ ಆಫ್ ಜೀಸಸ್ (J. S.) ಕೆಥಲಿಕರಿಗೆ ಸಂಬಂಧ ಪಟ್ಟದ್ದಾದರೆ, ಲಂಡನ್ ಮಿಶನ್, ವೆಸ್ಲಿಯನ್ ಮೆಥಾಡಿಸ್ಟ ಮಿಶನ್, ಹಾಗೂ ಜರ್ಮನ್ ಇವ್ಯಾಂಜೆಲಿಕಲ್ (ಬಾಸೆಲ್) ಮಿಶನ್—ಪ್ರೊಟೆಸ್ಟಂಟರ ಸಂಸ್ಥೆಗಳು. ಭಾರತದ ಇತರ ಪ್ರದೇಶಗಳಲ್ಲಿ ಕಂಡು ಬರುವ ಡೇನಿಶ್, ಫ್ರೆಂಚ್ ಹಾಗೂ ಅಮೇರಿಕನ್ ಬ್ಯಾಪ್ಟಿಸ್ಟ್ ಮುಂತಾದ ಸಂಸ್ಥೆಗಳವರು ೧೯ನೆಯ ಶತಮಾನಾಂತ್ಯದ ವರೆಗೆ ನಮ್ಮಲ್ಲಿ ಬಂದಿರಲಿಲ್ಲ. ಆಮೇಲೆಯಾವರೂ ಎದ್ದು ಕಾಣುವಂತೆ ಸಾಹಿತ್ಯ ರಂಗದಲ್ಲಿ ಕಾಲಿರಿಸಿದವರಲ್ಲ.

ಮಿಶನರಿ ಜನರ ಆಗಮನದ ಮುಖ್ಯ ಉದ್ದೇಶ ಕ್ರೈಸ್ತಮತ ಪ್ರಸಾರ; ಮತಾಂತರ. ಇದನ್ನು ಸಾಧಿಸುವುದು ಸುಲಭವಾಗಿರಲಿಲ್ಲ. ಆದಕಾರಣ, ಜನರ ಮನಸ್ಸನ್ನು ತಮ್ಮತ್ತ ಸೆಳೆಯುವ ಉದ್ದೇಶದಿಂದ ಅವರು ಬೇರೆ ಮಾರ್ಗಗಳನ್ನು ಅನುಸರಿಸಬೇಕಾಯಿತು. ಅವರಿಗೆ – ವಿಶೇಷತಃ ಪ್ರೊಟೆಸ್ಟಂಟರಿಗೆ, ಮನವರಿಕೆಯಾಗಿದ್ದ ಒಂದು ವಿಷಯವೆಂದರೆ ಸಾಮಾನ್ಯ ಜನತೆಗೆ ಶಿಕ್ಷಣವನ್ನು ಕೊಟ್ಟದ್ದಾದರೆ, ಕ್ರೈಸ್ತ

ವಿಚಾರಗಳನ್ನು ಅವರಿಗೆ ಮನದಟ್ಟಾಗುವಂತೆ ಹೇಳಬಹುದೆಂಬುದು, ಅಲ್ಲದೆ, ಇಂಗ್ಲಿಶ್ ಕಲಿಯುವಿಕೆಗೆ ಪ್ರಾಧಾನ್ಯ ಬಂದುದರಿಂದ, ಇಂಗ್ಲಿಶ್ ಶಾಲಾಸ್ಥಾಪನೆಯ ಮೂಲಕ ಮತಾಂತರ ಕಾರ್ಯವನ್ನು ಹೆಚ್ಚು ಸುಗಮಗೊಳಿಸಬಹುದೆಂದೂ ಅವರಿಗೆ ತೋಚಿತು. ಆದರೆ ಪಠ್ಯ ಪುಸ್ತಕಗಳು ಬೇಕಲ್ಲ ? ಸರಿ, ಅಂಥ ಪಠ್ಯಗಳನ್ನು ಬರೆಯುವುದಕ್ಕೂ ಅವರು ಗಮನವಿತ್ತರು. ಇನ್ನು ಮತಪ್ರಸಾರಕ್ಕೆ ಅಗತ್ಯವಿದ್ದ ಸಾಮಗ್ರಿ ಎಂದರೆ, ಕನ್ನಡದಲ್ಲಿ ಅನುವಾದಗೊಂಡ ಬೈಬಲ್ ಹಾಗೂ ಇತರ ಧಾರ್ಮಿಕ ಗ್ರಂಥಗಳು. ಮಿಶನರಿ ಜನರು ಈ ಅನುವಾದ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ಕೈಗೊಂಡರು. ಹೀಗೆ ಪಠ್ಯ ಪುಸ್ತಕ ಮತ್ತು ಮತೀಯ ಗ್ರಂಥ – ಇವು ಕ್ರೈಸ್ತ ಸಾಹಿತ್ಯದ ಪ್ರಮುಖ ಅಂಶ ಗಳಾಗಿವೆ. ಇವುಗಳ ಸಾವಿರಾರು ಪ್ರತಿಗಳನ್ನು ಸಿದ್ಧಪಡಿಸಲು ಮುದ್ರಾಯಂತ್ರ ಗಳೆಲ್ಲಿದ್ದುವು ? ಆದ್ದರಿಂದ ಅವನ್ನು ತಂದರು. ಪಾಶ್ಚಾತ್ಯ ರೀತಿಯ ಶಿಕ್ಷಣ ಹಾಗೂ ಮತಪ್ರಸಾರ – ಇವುಗಳಿಗೆ ಮುದ್ರಣವು ಬೆನ್ನೆಲುಬಾಗಿ ನಿಂತಿತು. ಇಂತು ನಮ್ಮ ನಾಡಿಗೆ ಬಂದೊಡನೆ ಕನ್ನಡವನ್ನು ಕಲಿಯುವುದು ; ಬೈಬಲ್ ಮತ್ತಿತರ ಮತೀಯ ಕೃತಿಗಳ ಅನುವಾದ ; ಕನ್ನಡ ಕೋಶ – ವ್ಯಾಕರಣಗಳ, ಅದರಂತೆ ಪಠ್ಯಪುಸ್ತಕಗಳ ರಚನೆ; ಈ ಪುಸ್ತಕಗಳ ಪ್ರಕಟನೆ – ವಿತರಣೆ ; ಜೊತೆಗೆ ತಂತಮ್ಮ ಆಸಕ್ತಿ – ಹವ್ಯಾಸದ ವಿಷಯಗಳಿಗೆ ಸಂಬಂಧಿಸಿದಂತೆ ಗ್ರಂಥರಚನೆ—ಈ ವ್ಯವಸ್ಥಿತ ಚೌಕಟ್ಟಿನಲ್ಲಿ ಮಿಶನರಿ ಜನರ ವಾಙ್ಮಯ ಕಾರ್ಯವು ಸಾಗಿ ಬಂದಿತು ; ಹೊಸಗನ್ನಡ ಸಾಹಿತ್ಯನಿರ್ಮಿತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವಂತಾಯಿತು. ಅವರ ಯಾವುದೇ ಸಾಹಿತ್ಯಿಕ ಚಟುವಟಿಕೆಗೆ ಕ್ರೈಸ್ತಮತಪ್ರಸಾರವೇ ಪ್ರೇರಕವಾಗಿದ್ದರೂ ಯಾವುದೊಂದು ವಿಷಯ ವನ್ನು ಆಳವಾಗಿ ಅಭ್ಯಸಿಸಿ, ಆ ಕುರಿತು ಗ್ರಂಥರಚನೆ ಮಾಡಿದ್ದಾಗ ಮತೀಯ ದೃಷ್ಟಿಯು ಬಹುಮಟ್ಟಿಗೆ ಹಿಂದುಳಿದು, ಆ ಕೃತಿಯು ಸರ್ವಜನಗ್ರಾಹ್ಯವಾದ ಸಂದರ್ಭ ಗಳೂ ಸಾಕಷ್ಟು ಕಂಡುಬರುತ್ತವೆ.

ಹೊಸಗನ್ನಡದ ತೇರನ್ನು ಎಳೆಯುವಲ್ಲಿ ಮಿಶನರಿ ಜನರಿಗೆ ಆಗಿನ ಆಡಳಿತಾಧಿ ಕಾರಿಗಳು ವಿಶೇಷವಾಗಿ ಸಹಕರಿಸಿದ್ದರು. ಬ್ರಿಟಿಶ್ ಅಧಿಕಾರಿಗಳು ಮೊದಮೊದಲಿಗೆ ಅವರನ್ನು ದೂರವಿರಿಸಲೆಂದರು– ಸಹಾನುಭೂತಿ ಇದ್ದರೂ. ಕ್ರಮೇಣ ಅವರಿಗೆ ಪರಸ್ಪರ ಸಹಾಯದ ಅಗತ್ಯವುಂಟಾಯಿತು. ಸರಕಾರದಿಂದ ಸ್ಥಾಪಿತವಾದ ಶಾಲೆಗಳಿಗಾಗಿ ವ್ಯಾಕರಣ – ಕೋಶ ಮೊದಲಾದ ಪುಸ್ತಕಗಳನ್ನು ರಚಿಸಲು ಅವರು ಮಿಶನರಿ ಜನರನ್ನು ಕೇಳಿಕೊಂಡಿದ್ದಾರೆ. ಅಂತೂ ಬಹಿರಂಗವಾಗಿ ಅಲ್ಲದಿದ್ದರೂ ಅಪ್ರತ್ಯಕ್ಷವಾಗಿ, ಅಧಿಕಾರಿ ಗಳು ಮಿಶನರಿ ಜನರಿಗೆ ನೆರವಾಗಿದ್ದಾರೆ.

ಮುದ್ರಣದ ಅಭಿಯೋಗ : ಯಾವ ದೇಶವೇ ಆಗಲಿ, ಮುದ್ರಣವು ಕಾಲಿರಿಸಿದ ಕೆಲವೇ ಕಾಲದಲ್ಲಿ ಆ ದೇಶವು ಪ್ರಗತಿಪಥದಲ್ಲಿ ಮುನ್ನಡೆದುದು ಐತಿಹಾಸಿಕವಾಗಿ ಸಿದ್ಧಗೊಂಡ ಮಾತಾಗಿದೆ. ನಮ್ಮ ನಾಡಿನಲ್ಲಿಯೂ ಹಾಗೆ ಆಯಿತು ; ಮುದ್ರಣದ

ಅಭಿಯೋಗವು ಶೈಕ್ಷಣಿಕ ಹಾಗೂ ಸಾಹಿತ್ಯಿಕ ರಂಗದಲ್ಲಿ ಕ್ರಾಂತಿಯನ್ನುಂಟುಮಾಡಿತು. ಹೊಸಗನ್ನಡ ವಾಙ್ಮಯದ ಉದಯಕ್ಕೂ, ಮುಂದೆ ಅದು ವ್ಯಾಪಕವಾಗಿ ಹಬ್ಬುವುದಕ್ಕೂ ಮುದ್ರಣವು ಮೂಲ ಕಾರಣವಾಗಿದೆ.

ನಮ್ಮ ದೇಶದಲ್ಲಿ ಮುದ್ರಣದ ಮಹತ್ವವನ್ನು ಮೊದಲಿಗೆ ಕಂಡ ಕೆಥಲಿಕ್ ಮಿಶನರಿಗಳು ಮುದ್ರಾಯಂತ್ರವನ್ನು ಗೋವೆಯಲ್ಲಿ ಸ್ಥಾಪಿಸಿದರು (೧೮೪೬). ಆದರೂ ೧೮ನೆಯ ಶತಮಾನದ ಅಂತ್ಯದ ವರೆಗೆ ಅವರು ಕನ್ನಡ ಮುದ್ರಣ ಕಾರ್ಯದಲ್ಲಿ ಉದ್ಯುಕ್ತರಾದದ್ದರ ನಿದರ್ಶನವೊಂದೂ ಇದುವರೆಗೆ ದೊರೆತಿಲ್ಲ. (ದೊರೆತೀತೆಂದು ಆಶಿಸಲು ಇನ್ನೂ ಅವಕಾಶವಿದೆ !). ಏನಿದ್ದರೂ ಅನಂತರ ಹದಿನೆಂಟನೆಯ ಶತಾರಂಭದಲ್ಲಿ ಇಲ್ಲಿಗೆ ಬಂದ ಪ್ರೊಟೆಸ್ಟಂಟರಿಗೆ ಪ್ರಥಮ ಮುದ್ರಣಕಾರರೆಂಬ ಪ್ರಾಶಸ್ತ್ಯ ಸಲ್ಲುತ್ತದೆ. ಮತ್ತು ವಿಲಿಯಮ್ ಕೇರಿ ಎಂಬ ಪ್ರೊಟೆಸ್ಟಂಟ್ ಮಿಶನರಿಯು ಬಂಗಾಲದ ಶ್ರೀರಾಮಪುರದಲ್ಲಿ ಹೊರತಂದ 'A grammar of the Kurnata language' ಗ್ರಂಥವೇ (ಕನ್ನಡ ಅಕ್ಷರಗಳನ್ನೊಳಗೊಂಡ) ಆದ್ಯ ಮುದ್ರಿತ ಕನ್ನಡ ಕೃತಿಯಾಗಿದೆ.

ಕೆಥಲಿಕರ ಮುದ್ರಣ ಕಾರ್ಯವು ಬೆಂಗಳೂರಲ್ಲಿ ೧೮೪೦ ನೆಯ ದಶಕದಲ್ಲಿ ಮೊದಲಾಯಿತು. ಮೂರು - ನಾಲ್ಕು ದಶಕಗಳ ವರೆಗೆ ಅಲ್ಲಿ ಮತೀಯವಾದ ಹಾಗೂ ಪಠ್ಯಪುಸ್ತಕಗಳ ಮುದ್ರಣ ನಡೆದುಕೊಂಡು ಬಂದಿತು. ಆಮೇಲೆ ನಗರದ ವಿಚಾರ ದರ್ಪಣ ಪ್ರೆಸ್ಸನ್ನು ಅವಲಂಬಿಸಿದ್ದುದು (೧೯೦೦) ಕಂಡುಬರುತ್ತದೆ. ಅವರ ಇನ್ನೊಂದು ಮುದ್ರಣ ಕೇಂದ್ರವೆಂದರೆ, ಮಂಗಳೂರು. ಅಲ್ಲಿಯ ಕೊಡಿಯಾಲಬೈಲ ಪ್ರೆಸ್ ಲಿಪಿಸೌಷ್ಠವಕ್ಕೆ ಹೆಸರಾಗಿದ್ದಿತು. ಕೊಂಕಣಿ ಭಾಷೆಯ ಪುಸ್ತಕಗಳನ್ನು ಕನ್ನಡ ಲಿಪಿಯಲ್ಲಿ ಮುದ್ರಿಸುವ ಕ್ರಮ ಇಲ್ಲಿಯೇ ಮೊದಲಾಯಿತೆಂದು ತೋರುತ್ತದೆ. ಅಂತೂ ಇವೆರಡು ಭಾಷೆಗಳ ಬಾಂಧವ್ಯಕ್ಕೆ ಈ ಪ್ರೆಸ್ ನೆರವಾಯಿತು. ಮಂಗಳೂರಲ್ಲಿ ಈಗಾಗಲೇ ಬಾಸೆಲ್ ಮಿಶನ್ ಪ್ರೆಸ್ ಗಟ್ಟಿಯಾಗಿ ನೆಲೆಗೊಂಡಿದ್ದಾಗಲೂ ಈ ಪ್ರೆಸ್ ತಲೆಯೆತ್ತಿ ನಿಂತದ್ದು ಅಲ್ಲಿಯ ಕಾರ್ಯಕರ್ತರ ಸಾಹಸದ ಮಾತೇ ಸೈ.

ಇಂತು ಮಿಶನರಿ ಜನರು ನಾಡಿನ ಹಲವಾರು ಕಡೆಗೆ ಮುದ್ರಣಾಲಯಗಳನ್ನು ಸ್ಥಾಪಿಸಿ ಭರದಿಂದ ಗ್ರಂಥಗಳನ್ನು ಪ್ರಕಟಿಸತೊಡಗಿದರು. (ಕ್ರಮೇಣವಾಗಿ ಖಾಸಗೀ ಮತ್ತು ಸರಕಾರೀ ಅಚ್ಚುಕೂಟಗಳು ಜೊತೆಗೂಡಿದವಾದರೂ, ೧೯ನೇ ಶತಮಾನದಲ್ಲಿ ಮಿಶನರಿಗಳದ್ದೇ ಮೇಲುಗೈಯಾಗಿದ್ದಿತು.) ಮುದ್ರಣ ಸೌಲಭ್ಯದಿಂದಾಗಿ ಸಾಹಿತ್ಯ ನಿರ್ಮಿತಿಯು ಹಿಂದಿನ ಕಾಲಕ್ಕಿಂತ ನೂರಾರು ಪಟ್ಟು ಬೆಳೆಯಿತು. ಪರಂಪರಾಗತವಾಗಿ ಕವಿತೆಯೊಂದೇ ಸಾಹಿತ್ಯಾಭಿವ್ಯಕ್ತಿಗೆ ವಾಹಕವಾಗಿದ್ದದ್ದು. ಈಗ ಗದ್ಯರಚನೆಗೆ ವಿಶೇಷ ಚಾಲನೆ ದೊರೆಯಿತು. ಹೀಗೆ, ನಾನಾ ವಿಷಯ, ವಿಚಾರಗಳಿಗೆ ಮತ್ತು ಹಲವಾರು ಬಗೆಯ ಸಾಹಿತ್ಯ ರೂಪಗಳ ಆವಿರ್ಭಾವಕ್ಕೆ ಮುದ್ರಣಕಾರ್ಯವು ಪುಟಕೊಟ್ಟಿದೆ.

ಮಿಶನರಿ ಜನರ ವಾಙ್ಮಯ ಕಾರ್ಯವು ಸು. ೧೮೪೦ಕ್ಕೆ ಆರಂಭವಾಗಿ ಮೊದಲ ಮಹಾಯುದ್ಧದ ವರೆಗೆ (ಸು. ೧೯೧೪) ನಡೆದುಕೊಂಡು ಬಂದಿತು. ಸುಮಾರು

೨೫೦ ವರ್ಷಗಳ ಈ ಸಾಹಿತ್ಯ ಚರಿತ್ರೆಯಲ್ಲಿ ಎರಡು ಘಟ್ಟಗಳನ್ನು ಗುರುತಿಸಬಹುದು. (೧) ೧೬೫೦ ರಿಂದ ೧೮೧೫. ಇದು ಮುದ್ರಣಪೂರ್ವ ಯುಗ. ಕೇವಲ ಕೆಥಲಿಕರ ಸಾಹಿತ್ಯ ರಚನೆ, ಹಸ್ತಪ್ರತಿಗಳ ರೂಪದಲ್ಲಿ ದೊರೆಯುತ್ತದೆ. (೨) ೧೮೧೫ ರಿಂದ ೧೯೧೫. ಮುದ್ರಣ ಯುಗವಾದ ಈ ದ್ವಿತೀಯ ಘಟ್ಟದಲ್ಲಿ ಪ್ರೊಟೆಸ್ಟಂಟರದೇ ಮೇಲುಗೈ. ಆರಂಭ ಕಾಲದಲ್ಲಿ ಪಠ್ಯಪುಸ್ತಕ, ಮತೀಯ ಪುಸ್ತಕ – ಎಂಬುದಾಗಿ ದ್ವಿಮುಖ ಗ್ರಂಥರಚನೆ ಕ್ರಮಪ್ರಾಪ್ತವಾಯಿತು. ಈ ಘಟ್ಟದ, ಎಂದರೆ ೧೯ ನೆಯ ಶತಮಾನದ ಉತ್ತರಾರ್ಧದಲ್ಲಿ ಮತೀಯ ಪುಸ್ತಕಗಳಲ್ಲದೆ ಇತರ ವಿಷಯಗಳ ಬಗ್ಗೆಯೂ ಗ್ರಂಥರಚನೆಯಾಗಿದೆ. ಆ ಮುಂದೆ, ೨೦ನೆಯ ಶತಮಾನದಲ್ಲಿ – ಪ್ರಥಮ ಯುದ್ಧಾನಂತರ ಕ್ರೈಸ್ತ ವಾಙ್ಮಯವು ಅಸ್ತಂಗತವೇ ಎನ್ನುವಷ್ಟು ಕಡಿಮೆ ಪ್ರಮಾಣದಲ್ಲಿ ಇದೆ.

ಏನಿದ್ದರೂ ಹೊಸಗನ್ನಡ ಸಾಹಿತ್ಯದ ಆರಂಭದ ಅವಧಿಯಲ್ಲಿ ಕ್ರಿಸ್ತೀಯರು ಎದ್ದು ಕಾಣುವಂತೆ ಪರಿಶ್ರಮಿಸಿದ್ದಾರೆ. ಅವರಲ್ಲಿ ಪ್ರೊಟೆಸ್ಟಂಟರದು ಸಿಂಹಪಾಲು ಇದ್ದರೂ ಕೆಥಲಿಕರದು ವಿಶಿಷ್ಟ ಸ್ವರೂಪದ್ದು ಹಾಗೂ ದೀರ್ಘಕಾಲದ್ದಾಗಿದೆ. ಮುಂದಿನ ಎರಡು ಲೇಖಗಳಲ್ಲಿ ತುಸು ವಿವರವಾಗಿ ಪರಿಶೀಲಿಸೋಣ.

ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ-೨
ಮುದ್ರಣಪೂರ್ವ ಯುಗ

(೧೭-೧೮ನೆಯ ಶತಮಾನಗಳು)

ಕನ್ನಡ ನಾಡಿಗೆ ಬಂದು ನೆಲೆಸಿದ ಆದ್ಯ ಕ್ರಿಸ್ತೀಯನೆಂದರೆ ಲಿಯೊನಾರ್ದೊ ಚಿನಾಮಿ ಅಥವಾ ಚಿನಾಮೊ. ಇವನು ಕನ್ನಡದ ಮೊದಲ ಕ್ರೈಸ್ತ ಲೇಖಕನೂ ಅಹುದು; ಕ್ರಿ. ಶ. ೧೬೪೮ರಲ್ಲಿ ಮೈಸೂರಿಗೆ ಬಂದು ಮಿಶನ್ ಕೇಂದ್ರವನ್ನು ತೆರೆದ ಮೇಲೆ ಮತ ಪ್ರಸಾರವನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಂಡು ಪುಸ್ತಕಗಳನ್ನು ಬರೆದನು. ಅದಕ್ಕೂ ಕೆಲವು ದಶಕಗಳ ಮುಂಚೆ ತಮಿಳುನಾಡಿನ ಮಿಶನರಿ — ರಾಬರ್ಟ-ದ-ನೊಬಿಲಿಯಂತೆ (೧೫೭೭-೧೬೫೬) ತಾನೂ ಹಿಂದೂ ವೇಷ, ಆಚಾರಗಳನ್ನು ಅನುಕರಿಸಿದನು. ಅಲ್ಲದೆ ಪಾಶ್ಚಾತ್ಯ ರೀತಿಯ ವೈದ್ಯಕೀಯ ನೆರವನ್ನೂ ನೀಡುತ್ತಿದ್ದುದರಿಂದ ಅವನಿಗೆ ಜನತೆಯೊಡನೆ ಬೆರೆಯಲು ಸುಲಭವಾಯಿತು. ಆದರೂ ಸಾಕಷ್ಟು ಕಷ್ಟನಷ್ಟಗಳಿಗೆ ಗುರಿಯಾಗಬೇಕಾಯಿತು. ಇಳಿವಯಸ್ಸಿನಲ್ಲಿ ಸ್ವದೇಶಕ್ಕೆ ಹಿಂತಿರುಗಬಹುದಾಗಿದ್ದರೂ ಮರಣಪರ್ಯಂತ (೧೬೭೯) ಇಲ್ಲಿಯೇ ಉಳಿದನು. ಮೈಸೂರಲ್ಲಿ ಕನ್ನಡದ ರೂಢಿಯಾದ ಮೇಲೆ ಗ್ರಂಥ ರಚನೆಗೆ ತೊಡಗಿದನು. ಸೊಮರ್‌ವೊಗೆಲ್ ಎಂಬವನ ಜೆಸುಯಿಟ್ ಗ್ರಂಥಸೂಚಿಯಲ್ಲಿ ಉಕ್ತವಾದ ಮೇರೆಗೆ ಅವುಗಳ ವಿಷಯ/ಶೀರ್ಷಿಕೆ ಇಂತಿದೆ :

—ಕ್ರೈಸ್ತ ಧರ್ಮದ ರಹಸ್ಯ ತತ್ವಗಳ ವಿವರಣೆ

—ಕ್ರೈಸ್ತ ಧರ್ಮ ಸಮರ್ಥನೆ

—ಕ್ರೈಸ್ತ ಸಂತರ ಚರಿತ್ರೆಗಳು

—ಮೈಸೂರು ಜನರ ಜಾತಿ–ಪದ್ಧತಿ, ಮೂಢನಂಬಿಕೆ—ಇವುಗಳ ಖಂಡನೆ

—ಕನ್ನಡ ಶಬ್ದಕೋಶ ಹಾಗೂ ಕನ್ನಡ ವ್ಯಾಕರಣ.

ಚಿನಾಮಿಯ ಮೇಲ್ಕಂಡ ಕೃತಿಗಳ ರಚನೆಯ ಕುರಿತು ನಿಶ್ಚಿತವಾದ ಪುರಾವೆ ಇದ್ದರೂ, ಅವು ಲಭ್ಯವಿರುವದರ ಸುಳಿವು ಇದುವರೆಗಂತೂ ದೊರೆತಿಲ್ಲ. ಗೋವೆಯ ಕೆಥಲಿಕ್ ಮುದ್ರಣಾಲಯದಲ್ಲಿ ಕೊಂಕಣಿ ಪುಸ್ತಕಗಳನ್ನು ರೋಮನ್ ಲಿಪಿಯಲ್ಲಿ ಮುದ್ರಿಸಿದಂತೆ ಇವುಗಳಲ್ಲಿ ಕೆಲವನ್ನಾದರೂ ಮುದ್ರಿಸಿರಬಹುದೆ? ಈ ಕೃತಿ–ಸಮುದಾಯದಲ್ಲಿ ಕ್ರೈಸ್ತ ಧರ್ಮದ ರಹಸ್ಯ ತತ್ವಗಳ ಕುರಿತಾದ ಪುಸ್ತಕವು ಹೆಚ್ಚು ಪ್ರಸಿದ್ಧಿಯನ್ನು ಹೊಂದಿತ್ತೆಂದೂ ತಿಳಿದುಬರುತ್ತದೆ.

ಇವುಗಳ ಮುದ್ರಣದ ಮಾತಿರಲಿ, ಈ ಕೃತಿಗಳು ಕನ್ನಡದವೆ?–ಎಂಬುದನ್ನು ನಿರ್ಧರಿಸಬೇಕೇನೊ (ಸೊಮರ್‌ವೊಗೆಲ್ ಸ್ಪಷ್ಟವಾಗಿ ಹೇಳಿಲ್ಲವಾದ್ದರಿಂದ). ನಮ್ಮಲ್ಲಿ ಯವರಿಗಾಗಿ ಬರೆದ ಈ ಕೃತಿಗಳು ಕನ್ನಡದಲ್ಲೇ ಇದ್ದಿರಬೇಕು. ಮತ್ತು ಇಲ್ಲಿಯ ಜನರ ಜಾತಿ, ಮತ ಇತ್ಯಾದಿಗಳ ಖಂಡನೆ ಮಾಡುವುದಾದರೆ ಅದು ಕನ್ನಡದಲ್ಲೆ ಆಗಬೇಕು, ತಾನೇ. ಇತ್ತ ಕನ್ನಡ ಭಾಷೆಯ ಕುರಿತಾದ ಕೃತಿಗಳು ಲ್ಯಾಟಿನ್ ಇಲ್ಲವೆ ಪೋರ್ತುಗೀಜ್ ಭಾಷೆಯಲ್ಲಿ ಇದ್ದಿರಲೂಬಹುದು. ಹಾಗಿದ್ದರೂ ಅವು ಹೊಸಗನ್ನಡದ ಆದಿಮ ಭಾಷಾ ಗ್ರಂಥಗಳೆಂಬ ಕಾರಣದಿಂದ ಐತಿಹಾಸಿಕ ಮಹತ್ವದವಾಗಿದೆ.

ಇದೇ ಕಾಲದಲ್ಲಿ ಗೋವೆಯಲ್ಲಿ ಮುದ್ರಣಗೊಂಡ ಅನೇಕ ಪುಸ್ತಕಗಳ ಶೀರ್ಷಿಕೆಗಳಲ್ಲಿ 'ಕನ್ನಡ' ಶಬ್ದವು ವಿವಿಧ ರೂಪಗಳಲ್ಲಿ ದೊರಯುತ್ತದೆ. (Canarim, Canarima, Canerese ಇತ್ಯಾದಿ.) ಹಾಗೆಂದು ಅವು ಕನ್ನಡಕ್ಕೆ ಸಂಬಂಧಪಟ್ಟವುಗಳೆಂಬುದು ನಿಶ್ಚಿತವಲ್ಲ. ಏಕೆಂದರೆ ನಮ್ಮ ಕನ್ನಡ ಲಿಪಿಯು ಕೊಂಕಣಿ, ಮರಾಠಿಗಳಿಗೂ ಬಳಕೆಯಾಗುತ್ತಿತ್ತು. ಮಧ್ಯಯುಗೀನ ಕಾಲದಲ್ಲಿ ಕರ್ನಾಟಕಕ್ಕಿದ್ದ ಹಿರಿಮೆಯೂ ಈ ಅಪ–ಪ್ರಯೋಗಕ್ಕೆ ಕಾರಣವಾಯ್ತು. ಆದರೂ ಸ್ವಯಂ–ಕನ್ನಡದವು ಇಲ್ಲವೆ ಇಲ್ಲ—ಎಂದೂ ತಿಳಿಯಲಾಗದು. ಅಂಥವುಗಳಲ್ಲಿ ಅಮದೊರ್ ದ ಸಾಂತಾ ಅನ್ನಾ ಎಂಬವನು ಅನುವಾದಿಸಿದ ಫ್ಲೊಸ್ ಸ್ಯಾಂಕ್ಟೊರಮ್ ಎಂಬ ಕೃತಿ, ಡಿ. ರಿಬೆರೊ ಎಂಬವನ ಕ್ರೈಸ್ತ ಸಂತರ ಚರಿತ್ರೆಯ ಪುಸ್ತಕ, ಹಾಗೂ ಪ್ರಿರಿಖಿಕಿಲ್ ಎಂಬ ಪಾದ್ರಿಯು ತನ್ನ ಜೈಲುವಾಸದ ಕಾಲಕ್ಕೆ (ಜೈಲಿನ ಕಾರಣ ಗೊತ್ತಿಲ್ಲ), ರಚಿಸಿದ ಕನ್ನಡ ನಾಮಕ ವ್ಯಾಕರಣ-ಕೋಶಗಳು ೧೭ನೆಯ ಶತಮಾನದ ಕನ್ನಡ ವಾಙ್ಮಯಕ್ಕೆ ಕೆಥಲಿಕರ ಕೊಡುಗೆಗಳಾಗಿರಬಹುದು.

ಹದಿನೆಂಟನೆಯ ಶತಮಾನ :

ಮುಂದೆ, ಕ್ರಿ.ಶ. ೧೮೫೦ರ ವರೆಗೆ ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯವು ಅಜ್ಞಾತವೆನಿಸಿತ್ತು. ಆದರೆ ಸುದೈವಕ್ಕೆ ೧೭೪೯ರ ಎರಡು ಕ್ರೈಸ್ತ ಸಾಹಿತ್ಯದ ಹಸ್ತಪ್ರತಿಗಳು ಲಂಡನ್ನಿನ S. O. A. S. ಗ್ರಂಥಾಲಯದ ಮಾರ್ಸಡೆನ್ ಸಂಗ್ರಹದಲ್ಲಿ ದೊರೆತಿವೆ.*

* ಕನ್ನಡದ ಅಪೂರ್ವ ಸಂಗ್ರಹವನ್ನು ಅರಸಿಕೊಂಡು ಇಂಗ್ಲಂಡಿಗೆ ಹೋದಾಗ ಇವು ದೊರೆತುವು. ಮಾರ್ಸಡೆನ್ ಹಸ್ತಪ್ರತಿ ಸಂಗ್ರಹಕ್ಕೆ ವಿಶೇಷ ಮಹತ್ವವಿದೆ. ಗೋವೆ, ಮತ್ತಿತರ ಕಡೆಯ ಹಸ್ತಪ್ರತಿಗಳು, ೧೮ನೆ ಶತ.ದ ಪೋರ್ತುಗೀಜ ಮಂತ್ರಿ–ಮಾರ್ಕ್ವಿಸ್ ಆಫ್ ಪೊಂಬಾಲ್ ಎಂಬವನ ವಶದಲ್ಲಿದ್ದುವು. ಅವನ ಮರಣಾನಂತರ ನಡೆದ ಲಿಲಾವಿನಲ್ಲಿ ಮಾರ್ಸಡೆನ್ ಮತ್ತು ಓರ್ವ ಫ್ರೆಂಚ್ ಸಂಗ್ರಹಕಾರ ಸೇರಿಕೊಂಡು ಅವನ್ನು ಖರೀದಿ ಮಾಡಿದರು. ಮುಂದಿನ ವಿತರಣೆಯಲ್ಲಿ, ಫ್ರಾನ್ಸಿನ ರಾಷ್ಟ್ರೀಯ ಗ್ರಂಥಾಲಯ, ಇಂಗ್ಲೆಂಡಿನ ಬ್ರಿಟಿಶ್ (ಮ್ಯೂಸಿಯಮ್) ಲೈಬ್ರರಿ ಮತ್ತು ಕಿಂಗ್ಸ ಕಾಲೇಜು ಮುಂತಾದ ಕಡೆಗಳಲ್ಲಿ ಅವು ಹಂಚಿಹೋದವು. ಈ ಕಿಂಗ್ಸ ಕಾಲೇಜಿನಿಂದ, ಲಂಡನ್ ಯುನಿವರ್ಸಿಟಿ/ S. O. A. S. ಸಂಸ್ಥೆಗೆ ಅವು ಬಂದಿರಬೇಕು.

ಈ ಗ್ರಂಥದ್ವಯವು ಹೊಸಗನ್ನಡದ ಆರಂಭಕಾಲವನ್ನು ೮೦ ವರ್ಷಗಳಷ್ಟು ಹಿಂದೆ ಕೊಂಡೊಯ್ಯಬಹುದಾದ್ದರಿಂದಲೂ ಬಂದಿರುವ ವಿಷಯ ಅಪೂರ್ವವಾದ್ದರಿಂದಲೂ ಅವುಗಳ ಹೆಚ್ಚಿನ ಪರಿಶೀಲನೆಯನ್ನು ಇಲ್ಲಿ ಕೈಕೊಳ್ಳಬಯಸಿದೆ.

ಈ ಹಸ್ತಪ್ರತಿಗಳಲ್ಲಿ ಒಂದು ೪೦ ಪಾನುಗಳುಳ್ಳದ್ದು; ಇನ್ನೊಂದರದ್ದು ೩೩೭. ಮುಂದಿನ ವಿವರಣೆಯಲ್ಲಿ ಇವನ್ನು ಹಸ್ತಪ್ರತಿ–೪೦, ಹಸ್ತಪ್ರತಿ-೩೩೭ ಎಂದು ಕರೆಯೋಣ. (ಎರಡೂ ಸೇರಿದರೆ ಮುದ್ರಣದಲ್ಲಿ ೧೨೦೦ ಪುಟಗಳಿಗೆ ಮಿಕ್ಕುವುದು.) ಕನ್ನಡವು ಮಾತೃಭಾಷೆಯಾಗಿರದ ಒಬ್ಬ ವಿದೇಶೀಯನಿಂದ ಇಷ್ಟು ದೊಡ್ಡ ಪ್ರಮಾಣದ ಕೃತಿರಚನೆಯಾದುದು ಆಶ್ಚರ್ಯಕಾರಕವಾಗಿದೆ. ಪ್ರೊಟೆಸ್ಟಂಟರ ವಿಸ್ತಾರವಾದ ಗ್ರಂಥೋದ್ಯಮದಲ್ಲಿ ಸಹ, ಇಷ್ಟರ ಮಟ್ಟಿಗಿನ ಬರವಣಿಗೆಯು ಒಬ್ಬೊಬ್ಬರಲ್ಲಿ ಮಾತ್ರ ಕಂಡುಬರುತ್ತದೆ. ಅಲ್ಲದೆ ಈ ಕೃತಿದ್ವಯವು ಅವಕ್ಕಿಂತ ನೂರು ವರ್ಷ ಮುಂಚಿನದೆಂಬ ಹೆಗ್ಗಳಿಕೆಯೂ ಇದೆ. ಈ ಹಸ್ತ ಪ್ರತಿಗಳ ಅಕ್ಷರಗಳು ಮುದ್ದಾಗಿವೆ. ಆಕಾರದಲ್ಲಿ ಒಮ್ಮೆ ಸಣ್ಣ, ದೊಡ್ಡವಾಗಿ ತೋರಿದರೂ ಬರಹವು ಒಟ್ಟಿನಲ್ಲಿ ಏಕಪ್ರಕಾರವಾಗಿದೆ.

ಲೇಖಕ : ಎರಡೂ ಕೃತಿಗಳ ಹಸ್ತಾಕ್ಷರಗಳನ್ನು ಹೋಲಿಸಿ ನೋಡಿದಾಗ ಅವನ್ನು ಲಿಖಿಸಿದಾತ ಒಬ್ಬನೇ ಎಂಬುದಾಗಿ ಗೋಚರವಾಗುತ್ತದೆ. ಹಸ್ತಪ್ರತಿ–೪೦ರಲ್ಲಿ ಬರೆದವನ ಹೆಸರು ನೇರವಾಗಿ ಕಂಡುಬಂದಿಲ್ಲ. ಆದರೆ ಹ–ಪ್ರ–೩೩೭ರಲ್ಲಿ ಆ ಉಲ್ಲೇಖವಿದೆ:

"**ಸಿಧಾರ್ಥಿ ಸಮುತ್ಸರದ ಚೈತ್ರಮಾಸದ 23ನೆ ತಿಥಿಯಲ್ಲು ಸವೆರ್ರಿ ಬರದ ಯಿಾ ಪುಸ್ತುಕವ ಯರು ಮುಟ್ಟಿದರು ಯರು ಒದಿದರು ಬರದವನಿಗಿದೆವರ ಮಾತೆಯ ನೊಡಿ ಬೆಡಿಕೊಳ್ಳಿ**"

ಸವೆರ್ರಿ–ಇದರ ಮೂಲ ರೂಪ Xaveri ಇಲ್ಲವೆ Xavier ಎಂಬುದು. ಈ ಹೆಸರಿನ ಒಂದು ಮನೆತನವು ಇಟಲಿಯಲ್ಲಿ ಒಂದು ಕಾಲಕ್ಕೆ ಸುಪ್ರಸಿದ್ಧವಿದ್ದಿತು. ಹೆಸರೊಂದನ್ನು ಬಿಟ್ಟರೆ ಇವನ ಬಗ್ಗೆ ಹಸ್ತಪ್ರತಿಗಳಲ್ಲಿ ಮತ್ತೇನೂ ದೊರೆಯದು. ಆದರೆ ತಿಮೊಥಿಯೊ ಝವಿಯರ್–ಎಂಬ ಜೆಸುಯಿಟ್ ಮಿಶನರಿಯು ೧೮ನೆಯ ಶತಮಾನದಲ್ಲಿ ಮೈಸೂರ ಮಿಶನ್ನಿನಲ್ಲಿ ಇದ್ದ. ಕ್ರಿ. ಶ. ೧೭೭೩ರಲ್ಲಿ ಜೆಸುಯಿಟ್ ಮಿಶನರಿ ಸಂಸ್ಥೆಯು ಪೋಪರಿಂದ ರಾಜ್ಯಬಾಹಿರವಾದ ಮೇಲೆ ಇವನು ಶ್ರೆಂಗನೂರಿಗೆ ವರ್ಗವಾಗಿ ಹೋದ ೧೭೮೬ ಎಂಬುದಾಗಿ ಫೆರೋಲಿ ಒಂದೆಡೆ ಹೇಳಿದ್ದಾರೆ.[1] ಈ ಕೃತಿಗಳ ರಚನಾ ಕಾಲವು (೧೭೩೯) ಎಂದಿರುವದರಿಂದ, ಅದಕ್ಕಿಂತ ೫–೬ ವರ್ಷ ಮುಂಚೆಯೇ ತಿಮೊಥಿಯೊ ನಮ್ಮಲ್ಲಿಗೆ ಬಂದಿರಬೇಕಾಗುತ್ತದೆ. ಮುಂದೆ ಶ್ರೆಂಗನೂರಿಗೆ ಹೋದಾಗ ಅವನು ೭೦-೮೦ ವರ್ಷದ ಮುದುಕನಿದ್ದಿರಬೇಕು. ಇದು ಅಸಂಭವವಲ್ಲವಾದರೂ, ತಿಮೊಥಿಯೊನ ಕರ್ತೃತ್ವವನ್ನು ಸ್ಥಿರೀಕರಿಸಲು, ಮೈಸೂರ ಮಿಶನ್ನಿಗೆ ಅವನು ಬಂದ ವರ್ಷವನ್ನು

[1] Jesuits in Mysore (೧೯೫೫) ಪು. 133, 194 ಮತ್ತು 218.

ಕಂಡುಕೊಳ್ಳಬೇಕಾಗುತ್ತದೆ. ಫೆರೋಲಿ ತಮ್ಮ ಗ್ರಂಥದಲ್ಲಿ, ಮೈಸೂರು ಮಿಶನ್ನಿಗೆ ಸಂಬಂಧಿಸಿದ ಹಲವಾರು ಜೆಸುಯಿಟರ ಹೆಸರನ್ನು ಕೊಟ್ಟಿದ್ದು, ಹದಿನೆಂಟನೆಯ ಶತಮಾನದ ಹೆಸರುಗಳಲ್ಲಿ ಇನ್ನಾವರೆಘುವಿಯರನೂ ಇಲ್ಲದುದು, ಈ ವಿಚಾರದತ್ತ ಒಂದು ಸಾಧಕವಾದ ಪ್ರಮಾಣವಾಗಬಲ್ಲುದು.

ತಿಮೊಥಿಯೋನ ಬಗ್ಗೆ ಫೆರೋಲಿ ಇನ್ನೂ ತುಸು ಮಾಹಿತಿಯನ್ನು ಒದಗಿಸಿದ್ದಾರೆ : ಮೊದಲು ಅವನು ರಾಚೋಲ (ಗೋವೆ) ದಲ್ಲಿ ಇದ್ದ. ಅಲ್ಲಿಯ ಓರ್ವ ಹಳೆಯ ಮಿಶನರಿಯು, "ನೀನು ದೃಢಕಾಯದವ. ಉತ್ಸಾಹೀ ಕಾರ್ಯಕರ್ತ. ನಿನ್ನ ಮೈಬಣ್ಣ ಇಲ್ಲಿಯ ದೇಶೀಯರ ಹಾಗೇ ಇದೆ. Pariah ಜನರ ಮಧ್ಯೆಕೆಲಸ ಮಾಡಬಾರದೇ ?" ಎಂದು ಸಲಹೆ ಕೊಟ್ಟ. ಈ ಬಗ್ಗೆ ಗೋವೆಯ ಮುಖ್ಯಸ್ಥರಿಂದ ಕೊನೆಗೊಮ್ಮೆ ಅನುಮತಿ ಸಿಕ್ಕಾಗ ತಿಮೊಥಿಯೊನಿಗೆ ತುಂಬಾ ಸಂತೋಷವಾಯಿತು. ಮೈಸೂರಿಗೆ ಬಂದು ಪ್ರಸಾರಕಾರ್ಯ ಕೈಕೊಂಡ. ಜೆಸುಯಿಟರನ್ನು ಹತ್ತಿಕ್ಕಿದ ಕಾಲಕ್ಕೆ ತಾವು ಸಾಕಷ್ಟು ಮುದುಕರಿದ್ದೆವೆಂದು, ಅವನ ಸಹೋದ್ಯೋಗಿ ಫಾದರ್ ಲಿಶೆಟ್ಟಾ (Fr. Licchetta) ಒಂದು ಪತ್ರದಲ್ಲಿ ಬರೆದಿದ್ದಾನಂತೆ.[1]

ಈ ಹಸ್ತಪ್ರತಿಗಳ ಭಾಷಾಶೈಲಿಯನ್ನು ಗಮನಿಸಿದಾಗ ಅವರೆಡನ್ನು ರಚಿಸಿದವನೂ ಸಹ ಒಬ್ಬನೆ ಎಂಬುದು ಸುವ್ಯಕ್ತ. ಅವನೇ ಸವೆರ್ರಿ. ಹಾಗೂ 'ಮಡಗು', ಮುಂತಾದ ಶಬ್ದಗಳಿರುವ ಒಟ್ಟಿನ ಶೈಲಿಯಿಂದ, ಇವನು ಮೈಸೂರು ಸಂಸ್ಥಾನದಲ್ಲಿಯೇ ಕಾಲಕಳೆದವನೆಂದು ಹೇಳಬೇಕಾಗುತ್ತದೆ.

ಕೃತಿ ರಚನೆಯ ಕಾಲ : ಇವೆರಡೂ ಹಸ್ತಪ್ರತಿಗಳನ್ನು ೧೭೩೯ರಲ್ಲಿ ಬರೆಯಲಾಗಿದ್ದೆನ್ನುವುದಕ್ಕೆ ಹೇಳಿಕೆಗಳು ಇಂತಿವೆ :

(1) ಹಸ್ತಪ್ರತಿ–೪೦: ಸಾವಿರದ ಯೆಳುನೂರು ಮೂವತ್ತೊಂಬತ್ತನೆ ವರುಷದಲ್ಲು ವೈಶ್ಯಾಖ ಮಾಸ್ಸದ ಹದಿಮೂರನೆ ತಿಥಿಯಲ್ಲು ನಾವು ಪಟಕ್ಕೆ ಬಂದು ಒಂಬ್ಬತ್ತನೆ ವರುಷದಲ್ಲಿ ರೊಮಾಪುರಿಯಲ್ಲಿ ಬರದದು (ಪು. ೧೬).

(2) ಹಸ್ತಪ್ರತಿ-೩೩೭ : ಸಿಧಾರ್ಥಿ ಸವುತ್ಸರದ ಜೈತ್ರಮಾಸದ ೨೩ನೆ ತಿಥಿಯಲ್ಲು ಯಿಾ ಪೊಸ್ತುಕದ ೩೩೭ ಕಾಗಜದಲ್ಲು ಸರ್ವೆಶ್ವರನಿಗು ದೆವರ ಮಾತೆಗು ಸ್ತೊತ್ರವಾಗಿ ಬರೆಯಲ್ಪಟ್ಟು ಮುಗಿತು. ಯಿಾಗ ಹೆಳಿದ ವರುಷ್ಯಕ್ಕೆ ಕರ್ತನು ಮನುಷ್ಯವತಾರಮಾಡಿ ೧೭೩೯ನೆ ಸವುತ್ಸರಕ್ಕೆ ಯಿಾ ಪೊಸ್ತುಕ ಬರೆದ ನೆನಪು.

ಕರ್ತನು ಮನುಷ್ಯವತಾರ ಮಾಡಿದುದೆಂದರೆ ಕ್ರಿಸ್ತನ ಜನ್ಮವೇ ತಾನೆ. ಅದರ ೧೭೩೯ನೇ ಸಮುತ್ಸರ ಎಂದರೆ ಕ್ರಿಸ್ತಶಕವೇ. ಅಲ್ಲದೆ ಕ್ರಿ. ಶ. ೧೭೩೯ ಸಿದ್ಧಾರ್ಥಿ ನಾಮ ಸಂವತ್ಸರಕ್ಕೆ ಸರಿಹೊಂದುತ್ತದೆ. ಮೇಲಿನ (1) ರಲ್ಲಿ "ನಾವು ಪಟ್ಟಕ್ಕೆ ಬಂದು ೯ನೇ

---

[1] ಅದೇ, ಪು. ೧೯೪

ವರುಷದಲ್ಲಿ ಬರದುದು'' ಎಂಬ ಹೇಳಿಕೆಯಿದೆಯಷ್ಟೆ. ಹಾಗೆ ಹೇಳಿದವರು Clement XII ಎಂಬ ಪೋಪರು.* ಅವರು ಪಟ್ಟವೇರಿದುದು ೧೭೩೦ ರಲ್ಲಿ. ಅದರ ೯ನೆಯ ವರ್ಷ, ೧೭೩೯ಕ್ಕೇ ಸರಿಹೊಂದುತ್ತದೆ.

ಆದರೆ ಹಸ್ತಪ್ರತಿಗಳಲ್ಲಿ ಇನ್ನು ಕೆಲವೆಡೆ ವರ್ಷಗಳ ಉಲ್ಲೇಖ ಬರುತ್ತದೆ :

(3) ಸಾವಿರದ ಯೆಳುನೂರನಾಲ್ಕನೆ ವರುಷದಲ್ಲಿ ಜೆಷ್ಟಮಾಸ್ಸ ಯಿಪ್ಪತಮೂರನೆ ತಿಥಿಯಲ್ಲಿ ಕೆಲವು ಕಲ್ಪಣೆಗಳಂನ್ನು ಪಾಲಿಸ್ತರು ಅದನ್ನು ಆ ವರುಷದಲ್ಲಿ ತಾನೆ ಆಷಾಢಮಾಸ್ಸದ ಯೆಂಟನೆ ತಿಥಿಯಲ್ಲಿ ಬಯಲುಮಾಡಿದರೆಂದು....(ಹ.ಪ್ರ-೪೦. ಪುಟ ೯).

(4) ಹದಿಮೂರನೆ ಆಶಿರ್ವಾದಪ್ಪನವರೆಂಬ್ಬ ಅರ್ಚಶಿಷ್ಟ ಪಾಪುಸ್ವಾಮಿಯವರೂ ಸಾವಿರದ ಯೆಳುನೂರ ಯಿಪ್ಪತ್ತೆಳನೆ ವರುಷದಲ್ಲಿ ಕಾರ್ತ್ತಿಕಮಾಸ್ಸ ಹಂನೆರಡನೆ ತಿಥಿಯಲ್ಲಿ ಬರದು ಕಳುಹಿಸಿ ಬಿಟ್ಟ ನಿರೂಪದಲ್ಲಿ.... (ಅದೇ).

(5) ಹಂನ್ನೆರಡನೆ ಸಾಂತ್ರಪ್ಪನವರೆಂಬ ಅರ್ಚಶಿಷ್ಟ ಪಾಪುಸ್ವಾಮಿಯವರು ಸಾವಿರದ ಯೆಳುನೂರ ಮೂವತನಾಲ್ಕನೆ ವರುಷದಲ್ಲಿ ಶ್ರಾವಣಮಾಸ ಯಿಪ್ಪತ ನಾಲ್ಕನೆ ತಿಥಿಯಲ್ಲಿ ಬರದು ಮಾಡಿದ ನಿರೂಪವಂನ್ನು....(ಹ.ಪ್ರ.೪೦, ಪುಟ ೧೫ ಅ)

ಇವುಗಳಲ್ಲಿ ವರ್ಷವು ಕ್ರಿ.ಶ.ದ್ದಾದರೂ ತಿಂಗಳ ಹೆಸರುಗಳು ಆಷಾಢ, ಕಾರ್ತಿಕಗಳೆಂದು ಬರುತ್ತವೆ. ಚೈತ್ರ =ಏಪ್ರಿಲ್, ಜೇಷ್ಠ =ಜೂನ್, ಆಷಾಡ =ಜುಲೈ ಇ. ಆದರೆ ಇವುಗಳ ಮುಂದಿನ ಅಂಕಿಗಳು ಹಿಂದೂ ತಿಥಿಗಳನ್ನು ಸೂಚಿಸದೇ, ಕ್ರಿಶ್ಚಿಯನ್ ತಾರೀಖುಗಳನ್ನೇ ಹೇಳುತ್ತವೆ !* ಒಂದು ಮಾಸದಲ್ಲಿ ಬರುವ ಶುಕ್ಲ ಬಹುಳ ಪಕ್ಷಗಳು ಅವರಿಗೆ ದಿನಾಂಕವನ್ನು ಹೇಳುವಲ್ಲಿ ತೊಡಕನ್ನು ತೋರಿರಬೇಕು.

ವಿಷಯ : ವಿಷಯದ ದೃಷ್ಟಿಯಿಂದ ಇವುಗಳಲ್ಲಿರುವುದು ಕೇವಲ ಕ್ರೈಸ್ತ ತತ್ವ ವಿಚಾರ. ಹಾಗೂ ಅದೆಲ್ಲ ಇಟಾಲಿಯನ್, ಲ್ಯಾಟಿನ್, ಪೋರ್ತುಗೀಜ್ ಭಾಷೆಗಳಿಂದ ಅನುವಾದಿತ. ಸ್ವತಂತ್ರವಾದ ಬರವಣಿಗೆ ಇದ್ದಿರಲೂಬಹುದು. ಆದರೆ ಅದನ್ನು ಕಂಡುಹಿಡಿಯುವುದು ದುಸ್ತರ.

ಹಸ್ತಪ್ರತಿ–೪೦ರಲ್ಲಿ ಬಂದ ವಿಷಯಗಳೆಂದರೆ :

(ಅ) 'ಬುದ್ಧಿ ಕಡಮೆಯಿರುವ' ಕ್ರಿಸ್ತುವರ ಜ್ಞಾನೋಪದೇಶ

(ಆ) ಜ್ಞಾನಸ್ನಾನವಿಚಾರ (Baptism)

(ಇ) 'ಮಲಬಾರ ಪದ್ಧತಿ'ಗಳನ್ನು ಕುರಿತು, ಕಾರ್ಡಿನಲ್ ತೂರ್ನೊ ಮಾಡಿದ ಕಟ್ಟಳೆಗಳು (ಕಲ್ಪಣೆ) ಮತ್ತು ಅವಕ್ಕೆ ಪೋಪರು ಕೊಟ್ಟ ವಿವರಣೆ/ತೀರ್ಪುಗಳು.

(ಈ) ಕೆಲವು ರಹಸ್ಯ ತತ್ವಗಳ ವಿವರಣೆ.

---

* (3) ನೇದ್ದರಲ್ಲಿ ಹೇಳಿದ 'ಕಲ್ಪಣೆ'ಗಳ ತಾರೀಖು ನಿಶ್ಚಿತವಾಗಿ ಗೊತ್ತಿದೆ : ೧೭೦೪ರ ಜೂನ್ ೨೩ನೇ ತಾರೀಖು. ಇಲ್ಲಿ ಅದನ್ನು ಉಲ್ಲೇಖಿಸಿದ ರೀತಿ ೧೭೦೪ರ ಜ್ಯೇಷ್ಠ ೨೩ನೇ ತಿಥಿ.

(ಅ) ದಲ್ಲಿ ಬಂದಿರುವ ಜ್ಞಾನೋಪದೇಶವು ಸಂಭಾಷಣಾರೂಪದಲ್ಲಿ (Catechism) ಇದೆ:

ಗುರು : ಪರಲೊಕಕ್ಕು ಯಿಾ ಲೋಕಕ್ಕು ಕರ್ತರಾಗಿಯಿರುವ ಸರ್ವೆಶ್ವರನುಂಟೊ
ಶಿಷ್ಯ : ಉಂಟು
ಗುರು : ಸರ್ವೆಶ್ವರನ ಹೊರ್ತಾಗಿ ಬೆರೆ ದೆವರುಗಳುಟ್ಟೆ
ಶಿಷ್ಯ : ಬೆರೆ ದೇವರುಗಳಿಲ್ಲಾ
ಗುರು : ಸರ್ವೆಶ್ವರನು ಹ್ಯಾಗೆಯಿಧಾರೆ
ಶಿಷ್ಯ : ತ್ರಿ-ತ್ವವಂಥವರಾಗಿಯಿಧಾರೆ
ಗುರು : ತ್ರಿತ್ವವಂಥರಾಗಿಯಿಧಾರೆಂಬುವದಕ್ಕೆ ಅರ್ಥವೆನು
ಶಿಷ್ಯ : ವೊಂದೆ ದೆವಸ್ವಭಾವದಲ್ಲಿ ಮೂರು ಮಂಧಿಯಾಗಿಯಿಧಾರೆ
ಗುರು : ಮೂರು ದೆವಮುಂದಿಗಳಾರು
ಶಿಷ್ಯ : ತಂದ್ದೆ ಮಗನು ಸ್ಪಿರಿತು ಸಾಂತ್ತು

ಇಂಥ ಸಂಭಾಷಣೆಗಳಲ್ಲಿ ಸಾಮಾನ್ಯವಾಗಿ ಶಿಷ್ಯನು ಪ್ರಶ್ನೆ ಕೇಳುತ್ತಾನೆ, ಆದರೆ ಇಲ್ಲಿ ಗುರುವು ಆ ಕೆಲಸ ಮಾಡಿದುದರ ಕಾರಣವೆಂದರೆ, ಗುರು ತಾನು ಮಾಡಿದ ಉಪದೇಶ ವಿಷಯದಲ್ಲಿ ಶಿಷ್ಯನನ್ನು ಪರೀಕ್ಷಿಸುತ್ತಿದ್ದಿರಬೇಕು.

ಈ ಹಸ್ತಪ್ರತಿಯ ಮಹತ್ವದ ಭಾಗವೆಂದರೆ 'ಕಾರ್ಲ ತೊಮೆ' ಎಂಬವನು ಮಾಡಿದ 'ಕಲ್ಪಣೆ'ಗಳು (೩). ಅವುಗಳ ಹಿನ್ನೆಲೆ ಇಂತಿದೆ : ದಕ್ಷಿಣ ಭಾರತದಲ್ಲಿ ೧೭ನೆಯ ಶತಮಾನದಿಂದ ಹಿಂದೂಗಳನ್ನು ಮತಾಂತರಗೊಳಿಸುವ ಕೆಲಸ ನಡೆದೇ ಇತ್ತು. ಹಾಗೆ ಮತಾಂತರ ಹೊಂದಿದವರು ಪಾಶ್ಚಾತ್ಯ ಕ್ರಮಗಳಿಗೇನೆ ಹೊಂದಿಕೊಳ್ಳ ಬೇಕಾಗುತ್ತಿತ್ತು. ಉದಾಹರಣೆಗೆ ಯೂರೋಪಿಯನ್ ಹೆಸರುಗಳನ್ನೆ ಇಟ್ಟುಕೊಳ್ಳು ವುದು. ಜೊತೆಗೆ ಅವರು ಇಲ್ಲಿಯ ಅನೇಕ ಆಚಾರಗಳನ್ನು ಬಿಡಬೇಕಾಗುತ್ತಿತ್ತು. ಆದರೆ ತಮಿಳುನಾಡಿನಲ್ಲಿ ಮತಾಂತರ ಕಾರ್ಯದಲ್ಲಿ ನಿರತನಾಗಿದ್ದ ದ-ನೊಬಿಲಿಯು 'ಇಲ್ಲಿಯ ಜನ ಕ್ರಿಸ್ತುವರಾದ ಮಾತ್ರಕ್ಕೆ ತಮ್ಮ ಬಾಹ್ಯ ಆಚಾರಗಳನ್ನು ತ್ಯಜಿಸ ಬೇಕೆಂದೇನೂ ಇಲ್ಲ. ಧರ್ಮಶ್ರದ್ಧೆ ಬೇರೆ ; ಆಚಾರ-ವ್ಯವಹಾರಗಳೇ ಬೇರೆ'-ಎಂದು ಪ್ರತಿಪಾದಿಸಿದನು. ಮದುವೆಯಾದ ಹೆಂಗಸು, ಅದರ ಗುರುತಾಗಿ ತಾಳಿಯನ್ನು ಕಟ್ಟಿಕೊಂಡರೆ ತಪ್ಪೇನಿದೆ ? ದ-ನೊಬಿಲಿಯಂಥವರ ಈ ವಿಚಾರಸರಣಿಯು ಸನಾತನೀ ಕ್ರೈಸ್ತ ಗುರುಗಳಿಗೆ ಒಪ್ಪಿಗೆಯಾಗಿರಲಿಲ್ಲ. ಈ ಬಗೆಯ ತಿಕ್ಕಾಟವು ಹಲವು ದಶಕಗಳ ವರೆಗೆ ಮುಂದುವರಿದು, ಪೋಪರ ಕಡೆಗೆ ದೂರುಗಳು ಹೋದವು. ಪರಿಸ್ಥಿತಿ ವಿಕೋಪ ವನ್ನು ಮುಟ್ಟಿದಾಗ ಆಗಿನ ಪೋಪರಾದ ಕ್ಲೆಮೆಂಟ್ XI (೧೭೦೦–೧೭೨೧) ಅವರು Cardinal Monsignor Charles Thomas Maillard de Tournon ಎಂಬ ಹಿರಿಯನನ್ನು ("ಕಾರ್ಲ ತೊಮೆ ಎಂಬ ಕರ್ದಿನಾಲಿ") ಕಳುಹಿಸಿದರು.

ಈ ಕರ್ದಿನಾಲಿಯು ೬ನೇ ನವೆಂಬರ್ ೧೭೦೩ ರಂದು ಪಾಂಡಿಚೆರಿಯಲ್ಲಿ ಬಂದಿಳಿದನು. ಮರುವರ್ಷ ಪಾದ್ರಿಗಳ ಸಭೆ ಸೇರಿಸಿ ಚರ್ಚೆ ಮಾಡಿ, ಪೋಪರು ತನಗೆ ಕೊಟ್ಟಿದ್ದ ಅಧಿಕಾರದನ್ವಯ ಕೆಲವು ಆಚಾರ–ವ್ಯವಹಾರಗಳ ಬಗ್ಗೆ ಕಟ್ಟಳೆಗಳನ್ನು ದಿನಾಂಕ ೮ನೇ ಜುಲೈ ೧೭೦೪ ರಂದು (ಆಷಾಢದ ಎಂಟನೇ ತಿಥಿ) ಘೋಷಿಸಿದನು. ಆದರೇನು, ಈ ಕಟ್ಟಳೆಗಳು ಅವಸರದಲ್ಲಿ ಮಾಡಿದವುಗಳೆಂದೂ ಇನ್ನೂ ಅಸಂದಿಗ್ಧತೆ ಉಳಿದಿದೆಯೆಂದೂ ಕಪೋಪರ ಬಳಿಗೆ ಪುನಹ ದೂರುಗಳು ಹೋದುವು. ಆಗ ಅವರು ಕಾರ್ಲ ತೊಮೆಯು ಟ್ಟಳೆಗಳನ್ನು ಮೂಲತಃ ಉಳಿಸಿಕೊಂಡು, ಅವಕ್ಕೆ ವಿವರಣೆ ನೀಡಿ ತಮ್ಮ ನಿರ್ಣಯ ತಿಳಿಸಿದರು (೧೭೩೪). ಇಲ್ಲಿಯ ಜನರಿಗೆ ಅವು ತಿಳಿಯಬೇಕಲ್ಲವೆ ? ತಮಿಳು, ಕನ್ನಡ, ಭಾಷೆಗಳಲ್ಲಿ ಅವನ್ನು ಅನುವಾದಿಸಲಾಯಿತು. ಕನ್ನಡ ಅನುವಾದಕ, ಮೇಲೆ ಹೇಳಿದ ಸವೆರ್ರಿ.

ಭಾರತೀಯ ಕ್ರೈಸ್ತ ಇತಿಹಾಸದಲ್ಲಿ ಪ್ರಸಿದ್ಧವಾಗಿರುವ ಈ "Malabar Rites" ವಿಚಾರವಾಗಿ ಕಾರ್ಲ ತೊಮೆ ವಿಧಿಸಿದ ೧೬ ಕಟ್ಟಳೆಗಳಾವುವೆಂಬುದನ್ನು ನೋಡೋಣ :

— ಜ್ಞಾನಸ್ನಾನದಲ್ಲಿ (Baptism) ಜೊಲ್ಲು ಆವಿ ಮತ್ತು ನಿಶ್ವಾಸ ಇವನ್ನು ಬಿಟ್ಟು ಕೊಡಬಾರದು. (ಜೊಲ್ಲು ಹಿಂದುಗಳ ಪಾಲಿಗೆ ಎಂಜಲಿನ ವಿಷಯ, ತಾನೇ.)

— ಜ್ಞಾನಸ್ನಾನದ ಕಾಲಕ್ಕೆ ಹಿಂದೂ ಹೆಸರುಗಳನ್ನಿಡದೇ, ರೋಮನ್ ಸಂತರ ಇಲ್ಲವೆ ಹುತಾತ್ಮರ ಹೆಸರುಗಳನ್ನು ಇಡಬೇಕು.

— ಜ್ಞಾನಸ್ನಾನದ ಮಂತ್ರಗಳನ್ನು ಲ್ಯಾಟಿನ್ ಅಥವಾ ತತ್ಸಮವಾದ ದೇಶೀ ಭಾಷೆಯಲ್ಲಿ ಹೇಳಬಹುದು.

— ದೇಶೀ ಕ್ರೈಸ್ತರು ತಮ್ಮ ಮಕ್ಕಳನ್ನು ಜ್ಞಾನಸ್ನಾನಕ್ಕೆಂದು ಬೇಗ ಕರೆತರಬೇಕು. ತಡಮಾಡಿದವರಿಗೆ ದಂಡ ವಿಧಿಸಬೇಕು.

— ಬಾಲ್ಯ ವಿವಾಹ ನಿಷಿದ್ಧವಾದುದು.

— ಹೆಂಗಸರು ತಾಳಿ ಕಟ್ಟಿಕೊಳ್ಳಬಾರದು. ಕಟ್ಟಿದರೂ ಶಿಲುಬೆಯ ಆಕೃತಿಯೊಂದು ಇರಬೇಕಲ್ಲದೆ ಗುಂಡದಾಳಿ ಅಲ್ಲ.

— ಈ ತಾಳಿಯಲ್ಲಿ ಅರಿಶಿನದಲ್ಲಿ ಅದ್ದಿದ ಇಂತಿಷ್ಟೇ ದಾರಗಳಿರಬೇಕೆಂಬುದು ಮೂಢ ನಂಬಿಕೆಯ ಲಕ್ಷಣ. ಹಾಗಿರಕೂಡದು.

— ಮದುವೆಯಲ್ಲಿ ಮೂಢ ನಂಬಿಕೆಯನ್ನು ವ್ಯಕ್ತಪಡಿಸುವಂಥ ಯಾವದೇ ಆಚಾರ–ವಿಧಿಗಳನ್ನು ಪಾಲಿಸಕೂಡದು.

— ತೆಂಗಿನಕಾಯಿ ನಿವಾಳಿಸುವುದನ್ನು, ಶಕುನಕ್ಕಾಗಿ ಒಡೆಯುವದನ್ನು ಮಾಡಕೂಡದು.

— ಹೆಂಗಸರು ಮುಟ್ಟಾದಾಗಲೂ 'ಪಾಪ ಸಂಕೀರ್ತನ' (Confession) ಮಾಡಬಹುದು.

— ಮೊದಲ ಸಲ ಮೈನೆರೆದಾಗ ಕನ್ಯೆಗೆ ಯಾವುದೇ ಉತ್ಸವಾದಿಗಳನ್ನು ಮಾಡಬಾರದು.

— ''ಬಲಗೈ ಮಂದಿ'' (Pariahs) ಬೇನೆ ಬಿದ್ದಾಗ ವೈದ್ಯರು ಅವರ ಗುಡಿಸಲಿಗೇ ಹೋಗುವಂತೆ, ಕ್ರೈಸ್ತ ಗುರುಗಳು ಸಹ ಅವರಿದ್ದಲ್ಲಿಗೇ ಹೋಗಿ ಉಪದೇಶಾದಿ ಧರ್ಮಕಾರ್ಯಗಳನ್ನು ನಡೆಸಬಹುದು.

— ಹಿಂದೂಗಳ ಮದುವೆಯ ಉತ್ಸವದಲ್ಲಿ ಕ್ರಿಶ್ಚಿಯನ್ ವಾದ್ಯಗಾರರು ಭಾಗವಹಿಸಬಾರದು.

— ಜ್ಞಾನಸ್ನಾನ ಕೊಡುವಾಗ ತಿಥಿ, ನಕ್ಷತ್ರಗಳಿಗಾಗಿ ಕಾಯಬಾರದು.

— ಗಂಧ, ವಿಭೂತಿಗಳನ್ನು ಹಚ್ಚಿಕೊಳ್ಳಬಾರದು.

— ಮೂಢನಂಬಿಕೆಯನ್ನು ಬಿಂಬಿಸುವ, ಅಶ್ಲೀಲವಾದ, ಅದರಂತೆ ಅಸತ್ಯ ಧರ್ಮವನ್ನು ಬೋಧಿಸುವಂಥ ಗ್ರಂಥಗಳನ್ನು ಓದಕೂಡದು.

(ಪೋಪರ ನಿರ್ಣಯಾತ್ಮಕ ವಿವರಣೆಯೊಡನೆ ಇವು ಕನ್ನಡದಲ್ಲಿ ಬಂದ ಬಗೆಯನ್ನು ತಿಳಿಯಲೋಸುಗ, ಒಂದು 'ಕಲ್ಪಣೆ'ಯನ್ನು ಅನುಬಂಧ ೧ರಲ್ಲಿ ಕೊಟ್ಟಿದೆ.)

ಈ ವಿವರಣೆಯ ಕೊನೆಯಲ್ಲಿ ಬರುವ, ಪೋಪರ ಆಶೀರ್ವಾದವುಳ್ಳ ಭಾಗವು ಗಣನೀಯವಾಗಿದೆ. (ಇಂದಿನ ಗದ್ಯರೂಪದಲ್ಲಿ ಕೊಟ್ಟಿದೆ): ಮೆತ್ರಾಣಿಗಳಾಗಿ, ಜ್ಞಾನೋಪದೇಶ ಹೇಳುವ ಗುರುಗಳಾಗಿ ಇರುವ ನೀವು ನಾವು ಹೇಳುವ ಹಾಗೆ ಕೇಳುವಿರಿ ಎಂದು, ಸತ್ಯವೇದ ಕಡಿಮೆಯಿಲ್ಲದ ತನಕವೂ (?), ಆತ್ಮಗಳು ಇರುವ ತನಕವೂ ಘನವಾದ ಕಾರ್ಯವೆಂದು ಅರಿತುಕೊಂಡು ಅದಕ್ಕಾಗಿ ಪ್ರಯಾಸವೂ ಸಂಕಟವೂ ಪಡುವಿರಿ ಎಂದು, ಉಪದೇಶ ಕೇಳುವವರು ಅಜ್ಞಾನದ ಆಚಾರಗಳನ್ನು ಬಿಟ್ಟು ತಿರುಸಭೆ ಆಚಾರದಲ್ಲಿ ನಡೆವ ಹಾಗೆ ಪರಾಮರಿಸುವಿರಿ ಎಂದು ನಮಗೆ ಬಹು ನಂಬಿಗೆಯಾಗಿ ಇದ್ದರೂ ಇಂಥಾ ಪಟ್ಟದಿಂದ ನಮ್ಮ ಮೇಲೆ ಹೊತ್ತಿರುವ ಸಾಲ (ಋಣ) ವನ್ನು ತೀರಿಸಬೇಕೆಂದೂ ನಮಗೆ ಹೆತ್ತಮಕ್ಕಳಪ್ಪಂದ ಇರುವಂಥಾವರ ಮೇಲೆ ದಯವಾಗಿರಬೇಕೆಂದೂ, ತಿರುಸಭೆಗೆ ಕರೆಯಾಗಿ ಇರುವ ನಮಗೆ ವಿಚಾರಣೆ ಸಾಲದೆ ಹೋಯಿತೆಂಬ ದೂರು ತೊಲಗಬೇಕೆಂದೂ ತಿರುಗಿ ತಿರುಗಿ ಎಲ್ಲರಿಗೂ ಬುದ್ಧಿ ಹೇಳುತಾ ಇದ್ದೇವೆ. ಇಷ್ಟರೊಳಗೆ ನಿಮಗೆ ಸಕಲ ಭಾಗ್ಯವಾಗಲಿ ಎಂದು ಆಶೀರ್ವಾದ ಪಾಲಿಸ್ತಾ ಇದ್ದೇವೆ. ಆಮೆಂ ಜೇಸು ॥

ಹಸ್ತಪ್ರತಿ ೩೩೭ : ಇದು ಸಾವಿರ ಪುಟಗಳಷ್ಟಾಗುವ ದೀರ್ಘವಾದ ಬರವಣಿಗೆ. ಇದರಲ್ಲಿ ಒಟ್ಟಿಗೆ ೪೩ ವಿಷಯ ಅಥವಾ ಭಾಗಗಳಿವೆ (ಅನುಬಂಧ ೨). ಅವುಗಳ ಪರಿವಿಡಿಯನ್ನು ಲೇಖಕ ಪ್ರತಿಕಾರನು ಹಸ್ತಪ್ರತಿಯ ಕೊನೆಯಲ್ಲಿ ವಿಶಿಷ್ಟವಾದ ರೀತಿಯಲ್ಲಿ ಕೊಟ್ಟಿದ್ದಾನೆ. ಅವುಗಳ ಮಾದರಿ :

"—ಸರ್ವೆಶ್ವರನಾದವರು ಮನುಷ್ಯನಾಗಿ ಮಾಡಿದ ವರ್ತಮಾನ ॥ ೨೭೮ ನೆ ಕಾಗಜದಲ್ಲಿ ಯಿರುವದು.

—ಕರ್ತರು ಹುಟ್ಟಿದ ಹದಿಮೂರನೆ ದಿವಸಕೆ ಮೂರು ರಾಯರು ಬಂದು ನಮಸ್ಕರಿಸಿದ ವರ್ತಮಾನ ೨೮೦ ನೆ ಕಾಗಜದಲ್ಲಿ.

—ಕಂನ್ಯಾಸ್ತ್ರಿಯು ವೆದಸಾಕ್ಷಿಯು ಆದ ಆರ್ಚದೈರ್ಯಂಮನವರ ಧರ್ಮಚರಿತ್ರ ೩೮೯ ನೆ ಕಾಗಜದಲ್ಲಿ".

ಇಲ್ಲಿ ಬಂದಿರುವ ವಿವಿಧ ವಿಷಯುಗಳನ್ನು ಹೀಗೆ ಸಾರಗೊಳಿಸಬಹುದು :

(೧) ಯೇಸುಕ್ರಿಸ್ತನ ಜೀವನಕ್ಕೆ ಸಂಬಂಧಪಟ್ಟವುಗಳು—'ಸರ್ವೇಶ್ವರನು ಮನುಷ್ಯನಾಗಿ ಹುಟ್ಟಿದ ವರ್ತಮಾನ' 'ಇಪ್ಪತ್ತು ಪ್ರಸಂಗಗಳು' 'ಸ್ವಾಮಿ ಪಟ್ಟ ಪಾಡು' 'ದೇವಮಾತೆ ಮರಿಯಂಮನವರ ಧರ್ಮಚರಿತ್ರೆ ಇತ್ಯಾದಿ.

(೨) ಕ್ರೈಸ್ತಸಂತರ ಚರಿತ್ರೆಗಳು : ಇದರಲ್ಲಿ ಕ್ರೈಸ್ತಧರ್ಮ ಗುರುಗಳ ಚರಿತ್ರೆ ಇರಬೇಕಾದುದು ಸಹಜವೇ. ಜೊತೆಗೆ, ಮತಪ್ರಸಾರದಲ್ಲಿ ತೊಡಗಿದ್ದಾಗ ಹುತಾತ್ಮರಾದವರ – ಇವರಲ್ಲಿಯೂ ಸ್ತ್ರೀಯರ ಚರಿತ್ರೆಗೆ ವಿಶೇಷ ಮಹತ್ವವಿರುವದರಿಂದ ಅಂಥವರ ಚರಿತ್ರೆ ಇಲ್ಲಿ ಸಾಕಷ್ಟು ಬಂದಿದೆ. 'ಜಾನ್ ದಿ ಬ್ಯಾಪ್ಟಿಸ್ಟ್' ಯೇಸುವಿಗೆ ದೀಕ್ಷೆ ಕೊಟ್ಟವ. 'ಶಾಂತಪ್ಪ' (Clement) ಎಂಬ ಹೆಸರಿನ ಪೋಪರಲ್ಲಿ ಬಹುಶಃ ಮೊದಲನೆಯವರು. (ಕಾಲ ಕ್ರಿ.ಶ. ೮೮–೯೭) 'ಜ್ಯೂಲಿಯಸ್ ಮತ್ತು ಬ್ಯಾಸಿಲಿಕಾ' ಎಂಬ ಪ್ರಕರಣವು ೪ನೇ ಶತಮಾನದಲ್ಲಿದ್ದ ಜ್ಯೂಲಿಯಸ್–1 ಎಂಬ ಪೋಪರ ಚರಿತ್ರೆಯಾಗಿದೆ. (ಕ್ರಿ.ಶ. ೩೩೭–೫೨) ಅವರು ರೋಮಿನಲ್ಲಿ ಅತಿ ದೊಡ್ಡ ಸಭಾಗೃಹವನ್ನು (ಬ್ಯಾಸಿಲಿಕಾ) ಕಟ್ಟಿಸಿದವರು. 'ಸ್ಟಾನಿಸ್ಲಾಸ್' ಎಂಬುವರ ಚರಿತ್ರೆಯೂ ಇದ್ದು, ಇವರು ಯಾರೆಂಬುದು ತಿಳಿಯಬೇಕಾಗಿದೆ. ಇನ್ನುಳಿದವರೆಲ್ಲ ಹುತಾತ್ಮೆಯರು. ಸೇಂಟ್ ಸೆಸಿಲಿಯಾ ೨ ನೇ ಶತಮಾನದವಳು. ಅದೇ ಶತಮಾನದ ಸೇಂಟ್ ಎಗ್ನೆಸ್ ೧೩ ವರ್ಷದ ಕುಮಾರಿ ಇದ್ದಾಗ ಹುತಾತ್ಮೆಯಾದವಳು. ಕ್ರಿಸ್ಟಿನಾ (೧೭ನೇ ಶತ.) ಸ್ವೀಡನ್ನಿನ ರಾಣಿಯಾಗಿದ್ದರೂ, ಆ ವೈಭವವನ್ನು ಬಿಟ್ಟುಕೊಟ್ಟು ಪೋಪರ ಆಶ್ರಯವನ್ನು ಹೊಂದಿದ ಧರ್ಮಾತ್ಮೆ. ಸಂತೋಷಮ್ಮ, ಧೈರ್ಯಮ್ಮ ಎಂಬವರ ಚರಿತ್ರೆಗಳೂ ಇವೆ ! ಹೆಸರು ದೇಶೀಯವಾದರೂ ಇವರೂ ಯುರೋಪ ಖಂಡದವರೇ.

(೩) ಕ್ರೈಸ್ ತತ್ವ, ಆಚಾರಗಳಿಗೆ ಸಂಬಂಧಿಸಿದುವು : ಈ ಹಸ್ತಪ್ರತಿಯ ೪೩ ವಿಷಯುಗಳಲ್ಲಿ ಇವುಗಳ ಸಂಖ್ಯೆಯೇ ಒಟ್ಟಿನಲ್ಲಿ ದೊಡ್ಡದು. ಅವೆಂದರೆ, ಸತ್ಯೋಪದೇಶ, ಜ್ಞಾನೋಪದೇಶ, ದೇವತಾನಿರ್ಣಯ, ಪುನರ್ಜನ್ಮ, ನಿತ್ಯಕರ್ಮ, ಆತ್ಮನಿರ್ಣಯ, ದೈವಪರೀಕ್ಷೆ, ಜ್ಞಾನಸ್ನಾನ, ಪಾಪ ಸಂಕೀರ್ತನ (Confession) ದೇವದ್ರವ್ಯಾನುಮಾನ (Explanation of Sacraments), ತ್ರಿತ್ವ (Trinity), ದೇವಪ್ರಸಾದ (Holy Communion) ಹಾಗೂ ಅನುದಿನದ ಪ್ರಾರ್ಥನೆಗಳು.

ಇವುಗಳ ಮೂಲವು ಸ್ವಾಭಾವಿಕವಾಗಿಯೇ ಯುರೋಪಿಯನ್ ಭಾಷೆಗಳಲ್ಲಿದೆ (ಲ್ಯಾಟಿನ್, ಇಟಾಲಿಯನ್, ಪೋರ್ಚುಗೀಜ್). ಆದರೆ ಆ ಭಾಷೆಗಳಿಂದಲೇ ನೇರವಾಗಿ ಕನ್ನಡಕ್ಕೆ ಬಂದುವೆಂದು ಹೇಳುವುದು ಸರಿಯಾಗಲಿಕ್ಕಿಲ್ಲ. ಇದಕ್ಕೂ ಮೊದಲು ಮಧುರೆಯಲ್ಲಿ ಕೆಥಲಿಕರ ಮಿಶನ್ ಇದ್ದಿತಷ್ಟೆ. ಅಲ್ಲಿ ಇದ್ದ ದ-ನೊಬಿಲಿಯು ತಮಿಳು ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದ. ಮೂಲದಿಂದ ಭಾರತೀಯ ಭಾಷೆಗಳಿಗೆ ಅನುವಾದಿಸುವಲ್ಲಿ ಬೇಕಾಗುವ ನುಡಿಕಟ್ಟನ್ನು ತುಸುಮಟ್ಟಿಗೆ ರೂಢಿಸಿದ್ದ. (ಹೇಗೂ ಮಧುರೆಯ ಮಿಶನ್ ಹಿರಿಯ ಸಂಸ್ಥೆಯಾಗಿದ್ದು, ಕರ್ನಾಟಕಸ್ಥರಿಗೆ ಮಾರ್ಗದರ್ಶಿಯಾಗಿತ್ತು.) ಉದಾ.ಗೆ 'ಜ್ಞಾನೋಪಾಸನೆ' ಎಂಬುದು ಅವನ ಒಂದು ತಮಿಳು ಕೃತಿಯ ಹೆಸರೇ ಆಗಿದೆ. ಆದಕಾರಣ ಇವೆರಡೂ ಹಸ್ತಪ್ರತಿಗಳಲ್ಲಿರುವ ಅನೇಕ ಪ್ರಕರಣಗಳು ತಮಿಳಿನಲ್ಲಿ ಮೊದಲು ಕಾಣಿಸಿಕೊಂಡು ಆಮೇಲೆ ಕನ್ನಡಕ್ಕೆ ಬಂದುವಾಗಿರಬೇಕು. ಪಾಪುಸ್ವಾಮಿ, ತಿರುಸಭೆ, ಅರ್ಚಶಿಷ್ಟ ಮೊದಲಾದ ಪದಗಳು ತಮಿಳು ಪ್ರಭಾವಕ್ಕೆ ನಿದರ್ಶನವಾಗಿವೆ. ಮುಂದೆ, ಈ ಪ್ರಕರಣಗಳಲ್ಲಿ ಕೆಲವು ಹತ್ತೊಂಬತ್ತನೇ ಶತಮಾನದಲ್ಲಿ ಮುದ್ರಣಗೊಂಡಿರಲೂ ಸಾಕು.

ಕ್ರೈಸ್ತ ಹೆಸರುಗಳು, ಶಬ್ದಗಳು: ಈ ಗ್ರಂಥಗಳಲ್ಲಿ ಕ್ರೈಸ್ತ ಅಂಕಿತನಾಮಗಳು ಮತ್ತು ಪಾರಿಭಾಷಿಕ ಶಬ್ದಗಳು ವಿಶಿಷ್ಟ ರೀತಿಯಲ್ಲಿ ಬಂದಿವೆ. ಎಂದರೆ ಶಕ್ಯವಿದ್ದಲ್ಲೆಲ್ಲ ಅವನ್ನು ಭಾರತೀಕರಣ ಮಾಡಿದ್ದಾರೆ. ಹಾಗೆ ಮಾಡುವಾಗ ಮೂಲ ಹೆಸರಿನ ಅರ್ಥವನ್ನು ಗ್ರಹಿಸಿ, ಆ ಅರ್ಥದ ಕನ್ನಡ ರೂಪವನ್ನು ಕೊಟ್ಟಿದ್ದಾರೆ. ಆ ಪ್ರಕಾರ Benedict—'ಆಶೀರ್ವಾದಪ್ಪ'ನಾಗುತ್ತಾನೆ; St. Felicity 'ಸಂತೋಷಮ್ಮ'ನಾಗುತ್ತಾಳೆ! ಇತ್ತ ತಮ್ಮ ಮತಪ್ರಕ್ರಿಯೆಗಳಿಗೆ ಸಂಬಂಧಿಸಿದ ಬಹುತರ ಎಲ್ಲ ಶಬ್ದಗಳಿಗೂ ಅವರು ಕನ್ನಡ ರೂಪವನ್ನು ಸಿದ್ಧಗೊಳಿಸಬೇಕಾಗಿ ಬಂದಿತು. ಹಾಗೆ ಮಾಡುವಲ್ಲಿ ಸಾಕಷ್ಟು ಜಾಣ್ಮೆಯನ್ನು ತೋರಿದ್ದಾರೆ. (ಅಂಕಿತನಾಮಗಳ ಮತ್ತು ಪಾರಿಭಾಷಿಕ ಶಬ್ದಗಳ ಒಂದು ಪಟ್ಟಿಯನ್ನು ಅನುಬಂಧ ೩ರಲ್ಲಿ ಕೊಟ್ಟಿದೆ.)*

---

* ಇವೇ ವಿಷಯಗಳ ಮೇಲೆ ಪ್ರೊಟೆಸ್ಟಂಟರು ೧೯ನೆಯ ಶತಮಾನದಲ್ಲಿ ಅನೇಕಾನೇಕ ಗ್ರಂಥಗಳನ್ನು ರಚಿಸಿ, ಮುದ್ರಿಸಿದರು. ಆಗ ಆ ಮುಂಚಿನ ಕೆಥಲಿಕರು ಹೆಣೆದ ಇಂಥ ಶಬ್ದಗಳನ್ನು ಎಷ್ಟರಮಟ್ಟಿಗೆ ಬಳಸಿದರು ? ಆಗಿನ ಕ್ರಿಸ್ತೀಯರಲ್ಲಾದರೂ ಅವುಗಳ ಬಳಕೆ ಇದ್ದಿತೆ ? ಈ ಗ್ರಂಥದ್ವಯದಲ್ಲಿ ಬಂದ ಹತ್ತಾರು ಪಾರಿಭಾಷಿಕ ಶಬ್ದಗಳನ್ನು ಕಿಟೆಲ್ ಕೋಶದಲ್ಲಿ ಹುಡುಕಿದರೆ ಒಂದೂ ಸಿಕ್ಕಲಿಲ್ಲ! ಇವು ಕೆಥಲಿಕ್ ನಿರ್ಮಿತವೆಂದೇನೂ ಕಿಟೆಲ್ ಕೈ ಬಿಡಲಿಲ್ಲ. 'ಸತ್ಯವೇದ' (—ಬೈಬಲ್) ಮುಂತಾದ ಪ್ರೊಟೆಸ್ಟಂಟರ ಬಳಕೆಯ ಶಬ್ದಗಳೂ ಕಿಟೆಲ್ ಕೋಶದಲ್ಲಿ ಇಲ್ಲ. ಇತ್ತ ಪರಿಷತ್ತಿನ ಕನ್ನಡ-ಕನ್ನಡ ಕೋಶದಲ್ಲಿಯೂ ಕ್ರೈಸ್ತ ಮತಕ್ಕೆ ವಿಶಿಷ್ಟವಾದ, ಅವರಿಂದ ಸೃಷ್ಟಿಯಾದ ಶಬ್ದಗಳನ್ನು ಗಣನೆಗೆ ತಂದಂತೆ ಕಾಣಲಿಲ್ಲ. ಕ್ರೈಸ್ತ ಮತೀಯ ಸಾಹಿತ್ಯವು ಕನ್ನಡಸಾಹಿತ್ಯ ಪ್ರವಾಹದಲ್ಲಿ ಬೆರೆಯದೇ, ಪ್ರತ್ಯೇಕವಾಗಿ, ನಿಂತ ನೀರಾಗಿ ಉಳಿದುಬಿಟ್ಟದ್ದರಿಂದ ಈ ಶಬ್ದಗಳೂ ಕಣ್ಮರೆಯಾದುವು. ಆದರೆ ಕ್ರೈಸ್ತಮತವು

ಭಾಷಾಶೈಲಿ : ಇವುಗಳ ಭಾಷಾಶೈಲಿ ನಡುಗನ್ನಡದ್ದೆ ? ಹೊಸಗನ್ನಡದ್ದೆ ? ಕನ್ನಡ ಸಾಹಿತ್ಯಾಭ್ಯಾಸದ ದೃಷ್ಟಿಯಿಂದ ಇದರ ನಿರ್ಣಯಕ್ಕೆ ವಿಶೇಷ ಮಹತ್ವವಿದೆ. ಇತ್ತ ಅಕ್ಷರಿಕೆಯಲ್ಲಿ ತಪ್ಪುಗಳಿವೆ ; ಹೇರಳವಾಗಿವೆ. (ಅಲ್ಪಪ್ರಾಣವಿದ್ದಲ್ಲಿ ಮಹಾಪ್ರಾಣ ಇತ್ಯಾದಿ.) ಆದರೆ ಈ ಬಗೆಯ ತಪ್ಪುಗಳನ್ನು ನಡುಗನ್ನಡ ಕಾಲದ ಅನೇಕ ಪ್ರತಿಕಾರರು ಮಾಡಿದ್ದುದರ ಮುಂದೆ, ಕನ್ನಡ ಮಾತೃಭಾಷೆಯಾಗಿರದ ವಿದೇಶೀ ಪಾದ್ರಿಗಳ ತಪ್ಪುಗಳು ಗೌಣವೇ ಅನಿಸೀತು ! ಇಂಥ ಅಕ್ಷರಿಕೆಯ ತಪ್ಪುಗಳನ್ನು ತಿದ್ದಿ, ಶಬ್ದಗಳನ್ನೂ ಪ್ರತ್ಯಯಗಳನ್ನೂ ಹಾಗೆಯೇ ಇಟ್ಟುಕೊಂಡು ಬರೆದರೆ ಈ ಒಕ್ಕಣೆಯು ಯಾವ ರೀತಿಯಾಗಿ ಕಂಡುಬರುವದೆಂಬುದು ಪರಿಶೀಲನಯೋಗ್ಯವಾಗಿದೆ. ಹಸ್ತಪ್ರತಿ–೩೩೭ ರಲ್ಲಿಯ ಒಂದು ಭಾಗವನ್ನು ಈ ರೀತಿಯಾಗಿ ತಿದ್ದಿ ಕೆಳಗೆ ಕೊಡಲಾಗಿದೆ :

''ದೇವರ ಸ್ವರೂಪವನ್ನು ದೇವರು ಅಲ್ಲದ ಸ್ವರೂಪವನ್ನು ವಿಂಗಡಿಸಿ ತಿಳಿದುಕೊಂಡು, ಶರೀರವೇನು ಆತ್ಮವೇನು ಎಂದು ಶೋಧಿಸಿಕೊಂಡು, ಲೋಕದಲ್ಲಿಯಿದ್ದಂಥಾ ಅನಿತ್ಯ ಸುಖವನ್ನು, ಮೋಕ್ಷದಲ್ಲಿ ಪುಣ್ಯದಿಂದಾ ಬಂದ ನಿತ್ಯ ಭಾಗ್ಯವನ್ನು ಅರಿತುಕೊಂಡು ಸತ್ಯೋಪದೇಶದಿಂದ ವಿವೇಕವಾಗಿ ಕೇಳಬೇಕು. ಅದು ತಿಳಿಯಬೇಕಾದರೆ ಒಂದು ಕಥೆ ಅದೆ. ಅದು ಏನಂದರೆ—ಚಂದ್ರಶೇಖರನೆಂಬಂಥಾ ಬ್ರಾಹ್ಮಣನೊಬ್ಬನು ವಿವಾಹವನ್ನು ಮಾಡಿ ತಮ್ಮ ಮನೆಯಲ್ಲಿ ಅನೇಕ ದಿವಸ ಸುಖದಲ್ಲಿ ಇದ್ದು, ಒಂದು ಸಾರಿ ತಾಯಿ ತಂದೆ ಸ್ತ್ರೀ ಮಾವನ ಸಂಗಾತ ಜಗಳವಾಗಿ ಅನೇಕ ಹೊತ್ತು ಕ್ಷೋಂಡಾಡಿಕೊಂಡಿ (?) ರಲಾಗಿ ತಾಳಲಾರದೆ ಎಲ್ಲರನ್ನು ಬಿಟ್ಟು ಕೋಪಿಸಿಕೊಂಡು ಹೊರಟುಹೋದನು. ಮುಂದೆ ಹೋಗಿ ಮಾರ್ಗವನ್ನು ಅರಿಯದೆ ಕಾಡೊಳಗೆ ಬಿದ್ದು, ಕೆಲವು ದಿನ ಒಂದು ಊರಾದರೂ ಒಂದು ಮನೆಯಾದರೂ ಕಾಣದೆ ಭೋಜನಕ್ಕೆ ಏನೂ ದೊರಕದೆ ಮಹಾತಸ್ತಿಯಾಗಿ ಅರಣ್ಯದಲ್ಲಿ ತಿರುಗಾಡಿದನು. ಯಿೂ ಪ್ರಕಾರವಾಗಿ ಅನೇಕ ದಿನ ಆಹಾರಕ್ಕೆ ಒಂದೂ ಅವಕಾಶವಿಲ್ಲದೆ ಇರಲಾಗಿ ಒಳ್ಳೆ ಮಧ್ಯಾಹ್ನದಲ್ಲಿ ಒಂದು ಮರದ ಛಾಯದ ಕೆಳಗೆ ಜೀವಸಂಕಟವಾಗಿ ಬಿದ್ದುಕೊಂಡನು.''

ಶಬ್ದಗಳ, ಪ್ರತ್ಯಯಗಳ ಬಳಕೆ ಹಾಗೂ ವಾಕ್ಯರಚನೆ ಇವುಗಳ ದೃಷ್ಟಿಯಿಂದ ಇದು ನಡುಗನ್ನಡದ ಬರವಣಿಗೆಯೆಂದು ಸರ್ವಥಾ ತೋರದು. ಕಾರಣ ಇದನ್ನು ಹೊಸಗನ್ನಡದ ಆರಂಭಕಾಲದ ಬರವಣಿಗೆಯೆಂದೇ ನಾವು ಬಗೆಯುತ್ತೇವೆ.

ಈ ಬರಹದ ಅಕ್ಷರಿಕೆಯ ಕೆಲವು ವೈಶಿಷ್ಟ್ಯಗಳನ್ನು ಗಮನಿಸುವುದು ಕ್ರಮಪ್ರಾಪ್ತವಾಗುತ್ತದೆ. (ಅವೇನು ಸ್ಖಾಲಿತ್ಯಗಳಲ್ಲ— ಮತ್ತೆ ಮತ್ತೆ ಅವು ಕಾಣಿಸಿಕೊಳ್ಳುತ್ತವೆಯಾದ್ದರಿಂದ.)

ನಾಡಿನಲ್ಲಿ ಚೆನ್ನಾಗಿ ನೆಲೆಗೊಂಡಿರುವುದರಿಂದಲೂ, ಈಶಬ್ದ ಸೃಷ್ಟಿಯಲ್ಲಿ ಸ್ವೋಪಜ್ಞತೆ ಕಂಡು ಬರುವುದರಿಂದಲೂ, ಅವುಗಳನ್ನು ಗುರುತಿಸುವುದು ಅವಶ್ಯವಾಗುತ್ತದೆ. ಆದ್ದರಿಂದ ಈ ಹಸ್ತಪ್ರತಿಗಳಿಂದ ಮೊದಲುಗೊಂಡು ಕೆಥಲಿಕ್ ಹಾಗೂ ಪ್ರೊಟೆಸ್ಟಂಟ್ ಮಿಶನರಿಗಳು ಸೃಷ್ಟಿಸಿದ ಪಾರಿಭಾಷಿಕ ಶಬ್ದಗಳ ಕೋಶವೊಂದು ಸಿದ್ಧವಾಗಬೇಕೆಂದು ಪ್ರಾಸಂಗಿಕವಾಗಿ ಸೂಚಿಸಬಹುದು.

1. ಅಂನ್ನು, ಹುಂಬ್ಬ, ಕೊಂಬ್ಬು (ಅನುನಾಸಿಕದೊಟ್ಟಿಗೆ ಒತ್ತಕ್ಷರ)
2. ಕಟ್ಠಳೆ, ಮಾಡಿದ್ಧಾರೆ, ಯಷ್ಠು (ಅನವಶ್ಯಕವಾಗಿ ಮಹಾಪ್ರಾಣ)
3. ಕನಡಿ, ಚಿತ್ರೈಸಿರುವ (ಒತ್ತಕ್ಷರ ಲೋಪ)
4. ಕಲ್ಪಣೆ, ಸುವರ್ನ (ನಣಯೋರಭೇದಃ !)
5. ಮರಿಯಾದೆ (ಶಬ್ದ ಶಿಥಿಲತ್ವ)
6. ಕ್ರಿಷ್ಟಿಸ್ತಂಥಾ, ವ್ರಿಕ್ಷಗಳು (ಋಕಾರಕ್ಕೆ ಪ್ರತಿಯಾಗಿ ರ್)
7. ಕೊಮಾರ, ಪೊಸ್ತಕ, ಶೆರಿರ, ಕಾಗಜದಲ್ಲು (ಸ್ವರಪಲ್ಲಟ)
8. ಪರಿಯಂತ್ರ, ಚಾಕ್ರ, ಬಿಂನ (ಬಳಕೆವಾತಿನ ಪರಿಣಾಮ)
9. ಅಪುರೂಪ (ಗೋವಿಂದ ಪೈಗಳು ಆಕ್ಷೇಪಿಸಿದ್ದ 'ಅಪರೂಪ' ಶಬ್ದವು ೩೦೦ ವರ್ಷಗಳಷ್ಟು ಹಳೆಯದು !)
10. ವೊಂದು, ಯಿರಲಾಗಿ (ಸ್ವರೋಚ್ಚಾರದ ಬದಲಿಗೆ ಯ, ವ ಮುಂತಾದ ಮೃದುವರ್ಣಗಳು)
11. ಚಂದ್ರಸೆಕರ, ಕೊಪಿಶಿಕೊಂಡು (ಸ ಶ ಷ ಗಳಲ್ಲಿ ಅಭೇದ)
12. ತಿರಿಸಿ, ಸ್ತ್ರೀ, ಸರ್ವೆಶ್ವರ, ನಡೆಯಬೆಕು, ಸ್ತೊತ್ರ, ದೆವಿ (ಈ,ಏ, ಓ ಗಳ ಅಭಾವ)

ಇಷ್ಟು ದೊಡ್ಡ ಪ್ರಮಾಣದ ಬರವಣಿಗೆಯಲ್ಲಿ ನನಗೆ ಎಲ್ಲಿಯೂ 'ೀ' ಸಂಜ್ಞೆ ಕಂಡುಬಂದಿಲ್ಲ !! ಇದರರ್ಥ ದೀರ್ಘಸ್ವರದ ಪ್ರಯೋಗವೇ ಇಲ್ಲವೆಂದಲ್ಲ. ಕಾ, ಕೂ ಗಳನ್ನು ಬರೆಯುವಾಗ ಹಾಗೂ ಮಿಾ ಮುಂತಾದ ಕೆಲವೆಡೆ 'ೀ' ಸಂಜ್ಞೆಯ ಅಗತ್ಯ ವಿದ್ದಿಲ್ಲವಾದ್ದರಿಂದ, ಅಲ್ಲೆಲ್ಲ ದೀರ್ಘ ಬಂದಿದೆ. ಎ, ಒ ದ ದೀರ್ಘಗಳು ಇಲ್ಲದು ದಕ್ಕೆ ಸಂಸ್ಕೃತದ ವರ್ಣಮಾಲೆಯ ಪ್ರಭಾವವೆಂದು ಹೇಳಬಹುದಿತ್ತು. ಆದರೆ 'ಈ ಕಾರ ಸಹ ಇಲ್ಲದ್ದರಿಂದ, ನಿಜ ಕಾರಣ ತೋಚುತ್ತಿಲ್ಲ.

ಮೇಲೆ ತೋರಿಸಿದ ವೈಲಕ್ಷಣ್ಯಗಳು ಮಿಶನರಿಗಳ ಬರಹಕ್ಕಷ್ಟೆ ಸೀಮಿತವೆಂದಲ್ಲ. ಆಗಿನ ಇತರ ಗದ್ಯ ಬರಹಗಳಾದ ಬಖೈರುಗಳು, ಶಾಸನಗಳು ಮತ್ತು ದಾಸರ ಪ್ರಮೇಯ ಗದ್ಯ– ಇವುಗಳಲ್ಲಿಯೂ ಕಂಡುಬರುತ್ತವೆ. ಗಮನಿಸಬೇಕಾದ ಮಾತೆಂದರೆ, ಹೊಸಗನ್ನಡದ ಪ್ರಮುಖ ಲಕ್ಷಣವೆನಿಸಿದ ಗದ್ಯದ ರಚನೆಯು ೧೮ನೆಯ ಶತಮಾನ ದಲ್ಲಿಯೇ ಆರಂಭವಾಯಿತು. ಮತ್ತು ಆ ಶತಮಾನದಲ್ಲಿಯ ಸುಮಾರು ಐವತ್ತು ಗ್ರಂಥಗಳಲ್ಲಿ ಹೊರಹೊಮ್ಮಿದ ಗದ್ಯವು ಮೊತ್ತದಲ್ಲಿ ಆ ಹಿಂದಿನ ಎಲ್ಲ ಗದ್ಯ ಬರವಣಿಗೆ ಯನ್ನು (ಶಾಸನೇತರ) ಮಿಾರುವಷ್ಟಿದೆ. ಹಾಗೂ ಅದಕ್ಕೆ ಮನಸ್ಸುಗೊಟ್ಟವರು ಪಾಶ್ಚಾತ್ಯರೇನಲ್ಲ. ಆದ್ದರಿಂದ ಆಗಿನ ಗದ್ಯದ ಭಾಷಾಶೈಲಿಯನ್ನು, ಪದಪ್ರಯೋಗ ವನ್ನು ವಿವರವಾಗಿ ಅಭ್ಯಸಿಸುವ ಕಾಲವೀಗ ಸನ್ನಿಹಿತವಾಗಿದೆ. ಅಂಥ ಅಭ್ಯಾಸಕ್ಕೆ ಇವೆರಡು ಹಸ್ತಪ್ರತಿಗಳಿಂದ ವಿಶೇಷ ಚಾಲನೆ ದೊರೆಯಬಲ್ಲುದು. ಆ ವಿಷಯ

ಅಂತಿರಲಿ, ಈ ಹಸ್ತಪ್ರತಿಗಳಿಂದಾಗಿ ಹೊಸಗನ್ನಡ ಸಾಹಿತ್ಯದ ಉದಯವನ ಈಗಿನಂತೆ ೧೮೧೦ ರಿಂದ ಪರಿಗಣಿಸದೇ, ಅದನ್ನು ೭೦ – ೮೦ ವರ್ಷಗಳಷ್ಟು ಹಿಂದ ಕೊಂಡೊಯ್ಯುವ ಆಶಾದಾಯಕ ಪರಿಸ್ಥಿತಿಯುಂಟಾಗಿದೆ.*

---

* ಕ್ರೈಸ್ತತತ್ವ ವಿಚಾರದಲ್ಲಿ, ಅದರ ಇತಿಹಾಸದಲ್ಲಿ ನನ್ನ ತಿಳುವಳಿಕೆ ಅತ್ಯಂತ ಸೀಮಿತವಾದದ್ದು ಈ ಲೇಖನವನ್ನು ಬರೆಯುವುದಕ್ಕೆ ಮುಂಚೆ ನಾನು, ಇತಿಹಾಸದ ನಿವೃತ್ತ ಪ್ರಾಧ್ಯಾಪಕರಾ ಪ್ರೊ. ಜಿ. ಎಮ್. ಮೊರೇಸರನ್ನು ಹಲವು ಬಾರಿ ಕಂಡು ವಿಷಯವನ್ನು ತಿಳಿದುಕೊಂಡಿದ್ದೇನೆ ಸಂದೇಹಗಳನ್ನು ನಿವಾರಿಸಿಕೊಂಡಿದ್ದೇನೆ. ಅವರ ನಿರ್ವ್ಯಾಜ ಬುದ್ಧಿಯ ನೆರವು ಇಲ್ಲದಿದ್ದರೆ ಲೇಖನ ಬರೆಯುವುದೇ ಸಾಧ್ಯವಾಗುತ್ತಿದ್ದಿಲ್ಲ.

ಅನುಬಂಧ ೧

ಪರಮ ಕಾರ್ಲು ತೊಮೆಯೆಂಬ್ಬವರು ಕಲ್ಪಿಸ್ತ ಎರಡನೆಯ ಕಲ್ಪಣೆ

"ಜ್ಞಾನಸ್ನಾನಕಾರರಿಗೆ ಜ್ಞಾನಸ್ನಾನ ಕೊಡುವಾಗ ಅರ್ಚಶಿಷ್ಟ ಸಭೆಯಲ್ಲಿ ನಡದುಕೊಂಡ ಬರುವ ಕ್ರಮ ಆಚಾರ ಪ್ರಕಾರದಲ್ಲಿ ವೆದಸಾಕ್ಷಿಗಳ ಚರಿತ್ರ ಸಂಕ್ಷೆಪದಲ್ಲಿ ಬರದುಯಿರುವ ಅರ್ಚಶಿ ವರುಗಳ ಹೆಸರುಯಿಕ್ಕಿ ಜ್ಞಾನಸ್ನಾನವಂನು ಕೊಡ ಹೆಳಿ ಕಲ್ಪಿಸ್ತ್ರಾಯಿಥೆವೆ. ಲೊಕದ ದೆವರುಗ ಹೆಸರುಗಳಂನ್ನೂ ಲೊಕದ ಅಗ್ನಾನಿಗಳ ವೆದದಲ್ಲಿ ಕೊಂಡಾಡಲ್ಪಡುವ ಮುನಿಗಳ ಹೆಸರುಗಳಂನ ಅಗ್ನಾನಿಗಳು ಯಿಕ್ಕಿ ಕೊಂಡ್ದುಯಿರುವ ಹೆಸರುಗಳು । ವುಪದೆಶವಂನು ಕೆಳುವಂಥಾವರು ಜ್ಞಾನ ಸ್ನಾನವಂನ್ನು ತೊಕೊಂಬುವುದಕ್ಕೆ ಮುಂಚ್ಯೆ ಯಿಕ್ಕಿಕೊಂಡು ಯಿಧರಲ್ಲಾ ।, ಯಿಂಥಾ ಹೆಸರುಗಳ ಶುಧವಾಗಿ ಆಗದು ಯಂದು ಹೆಳುತಾಯಿಥೆವೆ ।

ಯಿಂಥಾ ಕಲ್ಪಣೆ ಪ್ರಕಾರವಾಗಿ ನಡೆಯುಬೆಕೊ ಯಿಲ್ಲವೊ ಯಂಬ್ಬ ಸಂದೆಹ ನಿವಾರಣಕ ಯಂಥಾಪ್ರಕಾರದಲ್ಲಿ ನಡೆಯುಬೆಕೂ ಯಂಬ ಸಂದೆಹ ನಿವಾರಣಕ್ಕೂ ಕರ್ದಿನಾಲಿಯಂಬ ಪ್ರಭುವಾ ಗುರುಗಳು ಹೆಳಿದದಾವದು ।

ಯಿಂಥಾ ಕಲ್ಪಣೆಯಲ್ಲಿ ವುಂಟ್ಟಾದ ಕಂಡಿತವನ್ನು ಬಿಡಿಸಿ ಕಲ್ಪಿಸ್ಪಾ ಯಿಥೆವೆ ಯಂಬ್ಬ ಮಾತ ತಳ್ಳಿ ಕೂಡಿದ ಮಾತ್ರ ಮಾಡುವದು ಯಂಬ್ಬ ವಾಕ್ಯ ಮಾತ್ರ ಯಿರಿಸುವದೂ । ಲೊಕದ ದೆವರ ಗಳಿಗೂ ಕಳ್ಳ ವೆದದಲ್ಲಿ ಕೊಂಡಾಡಲ್ಪಡುವ ಮುನಿಗಳಿಗು ವುಂಟ್ಟಾದ ಹೆಸರುಗಳಂನ್ನು ಮಾತ್ರ ಮುಂಚ್ಯೆ ಹೆಳಿದ ಕಂಡಿತ್ತದ ಮೆಲೆ ಯಿಕ್ಕಲಾಗದೆಂದು ಕಲ್ಪಿಸ್ತಾ ಯಿಥೆವೆ ।

ಜ್ಞಾನಸ್ನಾನವನ್ನು ಕೊಡುವಾಗ ಕ್ರೈಸ್ತ ಸಂತರ ಹೆಸರುಗಳನ್ನು ಮಾತ್ರ ಇ ತಕ್ಕದ್ದು ; ಹಿಂದೂ ದೇವರುಗಳ, ಮುನಿಗಳ ಹೆಸರುಗಳನ್ನು ಸರ್ವಥಾ ಇಡಬಾರದ ಎಂಬುದಾಗಿ ಕಾರ್ಲ್ ತೊಮೆ ವಿಧಿಸಿದ್ದರು. ಪೋಪರು ಹಿಂದೂ ದೇವರು, ಗುರುಗ ಹೆಸರನ್ನು ಇಡಬಾರದೆಂಬುದನ್ನು ಸ್ಥಿರೀಕರಿಸಿದರು. ಆದರೆ ಕ್ರೈಸ್ತ ಸಂತರ ಹೆಸರನ್ನ ಇಡಬೇಕೆಂಬುದರಲ್ಲಿಯ 'ಕಂಡಿತ'ದ ಕಡ್ಡಾಯವನ್ನು ತಳ್ಳಿಹಾಕಿ ಮೂಲ ಅಂಕಿತನಾಮದ

ರ್ಥವನ್ನೆ ಕೊಡಬಹುದಾದಂಥ ಧೈರ್ಯಮ್ಮ, ದಾನಪ್ಪ, ಶಾಂತಪ್ಪ–ಎಂಬುದಾಗಿ ಸರು ಇಡಲು ಅಡ್ಡಿಯಿಲ್ಲವೆಂಬುದು ಇದರ ತಾತ್ಪರ್ಯ.

ಅನುಬಂಧ ೨

ಶೆರ್ರಿ ವಿರಚಿತ ಹಸ್ತಪ್ರತಿ – ೩೩೭ರ ವಿಷಯ ಸೂಚಿ

ಖ್ಯೋಪದೇಶ
ನೋಪದೇಶ
ವಿವೇಕದ ನಡವಳಿಕೆ
ಕರ್ಮ
ತತ್ವ ನಿರ್ಣಯು
ು – ರಾಮನ ಕಥೆ
ನೋಪದೇಶ (೨)
ನಮುಕ್ತಾಮಾಲೆ
ಸುನಾಥಸ್ವಾಮಿಗಳ ಪಾಡು
ರಮಾತೆಯ ಧರ್ಮಚರಿತ್ರೆಗಳ ವಿವೇಕ
ರ್ಜೀವದಾಕ್ಷೇಪದ ವಿವೇಕ
ನಿರ್ಣಯ ವಿವೇಕ
ರ ಪರೀಕ್ಷೆ
ತ ಪ್ರಸಂಗ
ನೋಪದೇಶದ ಸೋಪಾನ
ಸ ಸಲ್ಲಾಪ
ನಸ್ನಾನದ ಸಲ್ಲಾಪ
ಸಂಕೀರ್ತನಕ್ಕೆ ದೇವ ಪ್ರಸಾದಕ್ಕೆ ಸಂಕ್ಷೇಪವಾಗಿ ಪರೀಕ್ಷಿಸುವ ಬಗೆ
ು ಪಾಡುಪಟ್ಟ ವರ್ತಮಾನ
ರ್ ನಡತೆ ವಿವೇಕ
ಹೂದಂಡೆ
ವುಪಶಮನ
ದೇವ – ದ್ರವ್ಯಾನುಮಾನಗಳ ವಿವರ
ಶಿಷ್ಯ ಮರಿಯಮ್ಮನವರು ಉದ್ಭವಿಸಿ ಹುಟ್ಟಿದ ವರ್ತಮಾನ

ಸರ್ವೇಶ್ವರನು ಮನುಷ್ಯನಾಗಿ ಹುಟ್ಟಿದ ವರ್ತಮಾನ
*Adoration of the three kings
Herod's messacre of the innocents
How Jesus was taken to the temple
How Jesus arose on the third day
How Jesus sent forth his apostles
ಅರ್ಚಶಿಷ್ಯ ಮರಿಮ್ಮನವರ ಧರ್ಮಚರಿತ್ರೆಗಳು, ಇ.
ತ್ರಿತ್ವವೆಂಬ ಪರಮರಹಸ್ಯ
ದೇವ ಪ್ರಸಾದವನು ತೆಗುವದರಿಗೆ (?)
ತಿಳುಹಿಸತಕ್ಕ ವರ್ತಮಾನಗಳು
Life of St. John the Baptist
Life of St. Stanislas
ಅ. ಶಿ. ಶಾಂತಪ್ಪನವರ ಧರ್ಮಚರಿತ್ರ
Lives of Ss. Julian Basilissa
ಅ. ಶಿ. ಸಂತೋಷಮ್ಮನ ಚರಿತ್ರೆ
Life of St. Cecilia
Life of St. Christina
Life of St· Agnes
ದೇವ – ಧಾನಮ್ಮನ ಚರಿತ್ರೆ
Devotions (Dhyāna) for each day of the week

---

* ಕೆಲವು ಶೀರ್ಷಿಕೆಗಳು ಇಂಗ್ಲಿಶ್‌ನಲ್ಲಿ ಇದ್ದರೂ, ವಿವರಣೆ ಕನ್ನಡದಲ್ಲೆ ಇದೆ.

ಅನುಬಂಧ ೩

ಕೆಲವು ಕ್ರೈಸ್ತ ಅಂಕಿತನಾಮಗಳು ಹಾಗೂ ಪಾರಿಭಾಷಿಕ ಶಬ್ದಗಳು

ಅಗ್ನೆಸ—St. Ignatius
ಆಶೀರ್ವಾದಪ್ಪ (ಹದಿಮೂರನೆಯವರು)–Pope Benedict XIII (1724–1730)
ಕಾರ್ಲ್ ತೊಮೆ—Mgr. Charles Thomans de Tournon
ಕ್ರಿಸ್ತಿನಾ—St. Christina
ಗಾಬ್ರಿಯೆಲ—Gabriel
ಜಿಪದೇಶ—India (ಹೇಗೆ ?)
ಜ್ಯೂವಾಂನಿ—St. John
ಜೆಸು/ಜೈಸುನಾಥ—Jesus
ಧೈರ್ಯಮ್ಮ—St. Agatha
ಪಾಪುಸ್ವಾಮಿ—Pope
ಸಂತೋಷಮ್ಮ—St. Felicity
ಸವೆರ್ರಿ/ಶೆವರಿ—Xaveri or Xavier
ಸಾಂತಪ್ಪ—Pope Clement
ಸ್ತಾನಿಸ್ಲಾಯ—St. Stanislas
ಸ್ಪಿರಿತು ಸಾಂತು—Holy Spirit
ಅರ್ಚಶಿಷ್ಟ—Saint
ಕರ್ದಿನಾಲಿ—Cardinal
ಕಲ್ಪಣೆ—Regulation
ಜ್ಞಾನಸ್ನಾನ—Baptism
ದೇವದ್ರವ್ಯ—(seven) Sacraments
ನಮೋದೇವಪ್ರಸಾದ—Holy Communion
ಪ್ರಸಂಗ—Sermon
ಪಾಪಸಂಕೀರ್ತನ—Confession
ಮೆತ್ರಾಣಿ/ ಮಹಾಮೆತ್ರಾಣಿ—Bishop/ Archbishop
ವೇದಶಾಸ್ತ್ರಿ—Theologian
ವೇದಸಾಕ್ಷಿ—Martyr
ಸರ್ವೇಶ್ವರ—God

ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ - ೨
ದ್ವಿತೀಯ ಯುಗ
(೧೯ನೆಯ ಶತಮಾನ)*

ಜಾನ್ ಹ್ಯಾಂಡ್ಸ್ ಎಂಬ ಪ್ರೊಟೆಸ್ಟಂಟ್ ಮಿಶನರಿಯು ಬಳ್ಳಾರಿಗೆ ಬಂದ ಕಾಲದಿಂದ (೧೮೧೯/೧೦) ಈ ದ್ವಿತೀಯ ಘಟ್ಟವನ್ನು ಆರಂಭಿಸಬಯಸಿದೆ. ಮುಂದಿನ ನೂರು ವರ್ಷಗಳಲ್ಲಿ ಲಂಡನ್, ವೆಸ್ಲೆಯನ್ (ಮೆಥಾಡಿಸ್ಟ್), ಬಾಸೆಲ್ (ಇವ್ಯಾಂಜೆಲಿಕಲ್) – ಈ ಮಿಶನ್ನಿನವರು (ಪ್ರೊಟೆಸ್ಟಂಟರು) ನಮ್ಮ ನಾಡಿನಲ್ಲಿ ಶೈಕ್ಷಣಿಕ, ಸಾಹಿತ್ಯಿಕ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಇವರ ಕಾರ್ಯಾಚರಣೆಯ ಬಗೆಯನ್ನು ಕಂಡು ಕೆಥಲಿಕರೂ ಮುಂದೆ ಬರಬೇಕಾಯಿತು. ಈ ಒಂದೊಂದು ಸಂಸ್ಥೆಯ ಕಾರ್ಯವೇನೆಂಬುದನ್ನು ಪರಿಶೀಲಿಸೋಣ.

ಲಂಡನ್ ಮಿಶನ್ ಸಂಸ್ಥೆ

ಜಾನ್ ಹ್ಯಾಂಡ್ಸ್ (೧೮೧೯ – ೧೮೪೦) † : ಬಳ್ಳಾರಿಗೆ ಬಂದ ಮರುವರ್ಷವೇ ಅವನು ಕನ್ನಡ ಕಲಿಯಲಾರಂಭಿಸಿದ್ದನು. ಇವನೇ ಆದ್ಯ (ಪ್ರೊಟೆಸ್ಟಂಟ್) ಮಿಶನರಿಯಾದ್ದರಿಂದ, ಅನಂತರ ಬಂದವರಿಗೆ ಒದಗಿದ್ದ ಕೋಶ – ವ್ಯಾಕರಣಾದಿ ಭಾಷಾಭ್ಯಾಸದ ಸಾಧನಗಳು ಇವನಿಗೆ ಲಭ್ಯವಿರಲಿಲ್ಲ. ಅಂತೂ ಕನ್ನಡವನ್ನು ತಕ್ಕಮಟ್ಟಿಗೆ ರೂಢಿಸಿಕೊಂಡನಲ್ಲದೆ, ಇತರ ಕಾರ್ಯಗಳ ಮಧ್ಯೆ ಬಿಡುವು ಮಾಡಿಕೊಂಡು ಸಮಗ್ರ ಬೈಬಲಿನ ಬಹು ಭಾಗವನ್ನು ಕನ್ನಡಕ್ಕೆ ಅನುವಾದಿಸಿದುದು ಅವನ ಸಾಹಸವೆನ್ನಬೇಕು. ಹ್ಯಾಂಡ್ಸ್ ಹಲವಾರು ಮತಪುಸ್ತಿಕೆಗಳನ್ನೂ ಬೈಬಲಿನ ಹೊಸ ಒಡಂಬಡಿಕೆಯನ್ನೂ ಅನುವಾದಿಸಿ, ಮದ್ರಾಸದಲ್ಲಿ ಮುದ್ರಿಸಿಕೊಂಡು ಬಂದನು (೧೮೨೦). ಮುಂದೆ ಬಳ್ಳಾರಿಯಲ್ಲಿಯೇ ಮುದ್ರಾಯಂತ್ರವನ್ನು ಸ್ಥಾಪಿಸಿ, ಕರ್ನಾಟಕದಲ್ಲಿ ಮುದ್ರಣದ ಅಸ್ತಿವಾರ ಹಾಕಿದ್ದನ್ನು 'ಸ್ಥೂಲ ನೋಟ' ದ ಲೇಖದಲ್ಲಿ ಪ್ರಸ್ತಾಪಿಸಿದೆ. ಲಂಡನ್ ಮಿಶನ್ ಪತಿಯಿಂದ ಇನ್ನು ಹಲವರು ಬಂದಾಗ ಅವರಿಗೆ ಹ್ಯಾಂಡ್ಸ್ ಮಾರ್ಗದರ್ಶಕನಾಗಿದ್ದನು. ಅವನ ಕಾರ್ಯಶ್ರದ್ಧೆ ಮತ್ತು ಸಹನಗುಣಗಳು ಮೆಚ್ಚತಕ್ಕವಾಗಿವೆ.

---

* ೧೯ನೆಯ ಶತಮಾನವು ಕ್ರೈಸ್ತ ಸಾಹಿತ್ಯದ ಉಚ್ಛ್ರಾಯ ಕಾಲ. ಇಲ್ಲಿ ಮಾತ್ರ ಸಂಕ್ಷೇಪವಾಗಿ ವಿವರಿಸಲಾಗಿದೆ – 'ಹೊಸಗನ್ನಡದ ಅರುಣೋದಯ' ದಲ್ಲಿ (೧೯೭೪) ವಿಶದವಾಗಿ ಬಂದಿದೆಯಾದ್ದರಿಂದ, ಇಲ್ಲಿ ಬಂದ ವಿವಿಧ ಅಂಶಗಳ ಆಕರ, ಸಂದರ್ಭ ಬೇಕಿದ್ದರೆ, ಆ ಗ್ರಂಥವನ್ನೇ ಪರಿಶೀಲಿಸಬೇಕು.

† ಈ ಬಗೆಯ ಕಾಲಾವಧಿಯು ಸಂಬಂಧಪಟ್ಟ ಮಿಶನರಿಯ ಕರ್ನಾಟಕ ವಾಸ್ತವ್ಯದ ಕಾಲವನ್ನು ಸೂಚಿಸುತ್ತದೆ.

ವಿಲಿಯಮ್ ರೀವ್ (೧೮೧೬ – ೧೮೩೪) : ಭಾಷಾಗ್ರಹಣದ ವಿಷಯದಲ್ಲಿ ಹ್ಯಾಂಡ್ಸ್ ಬಲ್ಲಿದನಲ್ಲವಾದ್ದರಿಂದ, ಅವನಿಗೆ ನೆರವಾಗಲೆಂದೇ ರೀವ್‌ನನ್ನು ಲಂಡನ್ನಿನಿಂದ ಕಳಿಸಲಾಯಿತು. ಕ್ರೈಸ್ತ ಮತೀಯ ಗ್ರಂಥಗಳ ಅನುವಾದಕ್ಕೆ ಮೊದಲಿಗೆ ಅಗತ್ಯವಾದದ್ದು ಇಂಗ್ಲಿಶ್ – ಕನ್ನಡ ಶಬ್ದಕೋಶ. ರೀವ್ ಆ ಕೆಲಸಕ್ಕೆ ಉದ್ಯುಕ್ತನಾದನು. ಬಳಕೆಯ ಮತ್ತು ಸಾಮಾನ್ಯ ಇಂಗ್ಲಿಶ್ ಪದಗಳಿಗೆ, ಕನ್ನಡ ಸಮಾನಾರ್ಥಕಗಳನ್ನು ಕೇಳಿ ತಿಳಿದುಕೊಳ್ಳುವದಲ್ಲದೆ, ಹಲವಾರು ಹಳಗನ್ನಡದ ತಾಡವೋಲೆಗಳನ್ನು ಪರಿಶೀಲಿಸಿ ಅನೇಕ ಶಬ್ದಗಳನ್ನು ಆಯ್ದುಕೊಂಡನು. ಐದಾರು ವರ್ಷಗಳ ಈ ಬಗೆಯ ಪರಿಶ್ರಮದಿಂದಾಗಿ ಇಂ – ಕ ಶಬ್ದಕೋಶದ ಹಸ್ತಪ್ರತಿಯು ಸಿದ್ಧವಾಯಿತು. ಇಂಥದೊಂದು ಕೋಶವು ಬ್ರಿಟಿಶ್ ಆಡಳಿತಗಾರರಿಗೂ ಬೇಕಾದದ್ದೇ. ಮದ್ರಾಸದ ಆಗಿನ ಗವರ್ನರನಾಗಿದ್ದ ಥಾಮಸ್ ಮನ್ರೋನ ಪ್ರೋತ್ಸಾಹದಿಂದಾಗಿ ಕಂಪನಿ ಸರಕಾರವು ಈ ಕೋಶದ ಮುದ್ರಣವನ್ನು ಕೈಕೊಂಡಿತು (೧೮೨೪). ಮುಂದೆ ರೀವ್ ಕನ್ನಡ – ಇಂಗ್ಲಿಶ್ ಕೋಶವನ್ನು ಸಿದ್ಧಪಡಿಸಿದಾಗಲೂ, ಸರಕಾರವೇ ಅದನ್ನು ಪ್ರಕಟಿಸಿತು (೧೮೩೨). ಹೊಸಗನ್ನಡ ಕಾಲದ ಆದ್ಯ ಮುದ್ರಿತ ಶಬ್ದಕೋಶಗಳಿವು.

ಇಂದು ನಮಗೆ ಪರಿಚಿತವಿರುವ ಶಬ್ದಾರ್ಥ, ಶಬ್ದದ ವ್ಯುತ್ಪತ್ತಿ ಮತ್ತು ಪ್ರಯೋಗ ಸಹಿತವಾದ ಕನ್ನಡ ಶಬ್ದಕೋಶಗಳು ರೀವ್‌ನ ಕಾಲದಲ್ಲಿ ಒಂದಾದರೂ ಇರಲಿಲ್ಲವಾದ್ದರಿಂದ, ಅವನ ಈ ಕಾರ್ಯವು ಎಷ್ಟೊಂದು ಗುರುತರವಾಗಿತ್ತೆಂಬುದನ್ನು ಕಲ್ಪಿಸಬಹುದು. ಅದರಲ್ಲಿಯೂ ತೀರ ಅಪರಿಚಿತವಾದ ಒಂದು ಭಾಷೆಯ ಶಬ್ದಗಳನ್ನು ಹೆಕ್ಕಿತೆಗೆದು ನಿಘಂಟನ್ನು ರಚಿಸುವುದು ಇನ್ನಷ್ಟು ಕಷ್ಟಕರ. ಮೇಲಾಗಿ ರೀವ್‌ನ ಉದ್ದೇಶವು ಬರಿಯೆ ಶಬ್ದಾರ್ಥವನ್ನು ಹೇಳುವುದಿರದೇ, ಕನ್ನಡ ಭಾಷೆ ಹಾಗೂ ಜನಜೀವನದ ಬಗ್ಗೆ ಹೆಚ್ಚಿನ ಪರಿಚಯುವನ್ನು ಮಾಡಿಕೊಡುವ ವಿಶಿಷ್ಟ ಉದ್ದೇಶವೂ ಇದ್ದಿತು ! ಆದ್ದರಿಂದ, ತನ್ನ ಇಂಗ್ಲಿಶ್ – ಕನ್ನಡ ಶಬ್ದಕೋಶದಲ್ಲಿ ಅವನು ಅನೇಕ ಸಮಾನಾರ್ಥದ ಶಬ್ದಗಳನ್ನೂ ಜೊತೆಗೆ ಪೂರಕ ಅಂಶಗಳನ್ನೂ ಕೊಟ್ಟಿದ್ದುದು ಕಂಡುಬರುತ್ತದೆ. ಉದಾಹರಣೆಗೆ, Idol ಎಂಬುದರ ಅರ್ಥವನ್ನು ವಿಗ್ರಹ, ಮೂರ್ತಿ ಎಂದು ಮುಂತಾಗಿ ಹೇಳಿ, ಅವುಗಳ ಸ್ವರೂಪವನ್ನು ವಿವರಿಸಿದುದಲ್ಲದೆ, ಕನ್ನಡಿಗರು ಪೂಜಿಸುವ ದೇವ, ದೇವತೆಗಳನ್ನೂ ಹೆಸರಿಸಿದ್ದಾನೆ. ಕೋಶಕ್ಕೆ ವಿಸ್ತಾರವಾದ ಪೀಠಿಕೆಯನ್ನು ಬರೆದು, ಕನ್ನಡ ಶಬ್ದಗಳ ಪ್ರಯೋಗ, ಅರ್ಥವೈವಿಧ್ಯ ಹಾಗೂ ವಾಕ್ಯರಚನೆಗಳ ಬಗ್ಗೆ ವಿದೇಶಿ ವಾಚಕರಿಗಾಗಿ ಕೆಲವೊಂದು ಮಾರ್ಗದರ್ಶಕ ಸೂತ್ರಗಳನ್ನು ಕೊಟ್ಟಿದ್ದಾನೆ.

ರೀವ್ ತನ್ನ ಕನ್ನಡ – ಇಂಗ್ಲಿಶ್ ಕೋಶರಚನೆಯಲ್ಲಿಯೂ ಇದೇ ದೃಷ್ಟಿಯನ್ನು ಇರಿಸಿಕೊಂಡಿದ್ದನು. ಆದರೆ ಕನ್ನಡಿಗರಲ್ಲಿ ಬಳಕೆಯಲ್ಲಿರುವ ಸಂಸ್ಕೃತ, ಹಿಂದುಸ್ತಾನೀ ಮತ್ತು ತೆಲುಗು ಶಬ್ದಗಳನ್ನೂ, ಅದರಂತೆ ಹಳಗನ್ನಡ ಕಾವ್ಯಗಳಲ್ಲಿಯ ಶಬ್ದಗಳನ್ನೂ ಎಷ್ಟರ ಮಟ್ಟಿಗೆ ಉಳಿಸಿಕೊಳ್ಳಬೇಕೆನ್ನುವುದರ ಬಗ್ಗೆ, ಸ್ವಾಭಾವಿಕವಾಗಿಯೇ ಅವನಿಗೆ ಸಂದಿಗ್ಧತೆಯುಂಟಾಯಿತು. ತಾನು ಒಳನಾಡಿನಲ್ಲಿರದೇ ಬಹುಭಾಷಿಕರಿರುವ ಬಳ್ಳಾರಿ

ಬೆಂಗಳೂರುಗಳಲ್ಲಿ ವಾಸವಾಗಿದ್ದದ್ದೇ ಇದರ ಕಾರಣವೆಂದು ಒಪ್ಪಿಕೊಂಡಿದ್ದಾನೆ. ಇಂತು, ಬಳಕೆಯಲ್ಲಿದ್ದ ಅನೇಕ ಶಬ್ದಗಳನ್ನು ಬಿಟ್ಟದ್ದೂ, ಬಳಕೆಯಲ್ಲಿ ಇಲ್ಲದವುಗಳನ್ನು ಸೇರಿಸಿದ್ದೂ, ಹಾಗೆಯೇ ಅಗತ್ಯಕ್ಕಿಂತ ಹೆಚ್ಚಿನ ವಿವರಗಳನ್ನು ಒದಗಿಸಿದ್ದುದೂ ಈ ಕೋಶದ ಎದ್ದುಕಾಣುವ ದೋಷಗಳಾಗಿವೆ. ಏನೇ ಆಗಲಿ, ಮುಂದಿನ ಕೋಶರಚನಾಕಾರರಿಗೆ ರೀವ್ ತಳಪಾಯವನ್ನು ಒದಗಿಸಿದ್ದಾನೆ. ಈ ಕೋಶದ್ವಯದಲ್ಲಿ ಅಗಣಿತ ದೋಷಗಳನ್ನು ಕಿಟೆಲ್‌ನಂತಹರು ಕಂಡರಾದರೂ, ರೀವ್‌ನ ಕೃತಿಗಳನ್ನು ಪರಿಶೀಲಿಸದೆ ಅವರು ಇದೇ ಬಗೆಯ ಕಾರ್ಯದಲ್ಲಿ ಮುಂದುವರಿಯುವಂತಿರಲಿಲ್ಲ. ಕೋಶರಚನೆಯಲ್ಲದೆ ರೀವ್ ಬೈಬಲಿನ ಹಳೆ ಒಡಂಬಡಿಕೆಯ ಅನೇಕ ಪರ್ವಗಳನ್ನು ಅನುವಾದಿಸಿದ್ದಾನೆ ; ಹ್ಯಾಂಡ್ಸನ ಅನುವಾದವನ್ನು ಸಾದ್ಯಂತವಾಗಿ ತಿದ್ದಿದ್ದಾನೆ.

ಜಾನ್ ರೀಡ್ (೧೮೩೧-೧೮೪೧) : ಹ್ಯಾಂಡ್ಸನ ಅನಂತರ ಬಳ್ಳಾರಿಯ ಮಿಶನ್ ಕೇಂದ್ರದ ಸೂತ್ರಗಳನ್ನು ವಹಿಸಿದ್ದ ರೀಡ್ ತೆಲುಗು, ಕನ್ನಡ ಎರಡೂ ಭಾಷೆಗಳಲ್ಲಿ ಕ್ರೈಸ್ತ ಪುಸ್ತಕಗಳನ್ನು ಅನುವಾದಿಸಿದ್ದಾನೆ. ಗ್ರಂಥೋದ್ಯಮವು ಅವನಿಗೆ ಜಾತ್ಯತಃ ಪ್ರಿಯವಾದ ಕೆಲಸವಾಗಿದ್ದಿತು. 'ನಮ್ಮ ಡೈರೆಕ್ಟರ್ ಜನರು ಇದೇ ಕೆಲಸಕ್ಕೆ ನನ್ನನ್ನು ಪೂರ್ಣವಾಗಿ ಬಿಟ್ಟರೆ ಎಷ್ಟು ಒಳಿತಾಗುವುದು ! ಈ ಕಾರ್ಯವು ಅತ್ಯಂತ ಮಹತ್ವದ್ದಾಗಿದ್ದು, ಬೇರೆ ಮಿಶನರಿ ಜನರಿಗೂ ಅವು ಉಪಯೋಗಕ್ಕೆ ಬೀಳುತ್ತವೆ.' ಎಂಬುದಾಗಿ ಲಂಡನ್ನಿನಲ್ಲಿದ್ದ ತನ್ನ ಮಿತ್ರನಿಗೆ ಪತ್ರದಲ್ಲಿ ಬರೆದದ್ದುಂಟು. ದುರ್ದೈವಕ್ಕೆ ಚಿಕ್ಕ ವಯಸ್ಸಿನಲ್ಲಿಯೇ ಬಳ್ಳಾರಿಯಲ್ಲಿ ತೀರಿಕೊಂಡನು.

ಅವನ ಕೃತಿಗಳಲ್ಲಿ 'ಇಂಗ್ಲೀಷ್ ಭಾಷೆಯನ್ನು ಕಲಿಯುವುದಕ್ಕೆ ಸಹಾಯವು' ಎಂಬ ಪುಸ್ತಕವು ಹೆಸರಿಸತಕ್ಕುದಾಗಿದೆ (೧೮೩೯). 'ಇಂಗ್ಲಿಷ ದೊರೆಗಳ ಸಂಗಡ ಸಂಪರ್ಕವಿರುವವರಿಗೆ ತಮ್ಮ ಬುದ್ಧಿ ವೃದ್ಧಿಯಾಗುವುದಕ್ಕೋಸ್ಕರ ಇಂಗ್ಲಿಶ್ ವಿದ್ಯೆಗಳನ್ನು ಶಾಸ್ತ್ರಗಳನ್ನೂ ಕಲಿಯುವುದಕ್ಕೆ ಯಿಚ್ಛಿಸುವವರಿಗೂ ಪ್ರಯೋಜನಕಾರಿಯಾದ್ದರಿಂದ' ತಾನು ಈ ಗ್ರಂಥವನ್ನು ರಚಿಸಿದುದಾಗಿ ಹೇಳಿದ್ದಾನೆ. ಇದರಲ್ಲಿ ಸಾಮಾನ್ಯ ವಿಷಯ, ವ್ಯಾಕರಣ, ಗಣಿತ, ಜ್ಯೋತಿಷ, ಭೂಗೋಲ ಮುಂತಾದ ವಿಷಯಗಳ ಮೇಲಿನ ಪಾಠಗಳಿವೆ. ಪಾಠದ ಸುರುವಿಗೆ ಕೆಲವು ಇಂಗ್ಲಿಶ್ ಶಬ್ದಗಳು ಹಾಗೂ ಅವುಗಳ ಕನ್ನಡ ಅರ್ಥವನ್ನು ಕೊಟ್ಟು, ಅನಂತರ ಮೇಲಣ ವಿಷಯಗಳಿಗೆ ಸಂಬಂಧಿಸಿದ ವಾಕ್ಯ ಸಮುದಾಯವನ್ನು ಭಾಷಾಂತರದೊಂದಿಗೆ ಕೊಡಲಾಗಿದೆ. ಆದರೆ ಉದಾಹರಣೆಗಳನ್ನು ಕೊಡುವಲ್ಲಿ ಈ ಪುಸ್ತಕದುದ್ದಕ್ಕೂ ಕ್ರೈಸ್ತಪ್ರಸಾರ ದೃಷ್ಟಿ ಎದ್ದು ಕಾಣುತ್ತದೆ. ಜೊತೆಗೆ ಹಿಂದೂ ಆಚಾರ ವಿಚಾರಗಳ ಬಗ್ಗೆ ಅಸಹಿಷ್ಣುತೆಯ ಅಂಶಗಳೂ ಹಣಿಕಿಕ್ಕಿವೆ. ವ್ಯಾಕರಣ ವಿಭಾಗದ ೧೯ನೇ ಪಾಠದಲ್ಲಿ ವಿಗ್ರಹ ಪೂಜೆಯನ್ನು ಖಂಡಿಸುತ್ತ, ಕೊನೆಯಲ್ಲಿ 'ಯೇಸುಕ್ರಿಸ್ತನಲ್ಲದೆ ಬೇರೆ ರಕ್ಷಕನ್ಯಾವನು ಯಿಲ್ಲ. ಕ್ರಿಸ್ತ ಧರ್ಮವಲ್ಲದೆ ಬೇರೆ ನಿಜವಾದ ಧರ್ಮವು ಯಾವುದು ಯಿಲ್ಲ.' ಎಂಬ ಮಾತೂ ಬರುತ್ತದೆ.

ಬೆಯ್ನನ್ ಮತ್ತು ಕ್ಯಾಂಬೆಲ್ : ಲಂಡನ್ ಮಿಶನಿನ ಇವರಿಬ್ಬರಲ್ಲಿ ಡಬ್ಲ್ಯೂ. ಬೆಯ್ನನ್ (೧೮೨೫-೧೮೭೦) ಬೆಳಗಾಂವಿಯಲ್ಲಿ ದೀರ್ಘಕಾಲ ವಾಸವಾಗಿದ್ದು, ಉತ್ತರ ಕರ್ನಾಟಕದ ಶೈಕ್ಷಣಿಕ ರಂಗದಲ್ಲಿ ಬಹುವಾಗಿ ಪರಿಶ್ರಮಿಸಿದನು. ಮುಂಬಯಿ ವಿಶ್ವ ವಿದ್ಯಾಲಯ ಸ್ಥಾಪನೆಯಾದಂದಿನಿಂದ (೧೮೫೭) ೧೩ ವರ್ಷಗಳ ವರೆಗೆ ಕನ್ನಡ ವಿಷಯದ ಪರೀಕ್ಷಕನಾಗಿದ್ದನು. ಬೆಯ್ನನ್ ಬರೆದದ್ದು ಕಡಿಮೆ. ಆದರೆ 'ಪಿಲ್‌ಗ್ರಿಮ್ಸ್ ಪ್ರೊಗ್ರೆಸ್'ನ ಪ್ರಥಮ ಅನುವಾದಕನೀತ.

ಕಾಲಿನ್ ಕ್ಯಾಂಬೆಲ್ (೧೮೩೫-೧೮೭೫) : ಮೈಸೂರು ನಗರದಲ್ಲಿ ಮಿಶನ್ ಕೇಂದ್ರವನ್ನು ಸ್ಥಾಪಿಸಿದ. ಪ್ರಾಥಮಿಕ ಶಿಕ್ಷಣದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿ. 'ಕನ್ನಡ ವ್ಯಾಕರಣಸಾರ'ವನ್ನು ಬರೆದನು. ಇದುವೆ ಕನ್ನಡದ ಮೊದಲ ಬಾಲ ವ್ಯಾಕರಣ ಮುಂಬಯಿ ಕರ್ನಾಟಕದ ಶಿಕ್ಷಣ ಇಲಾಖೆಯವರು ತಮ್ಮ ಪ್ರಾಥಮಿಕ ಶಾಲೆಗಳಿಗಾಗಿ ಪಠ್ಯಗಳಿಲ್ಲದಿದ್ದಾಗ ಇದರ ಪ್ರತಿಗಳನ್ನೆ ತರಿಸಿಕೊಂಡು ಹಂಚಿದ್ದರು. ಕ್ಯಾಂಬೆಲ್ ಇನ್ನೂ ಹಲವು ಶಾಲಾ ಪುಸ್ತಕಗಳನ್ನು ರಚಿಸಿದ್ದಾನೆ.

ಬಿ. ಎಚ್. ರೈಸ್ (೧೮೩೭-೧೮೮೭) : ಲಂಡನ್ ಮಿಶನ್ ಸಂಸ್ಥೆಯವರಲ್ಲೆಲ್ಲ ಇವನದೇ ದೊಡ್ಡ ಹೆಸರು. ನಾಲ್ಕು ದಶಕಗಳ ಕಾಲ ಬೆಂಗಳೂರಿನ ಸಾರ್ವಜನಿಕ ಜೀವನ ದಲ್ಲಿ ಬೆರೆತವನಾಗಿದ್ದ. ಬುದ್ಧಿಮತ್ತೆ, ಭಾವುಕತೆ, ದೂರದರ್ಶಿತ್ವ, ಸಂಗೀತಪ್ರೀತಿ, ಶೈಕ್ಷಣಿಕ ಒಲವು ಹಾಗೂ ಸೇವಾಮನೋಧರ್ಮ–ಇವೇ ಮುಂತಾದ ಗುಣಗಳು ಅವನಲ್ಲಿ ಎದ್ದು ಕಾಣುತ್ತಿದ್ದುವು. "Knowledge is power and especially so when based upon the word of God and imbibed in early life" ಎಂಬುದು ಅವನ ಕಾರ್ಯ ಸೂತ್ರಗಳಲ್ಲಿ ಒಂದಾಗಿದ್ದಿತು. ಅವನ ಕಾಲಕ್ಕೆ ಶೈಕ್ಷಣಿಕ ಪುಸ್ತಕಗಳು ಇರಲಿಲ್ಲವೆಂದರೂ ಸರಿಯೇ. ಆದಕಾರಣ ಶಿಕ್ಷಣದ ವಿವಿಧ ಹಂತಗಳಿಗೆ ಬೇಕಾದ ವಿಷಯಗಳ ಮೇಲಿನ ಪುಸ್ತಕಗಳನ್ನು ರಚಿಸಿದ್ದಲ್ಲದೆ, ಅವುಗಳ ಪ್ರಸಾರಕ್ಕೂ ಮನಸ್ಸು ಗೊಟ್ಟನು. ಇವುಗಳ ರಚನೆಯಲ್ಲಿ ತಮಿಳು ಪಠ್ಯಗಳ ನೆರವನ್ನು ಧಾರಾಳವಾಗಿ ಪಡೆದಿದ್ದಾನೆ. ಅವನ ಕಾಲಕ್ಕಿದ್ದ ಹೆಚ್ಚಿನ ಮತೀಯ ಪುಸ್ತಕಗಳು ತಮಿಳಿನಿಂದಲೇ ಅನುವಾದಗೊಂಡಿದ್ದವು.

ಆದರೆ ಯೂರೋಪಿಯನ್ ಭಾಷೆಗಳಿಂದ ನೇರವಾಗಿ ಅನುವಾದಗೊಂಡ ಮತೀಯ ಪುಸ್ತಕಗಳ ಸಾರ್ಥಕ್ಯವನ್ನು ಪ್ರಶ್ನಿಸಿದವರಲ್ಲಿ ಇವನೇ ಮೊದಲಿಗನು.'ದೇಶಭಾಷೆಯಲ್ಲಿಯ ಮತಪುಸ್ತಕಗಳು ದೇಶೀಯರ ವಿಚಾರ ಪ್ರವೃತ್ತಿಗೆ ಅನುಗುಣವಾಗಿರಬೇಕು. ಅಂದರೇನೆ ಜನರ ಮನಸ್ಸನ್ನು ಪರಿವರ್ತಿಸಲು ಅವು ಸಮರ್ಥವಾಗಬಲ್ಲವು'–ಎಂಬುದು ಅವನ ನಿಲುಮೆಯಾಗಿದ್ದಿತು. ಕ್ರಿ. ಶ. ೧೮೮೮ರಲ್ಲಿ ಅವನು ಇತರ ಪ್ರೊಟೆಸ್ಟಂಟ್ ಮಿಶನರಿಗಳ ಮುಂದೆ ಮಂಡಿಸಿದ ಇಂಥ ಪ್ರಗತಿಪರ ವಿಚಾರಗಳು ಹೀಗಿದ್ದುವು :

"ದೇಶೀಯರಲ್ಲಿ ಜಿಜ್ಞಾಸಾಭಾವ ಬೆಳೆಯುತ್ತಲಿದೆ. ಅದನ್ನು ತಣಿಸುವಂತಹ

ಪುಸ್ತಕಗಳನ್ನು ಹೊರಡಿಸಬೇಕು. ಈ ದಿಶೆಯಲ್ಲಿ ದೇಶೀಯ ಮತಪ್ರಸಾರಕರು ಹೆಚ್ಚು ಸಮಂಜಸವಾದ ಸಾಹಿತ್ಯವನ್ನು ರಚಿಸಬಲ್ಲರಾದ್ದರಿಂದ ಅವರಿಗೆ ವಿಶೇಷ ಅವಕಾಶವನ್ನು ಕಲ್ಪಿಸಿಕೊಡಬೇಕು. ಹಿಂದೂಧರ್ಮದೊಂದಿಗೆ ಹೋಲಿಸಿ ಕ್ರೈಸ್ತ ತತ್ವಗಳನ್ನು ಪ್ರಕಾಶಿಸಬೇಕು. ಮಹಿಳೆಯರಿಗೆಂದೇ ಪ್ರತ್ಯೇಕವಾಗಿ ಸಾಹಿತ್ಯ ರಚನೆಯಾಗಬೇಕು. ಒಂದು ದೇಶ ಭಾಷೆಯಿಂದ ಇನ್ನೊಂದಕ್ಕೆ ಉತ್ತಮ ಕೃತಿಗಳ ಭಾಷಾಂತರ ಕಾರ್ಯ ವ್ಯವಸ್ಥಿತವಾಗಿ ನಡೆಯಬೇಕು. ಹಾಡುಗಳು ದೇಶೀಯರ ನೆಚ್ಚಿನ ಸಾಹಿತ್ಯ ಪ್ರಕಾರವಾಗಿದ್ದು, ನಾವೂ ಅವುಗಳ ಮೂಲಕ ಮತತತ್ವಗಳನ್ನು ಹರಡಬೇಕು. ಅಲ್ಲದೆ ಕ್ರೈಸ್ತತತ್ವಪ್ರಸಾರದ ದೃಷ್ಟಿಯಿಂದ ಪತ್ರಿಕೆಯೊಂದನ್ನು ಹೊರಡಿಸುವ ಅಗತ್ಯವೂ ಇದೆ.''

ಇವುಗಳಲ್ಲಿ ಕೆಲವನ್ನು ರೈಸ್ ಅನುಷ್ಠಾನದಲ್ಲಿ ತಂದೇ ಇದ್ದನು. ಬೈಬಲ್‌ಬೋಧನೆ ಇದ್ದ 'ವೇದ ಸಂಗ್ರಹ'ವು ದೇಶೀಯ ವಾಚಕರ ಒಲವನ್ನು ಗಮನಿಸಿಯೇ ರಚಿತವಾಗಿತ್ತು (೧೮೪೪). ಇತ್ತ ಹಾಡುಗಳ ರಚನೆಯಲ್ಲಿ ಅವನದು ಗಣನೀಯ ಕೊಡುಗೆ. ದಾಸರ ಹಾಡುಗಳ ಮಾದರಿಯಲ್ಲಿ ರಚಿಸಲಾದ ಅವನ ಸ್ವತಂತ್ರ ಕೃತಿಗಳು 'ಕನ್ನಡ ಸಂಗೀತಗಳು' ಎಂಬ ಪುಸ್ತಕದಲ್ಲಿ ಸೇರ್ಪಡೆಯಾಗಿವೆ. ಇವೆರಡೂ ಪುಸ್ತಕಗಳು ಹತ್ತಾರು ಆವೃತ್ತಿಗಳನ್ನು ಕಾಣುವಷ್ಟು ಜನಪ್ರಿಯವಾದುವು. ರೈಸನು ಇತರ ಪ್ರೊಟೆಸ್ಟಂಟ್ ಸಂಸ್ಥೆಗಳ ಮಿಶನರಿಗಳೊಡನೆ ಆತ್ಮೀಯ ಸಂಬಂಧವನ್ನಿರಿಸಿಕೊಂಡು ಅವರ ವಾಙ್ಮಯೀನ ಕಾರ್ಯದಲ್ಲಿ ವಿಶೇಷವಾಗಿ ಸಹಕರಿಸಿದನು. ಬೈಬಲಿನ ಪರಿಷ್ಕೃತ ಅನುವಾದ ಕಾರ್ಯದಲ್ಲಿ ಇವನ ಪಾತ್ರ ಹಿರಿದಾದುದು. ಕ್ರೈಸ್ತ ಪತ್ರಿಕೆಯೊಂದರ ಅಗತ್ಯವಿತ್ತಲ್ಲವೆ 'ಅರುಣೋದಯ' ಎಂಬ ಹೆಸರಿನ ಕನ್ನಡ–ಆಂಗ್ಲ ಪತ್ರಿಕೆಯನ್ನು ಆರಂಭಿಸಿ (೧೮೬೨) ಆರೇಳು ವರ್ಷಗಳ ವರೆಗೆ ಅದನ್ನು ಉನ್ನತ ಮಟ್ಟದ ಪತ್ರಿಕೆಯನ್ನಾಗಿ ನಡೆಸಿಕೊಂಡು ಬಂದನು. ಈ ಸಚಿತ್ರ ಪತ್ರಿಕೆಯಲ್ಲಿ ಧಾರ್ಮಿಕ ವಿಚಾರಗಳು–ಎಂದರೆ ಸ್ವಮತ ಪ್ರಶಂಸೆ ಮತ್ತು ಹಿಂದೂ–ಮುಸ್ಲಿಮ್ ಮತಗಳ ಖಂಡನೆ ಇದ್ದುದು ಸಹಜವೇ. ಜೊತೆಗೆ ದೇಶೀ ಕ್ರೈಸ್ತರ ಜ್ಞಾನಾರ್ಜನೆ ಮತ್ತು ಅವರ ಧಾರ್ಮಿಕ ಸ್ಥಿರತೆ—ಇವನ್ನು ಗಮನದಲ್ಲಿರಿಸಿಕೊಂಡು ಪ್ರಪಂಚ ಪರಿಜ್ಞಾನ, ವಿಜ್ಞಾನ, ಕತೆಗಳು, ಜಾಣ್ನುಡಿಗಳು ಹಾಗೂ ಎಳೆಯರಿಗೆ ಉಪದೇಶ— ಇವುಗಳನ್ನೂ ಪ್ರತಿ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದನು.*

ಮಿಶನರಿ ಕಾರ್ಯದಲ್ಲಿ ದೀರ್ಘಕಾಲೀನ ಸೇವೆಯನ್ನು ಸಲ್ಲಿಸಿದ ರೈಸನನ್ನು ಎರಡು ಬಾರಿ ಸಾರ್ವಜನಿಕವಾಗಿ ಸತ್ಕರಿಸಲಾಯಿತು (೧೮೭೯, ೧೮೮೭). ಅವನ ಮಕ್ಕಳಲ್ಲಿ ಲೂಯಿ ರೈಸ್ (ಶಾಸನಪಿತಾಮಹ) ಹಾಗೂ ಎಡ್ವರ್ಡ್ ಪಿ. ರೈಸ್ (ಇಂಗ್ಲಿಶ್‌ನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದವ)–ಇವರು ಮಾತ್ರ ಕನ್ನಡ ವಾಙ್ಮಯ ಕಾರ್ಯವನ್ನು ಕೈಕೊಂಡವರಾಗಿದ್ದಾರೆ.

---

* ಎಂ. ವೆಂಕಟಕೃಷ್ಣಯ್ಯನವರ 'ವೈಸೂರ ವೃತ್ತಾಂತ ಬೋಧಿನಿ'ಯು ಈ ಪತ್ರಿಕೆಯನ್ನು ಸ್ವಾಗತಿಸಿತಾದರೂ ಅದರ ಭಾಷಾಸರಣಿಯನ್ನೂ, ಹಿಂದೂ ಧರ್ಮದ ಟೀಕೆ ಮಾಡುವ ಬಗೆಯನ್ನೂ ಖಂಡಿಸಿತೆಂಬುದನ್ನು ಪ್ರಾಸಂಗಿಕವಾಗಿ ನೆನೆಯಬಹುದು.

ವೆಸ್ಲೆಯನ್ ಮೆಥಾಡಿಸ್ಟರು

ವೆಸ್ಲೆಯನ್ ಮಿಶನರಿ ಜನರು ಶಿಕ್ಷಣ ಮತ್ತು ಮುದ್ರಣ ಕ್ಷೇತ್ರಗಳಲ್ಲಿ ಕೆಲಸ ಮಾಡಿದಷ್ಟು ಸಾಹಿತ್ಯರಂಗದಲ್ಲಿ ಶ್ರಮಿಸಲಿಲ್ಲ. ಆದರೆ ಅವರು ಪ್ರಕಟಿಸಿದ ಗ್ರಂಥಗಳಲ್ಲಿ ಹೆಚ್ಚಿನವು ಮೇಲ್ಮಟ್ಟದವಾಗಿವೆ; ಹಲವಾರು ಆವೃತ್ತಿಗಳನ್ನು ಕಂಡಿವೆ. ಈ ಸಂಸ್ಥೆಯವರು ಕಾರ್ಯಪ್ರವೃತ್ತರಾದ ೧೮೩೩ನೆಯ ವರ್ಷದಿಂದ ೧೯೧೩ರ ವರೆಗಿನ ಅವಧಿಯಲ್ಲಿ ಪ್ರಸಿದ್ಧಿ ಪಡೆದವರೆಂದರೆ, ಥಾಮಸ್ ಹಾಡ್ಸನ್, ಜಾನ್ ಗ್ಯಾರೆಟ್, ಡ್ಯಾನಿಯಲ್ ಸ್ಯಾಂಡರ್ಸನ್, ಜಾನ್ ಸ್ಟೀವೆನ್‌ಸನ್ ಹಾಗೂ ಹೆನ್ರಿ ಹೇಗ್.

ಥಾಮಸ್ ಹಾಡ್ಸನ್ (೧೮೩೩–೧೮೭೮): ಬೆಂಗಳೂರು, ಮೈಸೂರುಗಳಲ್ಲಿ ಇಂಗ್ಲಿಶ್ ಶಾಲೆಗಳನ್ನು ನಡೆಸಿದ್ದರ ಮೂಲಕ ಜನಾದರಣೀಯನಾಗಿದ್ದನು. ಅಂದಿನ ಮಿಶನರಿಗಳ ಹಾಗೂ ಅಧಿಕಾರಿಗಳ ಉಪಯೋಗಾರ್ಥವಾಗಿ ಜಾನ್ ಮೆಕ್ಕೆರೆಲ್ ವಿರಚಿತ 'Grammar of the Carnatica Language' ಎಂಬ ಇಂಗ್ಲಿಶ್ ಮಾಧ್ಯಮದ ವ್ಯಾಕರಣ ಮಾತ್ರ ಇದ್ದಿತು. ಇದು ಕನ್ನಡ ವ್ಯಾಕರಣದ ಎಲ್ಲ ಅಂಗಗಳನ್ನು ಒಳಗೊಂಡಿದ್ದರೂ ನಿರೂಪಣೆಯು ವ್ಯವಸ್ಥಿತವಾಗಿರಲಿಲ್ಲ. ಹೊಸಗನ್ನಡವನ್ನು ಅಭ್ಯಾಸ ಮಾಡುವವರಿಗೆ ಅನಗತ್ಯವಾದ ಅನೇಕ ವಿವರಗಳಿದ್ದುವು. ಹಾಡ್ಸನ್ ಅದನ್ನು ಆದ್ಯಾವತ್ತಾಗಿ ನವೀಕರಿಸಿ, Elementary Grarmmar of the Kannada Language (೧೮೫೯) ಎಂಬುದನ್ನು ರಚಿಸಿದನು. ಸಂಕ್ಷಿಪ್ತತೆ, ಶಾಸ್ತ್ರೀಯ ವಿಷಯ ವಿಭಜನೆ ಇದರ ವೈಶಿಷ್ಟ್ಯಗಳಾಗಿವೆ. ಇದರಿಂದ ವಿದೇಶೀಯರ ಕನ್ನಡ ಅಭ್ಯಾಸವು ಹೆಚ್ಚು ಸುಖಕರವಾಯಿತು.

ಜಾನ್ ಗ್ಯಾರೆಟ್ (ಸು. ೧೮೪೦–೧೮೭೦): ಬೆಂಗಳೂರಲ್ಲಿ ಸ್ಥಾಪಿತವಾದ ವೆಸ್ಲೆಯನ್ ಅಚ್ಚುಕೂಟದ 'ಮ್ಯಾನೇಜರ್' ಆಗಿ ಸುರುವಿಗೆ ಕೆಲಸ ಮಾಡಿದನಾದರೂ ಅವನ ಒಲವು ಶಿಕ್ಷಣ ಕಾರ್ಯದ ಕಡೆಗಿದ್ದಿತು. ಸ್ಥಳೀಯ ಇಂಗ್ಲಿಶ್ ಶಾಲೆಯ ಉತ್ಕರ್ಷಕ್ಕೆ ಗ್ಯಾರೆಟ್‌ನೇ ಕಾರಣನೆಂಬುದನ್ನು ಅರಿತ ಕಮಿಶನರ್ ಕಬ್ಬನ್ ಮೈಸೂರು ಸಂಸ್ಥಾನಕ್ಕೆ ಸೂಕ್ತವಾದ ಶೈಕ್ಷಣಿಕ ಯೋಜನೆಯನ್ನು ರೂಪಿಸಲು ಅವನನ್ನೇ ಕೇಳಿಕೊಂಡನು. ಹಾಗೆ ಸಾದರ ಪಡಿಸಿದ ಯೋಜನೆಯಿಂದ ಪ್ರೀತನಾಗಿ ಕಬ್ಬನ್ ಅವನನ್ನು ಶಿಕ್ಷಣಾಧಿಕಾರಿಯನ್ನಾಗಿ ಆಮಂತ್ರಿಸಿರಬೇಕು (೧೮೫೭). ಅಲ್ಲಿಂದ ಮುಂದೆ ಗ್ಯಾರೆಟ್ ಮಿಶನರಿಯಾಗಿ ಉಳಿದಂತಿಲ್ಲ.

ಪಠ್ಯಗಳು ಮತ್ತು ಪ್ರಾಚೀನ ಕೃತಿ ಸಂಪಾದನೆ–ಈ ಎರಡು ದಿಶೆಗಳಲ್ಲಿ ಗ್ಯಾರೆಟ್‌ನ ಗ್ರಂಥರಚನೆಯು ಸಾಗಿಬಂದಿತ್ತು. ರೀವ್‌ನ ಇಂಗ್ಲಿಶ್-ಕನ್ನಡ ಶಬ್ದಕೋಶವು ಶಾಲಾ ಮಕ್ಕಳಿಗೆ ಉಪಯುಕ್ತವಾಗಿದ್ದಿಲ್ಲವಾದ್ದರಿಂದ ಅಂಥ ಕೋಶವನ್ನು ತಯಾರಿಸಲು ಹಲವು ಮಿಶನರಿಗಳು ಇವನ ನೇತೃತ್ವದಲ್ಲಿ ಒಂದುಗೂಡಿದರು. ಅದರಂತೆಯೇ ಕನ್ನಡ – ಇಂಗ್ಲಿಶ್ ಕೋಶದ ಅಗತ್ಯವೂ ಇದ್ದಿತು, ವಿದ್ಯಾರ್ಥಿಗಳ ಪ್ರಯೋಜನಕ್ಕೆ ಒದಗುವಂತೆ,

ರೀವ್‌ನ ಕೃತಿಯ ಸಂಕ್ಷಿಪ್ತ ಆವೃತ್ತಿಯನ್ನು ಗ್ಯಾರೆಟ್ ತಾನೇ ರಚಿಸಿದನು, ಹದಿನಾರು ಸಾವಿರ ಶಬ್ದಗಳಿಗೆ ಚುಟುಕಿನಲ್ಲಿ ಇಂಗ್ಲಿಶ್ ಸಮಾನಾರ್ಥ ಕೊಡುವ ಈ ಕೋಶವು ಬಹು ಮಟ್ಟಿಗೆ ಪ್ರಾಮಾಣ್ಯವಾಗಿದೆ.

ಬ್ರಿಟಿಶ್ ಅಧಿಕಾರಿಗಳಿಗೂ ಮಿಶನರಿ ಜನರಿಗೂ ಶಬ್ದಮಣಿದರ್ಪಣವು ಒಂದು ಆವಶ್ಯಕ ಗ್ರಂಥವಾಗಿ ತೋರಿತ್ತಾದ್ದರಿಂದ, ಅವರು ಅದರ ಪ್ರತಿಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದರು. ಈ ಬಗೆಯ ಅದರ ಮಹತ್ವವನ್ನು ಗಮನಿಸಿ, ಗ್ಯಾರೆಟ್ ಅದನ್ನು ಹೊರತಂದನು (೧೮೬೮). ಇದುವೆ ಈ ಗ್ರಂಥದ ಮೊದಲ ಆವೃತ್ತಿ.

ಇದಕ್ಕಿಂತ ಹೆಚ್ಚು ಮಹತ್ವದ ಕೃತಿಯೆಂದರೆ 'ಬಹುಭಾಷಾ ಭಗವದ್ಗೀತೆ'. ಇದರ ಹೊಳಹು ಅವನದೇ ಆಗಿದ್ದಿತಲ್ಲದೆ, ಕನ್ನಡಾನುವಾದವನ್ನು ತಾನೇ ಸಿದ್ಧ ಪಡಿಸಿದನು. ಅದನ್ನು ತಳಹದಿಯಾಗಿಟ್ಟುಕೊಂಡು, ಇಂಗ್ಲಿಶ್ – ಲ್ಯಾಟಿನ್ ಇವನ್ನೂ ಸೇರಿಸಿದನು. ಜೊತೆಗೆ ಭಗವದ್ಗೀತೆಯನ್ನು ಕುರಿತು ಅದುವರೆಗೆ ಇದ್ದ ಸಾಧನಗಳನ್ನು ಬಳಸಿಕೊಂಡು, ಮುನ್ನುಡಿ, ವಿಮರ್ಶೆ ಮುಂತಾದವುಗಳನ್ನು ಸೇರಿಸಿದನು. ವಾರನ್ ಹೇಸ್ಟಿಂಗ್ಸ್‌ನ ಮತ್ತು ಬ್ಯಾರನ್ ಹಂಬೋಲ್ಟ್ ಎಂಬ ಜರ್ಮನಿಗನ ಬರಹಗಳೂ ಇದಕ್ಕೆ ಸೇರಿದ್ದು ಜಗತ್ತಿನಲ್ಲಿಯೆ ಅತ್ಯಂತ ವಿಶಿಷ್ಟ ಆವೃತ್ತಿಯೆನಿಸಿದೆ. ಅವನ ಇನ್ನೊಂದು ಕೃತಿ Classical Dictionary of India ಎಂಬುದು. ಸುಪ್ರಸಿದ್ಧ 'ಪುರಾಣ ನಾಮಚೂಡಾಮಣಿ'ಯ ಮಾದರಿಯಲ್ಲಿಯ ಈ ಹಿಂದೂ ನಾಮಕೋಶಕ್ಕೆ ಅವನ ಹಳಗನ್ನಡ ಕಾವ್ಯಗಳ ವ್ಯಾಸಂಗವು ಹೆಚ್ಚಿನ ಪ್ರೇರಣೆಯಿತ್ತಿತಲ್ಲದೆ, ಪೌರಾಣಿಕ ವ್ಯಕ್ತಿ, ಘಟನೆಗಳ ಪ್ರಾಥಮಿಕ ಮಾಹಿತಿಯನ್ನು ಕನ್ನಡ ಕಾವ್ಯಗಳಿಂದಲೇ ಆಯ್ದುಕೊಂಡನು. ಇವೆರಡೂ ಕೃತಿಗಳು ಅವನಿಗೆ ಅಖಿಲ ಭಾರತ ಮನ್ನಣೆಯನ್ನು ತಂದುಕೊಟ್ಟವು.

ಡ್ಯಾನಿಯೆಲ್ ಸಾಂಡರ್ಸನ್ (ಸು. ೧೮೪೦ – ೧೮೭೦) : ಕನ್ನಡ ಭಾಷೆ, ಸಾಹಿತ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿದ ಮಿಶನರಿಗಳಲ್ಲಿ ಇವನಿಗೆ ವಿಶೇಷ ಪ್ರಾಶಸ್ತ್ಯ ಸಲ್ಲಬೇಕು. ಗ್ಯಾರೆಟ್‌ನ ಪೂರ್ವೋಕ್ತ 'ಕನ್ನಡ – ಇಂಗ್ಲಿಶ್' ಕೋಶದ ಪರಿಷ್ಕೃತ ಆವೃತ್ತಿಯನ್ನು ಸಿದ್ಧಪಡಿಸಿದ್ದಾನೆ. ಜೈಮಿನಿಭಾರತದ ಮೊದಲಿನ ಆರು ಸಂಧಿಗಳನ್ನು ಇಂಗ್ಲಿಶ್ ಅನುವಾದದೊಡನೆ ಪ್ರಕಟಿಸಿದ್ದಾನೆ.

ವಿದೇಶೀಯರಿಗೆ ಕನ್ನಡ ಭಾಷೆಯ ಪರಿಚಯವನ್ನು ಹಂತಹಂತವಾಗಿ ಮಾಡಿ ಕೊಡುವ ಉದ್ದೇಶದಿಂದ ಸ್ಯಾಂಡರ್ಸನ್ ನಾಲ್ಕು 'ಕಥಾ ಸಂಗ್ರಹ'ಗಳ ಹೊಳಹನ್ನು ಹಾಕಿಕೊಂಡಿದ್ದನು. ಅವುಗಳಲ್ಲಿ ಮೊದಲಿನದು ಮಾತ್ರ ಹೊರಬಂದಿತು. ತಿಳಿಯಾದ, ಸುಲಭ ಗದ್ಯದಲ್ಲಿರುವ ಈ ಗ್ರಂಥವು ಬಹುಕಾಲದ ವರೆಗೆ ಯುೂರೋಪಿಯನ್ನರ ಕನ್ನಡ ಪರೀಕ್ಷೆಗೆ ಪಠ್ಯವಾಗಿದ್ದಿತು. ಜೊತೆಗೆ ದೇಶೀಯರಿಗೂ ಪ್ರಿಯವಾದ ಕಥನಪುಸ್ತಕವಾಗಿ ಬಾಳಿತು. ಆದರೆ ಇದರ ಪೀಠಿಕೆಯಲ್ಲಿ ಅವನು ನಮ್ಮ ಪ್ರಾಚೀನ ಕೃತಿಗಳನ್ನು ತುಸು ಟೀಕಿಸಿದ್ದಾನೆ: European students are.... disgusted with the revolting obscenity that taints the writing of even the best authors. It

may justly be questioned weather there exists any native work, except a grammar or vocabulary that could be published as a whole, without a violent outrage to common decency.

ಅಶ್ಲೀಲವಲ್ಲದ, ರುಚಿ-ಶುದ್ಧಿ ಇರುವ ಕನ್ನಡ ಗ್ರಂಥಗಳೇ ಇಲ್ಲ-ಎನ್ನುವ ಅವನ ಅಭಿಪ್ರಾಯ ದುಡುಕಿನದಾಗಿದೆ. ಹತ್ತೊಂಬತ್ತನೇ ಶತಮಾನದ ಇಂಗ್ಲಿಶ್ ಲೇಖಕರಲ್ಲಿ ಕಂಡು ಬಂದ ಕಡುನೀತಿಮತ್ತೆ (puritanism) ಮತ್ತು ಧಾರ್ಮಿಕ ವೃತ್ತಿ-ಪ್ರವೃತ್ತಿ ಇವುಗಳಿಂದಾಗಿ ಸ್ಯಾಂಡರ್ಸನ್ ಹಾಗೆ ಅಭಿಪ್ರಾಯಪಟ್ಟಿರಲು ಸಾಕು.

ಜೆ. ಸ್ಟೀವೆನ್ಸ್‌ನ್ (೧೮೫೦-೧೮೮೦) : ಸ್ಟೀವೆನ್ಸನ್‌ನ ಗ್ರಂಥರಚನೆಯಾವರೂ ಪಠ್ಯಪುಸ್ತಕಗಳಿಂದ ಮೊದಲಾಯಿತು. ಮುಂದೆ, 'ಮುದ್ರಾಮಂಜೂಷ' ವನ್ನು ಪ್ರಕಟಿಸಿದವನೆಂದು ಅವನದು ಖ್ಯಾತಿ ವಿಶೇಷ. ಕೆಂಪುನಾರಾಯಣನ ಈ ಕೃತಿಯನ್ನು, ಸಂಪಾದಿಸುವಲ್ಲಿ ತನ್ನ ಮನಬಂದ ಹಾಗೆ ಬದಲಾವಣೆ ಮಾಡಿಕೊಂಡಿದ್ದಾನೆ. ಅವನ ದೃಷ್ಟಿಯಲ್ಲಿ ಬದಲಾವಣೆಗಳ ಹಿನ್ನೆಲೆ ಇದು : 'ವಿಶ್ವವಿದ್ಯಾಲಯದಲ್ಲಿ ಕನ್ನಡವನ್ನು ಕುರಿತೋದುವವರಿಗೆ ಪಠ್ಯಪುಸ್ತಕವಾಗಿ ಮತ್ತು ಸರಕಾರದ ಸೂಚನೆಗನುಸಾರವಾಗಿ ಉಪಯುಕ್ತವಾದ ಕಥನ ಕಾರ್ಯವನ್ನು ಮೂಡಿಸಬೇಕೆಂಬ ದೃಷ್ಟಿಯಿಂದ, ಹಿತವಲ್ಲದ ಭಾಗಗಳನ್ನು ಬಿಟ್ಟು ವೈಪರೀತ್ಯಗಳನ್ನು ಕಡಿಮೆ ಮಾಡಿ, ಅತಿಯಾಗಿರುವ ವಿವರಗಳು ಸಂಕ್ಷೇಪಿಸಿಯದೆ.' ಆದರೆ ಮೂಲ ಲೇಖಕನ ಆಶಯವನ್ನು ಕಡೆಗಣಿಸಿ, ಅನೇಕ ಭಾಗಗಳನ್ನು ಹಾಗೆ ಸಂಕ್ಷೇಪಿಸುವಲ್ಲಿ ಸ್ಟೀವೆನ್ಸನ್ ಮಿತಿಮೀರಿ ಸ್ವಾತಂತ್ರ್ಯ ವಹಿಸಿದ್ದಾನೆ.

ಹೆನ್ರಿ ಹೇಗ್ (೧೮೭೦-೧೯೧೦) : ಬೈಬಲಿನ ದ್ವಿತೀಯ ಪರಿಷ್ಕರಣ ಸಮಿತಿಯಲ್ಲಿದ್ದುಕೊಂಡು, ಇಂದು ಪ್ರಚಲಿತವಿರುವ ಬೈಬಲಿನ ಅಧಿಕೃತ ಆವೃತ್ತಿಯ ತಯಾರಿಕೆಯಲ್ಲಿ ಹೇಗ್ ಪ್ರಮುಖ ಪಾತ್ರ ವಹಿಸಿದ್ದನು. ಜೊತೆಗೆ ಹಲವಾರು ಮತೀಯ ಪುಸ್ತಕಗಳನ್ನೂ ಹೊರತಂದನು. ಹೇಗ್‌ನ ಮಹತ್ವದ ಗ್ರಂಥೋದ್ಯಮವೆಂದು Pice paper on Indian reforms ಮಾಲಿಕೆಯನ್ನು ಹೆಸರಿಸಬಹುದು. ಪ್ರಚಲಿತ ವಿಷಯಗಳ ಮೇಲೆ ಉಪಯುಕ್ತವಾದ ಚಿಕ್ಕ ಪುಸ್ತಿಕೆಗಳಿವು (ಸುಮಾರು ೫೦ ಇವೆ). 'ವೃತ್ತಾಂತ ಪತ್ರಿಕೆ' ಎಂಬ ಪ್ರಸಿದ್ಧ ನಿಯತಕಾಲಿಕವನ್ನು ಹೇಗ್ ಮೈಸೂರಿನಿಂದ ಅನೇಕ ವರ್ಷಗಳ ಕಾಲ ಯಶಸ್ವಿಯಾಗಿ ಹೊರಡಿಸಿದನು.

ಬಾಸೆಲ್ ಮಿಶನ್

ಹೊಸಗನ್ನಡ ಸಾಹಿತ್ಯರಂಗದಲ್ಲಿ ಕಾರ್ಯನಿರತರಾದ ಮಿಶನರಿ ಸಂಸ್ಥೆಗಳಲ್ಲಿ ಬಾಸೆಲ್ ಮಿಶನ್‌ದವರ ಕಾರ್ಯವು ಗುಣ-ಗಾತ್ರಗಳೆರಡರಲ್ಲೂ ಅ-ದ್ವಿತೀಯವಾದುದು. ಇದರ ಸಂಸ್ಥಾಪಕ ಸ್ಯಾಮ್ಯುಯೆಲ್ ಹೆಬಿಕ್ ಎಂಬವನು (೧೮೩೪). ಇತರ ಪ್ರೊಟೆಸ್ಟಂಟ್ ಮಿಶನ್‌ಗಳಂತೆ ಇವರೂ ಗ್ರಂಥೋದ್ಯಮ ಮತ್ತು ಶಾಲಾ

ನೆಗೆ ವಿಶೇಷ ಪ್ರಾಶಸ್ತ್ಯ ಕೊಟ್ಟರು. ಅವರ ಮುದ್ರಣಕಾರ್ಯವನ್ನು 'ಸ್ಥೂಲ ನೋಟ'ದಲ್ಲಿ ಹೇಳಿದ್ದಿದೆ. ವಿದ್ಯಾಕ್ಷೇತ್ರದಲ್ಲಿಯ ಅವರ ಪ್ರಗತಿಯಾದರೂ ಬೆರಗು ಗೊಳಿಸುವಂತಹದೇ ಆಗಿದೆ. ಇಲ್ಲಿ ನೆಲೆಯೂರಿದ ಇಪ್ಪತ್ತು ವರ್ಷಗಳಷ್ಟೊತ್ತಿಗೆ ೮ ಹೈಸ್ಕೂಲುಗಳನ್ನೂ ೫೦ ಪ್ರಾಥಮಿಕ ಶಾಲೆಗಳನ್ನೂ ನಡೆಸುತ್ತಿದ್ದರು. ಪಠ್ಯ ಪುಸ್ತಕ ಗಳನ್ನು ರಚಿಸುವ ನಿಮಿತ್ತದಿಂದ ಕೆಲವು ಪ್ರಾಚೀನ ಕೃತಿಗಳನ್ನು ಶಾಸ್ತ್ರೀಯ ರೀತಿಯಲ್ಲಿ ಸಂಪಾದಿಸಿ ಪ್ರಕಟಿಸಿದರು. ಪ್ರಚಲಿತ ವಿಷಯಗಳನ್ನು, ಅವರಂತೆ ವೈಜ್ಞಾನಿಕ ವಿಚಾರಗಳನ್ನೊಳಗೊಂಡ ಪುಸ್ತಕಗಳನ್ನು ಹೊರತಂದರು. ಈ ದಿಶೆಯಲ್ಲಿ ಬಾಸೆಲ್ ಮಿಶನ್‌ದವರು ಮೊದಲಿಗರಲ್ಲದೆ, ಪ್ರಮುಖರೂ ಆಗಿದ್ದರು.

ಕ್ರಿ.ಶ. ೧೮೩೪ ರಿಂದ ಪ್ರಥಮ ಮಹಾಯುದ್ಧಕಾಲದ ವರೆಗೆ, ಈ ಸಂಸ್ಥೆಯ ವತಿಯಿಂದ ನೂರಕ್ಕೆ ಮೇಲ್ಪಟ್ಟು ಮಿಶನರಿ ಜನರು ನಮ್ಮಲ್ಲಿಗೆ ಬಂದಿದ್ದಾರೆ. ಅವರಲ್ಲಿ ಅರ್ಧವಷ್ಟು ಜನ ಸಾಹಿತ್ಯಿಕ ರಂಗದಲ್ಲಿ ಕಾರ್ಯವೆಸಗಿದರು. ಇಂಥವರಲ್ಲಿ ಎದ್ದು ಕಾಣುವ ಹೆಸರುಗಳೆಂದರೆ ಹರ್ಮನ್ ಮೊಗ್ಲಿಂಗ್ ಹಾಗೂ ಫರ್ಡಿನಾಂಡ್ ಕಿಟೆಲ್‌ರದು. ಕ್ರಿ.ಶ. ೧೮೬೦ ರಲ್ಲಿ ಮೊಗ್ಲಿಂಗ್ ಸ್ವದೇಶಕ್ಕೆ ಹಿಂತಿರುಗಿದನಾದ್ದರಿಂದ ಅಲ್ಲಿಯವರೆಗಿನ ಅವರ ಸಾಹಿತ್ಯಿಕ ರಚನೆಗೆ ಮೊಗ್ಲಿಂಗ್ ಯುಗವೆಂದೂ, ಮುಂದಿನದಕ್ಕೆ ಕಿಟೆಲ್ ಯುಗವೆಂದೂ ಕರೆಯಬಹುದು.

ಮೊಗ್ಲಿಂಗ್ ಯುಗ

ಹರ್ಮನ್ ಮೊಗ್ಲಿಂಗ್ (೧೮೩೬–೧೮೬೦) ದೇಶಾಂತರಕ್ಕೆ ಹೋಗಿ ಮತಪ್ರಸಾರ ಮಾಡುವುದಕ್ಕೆ ಹೇಳಿ ಮಾಡಿಸಿದ ವ್ಯಕ್ತಿಯಾಗಿದ್ದನು. ಭಾವುಕತೆ, ಕಷ್ಟಸಹಿಷ್ಣುತೆ, ವಾಕ್ಪಟುತ್ವ, ಹಾಗೂ ಭಾಷಾಪ್ರಭುತ್ವ–ಇವು ಅವನಲ್ಲಿಯ ಎದ್ದುಕಾಣುವ ಗುಣ ಗಳಾಗಿದ್ದುವು. ತೀಬಿಂಜೆನ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣವನ್ನು ಮುಗಿಸಿಕೊಂಡು, ಬಾಸೆಲ್‌ಗೆ ತಾನಾಗಿ ಹೋಗಿ 'ಸುವಾರ್ತಿಕ' ನಾಗುವ ಅಪೇಕ್ಷೆಯನ್ನು ವ್ಯಕ್ತಪಡಿಸಿದನು, ಅದಾಗಲೇ ಹೆಬಿಕ್ ಮಂಗಳೂರಿಗೆ ಬಂದು ಮಿಶನ್ ಕೇಂದ್ರವನ್ನು ಸ್ಥಾಪಿಸಿದ್ದನಷ್ಟೆ. ಇಲ್ಲಿಯ ಭಾಷೆಗಳನ್ನು ತಿಳಿಯಲು ಅಸಮರ್ಥನಾದ್ದರಿಂದ, ಬಾಸೆಲ್ ಕೇಂದ್ರ ಕಚೇರಿ ಯವರು ಭಾಷಾತಜ್ಞ ಮೊಗ್ಲಿಂಗನನ್ನು ಭಾರತಕ್ಕೆ ಕಳಿಸಿಕೊಟ್ಟರು.

ನಮ್ಮ ನಾಡಿನಲ್ಲಿ ನೆಲೆಸಿದ್ದ ಎರಡು ದಶಕಗಳ ಕಾಲದಲ್ಲಿ ಅವನು ಒಂದೆಡೆ ನಿಲ್ಲದೆ ಸುತ್ತಾಡಿದನಾದರೂ, ಸ್ಥೂಲವಾಗಿ ಹೇಳುವುದಾದರೆ ಮಂಗಳೂರು, ಅನಂತರ ಧಾರವಾಡ/ಹುಬ್ಬಳ್ಳಿ, ಮತ್ತು ಉತ್ತರಾರ್ಧ ಕಾಲದಲ್ಲಿ ಮಡಿಕೇರಿ—ಅವನ ಕಾರ್ಯ ಕ್ಷೇತ್ರಗಳಾಗಿದ್ದುವು. ಧರ್ಮಪ್ರಸಾರ, ಸಾಹಿತ್ಯ ಹಾಗೂ ಶಿಕ್ಷಣ—ಈ ಮೂರು ರಂಗಗಳಲ್ಲಿ ಅನುಪಮ ಕಾರ್ಯವೆಸಗಿದ ಅವನು, ಬಾಸೆಲ್ ಮಿಶನ್ನಿನ ನೇತಾರ ನಾಗಿದ್ದುದರಲ್ಲಿ ಸಂದೇಹವಿಲ್ಲ. ತಾನು ಮತಾಂತರಗೊಳಿಸಿದ್ದ ಆನಂದರಾಯ ಕೌಂಡಿಣ್ಯ ಮತ್ತು ಕೌಶಿಕ ಬಂಧುಗಳುಸಹ ಸಾಹಿತ್ಯಿಕ ಕಾರ್ಯದಲ್ಲಿ ತೊಡಗುವಂತೆ ಮಾಡಿದನು.

ಇಲ್ಲಿಯ ವಾಸ್ತವ್ಯದ ಉತ್ತರಾವಧಿಯಲ್ಲಿ ಕೊಡಗಿನಲ್ಲಿದ್ದನಾದ್ದರಿಂದ, ಆ ಪ್ರದೇಶದ ಪರಿಚಯುವನ್ನು 'Coorg Memoirs' ಗ್ರಂಥದ ಮೂಲಕ ಮಾಡಿಕೊಟ್ಟಿದ್ದಾನೆ, ಕೊಡವರ ಶಿಕ್ಷಣಕ್ಕಾಗಿಯೂ ಪರಿಶ್ರಮ ಪಟ್ಟಿದ್ದಾನೆ.

ಹೆಬಿಕ್ ಮತ್ತು ಮೊಗ್ಲಿಂಗರ ಸಾಹಚರ್ಯದಲ್ಲಿ 'ಹೃದಯದರ್ಪಣ' ವೆಂಬ ಚಿಕ್ಕ ಕೃತಿಯು ರಚನೆಯಾಯ್ತು, ಇಸ್ಪೀಟಿನ ಎಲೆಗಳಿಗೆ ಅಂಟಿಸಿದ ಚಿತ್ರಗಳ ಮೂಲಕ, ಮಾನವ ಹೃದಯದಲ್ಲಿ ಪ್ರಕೃತಿ ಸಹಜವಾದದ್ದು, ಹಾಳಾದದ್ದು, ದೇವರಿಂದ ರಕ್ಷಿತ ವಾದದ್ದು—ಎಂಬ ವಿವಿಧ ರೂಪಗಳನ್ನು ತೋರಿಸಿ, ಹೆಬಿಕ್ ಮತಪ್ರಸಾರ ಮಾಡು ತ್ತಿದ್ದನು. ಅವನ ವಿವರಣೆಯನ್ನು ಆಧರಿಸಿ ಮೊಗ್ಲಿಂಗ್ ಈ ಪುಸ್ತಿಕೆಯನ್ನು ರಚಿಸಿದ್ದು ಅನ್ಯ ಭಾಷೆಗಳಲ್ಲಿ ಅನುವಾದಗೊಳ್ಳುವಷ್ಟು ಇದೊಂದು ಮೌಲಿಕ ಕೃತಿಯಾಗಿದೆ. ಮೊಗ್ಲಿಂಗನು ಆನಂದರಾಯ ಕೌಂಡಿಣ್ಯನ ಮತಾಂತರವನ್ನು ಆಧರಿಸಿ 'ಈರಾರು ಪತ್ರಿಕೆ' ಎಂಬ ಕೃತಿಯನ್ನು ಹೊರತಂದನು. ಈರಾರು (ಎಂದರೆ ೧೨) ಪತ್ರಉತ್ತರ ಗಳುಳ್ಳ ಈ ಪುಸ್ತಿಕೆಯು ಕನ್ನಡದ ಆದ್ಯ ಪತ್ರಸಾಹಿತ್ಯವಾಗಿದೆ. ನಡೆದ ಘಟನೆಯೊಂದಕ್ಕೆ ಪತ್ರ ಮೂಲಕ ಕಥನಸ್ವರೂಪವನ್ನುಕೊಟ್ಟು ಬರೆಯಲಾದ ಈ ಕೃತಿಯೂ ಇಂದಿಗೂ ವಾಚನೀಯವಾಗಿದೆ.

ಮೊಗ್ಲಿಂಗ್ ಕ್ರೈಸ್ತ ಮತ ಪ್ರಸಾರಕ್ಕೆ ಅನುಕೂಲವಾಗುವಂತೆ ಹಲವು ಮಹತ್ವ ಪೂರ್ಣ ಗ್ರಂಥಗಳನ್ನು ರಚಿಸಿದನು. ಅವುಗಳಲ್ಲಿ ಜಾತಿ ವಿಚಾರಣೆ (೧೮೪೫) ಹಾಗೂ ದೇವ ವಿಚಾರಣೆ (೧೮೫೨) ಇವು ಯಾವುದೇ ಕೃತಿಗಳ ಅನುವಾದಗಳಾಗಿರದೇ, ಸ್ವತಂತ್ರ ವೆಂದು ತೋರುತ್ತವೆ. ಹೊಸಗನ್ನಡದ ಪ್ರಬಂಧ ಸಾಹಿತ್ಯಕ್ಕೆ ಸಮಾಪವರ್ತಿಯಾಗಿವೆ.

ಇಲ್ಲಿಯ ಜನಕ್ಕೆ ಪ್ರಪಂಚ ಪರಿಚಯುವನ್ನು ಮಾಡಿಕೊಡುವ ಸ್ಪಷ್ಟ ಉದ್ದೇಶ ದಿಂದ ಮೊಗ್ಲಿಂಗ್ ೧೮೪೩ರಲ್ಲಿ ಪಕ್ಷಪತ್ರಿಕೆಯೊಂದನ್ನು ಹೊರಡಿಸತೊಡಗಿದ. ಇದುವೆ ಕನ್ನಡದ ಪ್ರಪ್ರಥಮ ಪತ್ರಿಕೆ—'ಮಂಗಳೂರ ಸಮಾಚಾರ'. ಇದರಲ್ಲಿ ಅವನು ಕೊಡಬೇಕೆಂದಿದ್ದ ವಿವಿಧ ಸಮಾಚಾರಗಳೆಂದರೆ—

"—ಪೂರ ವರ್ತಮಾನಗಳು,
—ಸರಕಾರೀ ನಿರೂಪಗಳು,
—ಸುಬುದ್ಧಿಯನ್ನು ಹೇಳುವ ಸಾಮತಿಗಳು, ಹಾಡುಗಳು, ಕಥೆಗಳು ;
ಸರ್ವರಾಜ್ಯ ವರ್ತಮಾನಗಳು."

ಪತ್ರಿಕೆಯಲ್ಲಿ ಬಂದ 'ಪೂರ ವರ್ತಮಾನ'ಗಳನ್ನು ಓದಿದಾಗ ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನದ ಒಂದು ನಿಟ್ಟಿನ ಚಿತ್ರಣ ಕಣ್ಣಿಗೆ ಬೀಳುತ್ತದೆ. ಮೊಗ್ಲಿಂಗ್ ಈ ಸಾಧನವನ್ನು ಸ್ವಮತಪ್ರಸಾರಕ್ಕೆಂದು ವಿಶೇಷವಾಗಿ ಬಳಸದೇ, ಎಲ್ಲ ವರ್ಗದವರನ್ನು ಉದ್ದೇಶಿಸಿದ ಪತ್ರಿಕೆಯಾಗಿ ಉಳಿಸಿಕೊಂಡನು. ಕ್ರೈಸ್ತ ವಿಚಾರಗಳು ಬಂದ ಒಂದು ಸಂದರ್ಭವೆಂದರೆ, ದಾಸರ ಪದ ಇಲ್ಲವೆ ಸಂಸ್ಕೃತ ಶ್ಲೋಕವನ್ನು ಉದ್ಧರಿಸಿ ಅವಕ್ಕೆ ಸಮಾನವಾದ ಬೈಬಲ್ ಉಕ್ತಿಗಳನ್ನು ಹೇಳಿದುದು. ವಾಚಕರ ಮನರಂಜನೆಗೂ ಗಮನ

ವಿಸ್ತಿರುವನಾದರೂ, ನಾಲ್ಕೇ ಪುಟಗಳ ಪರಿಮಿತಿಯಿಂದಾಗಿ ಅದಕ್ಕೆ ಹೆಚ್ಚು ಇಂಬು ದೊರೆತಿಲ್ಲ. ಪತ್ರಿಕೆಯ ಬಹುಭಾಗವನ್ನು ಅನ್ಯ ರಾಜ್ಯ ವರ್ತಮಾನಗಳು ಆಕ್ರಮಿಸಿವೆ : ಲಾಹೋರ, ಗ್ವಾಲಿಯರ್ ಮುಂತಾದ ಸಂಸ್ಥಾನಗಳ ಖಾಲಸಾ, ಹಿಂದುಸ್ಥಾನದ ಖಾನೇ ಸುಮಾರಿ, ಕಾಬೂಲ, ಚೀನಗಳಲ್ಲಿಯ ಯುದ್ಧ ಇತ್ಯಾದಿ. ಅಂಚೆಯ ವ್ಯವಸ್ಥೆ ವ್ಯಾಪಕವಾಗಿ ಇರದಿದ್ದಾಗ ಮೊಗ್ಲಿಂಗ್ ಸುದ್ದಿಗಳನ್ನು ಅನೆಂತು ದೊರಕಿಸುತ್ತಿದ್ದನೊ ! ಇಂತು ಕನ್ನಡದ ಈ ಚೊಚ್ಚಲು ಪತ್ರಿಕೆಯು ಹಸಿಬಿಸಿಯಾದ ಎತ್ತುಗಡೆಯಾಗಿರದೇ ಆಧುನಿಕ ಪತ್ರಿಕೋದ್ಯಮದ ಹೆಚ್ಚಿನ ಲಕ್ಷಣಗಳನ್ನು ಒಳಗೊಂಡಿದ್ದಿತು.

ಪತ್ರಿಕೆಯು ಕಲ್ಲಚ್ಚಿನಲ್ಲಿ ಸುಂದರವಾಗಿ ಮುದ್ರಣವಾಗುತ್ತಿತ್ತು. ಆದರೆ ಬಿಡಿ ಮೊಳೆಗಳಿಂದ ಮುದ್ರಿಸಿ ಹೆಚ್ಚು ಮಾಹಿತಿಯನ್ನು ಒದಗಿಸಬೇಕು; ನಾಡಿನಲ್ಲಿ ಇತರತ್ರ ಕೂಡ ಪ್ರಸಾರವಾಗಬೇಕೆಂದು ಯೋಚಿಸಿ, ಮೊಗ್ಲಿಂಗ್ ಅದನ್ನು ಬಳ್ಳಾರಿಯಲ್ಲಿ ಪ್ರಕಟಿಸಿದನು. ಪತ್ರಿಕೆಗೆ ಅಖಿಲ ಕರ್ನಾಟಕ ವ್ಯಾಪ್ತಿ ಬರಲೆಂದು ಪತ್ರಿಕೆಯ ಹೆಸರನ್ನು 'ಕಂನಡ ಸಮಾಚಾರ'ವೆಂಬುದಾಗಿ ಬದಲಿಸಿದನು. ಆದರೆ ಮಂಗಳೂರಲ್ಲಿ ಕುಳಿತು ವ್ಯವಸ್ಥಿತವಾಗಿ ಲೇಖನ-ಸಂಪಾದನ ಕಾರ್ಯ ಮಾಡುವುದು ಮೊಗ್ಲಿಂಗನಿಗೆ ಸಾಧ್ಯವಾಗಲಿಲ್ಲ. ಪತ್ರಿಕೆ ಕೆಲವು ತಿಂಗಳಲ್ಲಿ ನಿಂತುಹೋಯಿತು. ಮಿಶನರಿಗಳ ಪತ್ರಿಕಾ ರಂಗದಲ್ಲಿ ಮುಂದಿನ ನಡೆಯಾದರೂ ಮೊಗ್ಲಿಂಗನದೇ ಆಗಿದೆ. 'ಕಂನಡ ವಾರ್ತಿಕ'ವೆಂಬ ಪತ್ರಿಕೆಯನ್ನು ಜುಲೈ ೧೮೫೭ರಲ್ಲಿ ಹೊರಡಿಸತೊಡಗಿದನು. ಇದು ಕೂಡ ಅಲ್ಪಾಯುಷಿಯಾಗಿ ಬಾಳಿತು–ಮೊಗ್ಲಿಂಗನ ಇತರ ಕಾರ್ಯಬಾಹುಲ್ಯದಿಂದಾಗಿ.

ಜನತೆಯೊಡನೆ ನಿಕಟ ಸಂಪರ್ಕ ಬಂದುದರ ಫಲವಾಗಿ ಕನ್ನಡ ಗಾದೆ ಮಾತುಗಳನ್ನು ಆಗೀಗ ಸಂಗ್ರಹಿಸುತ್ತಲಿದ್ದ ಮೊಗ್ಲಿಂಗ್ ೧೮೪೭ರಲ್ಲಿ ಮೂರು ಸಾವಿರ ಗಾದೆಗಳ ಸಂಕಲನವೊಂದನ್ನು ಪ್ರಕಟಿಸಿದನು. ಕನ್ನಡ ಲೋಕೋಕ್ತಿಗಳ ಸಾಮಾಜಿಕ ಮಹತ್ವವನ್ನು ಅರಿತವರಲ್ಲಿಯೂ ಪ್ರಥಮನೆನಿಸಿದನು.

ಬಿ. ಎಲ್. ರೈಸ್ 'ಬಿಬ್ಲಿಯಾಥೆಕಾ ಕರ್ನಾಟಿಕಾ' ಮಾಲೆಯ ಮೂಲಕ ಹಳಗನ್ನಡ ಕೃತಿಗಳನ್ನು ಪ್ರಕಟಿಸಿದ್ದಾರಷ್ಟೆ (೧೮೮೪–). ಅದಕ್ಕಿಂತ ಮೊದಲೇ ಮೊಗ್ಲಿಂಗ್ ಆ ಹೆಸರಿನಲ್ಲಿ ಜೈಮಿನಿ ಭಾರತ, ತೊರವೆ ರಾಮಾಯಣ, ಕುಮಾರವ್ಯಾಸಭಾರತ, ಬಸವ ಪುರಾಣ, ಚೆನ್ನಬಸವ ಪುರಾಣ—ಇವನ್ನು ಪ್ರಕಟಿಸಿದ್ದಾನೆ (೧೮೪೮-೧೮೫೮). ದುರ್ಮಿಳವೂ ಮಹತ್ವಪೂರ್ಣವೂ ಆದ ಈ ಕನ್ನಡ ಕಾವ್ಯಗಳನ್ನು ಸಂಪಾದಿಸಿ, ಪ್ರಕಟಿಸಿದನೆಂದು ಅವನಿಗೆ ತೀಬೆಂಜೆನ್ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿಯನ್ನು ದಯಪಾಲಿಸಿತು (೧೮೫೮). ಇದು ಕನ್ನಡದ ಕೆಲಸಕ್ಕಾಗಿ ದೊರೆತ ಮೊದಲ ಪಿಎಚ್. ಡಿ.—ಅದೂ ವಿದೇಶದಲ್ಲಿ !

ದಾಸರ ಪದಗಳ ಪ್ರಥಮ ಮುದ್ರಿತ ಸಂಗ್ರಹವಾದರೂ 'ಬಿಬ್ಲಿ. ಕರ್ನಾ.' ಮಾಲಿಕೆಯಲ್ಲಿ ಹೊರಬಂದಿತ್ತು. ಮೊಗ್ಲಿಂಗ್ ಪುರಂದರ, ಕನಕದಾಸರ ಕೆಲವು ಪದಗಳನ್ನು ಜರ್ಮನ್ ಭಾಷೆಗೆ ಪರಿವರ್ತಿಸಿ, ಸುಪ್ರಸಿದ್ಧ ZDMG ಪತ್ರಿಕೆಯಲ್ಲಿ ಪ್ರಕಟಿಸಿದನು

(೧೮೬೪). ಜೈಮಿನಿಭಾರತದ ಕೆಲ ಸರ್ಗಗಳ ಅನುವಾದವೂ ಈ ಪತ್ರಿಕೆಯಲ್ಲಿ ಬಂದಿದೆ. ಕನ್ನಡ ವಾಙ್ಮಯದ ಹಿರಿಮೆಯನ್ನು ಯೂರೋಪಿಯನ್ನರ ಗಮನಕ್ಕೆ ತಂದುಕೊಟ್ಟ ಅಗ್ಗಳಿಕೆಯು ಮೊಗ್ಲಿಂಗನಿಗೆ ಸಲ್ಲಬೇಕು. ಕ್ರಿ. ಶ. ೧೮೬೦ರಲ್ಲಿ ಸ್ವದೇಶಕ್ಕೆ ಹಿಂದಿರುಗಿದ ಮೇಲೆಯೂ ಮೊಗ್ಲಿಂಗ್ ಬೈಬಲ್ಲಿನ ಬೃಹತ್ ವ್ಯಾಖ್ಯಾನವೊಂದರ ಕನ್ನಡಾನುವಾದದಲ್ಲಿ ತೊಡಗಿದ್ದನಂತೆ.

ಹೀಗೆ ಮೊಗ್ಲಿಂಗ್ ಹೊಸಗನ್ನಡ ಗದ್ಯಮಾರ್ಗದ ಪ್ರವರ್ತಕನಾದನು. ಹಳಗನ್ನಡ ಕೃತಿಗಳನ್ನು ಸಂಪಾದಿಸಿದನಲ್ಲದೆ, ಕೆಲವನ್ನು ಜರ್ಮನ್ ಭಾಷೆಗೆ ಅನುವಾದಿಸಿದನು. ಕನ್ನಡ ಲಿಪಿ ಸುಧಾರಣೆಗೆ ಮನಸ್ಸುಗೊಟ್ಟನು. ಆದ್ಯ ಪತ್ರಕಾರನಾಗಿ ಮೆರೆದನು. ಆಕಸ್ಮಿಕವಾಗಿ ನಮ್ಮ ನಾಡಿಗೆ ಬಂದು ಇಂದಿನ ಕನ್ನಡ ಸಾಹಿತ್ಯದ ಅಸ್ತಿವಾರವನ್ನು ಹಾಕಿದವರಲ್ಲಿ ಮುಖ್ಯನಾದನು.

ಜಿ. ವೈಗಲ್ (೧೮೧೬–೧೮೫೫): ಗಾಡ್‌ಫ್ರೆ ವೈಗಲ್ ಮೊಗ್ಲಿಂಗನ ಜ್ಞಾತಿಬಂಧು. ತೀಬಿಂಜೆನ್ ವಿಶ್ವವಿದ್ಯಾಲಯದಲ್ಲಿ ಅರಬಿಕ್ ಮತ್ತು ಸಂಸ್ಕೃತಗಳನ್ನು ಅಭ್ಯಸಿಸಿದ್ದನಲ್ಲದೆ, ಇತರ ಭಾಷೆಗಳನ್ನು ಸಲೀಸಾಗಿ ಕಲಿಯುವಷ್ಟು ಭಾಷಾಭಿಜ್ಞನಾಗಿದ್ದನು. ಕನ್ನಡ ವಿಚಾರದಲ್ಲಿ ವೈಗಲ್ ತನಗಿಂತ ಅದೆಷ್ಟರ ಮಟ್ಟಿಗೆ ಪ್ರವೀಣನಾಗಿದ್ದನೆಂಬುದನ್ನು ಮೊಗ್ಲಿಂಗ್ ತನ್ನೊಂದು ಲೇಖದಲ್ಲಿ ಹೇಳಿದ್ದಾನೆ. ಭಾರತೀಯ ತತ್ವಜ್ಞಾನದಲ್ಲಿಯೂ ವೈಗಲ್‌ನಿಗೆ ವಿಶೇಷ ಪರಿಣತಿ ಇದ್ದಿತು. ವೈಗಲ್ ಮತ್ತು ಮೊಗ್ಲಿಂಗ್ ಜೊತೆಯಾಗಿ ಕೆಲಸ ಮಾಡಿದ್ದಾರೆ.

ಬಳ್ಳಾರಿ ಮಿಶನ್ ಕೇಂದ್ರದವರು ಮಾಡಿದ್ದ ಬೈಬಲ್ ಭಾಷಾಂತರವಿದ್ದಿತಷ್ಟೆ. ಅದರಲ್ಲಿಯ ಹೊಸ ಒಡಂಬಡಿಕೆಯ ಭಾಗವನ್ನು ವೈಗಲ್ ಸಾದ್ಯಂತವಾಗಿ ನವೀಕರಿಸಿದನು. ಕ್ರಿ. ಶ. ೧೮೫೪ರಲ್ಲಿ ಪ್ರಕಟವಾದ ಹೊಸ ಒಡಂಬಡಿಕೆಯ ಆವೃತ್ತಿಯು ವೈಗಲನದೇ ಎನ್ನಬಹುದು.

ಅವನ ಇನ್ನೊಂದು ಗಣನೀಯ ಬರೆಹವೆಂದರೆ ಪೂರ್ವೋಕ್ತ ZDMG ಪತ್ರಿಕೆಯಲ್ಲಿ ಬಂದ ಕನ್ನಡ ಸಾಹಿತ್ಯವನ್ನು ಕುರಿತ ಲೇಖ. ಬಾಸೆಲ್ ಮಿಶನ್ನಿನವರು ಕಾರ್ಯೋನ್ಮುಖರಾದ ಪ್ರದೇಶದ ಭಾಷೆ ಹಾಗೂ ಅದರ ಸಾಹಿತ್ಯ ಯಾವ ಬಗೆಯದೆಂಬುದನ್ನು ಯೂರೋಪಿಯನ್ನರಿಗೆ ತಿಳಿಯಪಡಿಸಲೋಸುಗ ವರದಿರೂಪದ ಲೇಖವನ್ನು ಬರೆಯಲು ಮಿಶನ್ನಿನ ವರಿಷ್ಠರು ಮೊಗ್ಲಿಂಗನಿಗೇ ತಿಳಿಸಿದ್ದರು. ಆದರೆ ತನಗಿಂತ ವೈಗಲ್ ಈ ಕೆಲಸವನ್ನು ಚೆನ್ನಾಗಿ ಮಾಡಬಲ್ಲನೆಂದು ಹೇಳಿದ್ದರಿಂದ, ಇವನ ಪಾಲಿಗೆ ಬಂತು. ಅದರ ಫಲವೇ ಈ ಲೇಖ (ZDMG 1848. vol. 2. p. 257-284). ಅದರಲ್ಲಿ ವೈಗಲನು ಕನ್ನಡ ಭಾಷೆಯು ಯಾವ ವರ್ಗಕ್ಕೆ ಸೇರಿದುದೆಂಬುದರ ವಿವೇಚನೆ ಮಾಡಿ, ವ್ಯಾಕರಣ ವಿಷಯಗಳನ್ನು ಸಂಸ್ಕೃತ, ಪ್ರಾಕೃತ ಹಾಗೂ ದ್ರಾವಿಡ ಭಾಷೆಗಳೊಡನೆ ಹೋಲಿಸುತ್ತಾ ವಿವರಣೆ ಕೊಟ್ಟಿದ್ದಾನೆ. ಕನ್ನಡ ಸಾಹಿತ್ಯವು ವಿಶಾಲವೂ ಪ್ರೌಢವೂ ಆಗಿದ್ದು, ಮಿಶನರಿಗಳಿಗೆ ಅದನ್ನೆಲ್ಲ ಅರಿತುಕೊಳ್ಳಲು ಸಮಯಾಭಾವವಿರುವದರಿಂದ ತಾನು

ಈ ಸಾಹಿತ್ಯದ ಪರಿಚಯ ಮಾಡಿಕೊಟ್ಟದ್ದಾಗಿ ಹೇಳಿದ್ದಾನೆ. ಮುಂದೆ ಹಲವಾರು ಕವಿ ಕೃತಿಗಳ ಉಲ್ಲೇಖ ಮಾಡಿದ್ದಾನೆ. ಒಟ್ಟಿನಲ್ಲಿ ಇದು ಕನ್ನಡ ಸಾಹಿತ್ಯದ ಅಧಿಕೃತ ಚರಿತ್ರೆಯ ಸಮಗ್ರ ಚಿತ್ರಣ ಅಲ್ಲವಾದರೂ, ಈ ದಿಸೆಯಲ್ಲಿ ಪ್ರಥಮ ಪ್ರಯತ್ನವೆನ್ನಬಹುದು.*

ಡಬ್ಲ್ಯೂ. ಜಿ. ವುರ್ತ್ ಹಾಗೂ ಇತರರು : ವುರ್ತ್ (೧೮೪೫–೧೮೭೯) ಇಲ್ಲಿಯ ವಾಸ್ತವ್ಯದ ಹೆಚ್ಚು ಕಾಲವನ್ನು ಧಾರವಾಡ/ಹುಬ್ಬಳ್ಳಿಗಳಲ್ಲಿ ಕಳೆದನಾದ್ದರಿಂದ ಅವನಿಗೆ ವೀರಶೈವರ ಸಂಪರ್ಕ ಹೆಚ್ಚಾಗಿ ಬಂತು. ಅದರ ಫಲವಾಗಿ ಕ್ರೈಸ್ತ–ವೀರಶೈವ ಮತಗಳನ್ನು ಹೋಲಿಸಿದ ಕೃತಿಯೊಂದನ್ನು ರಚಿಸಿದನು. ಜೊತೆಗೆ ಬಸವ ಪುರಾಣ, ಚೆನ್ನಬಸವ ಪುರಾಣಗಳ ಕಥಾಸಾರವನ್ನು ಇಂಗ್ಲಿಶ್‌ನಲ್ಲಿ ಬರೆದು ಪ್ರಕಟಿಸಿದನು (JBB+RAS, ೧೮೬೫). ಇದಕ್ಕಿಂತ ಎದ್ದುಕಾಣುವ ಅವನ ಕೃತಿಯೆಂದರೆ 'ಪ್ರಾಕ್ಕಾವ್ಯ ಮಾಲಿಕೆ', ಕನ್ನಡ ಸಾಹಿತ್ಯದ ಆರಂಭದಿಂದ ತನ್ನ ಕಾಲದ ವರೆಗಿನ ಕಾವ್ಯಗಳಿಂದ ಆಯ್ದ ಪದ್ಯಭಾಗಗಳನ್ನು ಇದು ಒಳಗೊಂಡಿದೆ. ಕೆಲವು ಕ್ರಿಶ್ಚಿಯನ್ ಹಾಡುಗಳನ್ನೂ ಸೇರಿಸಿದೆಯಾದ್ದರಿಂದ ಇವರಲ್ಲಿ ಹೊಸಗನ್ನಡಕ್ಕೂ ಪ್ರಾತಿನಿಧ್ಯ ದೊರೆಕಿದಂತಾಗಿದೆ,

ಮೊಗ್ಲಿಂಗ್ ಯುಗದ ಇನ್ನಿತರರೆಂದು ಡಬ್ಲ್ಯೂ. ಹಾಕ್, ಜಿ. ಕೀಸ್, ಮತ್ತು ಜೆ. ಹೂಬರ್—ಇವರನ್ನು ನೆನೆಯಬೇಕು. ಹಾಕ್ ಜರ್ಮನ್ ಗೀತಗಳನ್ನು ಕನ್ನಡಕ್ಕೆ ಅನುವಾದಿಸಿದವನಾದರೆ, ಕೀಸ್ ಭೂಗೋಳ, ವ್ಯಾಕರಣ ಮೊದಲಾದ ಪಠ್ಯಗಳನ್ನು ಬರೆದವ. ಹೊಬರ್ ಬೈಬಲ್ ವ್ಯಾಖ್ಯಾನದ ಕೆಲಭಾಗದ ಅನುವಾದಕ. ಇತ್ತ ತುಳುಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದವರೆಂದು ಜೆ. ಅಮ್ಮಾನ್, ಜೆ. ಕೆಮರರ್, ಬೂರ್ರ‍್ರ್ ಹಾಗೂ ವಿಶೇಷವಾಗಿ ಮೆನರ್ ಎಂಬವರನ್ನು ಉಲ್ಲೇಖಿಸಬೇಕು. ತುಳು ಪುಸ್ತಕ ಪ್ರಕಟನೆಯು 'ಮತ್ತಾಯನ ಸುವಾರ್ತೆ'ಯಿಂದ ಮೊದಲಾಯಿತು (೧೮೪೭). ಕ್ರಿ. ಶ. ೧೮೫೯ರಲ್ಲಿ ತುಳುಭಾಷೆಯಲ್ಲಿ ಸಮಗ್ರ ಬೈಬಲ್ ಹೊರಬಂದುದು ಹಿರಿಯ ಸಾಹಸವಾಗಿದೆ. ಮೆನರ್ ತುಳುಭಾಷೆಯ ಶಬ್ದಕೋಶವನ್ನು ಪ್ರಥಮತಃ ಸಿದ್ಧಪಡಿಸಿದ್ದಾನೆ, ಜೊತೆಗೆ ಭೂತಾರಾಧನೆಯ ಕುರಿತ ಒಂದು ಕೃತಿಯನ್ನೂ ರಚಿಸಿದ್ದಾನೆ. ಶ್ರೀ ವಾದಿರಾಜರ, ಇತರ ಕೆಲವರ ಪಾಡ್ದನಗಳನ್ನು ಬಿಟ್ಟರೆ, ಆಮುಂಚೆ ತುಳುಭಾಷೆಯಲ್ಲಿ ಸಾಹಿತ್ಯ ರಚನೆ

---

* ಈ ಲೇಖದಲ್ಲಿ ಅವನು ಪ್ರಸ್ತಾಪಿಸಿದ ಕೃತಿಗಳೆಂದರೆ–ಶಬ್ದಮಣಿದರ್ಪಣ, ಕರ್ನಾಟಕ ಶಬ್ದಮಂಜರಿ, ಛಂದೋಂಬುಧಿ, ಜಗನ್ನಾಥವಿಜಯ, ಕುಮಾರವ್ಯಾಸ ಭಾರತ, ತೊರವೆ ರಾಮಾಯಣ, ನಿತ್ಯಾತ್ಮನ ಭಾಗವತ, ಜೈಮಿನಿಭಾರತ, ಸೊಬಗಿನ ಸೋನೆ, ಮೋಹನತರಂಗಿಣಿ, ಗಯ ಚರಿತ್ರೆ, ಬಸವಪುರಾಣ, ರಾಘವಾಂಕ ಕಾವ್ಯ, ಭಕ್ತಿಸಾರ, ಶಿವಭಕ್ತಿಸಾರ, ಅನುಭವಾಮೃತ, ಪಂಚ ತಂತ್ರ, ಮಾನವಮಿ ಪದಗಳು, ಬೇತಾಳ ಪಂಚವಿಂಶತಿ ಹಾಗೂ ಕೆಲವು ಯಕ್ಷಗಾನ ಪ್ರಸಂಗಗಳು. ಈ ಪಟ್ಟಿಯ ಮೇಲಿನಿಂದ ಆ ಕಾಲಕ್ಕೆ ಜನರಲ್ಲಿ ಹೆಚ್ಚು ಪ್ರಚಲಿತವಿದ್ದ ಕನ್ನಡ ಕಾವ್ಯಗಳಾವುವೆಂಬುದರ ಕಲ್ಪನೆ ಬರುವುದು. ಈ ಜರ್ಮನ್ ಲೇಖದ ಇಂಗ್ಲಿಶ್ ಅನುವಾದವು, 1982ರ Quarterly Journal of Mythic Society ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಯಾಗಿರಲಿಲ್ಲ. ಈ ಭಾಷೆಗೆ ಗ್ರಂಥಸ್ಥರೂಪರಿನ್ನಿತ್ತು, ಸಾಹಿತ್ಯಿಕ ಮನ್ನಣೆಯನ್ನೊದಗಿಸಿದ್ದುದು ಬಾಸೆಲ್ ಮಿಶನ್ನಿನವರ ಒಂದು ಅಪೂರ್ವ ಕೊಡುಗೆಯಾಗಿದೆ.

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಬಾಸೆಲ್ ಮಿಶನ್ನಿನವರ ಚಟುವಟಿಕೆಗಳು ತುಂಬ ವಿಸ್ತಾರಗೊಂಡವು. ಅವರು ಯುರೋಪಿಯನ್, ಆಫ್ರಿಕನ್ ಅದರಂತೆ ದಕ್ಷಿಣ ಭಾರತದ ಮಲೆಯಾಳಿ, ತಮಿಳುಭಾಷೆಗಳಲ್ಲಿ ಸಹ ಗ್ರಂಥ ರಚನೆಯನ್ನು ಕೈಕೊಂಡಿದ್ದರೂ, ಅವುಗಳಲ್ಲಿ ಕನ್ನಡ ಕೃತಿಗಳ ಸಂಖ್ಯೆಯೇ ದೊಡ್ಡದಿತ್ತೆಂಬುದು,ಮಿಶನ್ನಿನ ೧೮೫೮ರ ವರದಿಯಿಂದ ತಿಳಿದು ಬರುತ್ತದೆ. ಮಿಶನ್ನಿನವರ ಗ್ರಂಥೋದ್ಯಮದಿಂದಾಗಿ, ಮಂಗಳೂರು ವಿದ್ವತ್ತಿನ ಕೇಂದ್ರವಾಗಿ ಮೆರೆಯಿತೆಂದು ಎ. ಸಿ. ಬರ್ನೆಲ್ ಅಭಿಪ್ರಾಯಪಟ್ಟಿದ್ದಾನೆ.

ಕಿಟೆಲ್ ಯುಗ

ಫರ್ಡಿನಾಂಡ್ ಕಿಟೆಲ್ (೧೮೫೩-೧೮೯೨), ಮೊಗ್ಲಿಂಗ್ ಇದ್ದಾಗಲೇ ನಮ್ಮ ನಾಡಿಗೆ ಬಂದನು. ಭಾಷಾವಿಷಯದಲ್ಲಿ ಸೂಕ್ಷ್ಮದೃಷ್ಟಿ, ಕಾವ್ಯ ತತ್ವಜ್ಞಾನಗಳಲ್ಲಿ ಅಪಾರ ಶ್ರದ್ಧೆ, ಜೊತೆಗೆ ಅಪೂರ್ವ ಮೇಧಾಶಕ್ತಿ—ಇವುಗಳಿಂದಾಗಿ ಕಿಟೆಲ್ ತನ್ನ ಕಾಲದ ವಿದ್ವಾಂಸ ಮಂಡಲಿಯಲ್ಲಿ ಗಣ್ಯನಾಗಿ ಮೆರೆದನು. ತನ್ನ ಪ್ರಾರಂಭದ ವರ್ಷಗಳನ್ನು (೧೮೫೩-೧೮೬೬) ಧಾರವಾಡ-ಹುಬ್ಬಳ್ಳಿಗಳಲ್ಲಿಯೂ ಮಧ್ಯದ ಅವಧಿಯನ್ನು (೧೮೬೭-೧೮೮೩) ಕೊಡಗಿನಲ್ಲಿಯೂ ಕೊನೆಯ ವರ್ಷಗಳನ್ನು ಮಂಗಳೂರಿನಲ್ಲಿಯೂ ಕಳೆದಿದ್ದಾನೆ. ಅವನ ವಾಙ್ಮಯ ಕಾರ್ಯವು ಕವಿತಾರಚನೆಯಿಂದ ಮೊದಲಾಯಿತು. ನಡುಗನ್ನಡ ಕಾವ್ಯದ ಅಭ್ಯಾಸ ಮತ್ತು ಆ ಕವಿತೆಯು ನಮ್ಮ ಧಾರ್ಮಿಕ ಸಾಂಸ್ಕೃತಿಕ ವರ್ತುಲದಲ್ಲಿ ಪಡೆದಿದ್ದ ಪ್ರಾಶಸ್ತ್ಯ—ಇವು ಅವನನ್ನು ಕವಿತೆಯತ್ತ ಸೆಳೆದುವು. ಮತಪ್ರಸಾರಕ್ಕೆ ಹಾಡುಗಳು ಅತ್ಯಂತ ಪರಿಣಾಮಕಾರೀ ಮಾಧ್ಯಮವೆಂದು ಅವನು ಭಾವಿಸಿದ್ದನು. ಅದರ ಫಲವೇ 'ಕಥಾಮಾಲೆ' ಎಂಬ ಕಾವ್ಯರಚನೆ (೧೮೬೨). ಕ್ರಿಸ್ತನ ಜೀವನವನ್ನೊಳಗೊಂಡ ಈ ಕಾವ್ಯದಲ್ಲಿ ೪೭೫ ಪದ್ಯಗಳಿವೆ (ಭಾಮಿನಿ, ವಾರ್ಧಕ ಷಟ್ಪದಿಗಳು ಮತ್ತು ಪೂರ್ವಿರಾಗದ ಕೀರ್ತನೆಗಳು). ಇಷ್ಟೊಂದು ಕನ್ನಡ ಪದ್ಯಗಳನ್ನು ರಚಿಸಿದ ಬೇರಾವ ವಿದೇಶೀ ಮಿಶನರಿ ಇಲ್ಲ. ಅಲ್ಲದೆ ಇದು ನಮ್ಮ ಕ್ರೈಸ್ತ ವಾಙ್ಮಯದ ಏಕಮೇವ ಖಂಡಕಾವ್ಯ. ಮಿಶನರಿ ಜನರು ದೇಶೀಯರಂತೆಯೇ ಕಾವ್ಯವನ್ನು ರಚಿಸಬೇಕೆಂಬ ಪ್ರಣಾಳಿಯನ್ನು ಇಲ್ಲಿ ಅತ್ಯಂತ ನಿಷ್ಠೆಯಿಂದ ಅನುಷ್ಠಾನಕ್ಕೆ ತಂದದ್ದಾಗಿದೆ. ಅಲ್ಲದೆ ಕನ್ನಡವನ್ನು ಕಲಿಯಲಾರಂಭಿಸಿದ ಏಳೆಂಟು ವರ್ಷಗಳಲ್ಲಿಯೆ ಕವಿತ್ವರಚನೆಯನ್ನು ಸಾಧಿಸಿದುದು ಅವನ ಬಹುಮುಖ ಪ್ರತಿಭೆಗೆ ನಿದರ್ಶನ. ಅದರ ಬಗೆಯನ್ನು ತುಸು ಗಮನಿಸೋಣ ('ಕಥಾಮಾಲೆ'ಯ ಪುಟ ೪೮-೪೯ರಿಂದ) :

ಒಬ್ಬ ನರನೈಶ್ವರ್ಯದೊಳ್ ಬದುಕಿ, ಮತಿಗೆಟ್ಟು
ಗಬ್ಬದಿಂ [ಗರ್ವ] ರೇಶ್ಮೆಯನು ನಾರುಮಡಿಯನ್ಧರಿಸಿ
ಕೊಬ್ಬಾದ ಭೋಜನಂ ಗೈಯುತಾನಂದಾರ್ಥನಾಗಿ ಶುಭವಾಗಿರುತಲೇ–।
ಹೆಬ್ಬಾಗಲಡಿಯಲ್ಲಿ ಲಾಜರನು ಮಲಗಿಹನು
ತಬ್ಬಲಿಯು ಬಡವನಾದಿವನ ಮೈಮುಖಗಳಲಿ
ನಿಬ್ಬರಿಸಿ ಕೊಂಡಿಹವು ಹುಣ್ಣುಗಳು; ಸಂಕಟದಿ ಬಿದ್ದುಕೊಂಡಿರುವನಕಟಾ ॥

ಬಾಧೆಗಳ ಪಡುತಲಿದ್ದಿವನು ಪಾತಾಳದೊಳ–
ಗಾಧದಲಿ ಕಣ್ಣು ತೆರೆದ ಬ್ರಹಾಮುರದ ಸುಖ
ಸಾಧಿಸಿದ ಲಾಜರನ ನೋಡ್ಯಬ್ರಹಾಮೆಲವೊ ಯಿಕ್ಷಿಸೈ, ಪೋರ ತರದಾ।
ವೇಧನೆಯ ಪಡಿಸುವೀ ಜ್ವಾಲೆಯಲ್ಲಿದ್ದೇನೆ
ಶೋಧಿಸೈ, ಕೂಡಿದರೆ ಲಾಜರನನೊಲುಮೆಯಲ್
ವ್ಯಾಧಿಯಾದೆನ್ನುದ್ಧರಿಸ ಕಳುಹೆನಗೆ ಲಘುವಾದೀತು, ತಾಳೆನಯ್ಯೋ ! ॥

ಇವುಗಳಲ್ಲಿ ಅಪಶಬ್ದ ಪ್ರಯೋಗ, ಸಂಧಿದೋಷ, ಶಿಥಿಲ ಜೋಡಣೆ ಅಲ್ಲಲ್ಲಿ ಕಂಡುಬಂದರೂ ಈ ಬಗೆಯ ದೋಷಗಳು ನಡುಗನ್ನಡದ ಹಾಗೂ ೧೮–೧೯ನೆ ಶತಮಾನಗಳ ಕೆಲವು ದೇಶೀಯ ಕವಿತೆಯಲ್ಲಿಯೂ ಕಂಡುಬಾರದೆ ಇಲ್ಲ.

ಕಿಟೆಲ್‌ನ ಮುಂದಿನ ಸಾಹಿತ್ಯಸೇವೆಯು ಪತ್ರಿಕಾ ಪ್ರಕಟನೆ, ಪಠ್ಯಪುಸ್ತಕ, ಮತೀಯ ಪುಸ್ತಕಗಳ ರಚನೆ, ಹಾಗೂ ಹಳಗನ್ನಡ ಕಾವ್ಯ ಸಂಪಾದನೆ–ಈ ಮೂಲಕ ವ್ಯಕ್ತವಾಗಿದೆ.

'ಇಂಡಿಯ ಮತ್ತು ಅನ್ಯದೇಶದ ವಾರ್ತಿಕ' ಪತ್ರಿಕೆಯನ್ನು ಜೆ. ಮ್ಯಾಕ್ ಎಂಬವ ನೊಡನೆ ಸಂಪಾದಿಸಿ ವರ್ಷಾರು ತಿಂಗಳು ನಡೆಸಿದನು. ಅವನ ಅನುವಾದಿತ ಮತೀಯ ಪುಸ್ತಕಗಳಲ್ಲಿ 'ಪರಮಾತ್ಮಜ್ಞಾನ', 'ಕ್ರೈಸ್ತಸಭಾಚರಿತ್ರೆ' ಮಹತ್ವದವಾಗಿವೆ. ಶಾಲೇಯ ಪುಸ್ತಕಗಳೆಂದು 'ಇಂಗ್ಲಂಡದ ಇತಿಹಾಸ' (ಮೂಲ: ಮಾರಿಸ್) ಹಾಗೂ 'ಪಂಚತಂತ್ರ' ಇವನ್ನು ಹೆಸರಿಸಬೇಕು. ಹೈಸ್ಕೂಲು ಮಟ್ಟದ ಪಠ್ಯವಾಗಿ 'ಪಂಚತಂತ್ರ'ವು ಹೊರಬಂದಿದ್ದರೂ ಅದಕ್ಕೆ ಮೌಲಿಕವಾದ ಸುದೀರ್ಘ ಮುನ್ನುಡಿ ಇದೆ. ಅವನ 'ಕಾವ್ಯಮಂಜರಿ' (ಶಾಲಾ ಮಕ್ಕಳಿಗಾಗಿ) 'ಸಂಣ ಕರ್ನಾಟಕ ಕಾವ್ಯಮಾಲೆ', 'ಹಳಕನ್ನಡದ ಸಂಕ್ಷೇಪ ವ್ಯಾಕರಣ ಸೂತ್ರಗಳು'–ಇವಾದರೂ ಪಠ್ಯಗಳೇ ಆಗಿದ್ದುವು. ಕೊನೆಯಲ್ಲಿ ಕನ್ನಡ ವ್ಯಾಕರಣದ ಸತ್ವಸಾರವನ್ನೇ ಹಿಡಿದಿಟ್ಟಂತಾಗಿದೆ. ಈ ಕೃತಿಗೆ ಇರುವ ಇನ್ನೊಂದು ಹೆಸರು 'ಗ್ರಂಥಪ್ರಯೋಗದ ವಿಧಿಗಳ ವಿವರವು'. ಹಾಗಾಗಿ ಛಂದಸ್ಸು, ಅಲಂಕಾರಗಳ ವಿಷಯವೂ ಅದರಲ್ಲಿ ಬಂದಿದೆ.

ಕಿಟೆಲ್ ಆವೃತ್ತಿಯೆಂದು ಹೆಸರಾಗಿರುವ 'ಶಬ್ದಮಣಿದರ್ಪಣ' ಹಾಗೂ 'ಛಂದೋಂಬುಧಿ'ಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸಬೇಕು. ಕನ್ನಡ ಭಾಷೆ, ಶಬ್ದಗಳ ಕುರಿತಾದ ಅವನ ಅಭ್ಯಾಸಕ್ಕೆ ಶಬ್ದಮಣಿದರ್ಪಣವೇ ತಾಯಿಬೇರು. ಆ ಅರ್ಥದಲ್ಲಿ ಕೇಶಿ

ರಾಜನೇ ಕಿಟೆಲ್ಲಿನ ನಿಜವಾದ ಗುರು! ಈ ಮೊದಲು ಕೆಲವು ಹಳಗನ್ನಡ ಕೃತಿಗಳು ಪ್ರಕಟವಾಗಿದ್ದರೂ ಶಾಸ್ತ್ರೀಯ ದೃಷ್ಟಿಯನ್ನಿಟ್ಟುಕೊಂಡು ಆಧುನಿಕ ವಿಧಾನದಿಂದ ಸಂಪಾದಿತವಾದ ಮೊತ್ತಮೊದಲಿನ ಪ್ರಕಟನೆಯೆಂದರೆ ಇದುವೇ ಸೈ. ವಿವಿಧ ಹಸ್ತಪ್ರತಿಗಳ ಕೂಲಂಕಷ ಪರಿಶೀಲನೆ, ಪಾಠಾಂತರಗಳ ಅಡಿಟಿಪ್ಪಣಿ, ಪಠ್ಯಭಾಗದ ಸುಸ್ಪಷ್ಟ ರೂಪ, ಸವಿವರ ಪೀಠಿಕೆ, ಅನುಬಂಧಗಳು—ಈ ಬಗೆಯ ಗ್ರಂಥ ಸಂಪಾದನೆಯ ಮಾರ್ಗವನ್ನು ಕಿಟೆಲ್ ಕನ್ನಡಿಗರಿಗೆ ಪ್ರಥಮತ: ತೋರಿಸಿಕೊಟ್ಟಿದ್ದಾನೆ. ಮೂರು ವರ್ಷಗಳ ಅನಂತರ ಹೊರಬಂದ (೧೮೭೫) ಛಂದೋಂಬುಧಿಯ ಸಂಪಾದನವಾದರೂ ಇದೇ ನಡೆಯಲ್ಲಿದ್ದಿತು. ಈ ಕೃತಿಯ ಇನ್ನೊಂದು ವೈಶಿಷ್ಟ್ಯವೆಂದರೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ ದೀರ್ಘಪ್ರಬಂಧ. ವೈಗಲ್‌ನ ಪೂರ್ವೋಕ್ತ ಲೇಖಕ್ಕಿಂತ ಇದು ಎಷ್ಟೋ ಹೆಚ್ಚಿನ ವಿಷಯಗಳನ್ನು ಒಳಗೊಂಡಿದ್ದು ಕನ್ನಡ ಸಾಹಿತ್ಯದ ಸಮಷ್ಟಿ ಚಿತ್ರಣವನ್ನು ಮೊದಲ ಬಾರಿಗೆ ಇದರಲ್ಲಿ ಕಾಣುತ್ತೇವೆ.

ಇನ್ನೀಗ ಅವನ ಶಬ್ದಶಾಸ್ತ್ರ, ವ್ಯಾಕರಣಗಳ ಅಧ್ಯಯನಕ್ಕೆ ಬರೋಣ. ಶಬ್ದಾರ್ಥವಿಹಾರವು ಕಿಟೆಲ್‌ನಿಗೆ ಪ್ರಿಯವಾದ ಅಂಶವಾಗಿದ್ದಿತು. ಕನ್ನಡ ಕಾವ್ಯಗಳನ್ನು ಪ್ರತಿ ಮಾಡುವವರ ಶಾಬ್ದಿಕ ತಪ್ಪುಗಳನ್ನು ಕಂಡಾಗ, ಅದರಿಂದ ಅರ್ಥನಿಷ್ಪತ್ತಿಗೆ ಒದಗಿದ್ದ ತೊಡಕುಗಳು ಅವನಿಗೆ ತಲೆನೋವು ಬರಿಸಿದ್ದವು. ಅವನ ಕಾಲಕ್ಕೆ ಕಾಲ್ಡ್‌ವೆಲ್‌ನ ದ್ರಾವಿಡಭಾಷಾ ಸಿದ್ಧಾಂತವು ನೆಲೆಗೊಂಡಿತ್ತು. ಕಿಟೆಲ್ ಅದೇ ಜಾಡನ್ನು ಹಿಡಿದು, ಹಳಗನ್ನಡ ಕೋಶಕಾರರೂ ವೈಯಾಕರಣಿಗಳೂ ಕನ್ನಡವು ಸಂಸ್ಕೃತ ಜನ್ಯವೆಂದು ಗ್ರಹಿಸಿ ಅನೇಕ ಶಬ್ದಗಳ ಮೂಲವನ್ನು ಬೇರೆಯಾಗಿ ಹೇಳಿದ್ದನ್ನು ಸರಿಪಡಿಸಲೆಂದನು. ಕನ್ನಡ ದೇಶ್ಯ ಶಬ್ದಗಳ ಸರಿಯಾದ ವ್ಯುತ್ಪತ್ತಿಯನ್ನು ಹೇಳಬೇಕೆಂಬ ಅವನ ವಿಚಾರವು 'ಸಂಣ ಕರ್ನಾಟಕ ಕಾವ್ಯಮಾಲೆ' ಸಂಕಲನದಲ್ಲಿ ಮೊದಲು ತಲೆದೋರಿತು. ತನಗೆ ಬಂದಿದ್ದ ಸಂದೇಹಗಳನ್ನೂ, ಹೊಳೆದ ವಿಚಾರಗಳನ್ನೂ ಕಾಲಕಾಲಕ್ಕೆ 'ಇಂಡಿಯನ್ ಎಂಟಿಕ್ವೆರಿ' ಪತ್ರಿಕೆಯಲ್ಲಿ ಆಗಾಗ ಪ್ರಕಟಿಸುತ್ತಿದ್ದನು.

ಈ ವೇಳೆಗೆ (೧೮೭೩) ಕನ್ನಡ–ಇಂಗ್ಲಿಶ್ ಕೋಶವನ್ನು ರಚಿಸಲು ಕಿಟೆಲ್‌ನಿಗೆ ಕರೆಬಂತು ಈ ದಿಶೆಯಲ್ಲಿ ಮುಂದುವರಿಯಲು ಗುಂಡರ್ಟ್ ತಯಾರಿಸಿದ್ದ ಮಲೆಯಾಳಿ–ಇಂಗ್ಲಿಶ್ ಕೋಶವು ಕಿಟೆಲ್‌ನಿಗೆ ಮಾದರಿಯಾಯಿತು. ಕನ್ನಡ ಶಬ್ದಸಂಗ್ರಹ ಕಾರ್ಯದಲ್ಲಿ ಹಲವಾರು ಜನ ಅವನಿಗೆ ನೆರವಾದರು. ಆದರೆ ಅವುಗಳ ಅರ್ಥನಿರ್ಣಯ, ವ್ಯುತ್ಪತ್ತಿ, ದ್ರಾವಿಡ ಸಮಾನ ಪದಸೂಚನೆ—ಮುಂತಾದ ಅಂಶಗಳು ಕಿಟೆಲ್‌ನಿಂದಲೇ ನಿರ್ಣೀತವಾದವು. ಕೆಲಸ ಬೆಳೆಯುತ್ತ ಹೋಗಿ ಗ್ರಂಥವು ಹೊರಬರಲು ೧೬–೧೭ ವರ್ಷಗಳೇ ಬೇಕಾದುವು. ಈ ಕೋಶದ ಹಿರಿಮೆ–ಗರಿಮೆಗಳು ಕನ್ನಡಿಗರಿಗೆ ಸುಪರಿಚಿತ. "ಇಷ್ಟು ಖಚಿತವೂ ಶಾಸ್ತ್ರೀಯವೂ ನಿಯಮಬದ್ಧವೂ ಆದ ನಿಘಂಟು ಭಾರತದ ಯಾವ ದೇಶಭಾಷೆಗೂ ಇಲ್ಲ" ಎಂಬ ಹಲ್ಷ್‌ನ ಮಾತು ಯಥಾರ್ಥವಿದ್ದಿತು, ಈ ಕೃತಿಗಾಗಿ

ಟೀಬಿಂಜೆನ್ ವಿಶ್ವವಿದ್ಯಾಲಯವು ಕಿಟೆಲ್‌ನಿಗೆ ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು (ಕನ್ನಡಕ್ಕಾಗಿ ದೊರೆತ ದ್ವಿತೀಯ ಪಿಎಚ್.ಡಿ.—ಇದು).

ಕೇಶಿರಾಜನ ಶಬ್ದಮಣಿದರ್ಪಣದ ಅಧ್ಯಯನ, ಸಂಪಾದನೆಗಳ ಕಾಲಕ್ಕೆ ಕಿಟೆಲ್ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಟಿಪ್ಪಣಿಗಳನ್ನು ಮಾಡಿಕೊಂಡಿದ್ದನು. ಅವನ್ನು ವಿಸ್ತರಿಸಿ ಇಂಗ್ಲಿಶ್‌ನಲ್ಲಿ 'A Grammar of the Kannada Language' ಬರೆದು ಪ್ರಕಟಿಸಿದನು. ಇದಕ್ಕೂ ಮುಂಚೆ ಹಲವಾರು ಕನ್ನಡ ವ್ಯಾಕರಣ ಗ್ರಂಥಗಳು ಇಂಗ್ಲಿಶ್‌ನಲ್ಲಿ ರಚಿತವಾಗಿದ್ದರೂ ಇದರ ಸ್ವರೂಪವೇ ಬೇರೆ. ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದ ಪ್ರತಿಯೊಂದು ಅಂಶವನ್ನು ಇಲ್ಲಿ ವಿಸ್ತಾರವಾಗಿ ಪ್ರತಿಪಾದಿಸಲಾಗಿದೆ. ವ್ಯಾಕರಣದ ಎಲ್ಲ ವಿಧಿಗಳನ್ನು ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ–ಈ ಮೂರು ಅವಸ್ಥೆಗಳಲ್ಲಿ ನಿರೂಪಿಸಿದ್ದರಿಂದ, ಕನ್ನಡ ಭಾಷೆಯ ಐತಿಹಾಸಿಕ ಹಾಗೂ ತೌಲನಿಕ ಅಭ್ಯಾಸದ ಸುಸ್ಪಷ್ಟ ಪ್ರಯತ್ನವನ್ನು ಇಲ್ಲಿ ಕಾಣುತ್ತೇವೆ. ಪ್ರಾಸಂಗಿಕವಾಗಿ ದ್ರಾವಿಡ ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಅಂಶಗಳು ಬಂದಿವೆ. ಜೊತೆಗೆ ಕನ್ನಡದ ಹಲವಾರು ಧಾತುರೂಪಗಳ ಮತ್ತು ಪ್ರತ್ಯಯಗಳ ಪ್ರಾಗೈತಿಹಾಸಿಕ ರೂಪ ಗಳನ್ನು ಆರಸಿಕೊಂಡು ಹೋದದ್ದಾಗಿದೆ. ತೌಲನಿಕ ಭಾಷಾಭ್ಯಾಸ ವಿಚಾರವಾಗಿ ಕನ್ನಡದಲ್ಲಿ ಇದುವೆ ಮೊದಲ ಗ್ರಂಥವಾಗಿದೆ. ಇಷ್ಟರ ಮಟ್ಟಿಗಿನ ಸ್ವತಂತ್ರ ವಿಚಾರ ಸರಣಿಯ, ಸರ್ವಾಂಗೀಣ ಸ್ವರೂಪದ ಕನ್ನಡ ವ್ಯಾಕರಣಗ್ರಂಥ ಇಂದಿಗೂ ವಿರಳವಾಗಿದೆ.

ಇಂತು ಹಳಗನ್ನಡದ ವ್ಯಾಸಂಗಕ್ಕೆ ನೆರವಾಗುವಂಥ ಎಲ್ಲ ಬಗೆಯ ಕೃತಿಗಳನ್ನು ರಚಿಸಿ, ಕನ್ನಡದ ಪುನರುಜ್ಜೀವನ ಕಾರ್ಯದಲ್ಲಿ ಮಹತ್ವಪೂರ್ಣ ಸೇವೆ ಸಲ್ಲಿಸಿದ್ದಾನೆ. ಅವನ ಕೊಡುಗೆಯು ಪ್ರಪಂಚದಲ್ಲಿ ಕನ್ನಡದ ಸೊಲ್ಲು ಕೇಳಬರುವ ಪರ್ಯಂತವೂ ಸ್ಥಿರವಾಗಿ ಉಳಿಯಬಲ್ಲುದು.

ತ್ಸಿಗ್ಲರ್ (೧೮೪೧-೧೮೪೫) : ಫ್ರೆಡ್ರಿಕ್ ತ್ಸಿಗ್ಲರ್‌ನ ಜನ್ಮವೆಲ್ಲ ಶಿಕ್ಷಣ ರಂಗದಲ್ಲಿಯೆ ಕಳೆಯಿತು. ನಮ್ಮ ನಾಡಿಗೆ ಬರುವ ಮುನ್ನ, ಬಂದಮೇಲೆ, ಹಾಗೂ ಮರಳಿ ಹೋದ ಅನಂತರವೂ ಶಿಕ್ಷಕನಾಗಿಯೆ ದುಡಿದನು. ಉತ್ತರ ಕರ್ನಾಟಕದ ಶೈಕ್ಷಣಿಕ, ಸಾಹಿತ್ಯಿಕ ರಂಗದಲ್ಲಿಯೂ, ಸರಕಾರಿ ವಲಯದಲ್ಲಿಯೂ ಅವನು ಸಾಕಷ್ಟು ಮನ್ನಣೆ ಪಡೆದಿದ್ದನು. ಅವನ ವಿದ್ವತ್ತು, ಹಾಗೂ ಕನ್ನಡ ಸೇವೆಯನ್ನು ಮನದಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಎರಡು ಬಾರಿ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿ ಗೌರವಿಸಿದರು.

ಇಂಗ್ಲಿಶ್ ಕನ್ನಡ ಭೂಗೋಲ, ಗಣಿತ ಮತ್ತು ಸಸ್ಯಶಾಸ್ತ್ರ–ಇವು ಅವನು ಕಲಿಸುವ ಮೆಚ್ಚಿನ ವಿಷಯಗಳಾಗಿದ್ದುವು. ಅವನ ಪುಸ್ತಕಗಳೆಲ್ಲವೂ ವಿದ್ಯಾರ್ಥಿಗಳಿಗೆಂದೇ ಇದ್ದುವು. ಅವುಗಳಲ್ಲಿ 'ಶಾಲಾವ್ಯಾಕರಣ', 'ಇಂಗ್ಲಿಶ್ ಕನ್ನಡ ಕೋಶ', 'ಗಣಿತನ್ಯಾಯ' ಎಂಬವುಗಳು ಹೆಚ್ಚು ಬಳಕೆಯಲ್ಲಿದ್ದುವು. ಅವನ 'Practical Key to Kannada Language' ಒಂದು ವಿಶಿಷ್ಟ ಕೃತಿ.—ದಿನಬಳಕೆಯ ಒಂದು ನೂರು ಶಬ್ದಗಳನ್ನು

ತೆಗೆದುಕೊಂಡು, ಒಂದೊಂದರ ವಿವಿಧ ಪ್ರಯೋಗಗಳನ್ನು ವಾಕ್ಯರೂಪದಲ್ಲಿ ಕೊಟ್ಟಿದ್ದಾನೆ. ಜೊತೆಗೆ ಆ ವಾಕ್ಯಗಳ ಇಂಗ್ಲಿಷ್ ಭಾಷಾಂತರ, ಲಿಪ್ಯಂತರ ಕೂಡ ಇದೆ. ವ್ಯಾಕರಣದಂತಹ ನೀರಸ ವಿಷಯಗಳನ್ನು ರೋಚಕವಾಗಿಸುವ ತ್ಸಿಗ್ಲರನ ಜಾಣ್ಮೆ ಗ್ರಂಥದುದ್ದಕ್ಕೂ ಕಂಡುಬರುತ್ತದೆ.

ಇಲ್ಲಿಯ ಶೈಕ್ಷಣಿಕ ಕ್ಷೇತ್ರದ ಬಗ್ಗೆ ಅನೇಕ ಲೇಖಗಳನ್ನು ಸ್ವದೇಶದ ಪತ್ರಿಕೆಗಳಲ್ಲಿ ಬರೆದುದು, ತ್ಸಿಗ್ಲರನ ಒಂದು ವಿಶೇಷ ಕಾರ್ಯವೆನ್ನಬಹುದು. ಶಿಕ್ಷಣ ವಿಷಯದಲ್ಲಂತೂ ಅವನು ಉದಾರ ಮತವಾದಿ. ಅಗತ್ಯಕ್ಕಿಂತ ಹೆಚ್ಚಾಗಿ ಶಿಕ್ಷಣರಂಗದಲ್ಲಿ ಮಿಶನರಿಗಳು ವೇಳೆಯನ್ನು ವ್ಯಯಿಸುತ್ತಾರೆಂಬ ಟೀಕೆ ಕೇಳಬಂದಾಗ, ತ್ಸಿಗ್ಲರ್ I cannot see why arithmetic teaching should be of lesser value in the Mission Work ಎಂದು ಮುಂತಾಗಿ ವಾದಿಸಿದ್ದಾನೆ. ಬಾಸೆಲ್‌ದಿಂದ ಬಂದ ಮಿಶನರಿ ಲೇಖಕರ ಪೈಕಿ ಇವನದೇ ಕೊನೆಯ ದೊಡ್ಡ ಹೆಸರು. ಮುಂದಿನ ಎಂದರೆ ಇಪ್ಪತ್ತನೆಯ ಶತಮಾನದಲ್ಲಿ ಆ ಸ್ಥಳದಿಂದ ಬರಬೇಕಾದ ಪ್ರತಿಭಾನ್ವಿತರ ಸಂಖ್ಯೆ ಇಳಿಮುಖವಾಯಿತು—ಪ್ರಥಮ ಮಹಾಯುದ್ಧದ ಕಾರಣದಿಂದಾಗಿ.

ಕೆಥಲಿಕ್ ವಾಙ್ಮಯ

ಇನ್ನೀಗ ಕೆಥಲಿಕರ ವಾಙ್ಮಯಕಾರ್ಯವನ್ನು ತುಸು ಪರಿಶೀಲಿಸೋಣ. ಕನ್ನಡ ಗ್ರಂಥರಚನೆ, ಮುದ್ರಣ, ಪ್ರಸಾರ ವಿಷಯದಲ್ಲಿ ಪ್ರೊಟೆಸ್ಟಂಟರಿಗಿಂತ ಕೆಥಲಿಕರಿಗೆ ಆಸಕ್ತಿ ಕಡಿಮೆ. ಹೊಸದಾಗಿ ಬಂದು ಮತಪ್ರಸಾರ ಮಾಡಬೇಕಾದ ಪ್ರೊಟೆಸ್ಟಂಟರಿಗೆ ಅದು ಅನಿವಾರ್ಯವಾಗಿದ್ದರೆ, ಅದಾಗಲೇ ನಾಡಿನಲ್ಲಿ ದಶಸಹಸ್ರಗಟ್ಟಲೆ ಕೆಥಲಿಕರು ನೆಲೆಗೊಂಡಿದ್ದರಿಂದ ಇವರ ಅಗತ್ಯ ಕಂಡಿರಲಿಲ್ಲವೇನೊ. ಆದರೆ ತಮ್ಮ ವಿರೋಧಿ ಪಂಥದವರು ಮುಂದುವರಿದಾಗ ಆ ಕುರಿತು ಅಲಕ್ಷ್ಯ ಮಾಡುವಂತೆಯೂ ಇರಲಿಲ್ಲ. ಸವೆರ್ರಿ ಕೃತಿಗಳ (೧೭೩೯) ಅನಂತರ, ಶತಮಾನಕ್ಕೂ ಮಿಕ್ಕಿ ಕೆಥಲಿಕ್ ಕೃತಿರಚನೆ ಕಂಡುಬರದಿದ್ದಾಗ ಮೇಲ್ಕಂಡ ಪರಿಸ್ಥಿತಿಯಿಂದಾಗಿ, ೧೯ನೇ ಶತ.ದ ಮಧ್ಯಕಾಲದಿಂದ ಅವರ ಗ್ರಂಥ ಪ್ರಕಟನೆ ಆರಂಭವಾಯಿತು.*

ಅದರ ಪ್ರತೋದನಾದವನು, ಮೈಸೂರ ಸಂಸ್ಥಾನದ ಪ್ರಥಮ ಸ್ವತಂತ್ರ 'ವಿಕಾರ್ ಎಪಾಸ್ಟಲಿಕ್' ಆಗಿದ್ದ ಎಲ್. ಶರ್ಬೊನಾ [Charbonnaux]. ಸು. ೧೮೫೦ರಲ್ಲಿ ಕೆಥಲಿಕ್ ಪ್ರೆಸ್ ಸ್ಥಾಪಿಸಿ ಅನೇಕ ಮತೀಯ ಅದರಂತೆ ಶಾಲೇಯ ಪುಸ್ತಕಗಳನ್ನು ಹೊರತಂದನು. ಅವುಗಳಲ್ಲಿ ಹೆಚ್ಚಿನವು ತಮಿಳಿನಿಂದ ಅನುವಾದಿತವಾದವುಗಳು. ಅವನ

---

* ಕೆಥಲಿಕ್ ವಾಙ್ಮಯವು ಹೆಚ್ಚು ಅಪರಿಚಿತವಾದ್ದರಿಂದ, ಇದುವರೆಗೆ ನಮಗೆ ದೊರೆತ ಗ್ರಂಥಗಳ ಸೂಚಿಯನ್ನು ಅನುಬಂಧವಾಗಿ ಕೊಟ್ಟಿದೆ.

'ಜಪದ ಪುಸ್ತಕವು' ರೋಮನ್ ಕೆಥಲಿಕರ ಧಾರ್ಮಿಕ ವಿಧಿನಿಯಮಗಳ ದೊಡ್ಡ ಹೊತ್ತಗೆ. ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಶಬೋ೯ನಾ ಇವನ ವಿಶೇಷ ಕೊಡುಗೆಯೆಂದರೆ, 'ಕನ್ನಡ-ಲ್ಯಾಟಿನ್' ಹಾಗೂ 'ಲ್ಯಾಟಿನ್-ಕನ್ನಡ' ಕೋಶಗಳು. ಕೆಥಲಿಕ್ ಶಾಲೆಗಳಲ್ಲಿ ಲ್ಯಾಟಿನ್ ಅಭ್ಯಾಸವು ಕಡ್ಡಾಯವಿದ್ದುದರಿಂದ ಈ ಕೋಶಗಳ ಪ್ರಕಟನೆ ಅಗತ್ಯವೆನಿಸಿರಬೇಕು. ಮೊದಲಿನದರ ರಚನೆಯಲ್ಲಿ, ಈ ಹಿಂದೆ ಪ್ರಕಟವಾಗಿದ್ದ ರೀವ್, ಗ್ಯಾರೆಟ್ ಎಂಬವರ ಕನ್ನಡ-ಇಂಗ್ಲಿಶ್ ನಿಘಂಟುಗಳಲ್ಲಿಯ ಕನ್ನಡ ಶಬ್ದಗಳನ್ನು ಮುಂದಿಟ್ಟುಕೊಂಡು ಆ ಮಟ್ಟಿಗೆ ಲ್ಯಾಟಿನ್ ಪದಗಳನ್ನು ಕೊಟ್ಟಿದೆ. ಎರಡನೆಯದರಲ್ಲಿ ಅಂದರೆ 'ಲ್ಯಾಟಿನ್—ಕನ್ನಡ' ಕೋಶದಲ್ಲಿ, ಕನ್ನಡ ಪದಗಳನ್ನು ಆಯ್ದುಕೊಳ್ಳುವ ವಿಚಾರದಲ್ಲಿ ಪರಿಶ್ರಮ ಕಂಡುಬರುತ್ತದೆ. ಇಂಥ ಕನ್ನಡ ಪದಗಳಲ್ಲಿ ಬಳಕೆಯ ಕನ್ನಡ ಹಾಗೂ ಹಿಂದೂಸ್ತಾನಿ ಶಬ್ದಗಳು ಎದ್ದುಕಾಣುತ್ತವಲ್ಲದೆ, ಸಂಸ್ಕೃತ ಮೂಲದವಲ್ಲ.

ಶಬೋ೯ನಾನ ಇನ್ನೊಂದು ವಾಙ್ಮಯ ಕಾರ್ಯವೆಂದರೆ, ತನ್ನ ಸಹೋದ್ಯೋಗಿ ಬರೆದ ಕೃತಿಗಳನ್ನು ತಿದ್ದಿ, ಸಂಪಾದಿಸಿದುದು. ಅಂಥವರಲ್ಲಿ ಎ. ಬೌತೆಲೊ (Bout-eloup) ಪ್ರಮುಖನಿದ್ದಾನೆ. ಇಷ್ಟೇ ಅಲ್ಲ, ಇತರ ಯಾವದೇ ಕೆಥಲಿಕ್ ಪಾದ್ರಿಗಳಿಗಿಂತ ಅವನು ಹೆಚ್ಚು ಕಾಲ (ಎರಡು ದಶಕ) ಗ್ರಂಥೋದ್ಯಮದಲ್ಲಿ ತೊಡಗಿದ್ದಾನೆ. ಅವನ ಗ್ರಂಥಗಳು ಯಥಾಪ್ರಕಾರ ೧೦೦ಕ್ಕೆ ೯೦ ಪಾಲು ತಮಿಳು ಅನುವಾದಗಳೇ. ವಿಷಯದ ದೃಷ್ಟಿಯಿಂದ ಪಠ್ಯ ಪುಸ್ತಕಗಳು, ಧಾರ್ಮಿಕ ಉಪದೇಶದವು ಹಾಗೂ ಲ್ಯಾಟಿನ್ ಭಾಷಾಭ್ಯಾಸದವು—ಅವನ ಕೊಡುಗೆಗಳೆನ್ನಬಹುದು. ಕನ್ನಡ – ಲ್ಯಾಟಿನ್ ಸಾಹಚರ್ಯದ ಅಂಗಗಳೆಂದು, ಮೇಲೆ ಹೇಳಿದ ಕೋಶಗಳ ಜೊತೆಗೆ, ಬೌತೆಲೊನ 'ಲಲೀನು ವ್ಯಾಕರಣ' ಹಾಗೂ ಕನ್ನಡ ಛಂದಸ್ಸಿನ ಕುರಿತು ಲ್ಯಾಟಿನ್ ಭಾಷೆಯಲ್ಲಿ ಬರೆದ ಪುಸ್ತಕ—ಇವನ್ನು ಗಣಿಸಬೇಕು, ಅವನ ಎಲ್ಲ ಕೃತಿಗಳಿಗೂ ಪ್ರೇರಣೆ, ಸುಧಾರಣೆಗಳ ದೃಷ್ಟಿಯಿಂದ ಶಬೋ೯ನಾನ ನೆರವು ಇದ್ದಿತೆಂಬುದನ್ನು ಮರೆಯಲಾಗದು.

ಈ ಕಾಲದ ಎರಡು ವಿಶಿಷ್ಟ ಕೃತಿಗಳನ್ನು ಪ್ರತ್ಯೇಕವಾಗಿ ಗಮನಿಸಬೇಕು. ಒಂದನೆಯದು—'ಶ್ಲೋಕ ಸಂಗ್ರಹ' (೧೮೬೮). ಇದರಲ್ಲಿ ಸಂಸ್ಕೃತದ ಉಕ್ತಿಗಳನ್ನೂ, ಅವುಗಳಿಗೆ ಸಮಾನವಾಗಿರುವಂಥ ಬೈಬಲ್ ಉಕ್ತಿಗಳನ್ನೂ ವಿವರಣೆಯೊಂದಿಗೆ ಕೊಡಲಾಗಿದೆ. ಇನ್ನೊಂದು–'ಪರಮಾರ್ಥ ಗುರುವಿನ ಕಥೆ'. ಖ್ಯಾತನಾಮ ಬೆಶ್ಚಿಯಿಂದ ತಮಿಳಿನಲ್ಲಿ ರಚಿತವಾಗಿದ್ದ ಈ ಕೃತಿಯುನ್ನು ಜೆ. ಬ್ಯಾರಿಲ್ (Barrielle) ಎಂಬವನು ಅನುವಾದಿಸಿದ್ದಾನೆ (೧೮೭೭).

ಎಲ್ಲೆಡೆಗೂ ಕಂಡುಬರುವ ಮತ–ಮತಾಂತರಗಳ ಬಡಿದಾಟವು ಆಗಿನ ಕೆಥಲಿಕ್ ಹಾಗೂ ಪ್ರೊಟೆಸ್ಟಂಟರಲ್ಲಿಯೂ ಬರಹ ರೂಪದಲ್ಲಿ ವ್ಯಕ್ತವಾಗಿದೆ. 'ವೇದಮಾರ್ಪಡಿಸುವಿಕೆಯ ಖಂಡನೆ' (೧೮೬೩) ಹಾಗೂ 'ಪ್ರೊತೆಸ್ತಾಂಟ್‌ಯೆಂಬ ಪತಿತರಮಾರ್ಗ' (೧೮೬೭–೧೮೯೮) ಇವು ಆ ಬಗೆಯ ಗ್ರಂಥಗಳಾಗಿವೆ. ಪ್ರೊಟೆಸ್ಟಂಟರೂ ಇಂಥ ಪುಸ್ತಕಗಳನ್ನು ಹೊರತಂದುದುಂಟು.

ಪ್ರಸಕ್ತ ಶತಮಾನದ (೧೯೧೫ರ ವರೆಗೆ) ಕೆಥಲಿಕ್ ವಾಙ್ಮಯ ಕಾರ್ಯವೆಂದು 'ಕ್ರೀಸ್ತುನಾಥರ ಅನುಸಾರವು' (೧೯೦೫) ಮತ್ತು 'ಆತ್ಮಸ್ನೇಹ' (೧೯೦೬) ಇವೆರಡನ್ನು ಮಾತ್ರ ಹೆಸರಿಸುತ್ತೇವೆ. ಮೊದಲಿನದು ಥಾಮಸ್–ಎ–ಕೆಂಪಿಸ್‌ನ ಸುಪ್ರಸಿದ್ಧ ಕೃತಿಯಾದ De Imitatione Christie ಇದರ ಅನುವಾದ. ಇನ್ನೊಂದು De Saint of A. de' Liguori ಯ ಕೃತಿ. ಆಮೇಲಿನ ವಾಙ್ಮಯ ರಚನೆ ಅಲ್ಲಿ ಇಲ್ಲಿ ಮಾತ್ರ ಕಂಡು ಬರುತ್ತದೆ. ಒಟ್ಟಿನಲ್ಲಿ, ಕೆಥಲಿಕರ ಕನ್ನಡ ವಾಙ್ಮಯ ಕಾರ್ಯವು ಅಲ್ಪವೆಂದು ತೋರಿದರೂ, ಹೊಸಗನ್ನಡ ಸಾಹಿತ್ಯವನ್ನು ಆರಂಭಿಸಿದವರು ಅವರೆ; ಅಷ್ಟೇ ಅಲ್ಲ, ಬಹಳಷ್ಟು ಹಿಂದಕ್ಕೆ ಹೊಸಗನ್ನಡದ ಚರಿತ್ರೆಯನ್ನು ಒಯ್ಯಲು ಕಾರಣರಾದವರೆಂಬ ಹೆಗ್ಗಳಿಕೆ ಅವರದು. ಜೊತೆಗೆ ಲ್ಯಾಟಿನ್ ಕನ್ನಡ ಸಾಹಚರ್ಯವನ್ನೂ ಅದಕ್ಕೆ ಸೇರಿಸಬೇಕು.

ವಿದೇಶೀ ಮಿಶನರಿಗಳ ಸಾಹಿತ್ಯ ಕಾರ್ಯವು ೧೭–೧೮ನೆಯ ಶತಮಾನಗಳಲ್ಲಿ ತುಸುಮಟ್ಟಿಗೆ ಮಾತ್ರ ಕಾಣಿಸಿಕೊಂಡು ೧೯ನೆಯ ಶತಮಾನದಲ್ಲಿ ಅತ್ಯಂತ ಪ್ರವರ್ಧಮಾನ ಸ್ಥಿತಿಯಲ್ಲಿದ್ದಿತು. ಈ ಹಿಂದೆ ಸೂಚಿಸಿದಂತೆ ಇಪ್ಪತ್ತನೆಯ ಶಶಮಾನದಲ್ಲಿ ಭರದಿಂದ ಕ್ಷೀಣಿಸಿತು. ಅದರ ಕಾರಣಗಳು ಹಲವಾರು. ವಿದೇಶೀ ಮಿಶನರಿಗಳು ಇಲ್ಲಿಗೆ ಬರುವುದು ಕಡಿಮೆಯಾಯಿತು. ಕ್ರೈಸ್ತಮತ ತತ್ವಗಳನ್ನು ಇಲ್ಲಿಯ ದೇಶೀಯರಿಗೆಂದು ಹೇಳುವಲ್ಲಿ ಹೊಸ ಮಾತುಗಳು ಇರಲಿಲ್ಲ. ಇತ್ತ ಕೋಶ–ವ್ಯಾಕರಣಾದಿ ಭಾಷಾಭ್ಯಾಸದ ಸಾಧನಗಳು, ಪಠ್ಯಪುಸ್ತಕಗಳು ಸಾಕಷ್ಟು ಪ್ರಮಾಣದಲ್ಲಿ ಬಂದು ಬಿಟ್ಟಿದ್ದವು. ಜೊತೆಗೆ ಕ್ರೈಸ್ತ ಮತಾಂತರದ ವಿರುದ್ಧವಾಗಿ ದೇಶೀಯರಲ್ಲಿ ಜಾಗೃತಿ ಉಂಟಾಗಿದ್ದಿತಲ್ಲದೆ, ಸ್ವರಾಜ್ಯ ಚಳುವಳಿಯ ಪರಿಣಾಮವಾಗಿ, ಅದನ್ನು ಸತ್ವಯುತವಾಗಿ ವಿರೋಧಿಸಲಾಯಿತು. ಇತ್ತ ಸ್ಥಳಿಕ ಕ್ರೈಸ್ತರೊಳಗೆ, ಸಾಹಿತ್ಯಿಕ ಒಲವು ಇದ್ದವರು—ಚೆನ್ನಪ್ಪ ಉತ್ತಂಗಿಯಂತಹ ಒಬ್ಬಿಬ್ಬರನ್ನು ಬಿಟ್ಟರೆ—ಹೊರಡಲಿಲ್ಲ. ಹಾಗಿದ್ದವರು ಸ್ವಮತೀಯ ಸಾಹಿತ್ಯಕ್ಕಿಂತ ಬೇರೆ ರೀತಿಯ ಕೃತಿ-ರಚನೆಗೆ ಗಮನವಿತ್ತರು. ಅಂತೂ ಕ್ರೈಸ್ತ ವಾಙ್ಮಯವು ಈ ತತಮಾನದ ಪೂರ್ವಾರ್ಧದಲ್ಲಿ ತೆರೆಯ ಮರೆಗೆ ಸರಿಯಿತು. ಕ್ರಿ. ಶ. ೧೯೩೪ರ ಕನ್ನಡ ಬೈಬಲಿನ ಅಧಿಕೃತ ಪ್ರಕಟನೆಯೇ ವಿದೇಶೀಯರ ಕನ್ನಡ ವಾಙ್ಮಯ ಸೇವೆಯ ಕೊನೆಯ ಹೆಜ್ಜೆ.

ಈ ಸಂದರ್ಭದಲ್ಲಿ ಗಮನಿಸಬೇಕಾದ ಒಂದು ಮಾತೆಂದರೆ, ಕ್ರೈಸ್ತ–ವಾಙ್ಮಯವು ಕನ್ನಡದಲ್ಲಿ ಪ್ರತ್ಯೇಕವಾಗಿಯೇ ಉಳಿದುಕೊಂಡಿತು; ಇತರ ಹಿಂದೂಮತೀಯ ವಾಙ್ಮಯಗಳಂತೆ ನೆಲೆ ನಿಲ್ಲಲಿಲ್ಲ; ಕನ್ನಡ ಸಾಹಿತ್ಯಗಂಗೆಯಲ್ಲಿ ಬೆರೆತುಕೊಂಡು ಮುಂದೆ ಸಾಗಲಿಲ್ಲ. ಆದರೆ ಹೊಸಗನ್ನಡದ ಸಾಹಿತ್ಯದ ನಸುಕು ಇನ್ನೂ ಹರಿಯದಿದ್ದಾಗ, ವಿದೇಶೀ ಮಿಶನರಿಗಳು ಬಂದು ತಮಗೆಂದೇ ಆಗಲಿ ರಚಿಸಿದ ಭಾಷಾಭ್ಯಾಸದ ಸಾಧನಗಳು, ಆರಂಭಿಸಿದ ಹೊಸ ಸಾಹಿತ್ಯ ಪ್ರಕಾರಗಳು, ವ್ಯಕ್ತಪಡಿಸಿದ ಅನೇಕಾನೇಕ ಹೊಸ ವಿಚಾರಗಳು, ಕನ್ನಡಿಗರ ಸಾಹಿತ್ಯ ಕಾರ್ಯದಲ್ಲಿ ಅನ್ವಿತವಾಗಿ ಪ್ರಯೋಜನಕ್ಕೆ ಒದಗಿದುವು. ಈ ದೃಷ್ಟಿಯಿಂದ ಅವರು ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿರಸ್ಥಾಯಿಗಳು.

ಅನುಬಂಧ ೧

ಕೆಥಲಿಕ್ ಸಾಹಿತ್ಯ ಸೂಚಿ

(೧೬೫೦ರಿಂದ ೧೯೬೦ರವರೆಗೆ)

ಇದರಲ್ಲಿ ಕೆಥಲಿಕ್ ಪಂಥ ಹಾಗೂ ಅನ್ಯ ವಿಷಯಗಳ ಮೇಲೆ ಕೆಥಲಿಕರಿಂದ ರಚಿತವಾದ ಕೃತಿಗಳ ಉಲ್ಲೇಖವಿದೆ. ಜೊತೆಗೆ ಕೆಥಲಿಕ್ ಪಂಥದ ಮೇಲೆ ಬೇರೆಯವರು ಬರೆದ ಕೃತಿಗಳೂ ಇವೆ. ಈ ಪಟ್ಟಿ, ವಿಶೇಷತ: ಇಪ್ಪತ್ತನೆಯ ಶತಮಾನಕ್ಕೆ ಸಂಬಂಧಿಸಿದಂತೆ ಅಪೂರ್ಣವಾಗಿದೆ. ನಮೂದುಗಳು ಕಾಲಾನುಕ್ರಮವಾಗಿವೆ ಎಂಬುದನ್ನು ಗಮನಿಸಬೇಕು.

ಮುದ್ರಣ ಪೂರ್ವ ಯುಗ

ರಾಬರ್ಟ ಚಿನಾಮಿ[ಮೊ] ಕೃತಿಗಳು: 'ಕ್ರೈಸ್ತ ಧರ್ಮದ ರಹಸ್ಯತತ್ವಗಳು; ಕ್ರೈಸ್ತ ಧರ್ಮದ ಸಮರ್ಥನೆ ; ಕ್ರೈಸ್ತಸಂತರ ಚರಿತ್ರೆಗಳು ; ಮೈಸೂರು ಜನರ ಜಾತಿ ಪದ್ಧತಿ, ಮೂಢ ನಂಬಿಕೆಗಳು ; ಕನ್ನಡ ಶಬ್ದಕೋಶ ; ಕನ್ನಡ ವ್ಯಾಕರಣ (೧೬೫೫–೧೬೭೫)

ಅಮೆದೊರ್ ದ ಸಾಂತಾ ಅನ್ನಾ : Flos Sanctorum ಕೃತಿಯ ಅನುವಾದ. (೧೭ನೆಯ ಶತ.)

ಡಿಯೊಗೊ ರಿಬೆರೊ : ಕ್ರೈಸ್ತ ಸಂತರ ಚರಿತ್ರೆಯ ಅನುವಾದ. ಮೂಲ– Ribadereira ನ ಕೃತಿ (೧೭ನೆಯ ಶತ.)

ಪ್ರಿಝ್ಕ್ರಿಲ್ : ಕನ್ನಡ ವ್ಯಾಕರಣ ಮತ್ತು ಕೋಶ ರಚನೆ. (೧೭ನೆಯ ಶತ.)

ಸವೆರ್ರಿ ಅಥವಾ ರ್‍ಝುವಿಯರ್, ತಿಮೊಥಿ: ಜ್ಞಾನೋಪದೇಶ, ಕಾರ್ಲ ತೊಮೆ ಇವನ ಮಲಬಾರ ಪದ್ಧತಿಗಳ ಕುರಿತ ಕಲ್ಪಣೆ (ಸು. ೪೦ ಪಾನುಗಳು) ; ಯೇಸು ಮತ್ತು ಕ್ರೈಸ್ತ ಸಂತರ ಚರಿತ್ರೆಗಳು ಹಾಗೂ ಕ್ರೈಸ್ತ ತತ್ವ ವಿಚಾರಗಳು, ಆಚರಣೆಗಳು (ಸು ೩೩೭ ಪಾನುಗಳು).

ಮುದ್ರಣ ಯುಗ

ಸತ್ಯವೇದದ ಪರೀಕ್ಷೆಯು. ತಮಿಳಿನಿಂದ ಅನುವಾದ : ಎ. ಬೌತೆಲೊ (Bouteloup ಸಂ: ಇ. ಎಲ್. ಶರ್ಬೊನಾ. ಕೆಥಲಿಕ್ ಮಿಶನ್ ಪ್ರೆಸ್, ಬೆಂಗಳೂರು.(೧೮೫೨)

ದೈವ ಪರೀಕ್ಷೆಯು. (ತಮಿಳಿನಿಂದ ಅನು.) ಸಂ: ಇ. ಎಲ್. ಶರ್ಬೊನಾ. ಕೆ. ಮಿ. ಪ್ರೆ. ಬೆಂ. ೧೮೫೨

Dictionarium Canarense-Latinum. Ad usum Maissurensis Catholici Seminarii By E-L. Charbonnaux. C. M. P. B. 1855

Dictionarium Latino-Kanaris.

ಪೂರ್ವೀಕ ಮತದ ವ್ಯಾಖ್ಯಾನವು–ತಮಿಳಿನಿಂದ ಅನು. ಇ-ಎಲ್ ಶರ್ಬೋನಾ. ಕೆ. ಮಿ. ಪ್ರೆ. ಬೆಂ. ೧೮೫೮

ಉಭಯ ಮಾರ್ಗ ಸಂಮಂಧ–ತಮಿಳು ಮೂಲ: ನಾನಾಶಿಖಾಮಣಿ ಪಿಳ್ಳೈ. ಅನು. ಕೆ. ಎ. ಯೋಸಿಯ ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು. ೧೮೫೮.

ಶಿಲ್ವೆಹಾದಿ (Stations of the Cross)–ಕೆ. ಮಿ. ಪ್ರೆ. ಬೆಂ. ೧೮೬೦

ದಿವ್ಯ ಮಾತೃಕೆಯು–ತಮಿಳಿನಿಂದ ಅನು. ಮತ್ತು ಸಂ: ಇ–ಎಲ್. ಶರ್ಬೋನಾ. ಕೆ. ಮಿ. ಪ್ರೆ. ಬೆಂ. ೧೮೬೨

ವೇದಸಾಕ್ಷಿಯಾದ ದೇವಸಹಾಯ ಪಿಳ್ಳೆಯವರ ಚರಿತ್ರೆಯು–ತಮಿಳು ಮೂಲ: ಲೂಯಿ ಸೇಂಟ್–ಸಿರ್. ಕೆ. ಮಿ. ಪ್ರೆ. ಬೆಂ. ೧೮೬೨

ಆದಿತ್ಯವಾರದ ಅದ್ಭುತವೆಂಬ ಹಳೇವೇದ, ಹೊಸವೇದದ ಸಂಕ್ಷೇಪವು–ತಮಿಳಿನಿಂದ ಅನು: ಎ. ಬೌತೆಲೊ. ಕೆ. ಮಿ. ಪ್ರೆ. ಬೆಂ. ೧೮೫೮ ತಿದ್ದಿದ ಆವೃತ್ತಿ–೧೮೬೩

ಓದುವ ಶಾಲೆಗಳಲ್ಲಿ ಬಾಲಕರು ಪಾಠಮಾಡುವ ಒಂದನೇ ಪುಸ್ತಕ–ತಮಿಳು ಕೃತಿಯ ಆಧಾರ. ಕೆ. ಮಿ. ಪ್ರೆ. ಬೆಂ. ೧೮೬೩

ಜಪದ ಪುಸ್ತಕವು—ತಮಿಳಿನಿಂದ ಅನು: ಇ–ಎಲ್. ಶರ್ಬೋನಾ. ಕೆ. ಮಿ. ಪ್ರೆ. ಬೆಂ. ೧೮೬೩

ಸತ್ಯವೇದ ಚರಿತ್ರೆಗಳ ಸಂಕ್ಷೇಪವು—ತಮಿಳಿನಿಂದ ಅನು: ಎ. ಬೌತೆಲೊ. ಕೆ. ಮಿ. ಪ್ರೆ. ಬೆಂ. ೧೮೬೩

ಸತ್ಯೋಪದೇಶವು....ಜ್ಞಾನೋಪದೇಶವು—ಮೂಲ: ಜೆ. ಬಟ್ಲರ್. ಕೆ. ಮೆ. ಪ್ರಿ. ಬೆಂ. ೧೮೬೩

ಸತ್ಯೋಪದೇಶವು. [ಭಾ. ೨]: ಹಬ್ಬಸಾಂಗ್ಯಗಳ ವ್ಯಾಖ್ಯಾನವು—ಅನು: ಎ. ಬೌತೆಲೊ ಕೆ. ಮಿ. ಪ್ರೆ. ಬೆಂ. ೧೮೬೩

ವೇದವಾರ್ಪಡಿಸುವಿಕೆಯು ಖಂಡನೆಯೆಂಬ ಸತ್ಯತಿರುಸಭೆಯ ಸೂಕ್ಷ್ಮವಾದ ವ್ಯಾಖ್ಯಾನವು. ಕೆ. ಮಿ. ಪ್ರೆ. ಬೆಂ. ೧೮೬೩

ಇಂಗ್ಲಾಂಡ್ ಸೀಮೆಯ ಚರಿತ್ರೆಯ ಪ್ರಶ್ನೋತ್ತರರೂಪವಾದ ಸಂಕ್ಷೇಪವು—ತಮಿಳಿನಿಂದ ಅನು: ಎ. ಬೌತೆಲೊ. ಕೆ. ಮಿ. ಪ್ರೆ. ಬೆಂ. ೧೮೬೪

ಭೂಗೋಳಶಾಸ್ತ್ರದ ಸಂಕ್ಷೇಪವು—ಅನು: ಎ. ಬೌತೆಲೊ. ಕೆ. ಮಿ. ಪ್ರೆ. ಬೆಂ. ೧೮೬೪

ಜ್ಞಾನಬೋಧಕವು—ಮೂಲ: ಬೆಸ್ಕಿ. ಕೆ ಮಿ. ಪ್ರೆ. ಬೆಂ. ೧೮೬೪

ಅಜ್ಞಾತವಾಸ, ಅಥವಾ ಆರ್ಚ್ಯ. ಇಗ್ನಾಸಿಯವರ ಧ್ಯಾನಗಳು—ಸಂ: ಇ–ಎಲ್. ಶರ್ಬೊನಾ. ಕೆ. ಮಿ. ಪ್ರೆ. ಬೆಂ. ೧೮೬೫

ಸುಕೃತ ಮಂತ್ರಗಳು—ಸಂ: ಶರ್ಬೊನಾ, ಕೆ. ಪ್ರೆ. ಬೆಂ. ೧೮೬೬

ತಿರುಸಭೆಯ ಸಂಕ್ಷೇಪವಾದ ಚರಿತ್ರೆಯು—ಮೂಲ: ಜೊಂಸೆಫ್ ರೀವ್, ಸಂಕ್ಷಿಪ್ತಾನುವಾದ: ಎ.ಬೌತೆಲೊ. ಕೆ. ಮಿ. ಪ್ರೆ. ಬೆಂ. ೧೮೬೭

ಇಂಗ್ಲಿಷ್ ಭಾಷೆಯನ್ನು ಕಲಿತುಕೊಳುವುದಕ್ಕೆ....ಪಾಠಗಳು—ತಮಿಳಿನಿಂದ ಅನು: ಎ. ಬೌತೆಲೊ. ಕೆ. ಮಿ. ಪ್ರೆ. ಬೆಂ. ೧೮೬೭

ಪ್ರೊತೆಸ್ತಾಂಟ್‌ಯೆಂಬ ಪತಿತರ ಮಾರ್ಗ—ಇ. ಎಲ್. ಶರ್ಬೊನಾ, ಕೆ. ಮಿ. ಪ್ರೆ. ಬೆಂ. ೧೮೬೭. ೨ನೇಯ ಆವೃತ್ತಿ: ೧೮೬೮

ಶ್ಲೋಕ ಸಂಗ್ರಹ (ಸಂಸ್ಕೃತ, ತತ್ಸಮಾನ ಬೈಬಲ್‌ನ ಉಕ್ತಿಗಳು)—ಕೆ. ಮಿ. ಪ್ರೆ. ಬೆಂ. ೧೮೬೮

ಭದ್ರವಾದ ಅಭ್ಯಂಗಕ್ಕೆ ಆಯಿತ್ತವಾಗಿರುವ ಜ್ಞಾನೋಪದೇಶವು—ಕೆ. ಮಿ. ಪ್ರೆ. ಬೆಂ. ೧೮೬೮

ಕನ್ನಡ ಭಾಷೆಯಲ್ಲಿ ತರ್ಜಮೆ ಮಾಡಲ್ಪಟ್ಟಂಥಾ ವ್ಯಾಕರಣವು—ಕೆ. ಮಿ. ಪ್ರೆ. ಬೆಂ. ೧೮೬೮

ಲತೀನು ವ್ಯಾಕರಣವು—ಎ. ಬೌತೆಲೊ, ಕೆ. ಮಿ. ಬೆಂ. ೧೮೬೯

ರೋಮನ್ ಕಥೋಲಿಕ್ ಸಭೆಯ ಪರೀಕ್ಷೆ—ಸಿ. ಕ್ಯಾಂಬೆಲ್ (ಲಂಡನ್ ಮಿಶನ್). ಬೆಂಗಳೂರು ೧೮೫೭

ಪರಮಾರ್ಥಗುರುವಿನ ಕಥೆ—ತಮಿಳು ಮೂಲ: ಬೆಸ್ಕಿ. ಅನು: ಜೆ. ಬಾರಿಲ್ (Barrielle). ಕೆ. ಮಿ. ಪ್ರೆ. ಬೆಂ, ೧೮೭೭.

ಉಭಯ ಕ್ರೈಸ್ತಮತದರ್ಶಕವು. ಅಂದರೆ ಸೌವಾರ್ತಿಕ ಪ್ರೊತೆಸ್ತಂತ ಸಭೆಗೂ ರೋಮನ್ ಕಥೋಲಿಕ ಸಭೆಗೂ ಸಮ್ಮತವೂ ಅಸಮ್ಮತವೂ ಆಗಿರುವ ಬೋಧನೆಗಳನ್ನು ಸೂಚಿಸುವ ಪ್ರಶ್ನೋತ್ತರಗಳು. ಬಾ. ಮಿ. ಪ್ರೆ. ಮಂ. ೧೮೮೧

ರೋಮನ್ ಮತವನ್ನು ತೂಗುವ ತ್ರಾಸು—ಗಾಸ್ಟ್, w. w. ಬೆಂ. ೧೮೮೩

೨೦ನೆಯ ಶತಮಾನ (—೧೯೧೫)

ಕ್ರೀಸ್ತುನಾಥರ ಅನುಸಾರವು—ಥಾಮಸ್–ಎ–ಕೆಂಪಿಸ್‌ರ De Imitatione Christ ಪುಸ್ತಕದ ಅನುವಾದ, ಬೆಂ. ೧೯೦೫

ದ ಸೇಂಟ್, ಸಿ. (C. De saint of A. de Liguori)—ಆತ್ಮಸ್ನೇಹ....ಬೆಂ. ೧೯೦೬

"೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ"* ಒಂದು ಸಮೀಕ್ಷೆ

ಬಹಿರಂಗ

ಈ ಗ್ರಂಥದಲ್ಲಿ ಕಳೆದ ಶತಮಾನದ ಪಾಶ್ಚಾತ್ಯ ವಿದ್ವಾಂಸರ, ಅಂದರೆ ಯುರೋಪ/ಇಂಗ್ಲಂಡದಿಂದ ಬಂದ ಮಿಶನರಿ ಜನರ ಹಾಗೂ ಅಧಿಕಾರಿಗಳ ಸಾಹಿತ್ಯ ಕಾರ್ಯದ ವಿವರಣೆಯಿದೆ. ಇದರಲ್ಲಿ ಮೂರು ವಿಭಾಗಗಳಿದ್ದು, ಮೊದಲಿನವರಲ್ಲಿ, ಅಖಿಲ ಭಾರತ ಮಟ್ಟದ ಪಾಶ್ಚಾತ್ಯ ವಿದ್ವಾಂಸರ ಉಲ್ಲೇಖವಿದೆ. ಪಾಶ್ಚಾತ್ಯರ ಕನ್ನಡದ ಕೆಲಸಕ್ಕೆ ಇದು ಹಿನ್ನೆಲೆಯಾಗಿ ಬರುವುದು ಕ್ರಮಪ್ರಾಪ್ತವಾದದ್ದೇ. ಆದರೆ ಈ ವಿವರಣೆಯು ಒಟ್ಟಿನ ಗ್ರಂಥದ ಅರ್ಧದಷ್ಟು ಭಾಗವನ್ನು (ಎಂದರೆ ಮೊದಲಿನ ೨೫೦ ಪುಟಗಳಲ್ಲಿ ಮತ್ತು ಇತರ ಕಡೆಗಳಲ್ಲಿ) ಆಕ್ರಮಿಸಿದೆಯಾದ್ದರಿಂದ, ಈ ಕೃತಿಯಲ್ಲಿ ಕನ್ನಡದ ವಿವೇಚನೆಗೆ ನ್ಯಾಯವಾದ ಪ್ರಾಧಾನ್ಯ ದೊರೆತಿಲ್ಲ.

ಮುಂದಿನ ಎರಡು ಭಾಗಗಳಲ್ಲಿ ಕರ್ನಾಟಕದ ಮಿಶನರಿಗಳ ಕ್ರೈಸ್ತ ಸಾಹಿತ್ಯದ ಮತ್ತು ಇತರ ಕನ್ನಡ ಗ್ರಂಥಗಳ ರಚನೆಯ ವಿವರಗಳಿವೆ. ೫೦೦ ಕ್ಕೂ ಮಿಕ್ಕಿದ ಪಾಶ್ಚಾತ್ಯ ಜನರ ವಾಙ್ಮಯ ಕಾರ್ಯದ ಹಾಗೂ ಇತರ ಪೂರಕ ಅಂಶಗಳ ವಿವರಗಳನ್ನು ಈ ಪುಸ್ತಕದಲ್ಲಿ ಜಡಿದು ತುಂಬಲಾಗಿದೆ. ಏನೇ ಆಗಲಿ, ಲೇಖಕರು ವಿಷಯ ಸಂಗ್ರಹಕ್ಕೆ ತುಂಬಾ ಪರಿಶ್ರಮ ಪಟ್ಟಿದ್ದಾರೆ.

ಈ ಗ್ರಂಥದಲ್ಲಿ ೨೫ ಅಧ್ಯಾಯಗಳಿವೆಯಾದರೂ ಒಂದಕ್ಕೂ ಶೀರ್ಷಿಕೆಯಿಲ್ಲ. ಅಲ್ಲದೆ, ಒಂದು ಅಧ್ಯಾಯದಿಂದ ಇನ್ನೊಂದು ಅಧ್ಯಾಯಕ್ಕೆ ಕ್ರಮಬದ್ಧವಾದ ಹೊಂದಿಕೆಯಿಲ್ಲ. ೧೭ನೆಯ ಅಧ್ಯಾಯವು 'ಕರ್ನಾಟಕದ ಅಂದಿನ ವ್ಯಾಪ್ತಿ ಮತ್ತು ಮೇರೆ' ಯಿಂದ ಆರಂಭವಾಗಿ, 'ವ್ಯಾಕರಣ ಗ್ರಂಥ' ಗಳ ವರೆಗೆ ಬಂದು ನಿಲ್ಲುತ್ತದೆ. ಮುಂದೆ ೧೮ನೆಯ ಅಧ್ಯಾಯವು ಮತ್ತೆ 'ಕರ್ನಾಟಕ ಭೂಪಠ' ದಿಂದ ಆರಂಭವಾಗುತ್ತದೆ.

ಪ್ರತಿ ಅಧ್ಯಾಯದಲ್ಲಿ ಹಲವು ಉಪಶೀರ್ಷಿಕೆಗಳಿವೆ. ಆದರೆ ಪರಿವಿಡಿಯಲ್ಲಿ ಕೊಟ್ಟ ಉಪಶೀರ್ಷಿಕೆಗಳಿಗೂ ಅಧ್ಯಾಯಗಳಲ್ಲಿ ಬರುವ ಉಪಶೀರ್ಷಿಕೆಗಳಿಗೂ ಸಹ ಪರಸ್ಪರ

---

* ಲೇಖಕರು ಐ. ಮಾ. ಮುತ್ತಣ್ಣ : ೧೯೬೯. ಪುಟ ೬೩೨

ಹೊಂದಿಕೆಯಿಲ್ಲ. ಅಲ್ಲದೆ, ಇಂಥ ಉಪಶೀರ್ಷಿಕೆಗಳು ಶಾಸ್ತ್ರೀಯ ಗ್ರಂಥಕ್ಕೆ ಸೂಕ್ತವಾದವುಗಳೇನಲ್ಲ. ಕೆಲವು ನಮೂನೆಗಳಿವು :

"ಭಾರತೀಯ ಮತ್ತು ಐರೋಪ್ಯಾ ವಿಧ್ವಾಂಸರು ಬಿಕ್ಕಿ ಬಿಕ್ಕಿ ಅತ್ತರು." (ವಿಲಿಯಮ್ ಜೋನ್ಸನನ್ನು ಕುರಿತು). ಪು. ೧೬೬

"ವಿಲಿಯಂ ಕ್ಯಾರಿ – ಇವನಾರು ಗೊತ್ತೆ ?" ಪು. ೧೭೯ "ಎಲೊ ಯುವಕನೆ ಕುಳಿತುಕೊ ಎಂದು ಆರ್ಭಟಿಕೊಳಗಾದನು." ಪು. ೧೭೯

"ಮೋಕ್ಷಕ್ಕೆ ಮೂಲ – ಮ್ಯಾಕ್ಸ್‌ಮುಲ್ಲರ್ – ಭಾರತೀಯರೆಂದರು." ಪು. ೭೯೨

"ತನ್ನ ಜನಾಂಗವನ್ನೆ ತೆಗಳಿದರೂ ಕಲೆಯೂ ಕಲೆಗಾಗಿ – ಜಾನ್ ಫ್ಲೀಟ್." ಪು. ೫೦೨

ಪುಸ್ತಕದ ತುಂಬೆಲ್ಲ ಭಾಷಾದೋಷಗಳು, ಅಸ್ಪಷ್ಟ ವಿಚಾರಗಳು, ಪುನರುಕ್ತಿಗಳು ಹಾಗೂ ಅಚ್ಚಿನ ತಪ್ಪುಗಳು ಹರಡಿಕೊಂಡಿವೆ. ವಿಷಯ ಸಂಗ್ರಹಕ್ಕಾಗಿ "ದಕ್ಷಿಣ ಹಿಂದೂಸ್ಥಾನದ ಹಲವು ಪ್ರಧಾನ ಗ್ರಂಥಭಂಡಾರಗಳನ್ನು ಶೋಷಣೆ ಮಾಡಿದೆನು" ಎಂದು ನಿವೇದಿಸಿದ್ದಾರೆ (ಪು. XII). 'ಶೋಧನೆ' ಮಾಡಿದೆನು ಎಂದು ಹೇಳಬಯಸಿದ್ದರೆಂದು ಕಾಣುತ್ತದೆ. ಮೆಕೆನ್ಸಿಯು 'ನೂರಾರು ದೇವಾಲಯಗಳನ್ನೂ ಬ್ರಾಹ್ಮಣ, ಜೈನ ಮತ್ತು ವೀರಶೈವ ಮಠಗಳನ್ನೂ ಪ್ರಾಚೀನ ಗ್ರಂಥಗಳಿಗಾಗಿ 'ಕೊಳ್ಳೆ ಹೊಡೆದನು' ಎಂದಿದ್ದಾರೆ ! "ಫ್ಲೀಟ್ ಅವನು ಸಾಧಿಸಿದ ಅನ್ವೇಷಣೆಗಿಂತ ಎಷ್ಟೋ ಮಿಗಿಲಾಗಿ ಕರ್ನಾಟಕದ ಬಗ್ಗೆ ದುಡಿದನೆಂಬುದಕ್ಕೆ ಅವನ Epigraphia Carnatica ಮತ್ತಿತರ ಗ್ರಂಥಗಳೇ ಸಾಕ್ಷಿಯಾಗಿವೆ." (ಪು. ೫೦೯). ಈ ವಾಕ್ಯದಲ್ಲಿ ಫ್ಲೀಟನ ಅದಾವ ಗುಣವನ್ನು ಎತ್ತಿ ಹಿಡಿಯಬಯಸಿದ್ದಾರೆಂಬುದು ಸ್ಪಷ್ಟವಾಗುವಂತಿಲ್ಲ. ಮೇಲಾಗಿ, E.C.ಯ ಸಂಪುಟಗಳು ಅವನ ಗ್ರಂಥಗಳೇ ಅಲ್ಲ ! ಅವು ರೈಸರವೆಂಬುದು ಸರ್ವವಿದಿತ.

ಈ ಗ್ರಂಥದಲ್ಲಿ ಅಗಣಿತವಾದ ಮಾಹಿತಿಯಿದೆಯಷ್ಟೆ. ಅವುಗಳಲ್ಲಿ ಒಂದಕೂ ಆಕರವನ್ನು ಸೂಚಿಸದಿದ್ದುದು ಸೋಜಿಗದ ಸಂಗತಿಯಾಗಿದೆ. ೧೮ನೇ ಶತಮಾನದಲ್ಲಿದ್ದ ಚಾರ್ಲಸ್ ಬ್ರೂನ್ ಎಂ. ಗವರ್ನರನ ಬಗ್ಗೆ ಬರೆಯುತ್ತ, "ಈಗ ನರ್ಮದೆ ವರೆಗಿನ ಪಶ್ಚಿಮ ಕರಾವಳೀ ಸೀಮೆಗಳವರೆಗೂ ಇದ್ದ ಜನರು ಕನ್ನಡ ಭಾಷೆಯನ್ನೇ ಆಡುತ್ತಿದ್ದರೆಂದೂ ಒಂದು ಸಂದರ್ಭದಲ್ಲಿ ಕನ್ನಡವೇ ಬೊಂಬಾಯಿಯಲ್ಲಿ ಅಧಿಕೃತವಾದ ದೇಶೀಯ ಭಾಷೆಯಾಗಿತ್ತೆಂದೂ ತಿಳಿದು ಬಂದಿದೆ" ಎನ್ನುತ್ತಾರೆ. ಸಂದಿಗ್ಧವಾದ, ಆದರೂ ವಿಚಾರಣೀಯವಾದ ಈ ಹೇಳಿಕೆಗೆ ಆಧಾರಕೊಟ್ಟಿದ್ದರೆ, ಬೇರೆ ಸಂದರ್ಭಗಳಲ್ಲಿ ಅದರ ಪ್ರಯೋಜನ ಪಡೆಯಬಹುದಿತ್ತು. ಅಲ್ಲದೆ, ಅನೇಕ ಗ್ರಂಥಗಳಿಂದ ನೇರವಾದ ಅವತರಣಿಕೆಗಳನ್ನು ಕೊಟ್ಟಿರುವರಷ್ಟೆ. ಕೆಲವೆಡೆ ಅವನ್ನು ಯಾರು ಹೇಳಿದ್ದಾರೆಂಬುದರ ಉಲ್ಲೇಖವೇ ಇಲ್ಲ. ಅಂದಾಗ ಆ ಮಾತಿಗೆ ಯಾವ ಬೆಲೆ ಬಂದೀತು ? ಸಂಶೋಧನ ಗ್ರಂಥವೊಂದರಲ್ಲಿ ಆಕರಗಳನ್ನು ಹೇಳದೆ ಹೋದರೆ ಅದನ್ನು ಪ್ರಾಮಾಣ್ಯವೆಂದು ಒಪ್ಪಲು ಹಿಂದೆಮುಂದೆ ನೋಡಬೇಕಾಗುವುದು.

ಪಾಶ್ಚಾತ್ಯರ, ಅದರಂತೆ ದೇಶೀಯರ ಹೆಸರುಗಳನ್ನು ಬರೆಯುವಲ್ಲಿ ಅನೇಕ ತಪ್ಪುಗಳಾಗಿವೆ. ಬಾಲಾಚಾರ್ಯ [ಬಾಳಾಚಾರ್ಯ] ಸಕ್ಕರಿ, ಟುರಮುರಿ [ತುರಮುರಿ], ಬಿ. ಹರಿ ಸಾಮಂತ [ಆಬಾಜಿ ಹರಿ ಸಾಮಂತ], ಧೊಂಡೊ ನರಹರಿರಾಯ [ಧೋಂಡೊ ನರಸಿಂಹ ಮುಳಬಾಗಲ], ರಂಗೋ ಕಟ್ಟಿ [ವೆಂಕಟ ರಂಗೋ ಕಟ್ಟಿ] – ಇವನ್ನು ಓದುವಾಗ ಹಿಡಿದು ಬಿಟ್ಟಂತಾಗುತ್ತದೆ. ಕಿಟೆಲ್ಲರ ವಿಷಯದಲ್ಲಂತೂ ಅಪರಾಧವೇ ಆಗಿದೆ. ಸ್ವತಹ ಮುತ್ತಣ್ಣನವರಿಗೆ ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಹುಟ್ಟಿಸಲು ಕಾರಣರಾದ ಕಿಟೆಲ್‌ರ ಹೆಸರು ಬಂದಲ್ಲೆಲ್ಲ, ಅವರನ್ನು ಫರ್ನಾಂಡಿಸ್ ಕಿಟೆಲ್ ಎಂದು ಕರೆದದ್ದಾಗಿದೆ. ಅವರ ಸುಪ್ರಸಿದ್ಧ ಕನ್ನಡ ಕೋಶವನ್ನು ಮೊದಲುಗೊಂಡು ಇನ್ನು ಹಲವು ಕೃತಿಗಳ ಮುಖಪುಟದಲ್ಲಿ 'ಫರ್ಡಿನಾಂಡ್' ಎಂಬುದು ಉಕ್ತವಾಗೇ ಇದ್ದರೂ ಮುತ್ತಣ್ಣನವರ ಗಮನಕ್ಕೆ ಅದು ಬರಲೇ ಇಲ್ಲ.

ಪುಸ್ತಕಗಳ ಹೆಸರುಗಳನ್ನು ಹೇಳುವಾಗಲೂ ತುಂಬಾ ವಿಪರ್ಯಾಸಗಳು ಕಂಡು ಬರುತ್ತವೆ. ವೆಂಕಟಾಧ್ವರಿಯ ಸುಪ್ರಸಿದ್ಧ ಸಂಸ್ಕೃತ ಕೃತಿಯಾದ 'ವಿಶ್ವಗುಣಾದರ್ಶ' ವು ಇಲ್ಲಿ 'ವಿಶ್ವಗುಂಡ ದರ್ಶನ' ವಾಗಿದೆ! ಕ್ಯಾಪ್ಟನ್ ಬೆಸ್ಟ್ ಇವನ 'ಪೈಮಾಯಿಸಿಯ ಲೆಖ್ಖದ ವಿವರ' ಎಂಬ ಪುಸ್ತಕವು ಜಮೀನುಗಳ ಅಳತೆ ಮಾಡುವುದರ ಕೈಪಿಡಿಯಾಗಿದ್ದು, ಮುತ್ತಣ್ಣನವರು ಅದರ ಹೆಸರನ್ನು 'ಪಾಯಮಾನಸಿಕ ಲೆಖ್ಖದ ವಿವರವು' ಮತ್ತು 'ಪಾಯಮಾನಸಿಕ ವ್ಯಾಯಮಾನ' ವೆಂದೂ ಕರೆದಿದ್ದಾರೆ (ಪು. ೪೩೭). ಆ ಪುಸ್ತಕದ ಒಂದೆರಡು ಪುಟಗಳ ಛಾಯಾಚಿತ್ರಗಳನ್ನು ಕೊಟ್ಟಿದ್ದಾರೆ. ಪುಸ್ತಕವು ಕಣ್ಣೆದುರಿಗೇ ಇದ್ದಾಗ ಅದರ ಹೆಸರನ್ನು ಸರಿಯಾಗಿ ನಮೂದಿಸಬಹುದಿತ್ತಲ್ಲವೆ ? ಲೇಖಕರ ಹಾಗೂ ಪುಸ್ತಕಗಳ ಹೆಸರಿನಲ್ಲಿ ಕಂಡುಬಂದ ಇವೆಲ್ಲ ಪ್ರಮಾದಗಳ ಮುಂದೆ, ಐರೋಪ್ಯಾ, ಜನ ಪ್ರೀಯ, ರೀಕಿಸು, 'ಆರ್ಶೀಯ' ಮುಂತಾದ ಅಕ್ಷರಿಕೆಯ ತಪ್ಪುಗಳು • ಮೇಲಿಂದ ಮೇಲೆ ಕಂಡುಬಂದರೂ, ಅವು ಮಹತ್ವದವಲ್ಲವೆನಿಸುತ್ತವೆ.

ಅಂತರಂಗ

ಇನ್ನೀಗ ಅದರಲ್ಲಿ ಬಂದ ವಿವಿಧ ವಿಷಯಗಳ ಸತ್ಯಾಸತ್ಯತೆಯನ್ನು ಪರಿಶೀಲಿಸೋಣ. 'ಗ್ರಂಥಕರ್ತ' ಎಂಬುದರಲ್ಲಿ ಹಲವಾರು ಬಗೆಗಳಿವೆ. ಮೂಲ ಲೇಖಕ, ಅನುವಾದಕ, ಸಂಪಾದಕ, ಸಂಕಲನಕಾರ, ಪರಿವರ್ತನಕಾರ, ಪರಿಷ್ಕರಿಸಿದವ – ಇತ್ಯಾದಿ. ಮುತ್ತಣ್ಣನವರಿಗೆ ಈ ಸರ್ವಸಾಧಾರಣ ಭೇದಗಳು ಕಂಡು ಬಂದಿಲ್ಲ. ಬಿ. ಮಲ್ಲಪ್ಪ ಬಾಣನ ಕಾದಂಬರಿಯನ್ನು ೪೧೭ ಪುಟಗಳಲ್ಲಿ ಭಾಷಾಂತರಿಸಿ ಪ್ರಕಟಿಸಿದನಂತೆ (ಪು.೩೮೩). ಅವರು ನಾಗವರ್ಮ ವಿರಚಿತ ಕರ್ಣಾಟಕ ಕಾದಂಬರಿಯನ್ನು ಸಂಪಾದಿಸಿದರೆಂಬುದು ಪರಿಚಿತ ವಿಷಯವೇ ಆಗಿದೆ. ಅದರಂತೆ 'ಮುದ್ರಾಮಂಜೂಷ'ದ ವಿಷಯ (ಪು.೪೭೪). ಮುತ್ತಣ್ಣನವರ ಪ್ರಕಾರ ಜೆ. ಸ್ಟೀಫನ್ಸನು ಮುದ್ರಾಮಂಜೂಷವೆಂಬ ಸಂಸ್ಕೃತ ಕೃತಿಯನ್ನು ಭಾಷಾಂತರಿಸಿದನಂತೆ. ಅಲ್ಲಿ ಕೆಂಪುನಾರಾಯಣನ ಪ್ರಸ್ತಾಪವೇ ಇಲ್ಲ.

ಲೇಖಕರ ಹಾಗೂ ಕೃತಿಗಳ ವರ್ಷವನ್ನು ಉಲ್ಲೇಖಿಸುವಲ್ಲಿ ನೂರಾರು ತಪ್ಪುಗಳಾಗಿವೆ. ಪ್ರತಿ ಪುಟದಲ್ಲಿಯೂ ಕೃತಿರಚನೆಯ ಇಲ್ಲವೆ ಲೇಖಕನಿಗೆ ಸಂಬಂಧಿಸಿದ ವರ್ಷದ ಉಲ್ಲೇಖಗಳಿದ್ದು, ಅಂಥ ಉಲ್ಲೇಖಗಳಲ್ಲಿ ಅಗಣಿತ ತಪ್ಪುಗಳಾದರೆ, ಸರಿಯಿರಬಹುದಾದವುಗಳ ವಿಷಯದಲ್ಲಿಯೂ ಸಾಶಂಕರಾಗುತ್ತೇವೆ. ಅಂಥ ತಪ್ಪುಗಳಲ್ಲಿ ಒಂದರೆಡನ್ನು ಮಾತ್ರ ಇಲ್ಲಿ ಕಾಣಿಸಿದೆ :

"ಕ್ರಿ. ಶ. ೧೬ನೇ ಶತಮಾನದಲ್ಲಿ ಬ್ರಿಟಿಶರು ಮುದ್ರಾಯಂತ್ರವನ್ನು ತಂದು ಕಲ್ಕತ್ತದಲ್ಲಿ ಇಟ್ಟರು. ಅನಂತರ ಐವತ್ತು ವರ್ಷಗಳಲ್ಲಿ ಬೊಂಬಾಯಿ ಮತ್ತು ಮದ್ರಾಸಗಳಲ್ಲೂ ಅವು ಇಡಲ್ಪಟ್ಟವು." (ಪು. ೨೪೬)

ಇದು ಸರ್ವಥಾ ಸರಿಯಲ್ಲ. ೧೬ನೇ ಶತ.ದಲ್ಲಿ ಬ್ರಿಟಿಶರ ಪ್ರಭಾವ ಇಲ್ಲವೆ ಆಡಳಿತವೆಂಬುದು ಇತ್ತೆಲ್ಲಿ ? ಅವರು ಮುದ್ರಾ ಯಂತ್ರವನ್ನು ತಂದದ್ದು ೧೮ನೇ ಶತ. ದ ಕೊನೆಯಲ್ಲಿ. ಆ ಶತಮಾನದಲ್ಲಿ ಮುದ್ರಾಯಂತ್ರವನ್ನು ತಂದವರು ಪೋರ್ತುಗೀಜರು. ಕ್ರಿ. ಶ. ೧೬೮೮ರಲ್ಲಿ ಅವರಿಂದ ಮೊದಲ ಪುಸ್ತಕ ಹೊರಬಂದಿತು. ಇನ್ನು ಮೊತ್ತ ಮೊದಲಿನ ಕನ್ನಡ ಮೊಳೆಗಳ ತಯಾರಿಕೆಯ ವಿಷಯದಲ್ಲಿ ಗಿಲ್‌ಕ್ರಿಸ್ತ್ ಎಂಬವನ ಪ್ರಸ್ತಾಪ ಬಂದಿದೆ (ಪು. ೨೬೬). ಆ ಕಾರ್ಯವನ್ನು ಮೊದಲಿಗೆ ಕೈಕೊಂಡವನು ವಿಲಿಯಮ್ ಕೇರಿ.

ಕನ್ನಡ ಮುದ್ರಣ ವಿಚಾರವಾಗಿ ಈ ಪುಸ್ತಕದಲ್ಲಿ ಇನ್ನೂ ಹಲವು 'ಅಘಟಿತ' ಘಟನೆಗಳಿವೆ. ೧೮೧೫ರಲ್ಲಿ ಹಳೆ ಮೈಸೂರ ಸರಕಾರವು ಬೆಂಗಳೂರಲ್ಲಿ ಸರಕಾರೀ ಮುದ್ರಾಣಾಲಯವೊಂದನ್ನು ಸ್ಥಾಪಿಸಿ ಕನ್ನಡ ಮತ್ತು ಇಂಗ್ಲಿಷ್ ಮುದ್ರಣ ಕೆಲಸ ನಡೆಸತೊಡಗಿತಂತೆ (ಪು. ೨೬೬). ಆದರೆ ಅದರ ಪ್ರಥಮ ವರ್ಷ ೧೮೪೧–೪೨ ಎಂಬುದು, ಮೈಸೂರ ಗಜೆಟಿಯರ್ (ರೈಸ್ ಸಂಪಾದಿತ) ಮತ್ತು ಕನ್ನಡದ ಆದ್ಯಪತ್ರಿಕೆ 'ಮಂಗಳೂರ ಸಮಾಚಾರ' (೧೮೪೩) ಇವುಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಗೊಂಡಿದೆ. ಅದರಂತೆ ಬಾಸೆಲ್ ಮಿಶನ್ ಪ್ರೆಸ್ ೧೮೩೪ರಲ್ಲಿ ಸ್ಥಾಪನೆಯಾಯಿತೆಂದು ತಪ್ಪಾಗಿ ಹೇಳಲಾಗಿದೆ. ಅದರ ಸರಿಯಾದ ವರ್ಷ ೧೮೪೧.

ಕಳೆದ ಶತಮಾನದಲ್ಲಿದ್ದ ಪಾಶ್ಚಾತ್ಯ ಲೇಖಕರಲ್ಲಿ ಮೊದಲಿಗೆ ಬಂದವರಾರು, ಅನಂತರದವರು ಯಾರು ಎಂಬುದರ ಸರಿಯಾದ ತಿಳಿವಳಿಕೆಯಿಲ್ಲದ್ದರಿಂದ, ತಾಳ ಮೇಳವಿಲ್ಲದ ಕೆಲವು ಅಭಿಪ್ರಾಯಗಳು ವ್ಯಕ್ತವಾಗಿವೆ. ಬಳ್ಳಾರಿಯ ಮಿಶನ್ ಕೇಂದ್ರದಲ್ಲಿ, ಮೊದಲಿಗೆ ಬಂದವ ರೀವ್ (೧೮೧೬-೧೮೩೪) ; ಅನಂತರ ಬಂದವನು ರೀಡ್ (೧೮೩೦–೧೮೪೧). (ಆಧಾರ : Memoirs of John Reid ಎಂಬ ಕೃತಿ). ಅವರಿಬ್ಬರಿಗೆ ಸಂಬಂಧಿಸ್ದ ಮುತ್ತಣ್ಣನವರ ಹೇಳಿಕೆ ಇಂತಿದೆ :

"ಜಾನ್ ರೀಡ್ ಇವನು ಇಂಗ್ಲಿಷ್‌ನಲ್ಲಿ ಬರೆದಿದ್ದ Old Testament ಇದನ್ನೇ William Reeve ಇವನು ೧೮೩೦ರ ಅನಂತರ "ಮೋಸೆಯ ಮೊದಲನೇ ಕಾಂಡವು" ಎಂದು ಕನ್ನಡದಲ್ಲಿ ಬರೆದನೆಂಬುದನ್ನೂ ಇಲ್ಲಿ ಗಮನಿಸಬೇಕಾಗಿದೆ" (ಪು. ೨೭೪).

ಬೈಬಲಿನ Old Testament ನ್ನು ಇಂಗ್ಲಿಶ್‌ಗೆ ಅನುವಾದಿಸಿ ನೂರಾರು ವರ್ಷಗಳು ಸಂದಿದ್ದು, ೧೬ನೇ ಶತಮಾನದಿಂದ King James Version ಎಂಬ ಹೆಸರಿನಿಂದ ಇಂಗ್ಲಿಶ್ ಬೈಬಲಿನ ಅಧಿಕೃತ ಆವೃತ್ತಿಯು ಇಂಗ್ಲಿಶ್ ಜನರಲ್ಲಿ ಸಾರ್ವತ್ರಿಕ ವಾಗಿ ಬಳಕೆಯಲ್ಲಿದ್ದಿತು. ಅದನ್ನು ಜಾನ್ ರೀಡ್ ಇಂಗ್ಲಿಶ್‌ನಲ್ಲಿ ಬರೆದದ್ದೇಕೆ–ಎಂದು ಕೇಳಕೂಡದು !

ಮುಂದುವರಿದು, ''ರೀಡ್‌ನಿಂದ ರಚಿತವಾದ ಕನ್ನಡ ಬೈಬಲ್ ಹೊತ್ತಗೆಗಳು ಹಲವು ಇವೆ'' ಎನ್ನುತ್ತಾರೆ (ಪು. ೨೬೪). ಬೈಬಲ್ ಇರುವುದು ಒಂದೇ! ಇಂಥ ಹೇಳಿಕೆಯನ್ನು ಇನ್ನೂ ಅನೇಕರಿಗೆ ಅನ್ವಯಿಸಿ ಮಾಡಿದ್ದಾಗಿದೆ. ಈ ಪ್ರಮಾದದ ಹಿನ್ನೆಲೆಯೆಂದರೆ, ಬೈಬಲ್ ಅನುವಾದ ರಚನೆ ಹಾಗೂ ಒಟ್ಟಿನ ಕ್ರೈಸ್ತ ಮತೀಯ ಸಾಹಿತ್ಯ ನಿರ್ಮಿತಿ–ಇವುಗಳ ಸ್ಪಷ್ಟ ಕಲ್ಪನೆ ಇಲ್ಲದುದು. ಕ್ರೈಸ್ತ ಸಾಹಿತ್ಯ ಪುಸ್ತಕಗಳ ಪ್ರಸ್ತಾಪ ಬರುವಲ್ಲೆಲ್ಲ ಬೈಬಲ್ ಹೊತ್ತಗೆಗಳು ಎಂದು ಕರೆದುದು ವಿಚಿತ್ರವಾಗಿ ಕಾಣುತ್ತದೆ. ಇನ್ನೊಂದೆಡೆ ''Dr. Moegling ಇವನೂ ತನ್ನ ಸಮಕಾಲೀನ ಕ್ರೈಸ್ತ ವಿದ್ವಾಂಸರ ಆದರ್ಶಕ್ಕನುಸುಗುಣವಾಗಿ ಕನ್ನಡದಲ್ಲಿ ಸಂಪೂರ್ಣ ಬೈಬಲನ್ನು ಬರೆದು ಕನ್ನಡ ಬೈಬಲ್ ಸಾಹಿತ್ಯ ವೃಕ್ಷಕ್ಕೆ ಮತ್ತೊಂದು ಕೊನರನ್ನು ಸೇರಿಸಿದನು'' ಎಂದು ಉದ್ಗಾರವೆತ್ತಿದ್ದಾರೆ (ಪು. ೨೮೨). ಸಮಗ್ರ ಬೈಬಲನ್ನು ಕನ್ನಡದಲ್ಲಿ ಏಕಮೇವವಾಗಿ ಅನುವಾದಿಸಿದ ಯಾರೊಬ್ಬ ಮಿಶನರಿಯೂ ಹುಟ್ಟಲಿಲ್ಲ.

ಕಾಲಮಾನದಲ್ಲಿ ಹೆಚ್ಚು ಕಡಿಮೆಯಾದುದಕ್ಕೆ ಇನ್ನೊಂದು ಮಾದರಿ: ''ಡೆಪ್ಯುಟಿ ಚೆನ್ನಬಸಪ್ಪನನ್ನು ತನ್ನ ಸ್ಥಾನದಲ್ಲಿ ಮೇಲಕ್ಕೆ ಏರಿಸಿ ಪ್ರೋತ್ಸಾಹಿಸಲು ಕಾರಣ ನಾದವನು ಈ Rev. F. Zeigler.'' (ಪು. ೩೨೫). ರಿಘಗ್ಲರಿನಿಗಿಂತ ಚೆನ್ನಬಸಪ್ಪ ಹಿರಿಯರು. ರಿಘಗ್ಲರ್ ಧಾರವಾಡಕ್ಕೆ ಬರುವುದಕ್ಕೆ ೩–೪ ವರ್ಷ ಮುಂಚೆಯೇ ಚೆನ್ನ ಬಸಪ್ಪ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್ ಹುದ್ದೆಯನ್ನು ಸ್ವೀಕರಿಸಿದ್ದರು. ಈ ಬಗೆಯ ತಪ್ಪು ಅಭಿಮತಗಳಿಗೆ ಮಕುಟಪ್ರಾಯವಾಗಿರುವ ಈ ಹೇಳಿಕೆಯನ್ನು ಗಮನಿಸಬೇಕು:

''ಕಾಲ್ಡ್‌ವೆಲ್‌ನಿಗೆ ಬೇರೆ ಬೇರೆ ಭಾಷೆಗಳ ಪರಿಚಯವನ್ನು ಮಾಡಿಕೊಟ್ಟು ಅವನ ಗ್ರಂಥಕ್ಕೆ ಶಬ್ದಸಂಪತ್ತನ್ನು ಒದಗಿಸಿದವರಲ್ಲಿ Dr. F. Kittel ಇವನೂ ಒಬ್ಬನು'' (ಪು. ೫೬೦).

ಮುತ್ತಣ್ಣನವರು ಅನೇಕ ಪುಸ್ತಕಗಳನ್ನು ಪರಿಶೀಲಿಸಲಾಗದೆ ಬಾರ್ನೆಟ್ ನಂತಹರು ಸಿದ್ಧಪಡಿಸಿದ ಸೂಚಿಗಳಿಂದ (A Catalogue of Kannada.... Books in the British Museum Library) ಅಂದಾಜಿನ ಮೇಲೆ ಆಗಿನ ಪುಸ್ತಕಗಳನ್ನು ಬಣ್ಣಿಸಹೋಗಿದ್ದಾರೆ. ಹಾಗೆ ಮಾಡುವಾಗ ಅನೇಕ ಕಡೆಗೆ ಹಾಸ್ಯಾಸ್ಪದವೆನಿಸುವಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

"ವಿಲಿಯಮೆಂಬುವನ ಚರಿತ್ರೆ' ಎಂಬ ೬೯ ಪುಟಗಳ ಪುಸ್ತಕವು ಇಂಗ್ಲೆಂಡಿನ ರಾಜ ಮೊದಲನೇ ವಿಲಿಯಮನನ್ನು ಕುರಿತು ಬರೆದದ್ದು, ಚರಿತ್ರಪಾಠಕ್ಕೆ ಉಪಯೋಗಿಸಲ್ಪಟ್ಟಿತು" (ಪುಟ. ೪೧೨). ವಿಲಿಯಮ್ ಎಂಬ ಹೆಸರನ್ನು ನೋಡಿ, ಮುತ್ತಣ್ಣನವರು ತಮ್ಮ ಊಹನೆಯ ಕುದುರೆಯನ್ನು ಬಹುದೂರ ಓಡಿಸಿದರು. ಆದರೆ ಆ ಪುಸ್ತಕವು ಬೈಬಲಿಗೆ ಸಂಬಂಧಿಸಿದ ಒಂದು ಕತೆಯಾಗಿದೆ. ಮುಂದೆ ೪೪೯ನೆಯ ಪುಟವೊಂದರಲ್ಲಿಯೇ ಈ ತೆರನಾದ ಮೂರು ಅಸತ್ಯವಾದ ವಿವರಗಳಿವೆ. ಸ್ಯಾಮುಯೆಲ್ ಅಬ್ಬೈಜನು Bazar Book ಎಂಬ ಸ್ವಮತೀಯ ಗ್ರಂಥವನ್ನು ಅನುವಾದಿಸಿದನು. Bazar ಎಂದು ಬಂದಿದೆಯೆಂದ ಮೇಲೆ ಅದು 'ಸಂತೆ ಲೆಕ್ಕಗಳ ವ್ಯವಹಾರಗಳನ್ನು ತಿಳಿಸುವ' ಪುಸ್ತಕವೇ ಇರಬೇಕೆಂದು ಮುತ್ತಣ್ಣನವರು ತರ್ಕಿಸಿದರು! ಅದರಂತೆ 'Practical advice against a far spread disease' ಮತ್ತು 'ಫಲಾಹಾರ ಅಥವಾ ಲಕ್ಷ್ಯಕ್ಕೆ ತಕ್ಕಪಾದ್ದು' ಎಂಬ ಎರಡು ಶೀರ್ಷಿಕೆಗಳನ್ನು ಕಂಡು ಅವು ವೈದ್ಯಕೀಯ ಇಲ್ಲವೆ ಆರೋಗ್ಯಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳೇ ಆಗಿರಬೇಕೆಂದು ನಿರ್ಧರಿಸಿದರು. ಆದರೆ ಅವು ಕೂಡ ಕ್ರೈಸ್ತಮತೀಯ ಪುಸ್ತಕಗಳೇ ಆಗಿವೆ.

'ಕರ್ನಾಟಕ ವಾಗ್ವಿಧಾಯಿನಿ' ಎಂಬ ಸಾಹಿತ್ಯಿಕ ಪತ್ರಿಕೆಯೊಂದು ಕಳೆದ ಶತಮಾನದಲ್ಲಿ ಹಳೆಯ ಮೈಸೂರಿನ ಪ್ರದೇಶದಿಂದ ಹೊರಡುತ್ತಿದ್ದಿತಂತೆ. ಅದರ ಉಲ್ಲೇಖ ಮೇಲಿಂದ ಮೇಲೆ ಬರುತ್ತದಲ್ಲದೆ, ಮುತ್ತಣ್ಣನವರು ಮೊಗ್ಲಿಂಗ್ ಮುಂತಾದ ಪ್ರಮುಖ ಲೇಖಕರನ್ನು ಅದಕ್ಕೆ ತಳುಕುಹಾಕಿದ್ದಾರೆ. ಈ ಹೆಸರಿನ ಪತ್ರಿಕೆ ಇರಲೇ ಇಲ್ಲ. ಅಲ್ಲದೆ, ಕರ್ನಾಟಕ ವಾಗ್ವಿಧಾಯಿನಿ ಎಂಬ ವ್ಯಾಕರಣ ಪುಸ್ತಕ ಮಾತ್ರ ಕಳೆದ ಶತಮಾನದಲ್ಲಿ ಪ್ರಕಟವಾಗಿದ್ದಿತು. ಮೈಸೂರು ಸರಕಾರದಿಂದ ಸಿದ್ಧಗೊಂಡ ಈ ಪಠ್ಯಪುಸ್ತಕವು ಹಲವಾರು ಆವೃತ್ತಿಗಳನ್ನು ಕಂಡಿತು.

ಬೆಂಗಳೂರಿನ ಕೆಥಲಿಕ್ ಸಂಸ್ಥೆಯವರು ಪ್ರಕಟಿಸಿದ ಲ್ಯಾಟಿನ್-ಕನ್ನಡ, ಕನ್ನಡ-ಲ್ಯಾಟಿನ್ ಕೋಶಗಳ ಬಗ್ಗೆ ಬರೆಯುತ್ತ ಮುತ್ತಣ್ಣನವರು "ಈ ಲ್ಯಾಟಿನ್-ಕನ್ನಡ ವ್ಯಾಕರಣ ಮತ್ತು ಛಂದಸ್ಸು ಪುಸ್ತಕಗಳು ೧೮೬೯ರಲ್ಲಿ ಎರಡನೇ ಬಾರಿಗೆ ಮುದ್ರಣವಾದುವು. ಇದನ್ನು ಈ ದೇಶದಲ್ಲಿ ಓದುವವರು ಯಾರು? ಆದರೆ ಅಂದಿನ ವಿದ್ವಾಂಸರು ಭಾರತೀಯ ಸಾಹಿತ್ಯವನ್ನು ಪಾಶ್ಚಾತ್ಯ ದೇಶಗಳಲ್ಲಿ ಪರಿಚಯಮಾಡಿಸುವ ಮಹತ್ತಾದ ಉದ್ದೇಶವನ್ನಿಟ್ಟು ಇಂಥಾ ಗ್ರಂಥಗಳನ್ನು ರಚಿಸಿದರೆಂಬುದನ್ನು ತಿಳಿಯಬೇಕಾಗಿದೆ" (ಪು. ೪೫೬).

ಈ ಪುಸ್ತಕಗಳ ಅವತರಣಿಕೆಗಳನ್ನು ಕೊಟ್ಟಿರುವದರಿಂದ ಮುತ್ತಣ್ಣನವರು ಸ್ವತಃ ನೋಡಿದ್ದಾರೆ, ಎನ್ನಬೇಕು. ಹಾಗೆ ಮಾಡುವಾಗ ಕನ್ನಡ-ಲ್ಯಾಟಿನ್ ಕೋಶದ ಮುಖಪುಟದಲ್ಲಿ ಬಂದ 'Dictionarium Canarense Latinum ad usum Maissurensis Catholicii Seminarii' ಎಂಬ ಒಕ್ಕಣೆಯನ್ನೂ ನಮೂದಿಸಿದ್ದಾರೆ (ಪು. ೪೫೫). ಎಂದರೆ ಈ ಗ್ರಂಥವು ಬೆಂಗಳೂರಿನಲ್ಲಿ ಕೆಥಲಿಕ್ ಸೆಮಿನರಿಯಲ್ಲಿ ಅಭ್ಯಾಸ

ಮಾಡುವ ಬೋಧಕರಿಗಾಗಿ ಇತ್ತೆಂಬುದು ಸ್ಪಷ್ಟವಾಗಿದೆ. ಅದರಂತೆ ಲ್ಯಾಟಿನ್-ವ್ಯಾಕರಣದ ಕನ್ನಡ ಪುಸ್ತಕವು ಶಾಲಾ ವಿದ್ಯಾರ್ಥಿಗಳಿಗಾಗಿಯೇ ಇತ್ತೆಂಬುದರ ಉಲ್ಲೇಖವೂ (ad usum scholarum) ಮುತ್ತಣ್ಣನವರ ಗಮನಕ್ಕೆ ಬಿದ್ದಿದೆ (ಪು. ೪೫೬). ಹಾಗಿದ್ದೂ ಅವರು ಭಾರತೀಯ ಸಾಹಿತ್ಯವನ್ನು ಪಾಶ್ಚಾತ್ಯರಿಗೆ ಪರಿಚಯಿಸಬೇಕೆನ್ನುವ 'ಮಹತ್ತಾದ' ಉದ್ದೇಶವನ್ನು ಅದರಲ್ಲಿ ಕಂಡುದೇಕೊ ?

ಮೊಗ್ಲಿಂಗ್ ದಾಸರ ಪದಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿದನು. ಅವು ಸುಪ್ರಸಿದ್ಧ ZDMG ಪತ್ರಿಕೆಯ ೧೮೬೦ನೇ ಇಸವಿಯ ಸಂಪುಟದ ೫೦೨ರಿಂದ ೫೧೬ರ ವರೆಗಿನ ಪುಟಗಳಲ್ಲಿ, ಮುಂದೆ ೧೮೬೪ರ ಸಂಪುಟದ ೨೪೧–೨೬೧ರ ಪುಟಗಳಲ್ಲಿ ಪ್ರಕಟವಾದವು. ಈ ವಿಷಯವನ್ನು ಮುತ್ತಣ್ಣನವರು ಉಲ್ಲೇಖಿಸಿದ ಬಗೆಯೇ ಬೇರೆ: "೫೧೬ ಪುಟಗಳ ಈ ಪುಸ್ತಕವು ೧೮೬೪ರಲ್ಲಿ ಪುನರ್ಮುದ್ರಣಗೊಂಡಿತು." ಮೊಗ್ಲಿಂಗ್ ಜೈಮಿನಿ ಭಾರತದ ಕೆಲವು ಪದ್ಯಗಳನ್ನು ಸಹ ಜರ್ಮನ್ ಭಾಷೆಗೆ ಅನುವಾದಿಸಿ ಅದೇ ZDMG ಯ ೨೪ನೇ ಸಂಪುಟದ ೩೯ರಿಂದ ೩೨೪ರ ವರೆಗಿನ ಪುಟಗಳಲ್ಲಿ, ಅದರ ಮೊದಲ ಕಂತನ್ನು ಹೊರತಂದನು. ಆದರೆ ಮುತ್ತಣ್ಣನವರಿಗೆ ಮಾತ್ರ ಅದು ೩೨೪ ಪುಟಗಳ ಪ್ರತ್ಯೇಕ ಗ್ರಂಥವೇ ಆಗಿ ಕಂಡಿತು.

"ಕ್ರಿ.ಶ. 1868 ರಿಂದ 1871 ರ ವರೆಗೆ ಮಂಗಳೂರಿನಲ್ಲಿ Casper Stalz ಇವನು Periodical Publications ಎಂಬುದಾಗಿ ಇಂಗ್ಲಿಷ್‌ನಲ್ಲೂ ಕನ್ನಡದಲ್ಲೂ ವಾರ್ತಾ ಪತ್ರಿಕೆಗಳನ್ನು ನಡೆಸಿದನು" ಎಂಬೊಂದು ಹೇಳಿಕೆಯನ್ನು ಮುತ್ತಣ್ಣನವರು ಕೊಟ್ಟಿದ್ದಾರೆ (ಪು. ೪೪೪). ನಮಗೆ ಇದರ ಹೊಲಬು ಆಗಲಿಲ್ಲ. Periodical Publications—ಎಂದು ಯಾರೂ ಪತ್ರಿಕೆಗೆ ಹೆಸರಿಡುವುದಿಲ್ಲ. ಮೇಲಾಗಿ Stolz (Stalz ಅಲ್ಲ) ಅಂಥ ಪ್ರಮುಖ ಮಿಶನರಿಯೇನಲ್ಲ. ಬಾರ್ನೆಟ್‌ನ ಮೋಲ್ಕಂಡ ಸೂಚಿಯನ್ನು ಪರಿಶೀಲಿಸಿದಾಗ ಅವರ ತಪ್ಪಿನ ಗುಟ್ಟು ಹೊರಬಿದ್ದಿತು ! Periodical Publications ಎಂಬ ಸಾಮಾನ್ಯ ಶೀರ್ಷಿಕೆಯ ಅಡಿಯಲ್ಲಿ ಬೆಂಗಳೂರು, ಬಳ್ಳಾರಿ, ಧಾರವಾಡ ಮುಂತಾದ ಊರುಗಳಲ್ಲಿ ಪತ್ರಿಕೆಗಳನ್ನು ಹೆಸರಿಸುತ್ತ, ಮಂಗಳೂರಿನ ಪತ್ರಿಕೆಗಳೆಂದು Illustrated Canerese Journal, ಮಂಗಳೂರ ಸಮಾಚಾರ, ನ್ಯಾಯಸಂಗ್ರಹ, ಸಭಾಪತ್ರ ಮುಂತಾದ ಹೆಸರುಗಳನ್ನು ಬಾರ್ನೆಟ್ ಕೊಟ್ಟಿದ್ದಾರೆ. 'ಸುಭಾಪತ್ರ'ದ ನಮೂದಿನಲ್ಲಿ ಅದರ ಸಂಪಾದಕರೆಂದು C. Stolz, J. J. Brigel ಮತ್ತು C. Vatsa ಇವರ ಹೆಸರೂ, ೧೮೬೮–೧೮೭೧ ಎಂಬ ವರ್ಷಗಳ ಉಲ್ಲೇಖವೂ ಇದೆ. ಅಂತೂ ಮುತ್ತಣ್ಣನವರು ಆಧಾರಗ್ರಂಥಗಳಿಂದ ಟಿಪ್ಪಣಿ ಬರೆದುಕೊಂಡ ರೀತಿಯಿದು !

೧೯ನೇ ಶತಮಾನದ ವಿವಿಧ ಗ್ರಂಥಗಳನ್ನು ಮುತ್ತಣ್ಣನವರು ಯಾವ ರೀತಿಯಾಗಿ ಪ್ರಸಾಪಿಸಿದ್ದಾರೆಂಬುದನ್ನು ಇದುವರೆಗೆ ನೋಡಿದೆವು. ಆಗಿನ ಲೇಖಕರ ಸಾಹಿತ್ಯಿಕ ಪರಿಚಯದ ಸ್ವರೂಪವೆಂತೆಂಬುದನ್ನು ನೋಡೋಣ. ಈ ಗ್ರಂಥದಲ್ಲಿ

ಬಂದಿರುವ ಮಿಶನರಿ ಅಧಿಕಾರಿಗಳೆಲ್ಲಾ ಬಹುಭಾಷಾ ಪಂಡಿತರೆಂಬ ಮಾತು ಕಡ್ಡಾಯವಾಗಿ ಬರುತ್ತದೆ.

ಹ್ಯಾಂಡ್ಸ್ : "ಇವನು ಈ ದೇಶಕ್ಕೆ ಬಂದಕೂಡಲೇ ತಮಿಳು, ತೆಲುಗು, ಸಂಸ್ಕೃತ, ಪರ್ಷಿಯನ್ ಇತ್ಯಾದಿ ಭಾಷೆಗಳಲ್ಲಿ ಕುಶಲತೆಯನ್ನು ಪಡೆದನು.... ಕನ್ನಡ ಭಾಷೆಯಲ್ಲಿ ಅಸಾಮಾನ್ಯ ಪ್ರೌಢಿಮೆಯನ್ನು ಗಳಿಸಿದನು" (ಪು. ೨೬೮).

ರೈಸ್ : "ಬಂದ ಒಂದೆರಡು ವರ್ಷಗಳಲ್ಲಿಯೇ ತಮಿಳು, ಕನ್ನಡ, ತೆಲುಗು ಭಾಷೆಗಳನ್ನು ಅನಂತರ ಸಂಸ್ಕೃತ, ಪರ್ಷಿಯನ್, ಲ್ಯಾಟಿನ್ ಮತ್ತು ತನ್ನ ಸ್ವಭಾಷೆಯಾದ ಜರ್ಮನ್ ಭಾಷೆಯನ್ನೂ ಚೆನ್ನಾಗಿ ಕಲಿತು ಸಾಕಷ್ಟು ಪಾಂಡಿತ್ಯವನ್ನು ಸಂಪಾದಿಸಿದನು" (ಪು. ೩೨೧).

ಕಿಟೆಲ್ : "ಇಲ್ಲಿಗೆ ಬಂದಕೂಡಲೇ ಅವನು ಸಂಸ್ಕೃತ, ಕನ್ನಡ, ತಮಿಳು, ತುಳು, ಕೊಂಕಣಿ, ಮರಾಠಿ ಮತ್ತು ಪರ್ಷಿಯನ್ ಭಾಷೆಗಳನ್ನು ಕಲಿತನು, ಮಾತ್ರವಲ್ಲದೆ ಇವುಗಳಲ್ಲೆಲ್ಲ ಏಕಸಮಾನವಾದ ಪಾಂಡಿತ್ಯವನ್ನು ಸಂಪಾದಿಸಿದನು" (ಪು. ೩೨೮).

ಹೀಗೆ ಇಲ್ಲಿಗೆ ಬಂದ ಮಿಶನರಿಗಳೆಲ್ಲ ನಿಸ್ಸಂಶಯವಾಗಿ ಭಾಷಾಕೋವಿದರೆಂದು ಮುತ್ತಣ್ಣನವರು ಗ್ರಹಿಸಿ, ಅವರ ಕೊರಳಿಗೆ ೪-೫ ದೇಶೀಯ ಭಾಷೆಗಳನ್ನು ಕಟ್ಟಿದುದು ಕಂಡುಬರುತ್ತದೆ. ಇನ್ನೊಂದು ಕಡೆಯಲ್ಲಂತೂ "ಜರ್ಮನ್ ಭಾಷೆಯಲ್ಲೂ ಈ ದೇಶದ ಎರಡೋ ಮೂರೋ ಭಾಷೆಗಳಲ್ಲಿ ನುರಿತವನಾಗಿದ್ದ C. B. Berth...." ಎಂಬ ಮಾತೂ ಬರುತ್ತದೆ ! (ಪು. ೨೮೩).

ಕಿಟೆಲ್‌ನಿಗೆ ಮೇಲೆ ಹೇಳಿದ ಭಾಷೆಗಳು ಕೆಲವದರಲ್ಲಿ ಪರಿಣತಿಯೂ, ಇನ್ನು ಕೆಲವುಗಳ ವ್ಯಾವಹಾರಿಕ ಜ್ಞಾನವೂ ಇದ್ದುದು ನಿಜವೇ. ಆದರೆ ಅವುಗಳಲ್ಲೆಲ್ಲ ಏಕ ಸಮಾನವಾದ ಪಾಂಡಿತ್ಯವೆಂದು ಹೇಳಿದುದು ತಪ್ಪೆಂದು ಮೇಲುನೋಟಕ್ಕೆಯೇ ಗೊತ್ತಾಗುತ್ತದೆ. ಇತ್ತ ಹ್ಯಾಂಡ್ಸ್ ಭಾಷಾಪಂಡಿತನಿರಲಿಲ್ಲ. (ಅವನಿಗೆ ಅನುವಾದ ಕಾರ್ಯ ಕಷ್ಟತರವಾಯಿತೆಂದೇ ವಿಲಿಯಮ್ ರೀವ್‌ನನ್ನು ಬಳ್ಳಾರಿ/ಬೆಂಗಳೂರಿಗೆ ಕಳಿಸಲಾಯಿತು.) ಹ್ಯಾಂಡ್ಸ್ ಅನುವಾದಿಸಿದ ಈ ಬೈಬಲ್ ಭಾಗದಲ್ಲಿ ಬಂದ ಅವನ 'ಅಸಾಮಾನ್ಯ ಪ್ರೌಢಿಮೆ'ಯನ್ನು ತಿಳಿಯಲು ಈ ಕೆಳಗಿನದನ್ನು ಗಮನಿಸಬೇಕು :

"ಆದರೆ ಯಿಾಸು ಕ್ರೀಸ್ತುವಿನ ಹುಟ್ಟುವಿಕೆ ಯಿಾ ಪ್ರಕಾರವಾಗಿ ಸಂಭವಿಶಿತು. ಆತನ ತಾಯಿಯಾದ ಮರಿಯಾ ಯೋಶೆಫಿಗೆ ನೇಮಿಸಲ್ಪಟ್ಟು ತರುವಾಯ ಅವರಿಗೆ ಸಂಸರ್ಗವಾಗುವದಕ್ಕೆ ಮುಂಚೆ ಆಕೆ ಪರಿಶುದ್ಧ ಆತ್ಮನಿಂದ ಗರ್ಭವತಿಯಾದಳು. ಆಗಲು ಆಕೆಯ ಪುರುಷನಾದ ಯೋಶೆನು ಸತ್ಯವಂತನಾದದರಿಂದ ಆಕೆಯುಂನ ಬಹಿರಂಗವಾಗಿ ಅವಮಾನ ಮಾಡ ಮನಸ್ಸಿಲ್ಲದ್ದೆಯೆ ಶಾಂತವಾಗಿ ಆಕೆಯುಂನ ಪರಿತ್ಯಾಗ ಮಾಡ ಮನಸಾಗಿದ್ದನು. ಆದರೆ ಯಿದಕ್ಕೋಸ್ಕರವಾಗಿ ಆಲೋಚನೆ ಮಾಡುತ್ತಿರುವಾಗಲು ಯಿದೊ ದೇವರ ದೂತನು ಸ್ವಪ್ನದಲ್ಲಿ ಅವನಿಗೆ ಕಾಣಿಸಲ್ಪಟ್ಟು ಹೇಳಿದ್ದೇನಂದರೆ ದಾವೀದಿನ ಮಗನಾದ ಯೋಶಫೇವಿನ ಹೆಂಡತಿ ಮರಿಯಳಾಂನ ತಕ್ಕೊಳ್ಳ

ಭಯಪಡಬ್ಯಾಡಯೇನಂದರೆ ಆಕೆ ಪರಿಶುದ್ಧಾತ್ಮನಿಂದ ಗರ್ಭವಂನ ಧರಿಶಿದ್ಧಾಳೆ.'' (ಮತ್ತೆಯು ಬರದ ಸುವಿಶೇಷವು, ಪ್ರಕಟನೆ ೧೮೨೦.)

ಇಂಗ್ಲಂಡಿನವನಾದ ರೈಸನ ಸ್ವದೇಶವು ಜರ್ಮನಿ ಎಂಬುದಾಗಿ ಮುತ್ತಣ್ಣನವರು ಹೇಳಿದುದನ್ನು ವಿಶೇಷವಾಗಿ ಗಮನಿಸಬೇಕು. ಇಷ್ಟೇ ಅಲ್ಲ, ಸಮಗ್ರ ವೆಸ್ಲೆಯನ್ನರನ್ನೆ ಜರ್ಮನ್ ದೇಶದವರೆಂಬುದಾಗಿ ಮತ್ತೆ ಮತ್ತೆ ಹೇಳಿದ್ದಾರೆ. ಪರಿಣಾಮವಾಗಿ ಗ್ಯಾರೆಟ್ ಮೊದಲಾದ ವೆಸ್ಲೆಯನ್ ಮಿಶನರಿಗಳನ್ನು ವರ್ಣಿಸುವಾಗ ಜರ್ಮನ್ ಬಳುವಳಿಯನ್ನು ಕಲ್ಪಿಸಿ, ಅಸತ್ಯವಾದ ಮಾತುಗಳನ್ನು ಬರೆದಿದ್ದಾರೆ. ಫ್ರಾನ್ಸ್ ದೇಶದ ಬೌತೆಲೋನನ್ನು ಸಹಿತ ಜರ್ಮನ್ ನಾಗರಿಕನನ್ನಾಗಿ ಮಾಡಿದ್ದಾರೆ (ಪು. ೪೭೪).

ಇನ್ನು ವಿವಿಧ ಲೇಖಕರ ಬಗ್ಗೆ ಬಂದ ವೈಯಕ್ತಿಕ ವಿವರಗಳಲ್ಲಿ ಅನೇಕಾನೇಕ ತಪ್ಪುಗಳಿದ್ದು ಅವುಗಳ ಪಟ್ಟಿಯನ್ನು ಕೊಡುತ್ತ ಹೋಗುವುದೆಂದರೆ ದೊಡ್ಡ ಪುಸ್ತಕವೇ ಆದೀತು. ಕೆಲವನ್ನು ಮಾತ್ರ ಇಲ್ಲಿ ಕಾಣಿಸುತ್ತೇನೆ.

ರೈಸ್ ಎನ್ನುವವರು ಕರ್ನಾಟಕದಲ್ಲಿ ಮೂವರು ಆಗಿಹೋದರು. ಒಬ್ಬನು ಬೆಂಜಮಿನ್ ಹೋಲ್ಟ್ ರೈಸ್. ಈತ ಮಿಶನರಿಯಾಗಿ ಬೆಂಗಳೂರಲ್ಲಿ ಅರ್ಧ ಶತ ಮಾನದ ವರೆಗೆ ಬದುಕಿದ್ದನು (೧೮೩೭–೧೮೮೭). ಕ್ರೈಸ್ತ ಮತೀಯ ಪುಸ್ತಕಗಳು, ಪತ್ಯಗಳು ಮತ್ತು ಅರುಣೋದಯ (ಪತ್ರಿಕೆ) ಇವು ಅವನ ಸಾಹಿತ್ಯಿಕ ಗೈಮೆಗಳು. ಬಿ. ಲೂಯಿ ರೈಸ್ ಮತ್ತು ಇ. ಪಿ. ರೈಸ್—ಅವನ ಈ ಇಬ್ಬರು ಮಕ್ಕಳು ಕರ್ನಾಟಕ ದಲ್ಲಿ ಇದ್ದವರು. ಬಿ. ಲೂಯಿ ರೈಸ್ ಮಿಶನರಿಯಾಗದೇ ಶಿಕ್ಷಣಾಧಿಕಾರಿ ಶಾಸನ ಪರಿಶೋಧಕನಾಗಿ ಮಹತ್ತರ ಕಾರ್ಯವೆಸಗಿದ್ದಾನೆ. ಮುತ್ತಣ್ಣನವರು ತಂದೆ-ಮಕ್ಕಳಿಬ್ಬರ ಸಾಹಿತ್ಯಿಕ ಕಾರ್ಯವನ್ನು ಒಂದೇ ವ್ಯಕ್ತಿಯಲ್ಲಿ ಆರೋಪಿಸಿ, ವಿಷಯದ ಕಲಸುಮೇಲೋಗರ ಮಾಡಿದ್ದಾರೆ (ಪು. ೩೨೧–೩೨೮). ಅದಕ್ಕೆ ಊಹನೆ ತರ್ಕಸರಣಿ ಗಳನ್ನೂ ಸೇರಿಸಿದ್ದರಿಂದ ಅದೊಂದು ಸುಳ್ಳಿನ ಕಂತೆಯಾಗಿ ತೋರುತ್ತದೆ. ಅಲ್ಲದೆ ರೈಸನ ಎಪಿಗ್ರಾಫಿಯಾ ಕರ್ನಾಟಿಕಾ, ಮೈಸೂರ ಗಜೆಟಿಯರ್ ಇವುಗಳು ಪ್ರತ್ಯೇಕ ಕೃತಿಗಳೆಂದು ತಿಳಿಯದೆ ಹೋದ ಮುತ್ತಣ್ಣನವರ ಅಜ್ಞಾನ ಬೇಸರವನ್ನುಂಟು ಮಾಡುತ್ತದೆ (ಪು. ೪೮೬–೪೮೭ ಮತ್ತು ೫೧೪). ಲೂಯಿ ರೈಸನು Cataloague of Sanskrit Manuscripts ಎಂಬುದನ್ನು ಸಿದ್ಧಪಡಿಸಿದ್ದು ಮುತ್ತಣ್ಣನವರು ಅದನ್ನು 'ಸಂಸ್ಕೃತ ಶಾಸನಗಳು' ಎಂಬುದಾಗಿ ಭಾವಿಸಿ, ಅದರಲ್ಲಿ ''ಓಲೆಗಳು, ಶಿಲಾ ಶಾಸನಗಳು, ಮತ್ತಿತರ ಲಿಖಾವಟ್ಟುಗಳು'' ಇವೆಯಾಗಿ ಹೇಳಿದ್ದಾರೆ. ಅದರ ಒಂದು ಪುಟದ ಛಾಯಾಚಿತ್ರವನ್ನೂ ಕೊಟ್ಟಿದ್ದಾರೆ. ಪುಸ್ತಕವನ್ನು ಕಣ್ಣಾರೆ ನೋಡಿಯೂ ತಪ್ಪು ಮಾಡಿದ್ದಾರೆ—ಯಥಾಪ್ರಕಾರ! ರೈಸನನ್ನು ಕರ್ನಾಟಕದ ಮ್ಯಾಕ್ಸ್ ಮುಲ್ಲರ್ (ಪು. ೪೯೫) ಎಂದು ಕರೆದದ್ದಂತೂ ಅರ್ಥಹೀನವಾದುದು.

ಕೆಲವು ದೇಶೀಯರ ಸಾಹಿತ್ಯ ಕಾರ್ಯದ ಬಗ್ಗೆ ಹೇಳುವಾಗ ಅಳಿಯ ಲಿಂಗರಾಜನ ಪ್ರಸ್ತಾಪ ಈ ರೀತಿ ಬಂದಿದೆ :

" ಕವಿ ಕೃಷ್ಣರಾಜನೆಂಬವನು ಮೈಸೂರು ರಾಜವಂಶಕ್ಕೆ ಸೇರಿದವನಾಗಿರಬಹುದು. ಅದೇ ಸಮಯದಲ್ಲಿ ಅವನ ಸಮಕಾಲೀನನಾಗಿದ್ದ ಕವಿ ಲಿಂಗರಾಜನೂ ಹಲವು ವಿಚಾರ ಪೂರ್ಣವಾದ ಕಿರುಹೊತ್ತಗೆಗಳನ್ನು ಬರೆದಿದ್ದಾನೆ. ಇವನನ್ನು ಪೂರ್ಣಯ್ಯನ ನಂತರ ಮೈಸೂರಿನ ಮುಖ್ಯಮಂತ್ರಿಯಾಗಿದ್ದ ಲಿಂಗರಾಜನೆಂದು ಕೆಲವರು ಹೇಳಿದರೆ ಇನ್ನು ಕೆಲವರು ಕಳೆದ ಶತಮಾನಾರಂಭದಲ್ಲಿ ಕೊಡಗಿನ ಅರಸನಾಗಿದ್ದ ೨ನೇ ಲಿಂಗರಾಜನೆಂದು ಹೇಳಿದ್ದಾರೆ. ಆದರೆ ಮೈಸೂರಿನ ಮುಖ್ಯಮಂತ್ರಿಯಾಗಿದ್ದ ಆ ಲಿಂಗರಾಜನು ಕೇವಲ ಅಸಭ್ಯ ಮತ್ತು ಅಸಂಸ್ಕೃತನಾದ ವ್ಯಕ್ತಿಯಾಗಿದ್ದನೆಂದು ಆಧಾರಪೂರ್ವಕವಾಗಿ ತಿಳಿದು ಬರುತ್ತದೆ" (ಪು. ೩೭೪).

ಮೇಲಣ ಅಭಿಪ್ರಾಯವನ್ನು ಖಂಡಿಸುವ ಶ್ರಮವನ್ನು ತೆಗೆದುಕೊಳ್ಳಲಾರೆವು.

ಅತ್ಯುಕ್ತಿಯು ಈ ಗ್ರಂಥದ ಪ್ರಮುಖ ವೈಶಿಷ್ಟ್ಯಗಳಲ್ಲೊಂದಾಗಿದೆ. ಇಲ್ಲಿ ಕೆಲವು ಮಾದರಿಗಳಿವೆ :

ಕರ್ನಾಟಕದಲ್ಲಿ ಹಲವು ವರ್ಷ ಸಂಚರಿಸಿ ಇಲ್ಲಿರುವ ಹಸ್ತಪ್ರತಿಗಳು, ಶಾಸನಗಳು, ಸ್ಥಳ ಪುರಾಣಗಳು—ಇವುಗಳ ಬಗ್ಗೆ ಮಾಹಿತಿಯನ್ನು ದೊರಕಿಸಿದ ಕಾಲಿನ್ ಮೆಕೆಂಜಿಯ ಕಾರ್ಯ ನಿಜವಾಗಿಯೂ ಮಹತ್ವದ್ದು. ಆದರೆ ಔಚಿತ್ಯವನ್ನು ಮೀರಿ ಅವನನ್ನು ಹೊಗಳಲಾಗಿದೆ. ಅವನ ಸಂಶೋಧನಾ ವರದಿಗಳು ನೂರಾರು ಗ್ರಂಥ ಕಾಂಡಗಳಾಗಿವೆಯಂತೆ (ಪು. ೧೧೮). ಅವನು ಬರಿ ಸಂಗ್ರಹಕಾರನಿದ್ದನಲ್ಲದೆ ಸಂಶೋಧಕ ನಲ್ಲ. ಸರ್ ವಿಲಿಯಂ ಹಂಟರನು ಇಂಪೀರಿಯಲ್ ಗೆಝೆಟಿಯರ್‌ದ ಸಂಪುಟಗಳನ್ನು ಸಂಪಾದಿಸಿದನಷ್ಟೆ. ಅದಕ್ಕೆ ಸಾಮಗ್ರಿಯನ್ನು ಒದಗಿಸಿದವರು, ಮತ್ತು ಬಿಡಿಯಾಗಿ ಲೇಖನಗಳನ್ನು ಬರೆದವರು ನೂರಾರು ಜನರಿದ್ದಾರೆ. ಆದರೆ ಮುತ್ತಣ್ಣನವರ ಲೇಖನವನ್ನೋದಿದರೆ, ಅವನೊಬ್ಬನೆ ಅಷ್ಟೆಲ್ಲ ಸಂಪುಟಗಳನ್ನು ಬರೆದನೆಂದು ಧ್ವನಿತ ವಾಗುತ್ತದೆ. "ವಿಲಿಯಂ ಕೇರಿಯು ೧೫೦ ಗ್ರಂಥಗಳನ್ನು ಬರೆದನು"—ಇದು ಒಟ್ಟಿ ನಲ್ಲಿ ಸರಿಯಾದ ಮಾತೇ. ಆದರೆ "ಅವನು ಎಷ್ಟು ಪುಸ್ತಕಗಳನ್ನು ಬರೆದನೋ ಅಷ್ಟೇ ಪುಸ್ತಕಗಳು ಅವನ ವಿಷಯವಾಗಿ ಬರೆಯಲ್ಪಟ್ಟಿವೆ" ಎಂಬುದು ಅತಿಶಯೋಕ್ತಿಯ ಇನ್ನೊಂದು ಮಾದರಿಯಾಗಿದೆ. ಕಳೆದ ಶತಮಾನದ ಶಾಸನ ಪರಿಶೋಧಕರು ಕೆಲವರ ಹೆಸರುಗಳನ್ನು ಹೇಳಿಯಾದ ಮೇಲೆ "ಇವರೆಲ್ಲರ ಈ ಅನ್ವೇಷಣೆಯ ಪರಿಣಾಮವಾಗಿ ಕನ್ನಡ ನಾಡಿನ ಯಾವೊಂದು ಪುರಾತನ ಶಾಸನವೂ ಅವರ ದೃಷ್ಟಿ ಯಿಂದ ಪಾರಾಗಲಿಲ್ಲ" ಎನ್ನುತ್ತಾರೆ (ಪು. ೪೯೭). ಅನಂತರ ದೊರಕಿದ ಅನೇಕ ಶಾಸನಗಳ ಪಟ್ಟಿಯನ್ನು ಮುತ್ತಣ್ಣನವರಿಗೆ ಒದಗಿಸುವ ತೊಂದರೆಯನ್ನು ಯಾರಾದರೂ ತೆಗೆದುಕೊಳ್ಳುವುದು ಬೇಡವೆಂದು ಕಾಣುತ್ತದೆ. ಹೇಸ್ಟಿಂಗ್ಸ್‌ನಂತೂ ಮುತ್ತಣ್ಣನವರ ಪಾಲಿಗೆ ಮಹಾವಿಭೂತಿ. ಅವನು ಮಾಡಿದ್ದೆಲ್ಲವೂ ಭಾರತದ ಉದ್ಧಾರಕ್ಕಾಗಿಯೇ. ಅವನು ೭ ಪುಟಗಳ ಮುನ್ನುಡಿ ಬರೆದರೆ (ಪು. ೨೫) ಮತ್ತಣ್ಣನವರ ದೃಷ್ಟಿಯಲ್ಲಿ ಅದು 'ದೀರ್ಘವಾದ' ಮುನ್ನುಡಿ !

ಕನ್ನಡ ಭಾಷೆಯಲ್ಲಿರುವ ಮತ್ತು ಕನ್ನಡ ನಾಡಿನ ವಿವಿಧ ವಿಚಾರಗಳನ್ನು ಕುರಿತು

ಇಂಗ್ಲಿಶ್, ಫ್ರೆಂಚ್, ಜರ್ಮನ್, ಪೋರ್ಚುಗೀಸ್ ಇತ್ಯಾದಿ ಭಾಷೆಗಳಲ್ಲಿ ಬರೆಯಲ್ಪಟ್ಟಿರುವ ಗ್ರಂಥಗಳ ಸಂಖ್ಯೆಯು ಒಟ್ಟಾಗಿ ೩೦ ಸಾವಿರದಷ್ಟಾದರೂ ಇದೆಯೆಂದು ಮುತ್ತಣ್ಣನವರ ಲೆಕ್ಕವಿದೆ (ಪು. ೫೦೦). ಭಾರತದ ಬಗ್ಗೆಯಂತೂ ಲಕ್ಷ ಗಟ್ಟಲೆ ಇವೆಯಂತೆ. ಅಲ್ಲದೆ ಕಳೆದ ಶತಮಾನದಲ್ಲಿ ಕನ್ನಡ ಭಾಷೆಯೊಂದರಲ್ಲೇ ಸು. ೨೫೦೦ ರಷ್ಟು ಬೈಬಲ್ ಕೃತಿಗಳು....ಸೂಕ್ತಿಗಳೇ ಮೊದಲಾಗಿ ಬರೆಯಲ್ಪಟ್ಟುವೆಂದು ಹೇಳುತ್ತಾರೆ. ಮುಂದುವರಿದು—

"ಹೀಗೆ ಒಂದೊಂದೇ ಭಾಷೆಯಲ್ಲಿ ಅಷ್ಟು ಗ್ರಂಥಗಳೆಂದರೆ ಹಿಂದೂಸ್ಥಾನದ ಎಲ್ಲಾ ಸಣ್ಣ ಮತ್ತು ಪ್ರಬಲ ಭಾಷೆಗಳಲ್ಲಿ ಪಾಶ್ಚಾತ್ಯರು ಬರೆದ ಪುಸ್ತಕಗಳು ಒಟ್ಟಾಗಿ ಎಷ್ಟು! ಈ ಎಲ್ಲಾ ಭಾಷೆಗಳಲ್ಲಿ ಇರುವ ಬೈಬಲ್ ಕೃತಿಗಳ ಸಂಖ್ಯೆ ಎಷ್ಟು! ಪರಿಣಾಮವಾಗಿ ಅವೆಲ್ಲಾ ಈ ದೇಶದ ಜನರಿಗೆ ಅಂದು ಎಷ್ಟರಮಟ್ಟಿಗೆ ಮನೋವಿಕಾಸವನ್ನು ಮೊಳಗಿಸಲು, ಚೈತನ್ಯವನ್ನು ಬೀರಲು ಮತ್ತು ಹುಮ್ಮಸನ್ನು ಹುಟ್ಟಿಸಲು ಸಹಾಯಕವಾಗಿದ್ದಿತೆಂಬುದನ್ನೂ ಈ ಅಲ್ಪ ಬರವಣಿಗೆಯು ಮೂಲಕ ವರ್ಣಿಸಲು ಅಸಾಧ್ಯವಾಗಿದೆ." (ಪು. ೩೪೪) ಎನ್ನುತ್ತಾರೆ. ಹೊಗಳಿಕೆಯಂ ನಿಮಿತ್ತದಿಂದ, ಇಲ್ಲಿ ಅತಿಶಯೋಕ್ತಿಯು ಪರಾಕಾಷ್ಠೆಯನ್ನು ಮುಟ್ಟಿದೆ.

ಇವೆಲ್ಲ ಪ್ರಮಾದಗಳ ಪರಿಶೀಲನೆಯಿಂದ ವ್ಯಕ್ತವಾಗುವ ಮುಖ್ಯ ಅಂಶವೆಂದರೆ ಲೇಖಕರು ತೋರಿದ ಅತೀವ ಅಲಕ್ಷ್ಯ. ವಿಷಯ ಸಂಗ್ರಹವು ಅಪಾರವಾಗಿದ್ದರೆ, ಅವುಗಳ ಉಲ್ಲೇಖದಲ್ಲಿ ಕೆಲವು ತಪ್ಪುಗಳಾಗುವುದು ತುಸುಮಟ್ಟಿಗೆ ಅನಿವಾರ್ಯವೆನಿಸೀತು. ಆದರೆ ಯಾವುದೊಂದು ಆಕರವು ಕಣ್ಣೆದುರಿಗಿದ್ದೂ ಅದನ್ನು ಸರಿಯಾಗಿ ನೋಡಿಕೊಳ್ಳದೇ, ಸತ್ಯನಿಷ್ಠತೆಯನ್ನು ಗಾಳಿಗೆ ತೂರಿ, ಖುಶಿ ಬಂದ ರೀತಿಯಲ್ಲಿ ಉಲ್ಲೇಖಿಸಿದ್ದುದು ನಿಜಕ್ಕೂ ವಿಷಾದನೀಯ. ಪ್ರತಿ ಪುಟದಲ್ಲಿಯೂ ಸತ್ಯಕ್ಕೆ ದೂರವಾದ ಇಂಥ ಸಂಗತಿಗಳು ದೊರೆಯುವವು. ಈ ನಿರ್ಲಕ್ಷ್ಯದ ಮೂಲಕವೇ ಪುನರುಕ್ತಿ, ಅರ್ಧ ಸತ್ಯದ ಹೇಳಿಕೆಗಳು, ಅತ್ಯುಕ್ತಿಗಳು ಹಾಗೂ ಅಸ್ಪಷ್ಟ ವಿಚಾರಗಳು ಸೇರಿಕೊಂಡು, ಗ್ರಂಥವು ಅತ್ಯಂತ ಅವಿಶ್ವಸನೀಯವಾಗಿದೆ. ಇದರಲ್ಲಿ ಬಂದ ಮಾಹಿತಿಯನ್ನು ನಂಬಿ ಹೆಚ್ಚಿನ ಅಭ್ಯಸನಕ್ಕೆ ಯಾರಾದರೂ ತೊಡಗಿದರೆ, ಅದು ಘಾತುಕದ್ದಾಗಿ ಪರಿಣಮಿಸೀತು.

ಮನೋರಂಗ

ಇಲ್ಲಿಗೆ ಈ ಗ್ರಂಥದ ಪರಾಮರ್ಶೆಯನ್ನು ಮುಗಿಸಬಹುದಿತ್ತು. ಆದರೆ ಪಾಶ್ಚಾತ್ಯರನ್ನು ಹೊಗಳುವಲ್ಲಿನ ಲೇಖಕರ ಮನೋವೃತ್ತಿ ಅಥವಾ ದೃಷ್ಟಿಕೋಣವು ನಮ್ಮ ದೇಶದ ಸಂಸ್ಕೃತಿಗೆ ಅನ್ಯಾಯವೆಸಗಿದೆ. ಅದನ್ನು ಪರಿಶೀಲಿಸದೆ ಈ ವಿಮರ್ಶೆ ಪೂರ್ಣವೆನಿಸದು.

" ಧರ್ಮಸಂಸ್ಥಾಪನಾಯ ಸಂಭವಾಮಿ ಯುಗೇ ಯುಗೇ ಎಂದು ಹೇಳಿದ ಭಗವಂತನು....ಹಲವು ವಿಧದಲ್ಲಿ ಬಂದು ಹೋದನೆಂಬುದು ನ್ಯಾಯವಾದ ಕಥೆಯೇ,

ಆಗಿದೆ, ಇರಬಹುದು. ಆದರೆ ನಮ್ಮ ದೇಶದಲ್ಲಿ ಶಿಥಿಲವಾಗುತ್ತಿದ್ದ ಹಿಂದೂಧರ್ಮ, ಸಂಸ್ಕೃತಿ, ಸಾಹಿತ್ಯಗಳೆಲ್ಲವನ್ನೂ ಉಳಿಸಲು....ಮಹಮ್ಮದೀಯರ ಕರಾಳ ನೀತಿಯಿಂದ ದೇಶವನ್ನು ಪಾರಾಗಿಸಲು....೨೦೦ ವರ್ಷಗಳ ಕಾಲ ಇದ್ದು ಹಿಂದೆರಳಿದ ಪಾಶ್ಚಾತ್ಯನು ಏಕದಶಾವತಾರಿಯಲ್ಲದೆ ಮತ್ತಾರು ?....ದೇಶಕ್ಕೆ ನವಶಕ್ತಿ ಹಾಗೂ ಸ್ಫೂರ್ತಿಯನ್ನು ಒದಗಿಸಿದ ಕಾಲಚಕ್ರದ ಸಾರಥಿಯು ಪಾಶ್ಚಾತ್ಯ ದೇಶದಿಂದ ಓರ್ವ ವ್ಯಾಪಾರಿಯಾಗಿ ಬಂದುದು ದೇಶದ ಸುದೈವ. ಈ ಅವತಾರವು ಮತ್ಸ್ಯ, ಕೂರ್ಮ, ವರಾಹಾದಿ ಅವತಾರಗಳಿಗಿಂತಾ ಎಷ್ಟೋ ಮೇಲಾದುದೂ ಅರ್ಥವತ್ತಾದುದೂ ಎಂದು ನನ್ನ ಭಾವನೆಯಾಗಿದೆ" (ಮುನ್ನುಡಿ).

" ಅಳಿದುಳಿದ ನಮ್ಮ ಪ್ರಾಚೀನ ಐತಿಹಾಸಿಕ, ವಾಸ್ತುಶಿಲ್ಪ ಮತ್ತು ಸಾಹಿತ್ಯಾದಿ ಕುರುಹುಗಳನ್ನು ಉಳಿಸಲು ಅವರು ದೇವದೂತರಂತೆ ಬಂದು ನಡೆಸಿದ ಜ್ಞಾನೋಪಾಸನೆ, ಅನ್ವೇಷಣೆ ಮತ್ತು ಧರ್ಮರಕ್ಷಣೆಯ ಮಹಾಕಾರ್ಯವು ನಮ್ಮ ದೇಶದ ಹಿಂದಾವವ ಮಹ ತಪಸ್ವಿಯೂ ಕೈಗೊಳ್ಳದಿದ್ದ ಅಸಾಧಾರಣ ಸಾಹಸವಾಗಿದೆ" (ಮುನ್ನುಡಿ).

" ಆದರ ನಂತರ ರಾ. ನರಸಿಂಹಾಚಾರ್ಯನ 'ಕವಿಚರಿತ್ರೆ', ಆಲೂರ ವೆಂಕಟ ರಾಯನ 'ಕರ್ಣಾಟಕ ಗತವೈಭವ' ಗೋವಿಂದ ಪೈ ಇವನ 'ಕವಿ ಕಾಲ ವಿಮರ್ಶೆ'— ಇತ್ಯಾದಿ ಬರವಣಿಗೆಗಳೆಲ್ಲಾ ಆ ಪಾಶ್ಚಾತ್ಯ ವಿದ್ವಾಂಸರು ಹೇಳಿದ್ದರ ಮೇಲೆ ಕಟ್ಟಿದ ಭವ್ಯಕೋಟೆಗಳು ಮಾತ್ರ ಎಂದೆನ್ನಬಹುದಲ್ಲದೆ ಇವರಾರೂ ತಾವಾಗಿ ಮೂಲತಃ ಯಾವ ಸಂಶೋಧನೆ ಮಾಡಿದರೋ ತಿಳಿಯದು" (ಅದೇ ಪು. ೫೪೯).

"ಬ್ರಿಟಿಶರು ಇನ್ನೊಂದು ಅರ್ಧ ಶತಮಾನದ ಕಾಲವಾದರೂ ಈ ದೇಶದಲ್ಲಿ ಉಳಿದಿದ್ದರೆ ಮತ್ತು ಅವರಿಂದಲೇ ಆಧುನಿಕ ವಿದ್ಯೆಯನ್ನು ಪಡೆದು ಪ್ರಸಿದ್ಧರಾದ ಈ ದೇಶದ ಜನರು ಅವರಿಗೆ ತಕ್ಕರೀತಿಯಲ್ಲಿ ಸಹಕಾರವನ್ನಿತ್ತಿದ್ದರೆ ಅವರು ಈ ದೇಶದಲ್ಲಿ ಇಂದಿಗೂ ಇರುವ ಜಾತಿಭೇದ, ಜನಭೇದ ಇತ್ಯಾದಿಗಳನ್ನು ಕಿತ್ತೊಗೆಯುತ್ತಿದ್ದರು" (ಪು. ೩೪೬).

ಇದು ಮುತ್ತಣ್ಣನವರ ವಿಚಾರಧೋರಣೆ. ಇವೇ ಮಾತುಗಳು ಅನುವು ದೊರೆತಲ್ಲೆಲ್ಲ ಪುನರುಕ್ತಿಗೊಂಡಿವೆ. ಕೆಲವೆಡೆ ವಿಸ್ತಾರವಾಗಿ ಪ್ರತಿಪಾದಿತವಾಗಿವೆ. ಪಾಶ್ಚಾತ್ಯರಿಂದಲೇ ನಮ್ಮ ಉದ್ಧಾರವಾಯಿತು ಎಂದು ಹೇಳುವ ಅವಸರದಲ್ಲಿ ಭಾರತೀಯ ಜನ, ಅವರ ಆಚಾರ ವಿಚಾರ, ವಿದ್ಯೆ, ಸಾಹಿತ್ಯಿಕ ಕಾರ್ಯ ಇವನ್ನು ಅತ್ಯಂತ ಹೀನಾಯವಾಗಿ ಕಾಣಲಾಗಿದೆ. ಜೊತೆಗೆ ಬ್ರಾಹ್ಮಣರನ್ನು ಅಲ್ಲಲ್ಲಿ ಜರೆಯಲಾಗಿದೆ.

ಮುತ್ತಣ್ಣನವರ ಪುಸ್ತಕದ ಮಟ್ಟ ಯಾವ ರೀತಿಯದೆಂಬುದನ್ನು ಅದರ ಬಹಿರಂಗ, ಅಂತರಂಗಗಳ ವಿವೇಚನೆಯಲ್ಲಿ ತೋರಿಸಲಾಗಿದೆಯಷ್ಟೆ. ಹಾಗಿರುವಾಗ, ಅವರ ಈ ದೃಷ್ಟಿಕೋಣವನ್ನು ಹುಚ್ಚುತನದ ವ್ಯರ್ಥಾಲಾಪವೆಂದು ಕಡೆಗಣಿಸಿ ಬಿಡಬಹುದಿತ್ತು. ಆದರೆ ವಿಜ್ಞಾನ ಮತ್ತು ಆಧುನಿಕತೆಗಳ ಹೆಸರಿನಲ್ಲಿ ಭಾರತೀಯ ಜೀವನ ಮೌಲ್ಯಗಳನ್ನು

ತುಚ್ಛವಾಗಿ ಕಾಣುವ ಸ್ವಬಾಂಧವರು ನಮ್ಮ ದೇಶದಲ್ಲಿ ಸಾಕಷ್ಟು ಜನರಿದ್ದಾರೆ. ಅಂಥ ವರನ್ನೂ ಗಮನದಲ್ಲಿರಿಸಿಕೊಂಡು ಮುತ್ತಣ್ಣನವರ ಭೂಮಿಕೆಯನ್ನು ವಿಶ್ಲೇಷಿಸುವುದು ಅಗತ್ಯವಾಗುತ್ತದೆ.

ಕಳೆದ ನೂರೈವತ್ತು ವರ್ಷಗಳಲ್ಲಿ ಸಾಗಿಬಂದ ಇಂಗ್ಲಿಶರ ಆಡಳಿತ, ಶಿಕ್ಷಣ ಪ್ರಸಾರ ಮತ್ತು ನಮ್ಮ ಧರ್ಮ ಸಂಸ್ಕೃತಿಗಳ ಮೇಲೆ ನಡೆದ ಸುವ್ಯವಸ್ಥಿತವಾದ ಹಾಗೂ ಬಹು ಮುಖವಾದ ದಾಳಿ ಇವುಗಳಿಂದ ನಮ್ಮ ಇತಿಹಾಸ-ಸಂಸ್ಕೃತಿಗಳ ವಿಕೃತ ರೂಪವು ದೇಶದ ಅನೇಕ ಸುಶಿಕ್ಷಿತರ ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆಗೊಂಡಿದೆ. ಮೇಲೆ ಹೇಳಿದ ವಿಚಾರ ಸರಣಿಗೆ ಇದುವೆ ಹಿನ್ನೆಲೆಯಾಗಿದೆ.

ಬ್ರಿಟಿಶರು ಭಾರತಕ್ಕೆ ಬಂದದ್ದು ಕೇವಲ ಭಾರತೀಯರ ಉದ್ಧಾರಕ್ಕಾಗಿ ಅಲ್ಲ. ಅವರು ಇಲ್ಲಿಗೆ ಬಂದಾಗ ಭಾರತೀಯರು ಸುಸಂಸ್ಕೃತರಿದ್ದರಷ್ಟೇ ಅಲ್ಲ, ಉದ್ಯೋಗ ವ್ಯವಸಾಯಗಳಲ್ಲಿ ತುಂಬಾ ಪ್ರಗತಿ ಗಳಿಸಿದ್ದರು. ಆಗಿನ ಯುರೋಪದಲ್ಲಿಯ, ಆದರಂತೆ ಭಾರತದ ಅರ್ಥಿಕ ಮತ್ತು ಔದ್ಯೋಗಿಕ ಮಟ್ಟಗಳನ್ನು ತುಲನಾತ್ಮಕವಾಗಿ ಅಭ್ಯಾಸ ಮಾಡಿದ ಗ್ರಂಥಗಳು ಹೊರಬಿದ್ದಿವೆ. ಅವುಗಳಿಂದ ಭಾರತೀಯರ ಆಗಿನ ಕಾಲದ (೧೭, ೧೮ನೇ ಶತಮಾನಗಳ) ಉಚ್ಚಮಟ್ಟದ ಜೀವನ ನೋಡಸಿಗುತ್ತದೆ. ಬ್ರಿಟಿಶರು ಬಂದ ಮೇಲೆ ನಡೆಸಿದ ರಾಜಕೀಯ ದಬ್ಬಾಳಿಕೆ ಹಾಗೂ ಆರ್ಥಿಕ ಶೋಷಣೆಯ ಕತೆ ಯನ್ನು ರಮೇಶಚಂದ್ರ ದತ್ತ, ದಾದಾಭಾಯಿ ನೌರೋಜಿ, ವಿಲಿಯಮ್ ಡಿಗ್ಬಿ (Pros perous British India ದ ಲೇಖಕರು), ಜೆ. ಸಿ. ಕುಮಾರಪ್ಪ ಮೊದಲಾದವರು ಚೆನ್ನಾಗಿ ಚಿತ್ರಿಸಿದ್ದಾರೆ. ತಮ್ಮ ದೇಶದ ಪ್ರಗತಿಗಾಗಿ ಭಾರತೀಯರ ಕೈಗಾರಿಕೆ, ಇತರ ಉದ್ಯೋಗಗಳನ್ನು ನಾಶಮಾಡಿದ ಬ್ರಿಟಿಶರನ್ನು ಭಾರತದ ಉದ್ಧಾರಕರೆಂದು ಹೊಗಳ ಬೇಕೆ? ಅವರು ತಮ್ಮ ಆಡಳಿತದಿಂದ ಶಾಂತಿ ಸುವ್ಯವಸ್ಥೆಗಳನ್ನು ನೆಲೆಗೊಳಿಸಿದರೆಂದು ಹೇಳಲಾಗುತ್ತದೆ. ಬಂಗಾಲದಲ್ಲಿ ಈಸ್ಟ್ ಇಂಡಿಯಾ ಕಂಪನಿಯವರು ನಡೆಸಿದ ದುರಾಡಳಿತೆ ಯನ್ನು ಬ್ರಿಟಿಶ್ ಇತಿಹಾಸಜ್ಞರೇ ಕಟುವಾಗಿ ಟೀಕಿಸಿದುದನ್ನು ನೆನೆಯತಕ್ಕುದು. ಭಾರತೀಯರನ್ನು ನಿಶ್ಶಸ್ತ್ರರನ್ನಾಗಿ, ನಿರ್ವೀರ್ಯರನ್ನಾಗಿ ಮಾಡಿ, ಮಸಣದ ಶಾಂತಿ ಯನ್ನು ಮಾತ್ರ ಬ್ರಿಟಿಶರು ತಂದು ಕೊಟ್ಟರೆನ್ನಬೇಕಾಗುವುದು. ಇನ್ನು ಶಿಕ್ಷಣ. ಪಾಶ್ಚಾತ್ಯ ಶಿಕ್ಷಣವನ್ನು ಈ ದೇಶದಲ್ಲಿ ಪ್ರಾರಂಭಿಸಿದುದರ ಉದ್ದೇಶವನ್ನು ಮೆಕಾಲೆಯು ಈ ರೀತಿ ಯಾಗಿ ಸ್ಪಷ್ಟಪಡಿಸಿದ್ದನ್ನು ಮುತ್ತಣ್ಣನವರಂಥವರ ಗಮನಕ್ಕೆ ತರಬಯಸುತ್ತೇನೆ :

We must at present do our best to form a class who may be interpreters between us and the millions we govern ; a class of persons—Indians in blood and colour ; but English in taste, in opinion, in morals and intellect.

ಪಾಶ್ಚಾತ್ಯರು ಭಾರತದ ಪ್ರಾಚೀನ ಇತಿಹಾಸ, ಸಾಹಿತ್ಯಗಳನ್ನು, ಧರ್ಮಗ್ರಂಥ ಗಳನ್ನು ಯುರೋಪದ ಭಾಷೆಗಳಲ್ಲಿ ಅನುವಾದಿಸಿದರು. ನಿಜ. ವಿಲಿಯಮ್ ಜೋನ್ಸ್

ಏಶಿಯಾಟಿಕ್ ಸೊಸೈಟಿಯನ್ನು ಸ್ಥಾಪಿಸಿ ಆ ದಿಶೆಯಲ್ಲಿ ಮೊದಲಿಗನಾದನು. ಇದೆಲ್ಲ ಒಳ್ಳೆಯ ಕೆಲಸವೇ. ಆದರೆ ಅದರಿಂದ ಭಾರತೀಯರಿಗಾದ ಲಾಭವೇನು?? ಭಾರತೀಯ ಧರ್ಮ, ಹಾಗೂ ಸಾಹಿತ್ಯದ ಗ್ರಂಥಗಳ ಗುಣಗೌರವಕ್ಕೆ ಲುಬ್ಧರಾಗಿ ಅವರು ಅವನ್ನು ತಮ್ಮ ಭಾಷೆಗಳಲ್ಲಿ ಬೆಳಕಿಗೆ ತಂದರು. ಅದರಿಂದ ಯುರೋಪದ ಜನರಿಗೆ ಪ್ರಯೋಜನ ವಾಯಿತಲ್ಲದೆ, ಭಾರತೀಯರಿಗಲ್ಲ. ಹಾಗೆ ಮಾಡುವಾಗ, ಅವರು ಮಾಡಿದ ತಪ್ಪು ತಪ್ಪಾದ ಅನುವಾದದಿಂದ ಮೂಲಕೃತಿಗಳಿಗೆ ಅನೇಕ ಸಲ ಅನ್ಯಾಯವೂ ಆಗಿದೆ. ಈ ಪ್ರಸಂಗದಲ್ಲಿ ಇನ್ನೊಂದು ಮಾತನ್ನುನೆನೆಯಬೇಕು. ಆರ್ಷೇಯ ಗ್ರಂಥಗಳನ್ನು, ಅದರಂತೆ ಶಿಲಾಶಾಸನ ಗಳನ್ನು ಅರ್ಥಮಾಡಿಕೊಳ್ಳುವಾಗ ಪಾಶ್ಚಾತ್ಯರು ಹಿಂದೂ ವಿದ್ವಾಂಸರ ಸಹಾಯವನ್ನು ಪಡೆದ ಸಂದರ್ಭಗಳು ಲೆಕ್ಕವಿಲ್ಲದಷ್ಟಿವೆ. ಅಂತರ ಇಷ್ಟೇ. ಕಿಟೆಲ್, ಫ್ಲೀಟ್‌ರಂತಹ ಕೆಲವು ವಿದ್ವಾಂಸರು ಮಾತ್ರ ಅಂಥ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಇತರ ಅನೇಕರು ಹಾಗೆ ಮಾಡಿಲ್ಲ.

'ವೇದಾದಿ ಗ್ರಂಥಗಳು ಬ್ರಾಹ್ಮಣೇತರರಿಗೆ ಲಭ್ಯವಿದ್ದಿಲ್ಲ; ಪಾಶ್ಚಾತ್ಯರು ತಾವಾಗಿ ಸಂಸ್ಕೃತ ಹಾಗೂ ದೇಶಭಾಷೆಗಳನ್ನು ಕಲಿತು, ಆ ಗ್ರಂಥಗಳನ್ನು ಅಭ್ಯಸಿಸಿ, ಅನುವಾದಿಸಿ ಸರ್ವರಿಗೂ ಮುಕ್ತಮಾಡಿದರು' ಎಂಬುದು ಮುತ್ತಣ್ಣನವರು ಪದೇ ಪದೇ ಹೇಳುವ ನಿಲುಮೆಯಾಗಿದೆ. ''ಬ್ರಾಹ್ಮಣರು ತಾವೂ ಓದಲಿಲ್ಲ; ಇತರರಿಗೂ ಓದುವ ಅವಕಾಶ ವನ್ನು ಕೊಡಲಿಲ್ಲ'' ಎನ್ನುತ್ತಾರೆ (ಪು.೨೨). ಅವರು ಓದದೇ ಸಂಸ್ಕೃತದಲ್ಲಿ ವೇದ, ವೇದಾಂಗಗಳಿಗೆ ಅನೇಕ ಟೀಕೆಗಳು ಹೊರಬಂದುವೆ? ಬ್ರಾಹ್ಮಣೇತರರು ವೇದಾದಿಗಳನ್ನು ಅಭ್ಯಾಸಮಾಡಿದ್ದರೆಂಬುದಕ್ಕೆ ಉಪನಿಷತ್ತು, ರಾಮಾಯಣ, ಮಹಾಭಾರತಗಳಲ್ಲಿ ಅನೇಕ ಉದಾಹರಣೆಗಳು ಸಿಕ್ಕುತ್ತವೆ. ಐತಿಹಾಸಿಕ ಕಾಲದಲ್ಲಿಯೇ ಗ್ರೀಕ್ ತತ್ತ್ವಜ್ಞಾನಿಗಳಿಗೆ, ಚೀನಾ ದೇಶದ ತತ್ವವೇತ್ತರಿಗೆ ಮುಸಲ್ಮಾನ್ ಸೂಫಿಗಳಿಗೆ, ನಾನಾ ಜಾತಿಯ ಸಂತರಿಗೆ ವೇದಗಳ ಪರಿಚಯವಿದ್ದುದನ್ನು ಹೇಗೆ ಅಲ್ಲಗಳೆಯಬೇಕು? ವೇದಗಳ ಪರಿಚಯ ಮಾಡಿ ಕೊಂಡದ್ದಕ್ಕಾಗಿ ಯಾರಾದರೂ ಅವರಿಗೆ ಶಿಕ್ಷೆ ವಿಧಿಸಿದರೆ? ತಿಳಿಯಬೇಕಾದ ಮಾತೆಂದರೆ, ವೇದಾದಿ ಗ್ರಂಥಗಳನ್ನು ಓದಲು ಒಂದು ಬಗೆಯ ವಿಶಿಷ್ಟ ಅಧಿಕಾರ ಬೇಕು. ಅದು ಕೇವಲ ಜಾತಿಯ ಮಾತಲ್ಲ.

ಆರ್ಷೇಯ ಗ್ರಂಥಗಳನ್ನು, ಇಲ್ಲವೆ ಹಿಂದೂ ಧರ್ಮದ ತತ್ವಗಳನ್ನು ಪುಸ್ತಕಗಳ ಮೂಲಕ ಅಭ್ಯಾಸ ಮಾಡಿರದಿದ್ದರೂ ಸಾಮಾನ್ಯ ಜನಜೀವನದಲ್ಲಿ ಅವು ಬೆರೆತು ಬಿಟ್ಟಿದ್ದವು. ಈ ಅಂಶವನ್ನು ಪಾಶ್ಚಾತ್ಯ ವಿದ್ವಾಂಸರೇ ಒಪ್ಪಿಕೊಂಡಿದ್ದಾರೆ :

These ideas are not the monopoly of the learned : they are shared in great measure by the man in the street. If you talk to a fairly intelligent Hindu peasant about the Paramatma, Karma, Māyā, Mukti and so forth, you will find....that the forms are familiar to him (Herbert Risley).

ಇಂತು, ವಿದ್ಯೆಯೆಂದರೆ ಕೇವಲ ಪುಸ್ತಕೀಯ ವಿದ್ಯೆಯಲ್ಲ—ಎಂಬ ಮಾತನ್ನು ಮುತ್ತಣ್ಣನವರಂಥ ಮಹಾನುಭಾವರು ಅವಶ್ಯವಾಗಿ ಗಮನಿಸತಕ್ಕುದು. ವ್ಯವಹಾರ ವಿದ್ಯೆಯಲ್ಲಿಯೂ ಅಂದಿನ ಜನರು ಸಾಕಷ್ಟು ಪರಿಣತರಿದ್ದರೆಂಬುದನ್ನು, ಜಿ. ಎಲ್. ಪೆಂಡರಗಾಸ್ಟ್ ಎಂಬ ಮುಂಬಯಿ ಸರಕಾರದ ಶಿಕ್ಷಣಾಧಿಕಾರಿಯು ೧೮೨೧ರಲ್ಲಿ ಹೇಳಿದ ಈ ಮಾತಿನಿಂದಲೂ ಮನಗಾಣಬಹುದಾಗಿದೆ :

" ಇಲ್ಲಿಯ ಶಾಲೆಗಳಲ್ಲಿ ಓದು, ಬರೆಹ, ಗಣಿತ—ಈ ಪ್ರಾಥಮಿಕ ವಿಷಯಗಳನ್ನು ಹೆಚ್ಚಿನ ವೆಚ್ಚವಿಲ್ಲದೆ ಕಲಿಸಲಾಗುತ್ತದೆ. ಕಲಿಸುವ ಪದ್ಧತಿಯೊ ಅತ್ಯಂತ ಸರಳ; ಅಷ್ಟೇ ಪರಿಣಾಮಕಾರಿಯೂ ಅಹುದು. ಸಾಮಾನ್ಯ ರೈತರು ಅಥವಾ ವ್ಯಾಪಾರಿಗಳು ಲೆಕ್ಕದಲ್ಲಿ ಇಷ್ಟೊಂದು ಚಾಕಚಕ್ಯತೆಯಿಂದ ವ್ಯವಹರಿಸುತ್ತಾರಲ್ಲ: ಅದೇ ಮಟ್ಟದ ನಮ್ಮ ದೇಶದ ಜನರಿಗಿಂತ ಇವರು ಈ ವಿಷಯದಲ್ಲಿ ಮೇಲ್ಮೆ ಪಡೆದವರೆಂದೇ ಹೇಳಬೇಕು." (Survey of Indigenous Education in the Province of Bombay, 1820-1830 —ಇದರಲ್ಲಿ ಉದ್ಧೃತ, ಪು. ೨೧).

ಭಾರತದ ಉದ್ಧಾರ ಕಾರ್ಯದಲ್ಲಿ ಪಾಶ್ಚಾತ್ಯ ಮಿಶನರಿಗಳ ಪಾತ್ರವು ಅಧಿಕಾರಿಗಳಿಗಿಂತ ನೂರ್ಮಡಿ ಹೆಚ್ಚಿನದು ಎಂದು ಮುತ್ತಣ್ಣನವರು ಹೇಳಿದ್ದಾರೆ (ಪು. ೫೭೧). 'ಮತ ಪ್ರಸಾರವೇ ಈ ಎಲ್ಲಾ ಕ್ರೈಸ್ತ ಸಂಸ್ಥೆಗಳ ಗುರಿಯಾಗಿದ್ದಿತಾದರೂ ಅವರು ನಮ್ಮ ಒರಟುಸ್ವಭಾವ ಜನಕ್ಕೆ ನಯ, ವಿನಯ, ದಯೆ, ಧರ್ಮ ಇತ್ಯಾದಿಗಳನ್ನು.... ಕಲಿಸಿದರು" ಎಂದಿದ್ದಾರೆ. ಅವರು ಬರೆದ ಕ್ರೈಸ್ತ ಸಾಹಿತ್ಯ, ಕೋಶ–ವ್ಯಾಕರಣಾದಿಗಳನ್ನು ಬೇಸರವಿಲ್ಲದೆ ಹೊಗಳಿದ್ದಾರೆ. ಅವರು ಯಾರಿಗಾಗಿ, ಯಾತಕ್ಕಾಗಿ ಇಷ್ಟೆಲ್ಲ ಮಾಡಿದ್ದು ಎಂಬ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಬೇಕಾಗುತ್ತದೆ. ಶಬ್ದಕೋಶ ರಚನೆಯಂಥ ಸಾಹಿತ್ಯಿಕ ಕಾರ್ಯದಲ್ಲಿಯೂ ಅವರಲ್ಲಿ ಮತಪ್ರಸಾರವೇ ಮೂಲ ಪ್ರೇರಣೆಯಾಗಿದ್ದಿತೆಂಬುದಕ್ಕೆ ಮರಾಠೀ–ಇಂಗ್ಲಿಶ್ ಕೋಶವನ್ನು ರಚಿಸಿದ ಮೋಲ್ಸವರ್ಥನ ಮಾತು ನಿದರ್ಶಕವಾಗಿದೆ :

"It was undertaken not from a thirst after honour or emolument, but from a humble desire of promoting the propagation of the glorious Gospel; and it was continued by the energy of this desire...."

ಅದರಂತೆ ಅವರು ಇಲ್ಲಿಯ ಭಾಷೆಗಳನ್ನು ಕಲಿತುದು, ಶಾಲೆಗಳನ್ನು ಸ್ಥಾಪಿಸಿದುದು, ರುಗ್ಣಾಲಯಗಳನ್ನು ನಡೆಸಿದುದು —ಇವೆಲ್ಲ ಮತಪ್ರಸಾರಕ್ಕೆ ಒಂದಿಲ್ಲೊಂದು ರೀತಿಯಲ್ಲಿ ಪೋಷಕವಾಗಲೆಂದೇ. ಅವರು ರಚಿಸಿದ ಮತೀಯ ಸಾಹಿತ್ಯವು ಪ್ರತ್ಯೇಕವಾಗಿಯೇ ಉಳಿಯಿತಲ್ಲದೆ, ದೇಶೀಯ ಸಾಹಿತ್ಯವಾಹಿನಿಯ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡಲಿಲ್ಲವೆಂಬುದನ್ನೂ ಗಮನಿಸಬೇಕು.

ಮತಪ್ರಸಾರದ ಜೊತೆಗೆ ಕ್ರಿಶ್ಚಿಯನ್/ಪಾಶ್ಚಾತ್ಯರು ನಮ್ಮ ದೇಶದ ಸಂಸ್ಕೃತಿಯ ಮೇಲೆ ಮಾಡಿದ ದುಷ್ಪರಿಣಾಮವನ್ನು ಹಾರ್ವರ್ಡ್ ವಿಶ್ವವಿದ್ಯಾಲಯದ ಪ್ರೀತಿಮ್ ಸೊರೊಕಿನ್ ಸ್ಪಷ್ಟವಾಗಿ ಚಿತ್ರಿಸಿದ್ದಾರೆ :

Western Christiandom has invaded all the other Continents; its armies followed by its priests and merchants have subjugated, robbed or pillaged most of the non-Christian nations. Native American, African, Australian and Asiatic populations have been subjected to this peculiar brand of Christian 'love' which has generally manifested itself in pitiless extermination, enslavement, coercion,*destruction of the cultural values,* institutions and ways of life of the victims....Incidentally, the west did bring them a modicum of real Christianity help and protection (in the form of hospital and medical services), loving sympathy, education, free dom and democracy. But these biessings were but a drop in the bucket, a mere byproduct, so to speak. (*Reconstrucion of Humanity* P. 47.)

ಈ ಸಂದರ್ಭದಲ್ಲಿ ಮಿಶನರಿಗಳ ಕಾರ್ಯವನ್ನು ವಿವೇಕಾನಂದರು ಪಾಶ್ಚಾತ್ಯರ ಸಭೆಯೊಂದರಲ್ಲಿ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆಂದು ಮುತ್ತಣ್ಣವರು ಹೇಳಿದ್ದಾರೆ. ಅದಕ್ಕೆ ಸಾಕ್ಷಿಯಾಗಿ ಈ ಅವತರಣಿಕೆಯನ್ನು ಕೊಟ್ಟಿದ್ದಾರೆ (ಮುಖಪುಟ ಹಾಗೂ ಪು. ೫೭೧):

If we take all the mud from the bed' of Indian Ocean and throw it into your faces, it will be but a mere speck in comparison to what your missionaries have done to our religion and culture.

ನಮ್ಮ ಧರ್ಮ, ಸಂಸ್ಕೃತಿಗಳ ಮೇಲೆ ಮಿಶನರಿಗಳು ಇಷ್ಟೊಂದು ರಾಡಿಯನ್ನು ಚೆಲ್ಲಿದ್ದಾರಲ್ಲ, ಅದಕ್ಕೆ ಪ್ರತಿಯಾಗಿ ಹಿಂದೂ ಮಹಾಸಾಗರದ ತಳದ ಮಣ್ಣನ್ನೆಲ್ಲ ನಿಮ್ಮ ಮುಖದ ಮೇಲೂ ಎರಚಿದರೂ, ಇದು ತೀರ ಕಡಿಮೆಯಾಯಿತು—ಎಂಬುದಾಗಿ ವಿವೇಕಾನಂದರು ಖಂಡತುಂಡವಾಗಿ ಮಿಶನರಿಗಳ ಕಾರ್ಯಗಳನ್ನು ಹೀಗಳೆದಿದ್ದಾರೆ. ಮುತ್ತಣ್ಣನವರು ಅಷ್ಟರ ಮಟ್ಟಿಗಿನ ಅರ್ಥವನ್ನು ಸಹ ಮಾಡಿಕೊಳ್ಳದೇ ಹೋದುದಕ್ಕೆ ನಗಬೇಕೋ, ವಿಷಾದ ಪಡಬೇಕೋ ತಿಳಿಯದಾಗಿದೆ.

ಪಾಶ್ಚಾತ್ಯರು ಭಾರತ/ಕರ್ನಾಟಕಕ್ಕೆ ಬಂದು ಕೈಗೊಂಡ ಬಹುಮುಖ ಚಟುವಟಿಕೆಗಳಿಂದ ಖಂಡಿತವಾಗಿ ನಮಗೆ ಪ್ರಯೋಜನವಾಗಿದೆ. ಅದನ್ನು ನಾವು ಸ್ಮರಿಸದಿದ್ದರೆ ಕೃತಘ್ನರೆನಿಸಿಯೇವು. ಆದರೆ ವಸ್ತುತಃ ಅವರು ನಮಗಾಗಿ, ನಮ್ಮ ಏಳ್ಗೆಗಾಗಿಯೆಂದೇ ಮಾಡಲಿಲ್ಲ. ತಮ್ಮ ಉದ್ದೇಶ ಸಾಧನೆಗಾಗಿ, ಅವೆಲ್ಲ ಕಾರ್ಯವನ್ನು ಕೈಕೊಂಡರು.

ಸೊರೊಕಿನ್ ಹೇಳಿದಂತೆ ಅವೆಲ್ಲ Byproduct ನ ಸ್ವರೂಪದಲ್ಲಿ ಭಾರತೀಯರ ಪ್ರಯೋಜನಕ್ಕೂ ಒದಗಿದುವು. ಅಷ್ಟರ ಮಟ್ಟಿಗೆ ಅವರ ಕಾರ್ಯವನ್ನು ಅವಶ್ಯವಾಗಿ ಮೆಚ್ಚೋಣ. ಆದರೆ ಅವರು ನಮ್ಮ ಉದ್ಧಾರಕ್ಕಾಗಿಯೇ ಅವತರಿಸಿದರೆಂದೂ, ಆ ಮೊದಲು ಭಾರತೀಯರು ಷಂಡರೂ, ಅಜ್ಞಾನಿಗಳೂ, ಯಾತಕ್ಕೂ ಬಾರದವರೂ ಆಗಿ ಜೀವನವನ್ನು ನಡೆಯಿಸುತ್ತಿದ್ದರೆಂದೂ ಪ್ರತಿಪಾದಿಸುವುದು ಅತ್ಯಂತ ಖಂಡನೀಯ ವಾದುದು. ಹಾಗೆ ನೋಡಿದರೆ ಪಾಶ್ಚಾತ್ಯ ಸಂಪರ್ಕ ಹಾಗೂ ಬ್ರಿಟಿಶ್ ಆಡಳಿತೆಯಿಂದ ನಮಗೆ ಉಪಕಾರಕ್ಕಿಂತ ಒಟ್ಟಿನಲ್ಲಿ ಅಪಕಾರವೇ ಹೆಚ್ಚಾಗಿ ಆಗಿದೆ. ಅದಕ್ಕೆ ದೊಡ್ಡ ನಿದರ್ಶನವೆಂದರೆ ಮುತ್ತಣ್ಣನವರ ಈ ವಿಚಾರಸರಣಿಯೇ! ನಮ್ಮ ಭಗವಂತನು ಹತ್ತ ನೆಯ ಅವತಾರವನ್ನು ತಾಳಲು ಇನ್ನೂ ಯೋಚಿಸುತ್ತಿರುವಾಗಲೇ ಮುತ್ತಣ್ಣನವರು ಈ ಹನ್ನೊಂದನೆಯ ಅವತಾರವನ್ನು ಸೃಷ್ಟಿಸಿ, ಮುಂದಿರಿಸಿದುದು ದುಡುಕಿನ ಕೆಲಸ ವಾಯಿತಲ್ಲವೆ ?

[ಹೊಸಗನ್ನಡದ ಅರೊಣೋದಯ ಕಾಲದಲ್ಲಿ ಪಾಶ್ಚಾತ್ಯರು ಕೈಗೊಂಡ ಸಾಹಿತ್ಯ ಕಾರ್ಯವು ನಿಜಕ್ಕೂ ಬೆಲೆಯುಳ್ಳದ್ದಾಗಿದೆ. ಅದರ ಸಮರ್ಪಕವಾದ ಪರಿಚಯವು ದೊರೆ ಯುವುದೆಂಬ ಆಶೋತ್ಸಾಹಗಳಿಂದ ಈ ಗ್ರಂಥದ ಪುಟಗಳನ್ನು ಓದುತ್ತ ನಡೆದಂತೆ ನನಗೆ ಕೊನೆಯಲ್ಲಿ ಅತೀವ ನಿರಾಸೆಯಾಯಿತು. ಕೆಲವು ಅಪೂರ್ವ ಪುಸ್ತಕಗಳ ಛಾಯಾ ಚಿತ್ರಗಳು ಮತ್ತು ಆ ಪುಸ್ತಕಗಳ ಹಲವು ಅವತರಣಿಕೆಗಳು—ಇವನ್ನು ಬಿಟ್ಟರೆ, ಮಿಕ್ಕೆಲ್ಲ ದೃಷ್ಟಿಯಿಂದ ಈ ಗ್ರಂಥವು ನಿಷ್ಪ್ರಯೋಜಕವಾದುದೆಂದು ಹೇಳದೆ ವಿಧಿಯಿಲ್ಲ. ಅಜ್ಞಾನಾಂಧಕಾರಗಳಲ್ಲಿ ತೊಳಲುತ್ತಿದ್ದ ಭಾರತೀಯರನ್ನು ಉದ್ಧಾರಮಾಡುವುದಕ್ಕೆಂದೇ ಪಾಶ್ಚಾತ್ಯರು ಬಂದರೆಂಬ ಘಾತುಕ ವಿಚಾರಸರಣಿಯನ್ನು ಬಿಟ್ಟುಕೊಟ್ಟು, ಅವರು ಕೈಗೊಂಡ ವಿವಿಧ ಸಾಹಿತ್ಯದ ಚಟುವಟಿಕೆಗಳನ್ನು, ಆಗಿನ ಸ್ಥಿತಿಗತಿಯ ಹಿನ್ನೆಲೆಯಲ್ಲಿ ಸತ್ಯ ನಿಷ್ಠವಾಗಿ ಮುತ್ತಣ್ಣನವರು ವಿವರಿಸಿದ್ದರೆ, ಆ ವಿದ್ವಾಂಸರಿಗೂ ಕನ್ನಡ ಬಾಂಧವರಿಗೂ ಕೂಡಿಯೇ ಉಪಕಾರ ಮಾಡಿದಂತಾಗುತ್ತಿತ್ತು.*]

---

* ಈ ಪರಾಮರ್ಶೆಯನ್ನು ಬರೆಯುವಲ್ಲಿ ಕೆಲವು ಸಲಹೆಗಳನ್ನು ನೀಡಿದ ಡಾ. ಸಿ. ಎಂ. ಕುಲಕರ್ಣಿ ಅವರ ನೆರವನ್ನು ಇಲ್ಲಿ ಸ್ಮರಿಸುತ್ತೇನೆ.

ಶ್ರೀಕಂಠೇಶಗೌಡರ ಕಾಲದ ಕನ್ನಡ ಸಾಹಿತ್ಯ

ಶ್ರೀಕಂಠೇಶಗೌಡರು ಕ್ರಿ. ಶ. ೧೮೫೨ರಿಂದ ೧೯೨೬ರವರೆಗೆ ಬಾಳಿದರು. ಅವರು ಕನ್ನಡಸಾಹಿತ್ಯದತ್ತ ಗಮನವನ್ನು ಹರಿಸಿದ್ದುದು ೧೮೮೦ನೆಯ ದಶಕದಿಂದ. ಆಗಿನ ಕನ್ನಡ ಸಾಹಿತ್ಯದ ಸ್ವರೂಪ ಎಂತಿದ್ದಿತು. ? ಅವರ ಸಾಹಿತ್ಯ ನಿರ್ಮಿತಿಯು ನಾಟಕ, ಕಾದಂಬರಿ ಮತ್ತು ಪತ್ರಿಕೋದ್ಯಮಗಳಲ್ಲಿ ವ್ಯಕ್ತವಾಗಿದ್ದು, ಅವರ ಕೃತಿ ರಚನೆಯ ಮೇಲೆ ಬೀರಿದ ಪ್ರಭಾವ, ಪ್ರೇರಣೆಗಳು ಯಾವವು ? ಈ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಕ್ರಿ. ಶ. ೧೮೧೭ರಲ್ಲಿ ಪ್ರಕಟವಾದ ಒಂದು ಕನ್ನಡ ವ್ಯಾಕರಣವನ್ನು ನಾವು ಹೊಸ ಗನ್ನಡದ ಮೊದಲ ಹೆಜ್ಜೆಯೆಂದು ತಿಳಿಯುತ್ತೇವೆ. ಹೊಸಗನ್ನಡದ ತೇರನ್ನು ಮೊದಲಿಗೆ ಎಳೆದವರು ಪಾಶ್ಚಾತ್ಯರಾದ ಮಿಶನರಿ ಜನರು ಹಾಗೂ ಸರಕಾರೀ ಅಧಿಕಾರಿಗಳು. ತುಸು ಸಮಯದಲ್ಲಿಯೆ ದೇಶೀಯರೂ ಜೊತೆಗೂಡಿದರು. ಪಾಶ್ಚಾತ್ಯರು ಕ್ರೈಸ್ತಮತ ಸಾಹಿತ್ಯ ವ್ಯಾಕರಣ–ಕೋಶ, ಪಠ್ಯಪುಸ್ತಕ—ಇವುಗಳತ್ತ ವಿಶೇಷ ಗಮನವಿತ್ತರು. ದೇಶೀಯರ ಆಗಿನ ಸಾಹಿತ್ಯ ರಚನೆಯಲ್ಲಿ ಎರಡು ವಿಧ: ಷಟ್ಪದಿ ಮುಂತಾದ ಪರಂಪರಾಗತ ಮಾಧ್ಯಮ ದಲ್ಲಿ ಕೃತಿರಚನೆ ಮಾಡಿದವರು ಒಂದು ಬಗೆ; ಪಾಶ್ಚಾತ್ಯರ ಸಾಹಿತ್ಯ ವಿಧಾನಗಳನ್ನು ಅನುಸರಿಸಿ, ಪಠ್ಯಪುಸ್ತಕ ಧಾರ್ಮಿಕ ಗ್ರಂಥಗಳ ಗದ್ಯರೂಪ, ಜನಪ್ರಿಯ ಕಥನ–ಇವನ್ನು ಮುದ್ರಿಸಿ ಪ್ರಕಟಿಸಿದವರದು ಇನ್ನೊಂದು ಬಗೆ. ಆಗಿನ ಒಟ್ಟಿನ ಸಾಹಿತ್ಯ ನಿರ್ಮಿತಿಯ ಒಂದು ಮಹತ್ವದ ಲಕ್ಷಣವೆಂದರೆ ಸಾಹಿತ್ಯವು ಅತೀವ ಜನಾಭಿಮುಖವಾದದ್ದು. ಸಾಮಾನ್ಯ ವಾಚಕನೇ ಇವರ ಗಮನದಲ್ಲಿದ್ದನೆನ್ನಬಹುದು. ಇದರಿಂದಾಗಿ ಗದ್ಯಕ್ಕೆ ಎಂದಿಲ್ಲದ ಪ್ರಾಶಸ್ತ್ಯವೊದಗಿತು. ಈ ಬಗೆಯ ಸಮಿಶ್ರ ಸಾಹಿತ್ಯ ರಚನೆಯು ೧೮೧೭ ರ ಅನಂತರ ಆರು ದಶಕಗಳ ಕಾಲ ಮುಂದುವರಿಯಿತು. ಗಮನಿಸಬೇಕಾದ ಮಾತೆಂದರೆ, ಈ ಅವಧಿಯಲ್ಲಿ ಸ್ವತಂತ್ರ ವಿಚಾರದ ಅಭಿವ್ಯಕ್ತಿಯು ತೋರಿಬರಲಿಲ್ಲ.

ಆಗಿನ ಕೃತಿ ರಚನೆಗೆ ಪ್ರೇರಣೆಗಳೆಂದರೆ ಧರ್ಮ ಮತ್ತು ಶಿಕ್ಷಣ. ಹೊಸತಾಗಿ ನಮ್ಮಲ್ಲಿಗೆ ಬಂದ ಪಾಶ್ಚಾತ್ಯರ ಕನ್ನಡ ವ್ಯಾಸಂಗಕ್ಕಾಗಿಯೂ, ಮಕ್ಕಳ ವಿದ್ಯಾಭ್ಯಾಸ ಕ್ಕಾಗಿಯೂ ಹೊರಟ ಪುಸ್ತಕಗಳನ್ನು ಶೈಕ್ಷಣಿಕ ಸಾಹಿತ್ಯವೆನ್ನಬೇಕು. ಕ್ರೈಸ್ತಮತೀಯ ಗ್ರಂಥಗಳನ್ನೂ ಹಿಂದೂ ಪುರಾಣ ಮತ್ತು ಶಾಸ್ತ್ರ ಗ್ರಂಥಗಳ ಗದ್ಯ ಟೀಕಾ ರೂಪದ ಕೃತಿಗಳನ್ನೂ ಧಾರ್ಮಿಕ ಸಾಹಿತ್ಯವೆಂದು ಕರೆಯಬೇಕು. ಸಾಹಿತ್ಯ ಪ್ರೇಮಿಯಾಗಿದ್ದ

ಶ್ರೀಕಂಠೇಶಗೌಡರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಿದ್ದಾಗ (೧೮೭೫-೭೯) ಈ ಎರಡೂ ಬಗೆಯ ಕೃತಿಗಳನ್ನು, ವಿಶೇಷತಃ ಮೈಸೂರು ಸಂಸ್ಥಾನ ದಲ್ಲಿ ರಚಿತವಾದವುಗಳನ್ನು ನೋಡಿರಲು ಸಾಕು.

ಶ್ರೀಕಂಠೇಶಗೌಡರ ಬಾಲ್ಯಕಾಲದಲ್ಲಿ ಮುಮ್ಮಡಿ ಕೃಷ್ಣರಾಜರ ರಾಜ್ಯಭಾರ ನಡೆಯುತ್ತಿತ್ತು. ಅವರು ತಮ್ಮ ಅರ್ಧಶತಮಾನದ ಆಳ್ವಿಕೆಯಲ್ಲಿ ಧರ್ಮ, ಕಲೆ, ಸಾಹಿತ್ಯ ಗಳಿಗೆ ನೀಡಿದ ಪೋಷಣೆ ಅಭೂತಪೂರ್ವವಾದುದು. ಅವರ ಆಸ್ಥಾನವು ಅನೇಕಾನೇಕ ವಿದ್ವಾಂಸರಿಂದ ಸದಾ ಶೋಭಿಸುತ್ತಿತ್ತು. ಮುಮ್ಮಡಿಯವರು ಸ್ವತಹ ಕೃತಿರಚನೆ ಮಾಡಿದುದಲ್ಲದೆ ಆಸ್ಥಾನ ವಿದ್ವಾಂಸರಿಂದ ನೂರಾರು ಗ್ರಂಥಗಳನ್ನು ಬರೆಯಿಸಿದರು. ವಿಶೇಷತಃ ಮಹಾಭಾರತಾದಿ ಕಾವ್ಯಗಳನ್ನೂ ಅನೇಕ ಪುರಾಣಗಳನ್ನೂ ಧರ್ಮಗ್ರಂಥ ಗಳನ್ನೂ ವಾಚನೀಯ ಗದ್ಯದಲ್ಲಿ ಬರೆಯಿಸಿದರು. ಯಕ್ಷಗಾನ ಬಯಲಾಟಗಳಿಗೆ ಅರಮನೆಯಲ್ಲಿಯೇ ಅವಕಾಶವಿತ್ತರು. ಸಂಸ್ಕೃತಿ-ಸಂವರ್ಧನೆಗಾಗಿ ತಮ್ಮ ವೈಯಕ್ತಿಕ ಸಂಪತ್ತನ್ನು ಸಹ ಸೂರೆಗೈದರು. ಆಸ್ಥಾನದಿಂದ ಹೊರಹೊಮ್ಮಿದ ಸಂಸ್ಕೃತಿ ಪ್ರಸಾರದ ತರಂಗಗಳು ಮೈಸೂರು ಸಂಸ್ಥಾನದ ಮೂಲೆಮೂಲೆಗೆ ಸಾಗಿ ಬಂದುದರ ಪರಿಣಾಮ ವಾಗಿ ಸಾಹಿತ್ಯ ನಿರ್ಮಿತಿಯತ್ತ ಸಾಮಾನ್ಯನೂ ಮನಸ್ಸು ಮಾಡುವುದಕ್ಕೆ ಪ್ರೇರಣೆ ಯೊದಗಿತು.

ಮುಮ್ಮಡಿ ಕೃಷ್ಣರಾಜರ ಮರಣ ಸಮಯದಲ್ಲಿ (೧೮೬೮) ಚಾಮರಾಜರಿಗೆ ಬಾಲ್ಯದಶೆ. ಅವರು ವಯಸ್ಸಿಗೆ ಬಂದ ಮೇಲೆ ಕ್ರಿ. ಶ. ೧೮೮೧ರಲ್ಲಿ ರಾಜ್ಯಸೂತ್ರಗಳನ್ನು ವಹಿಸಿದರು. ಆ ಸಮಯಕ್ಕೆ ಎಲ್ಲೆಲ್ಲಿಯೂ, ಹೋಬಳಿಗೊಂದರಂತೆ, ಇಂಗ್ಲಿಶ್ ಶಾಲೆಗಳ ಸ್ಥಾಪನೆಯಾಗಿದ್ದಿತು. ಪಾಶ್ಚಾತ್ಯ ಶಿಕ್ಷಣ ಪಡೆದು ಗ್ರ್ಯಾಜುಯೇಟ್ ಆದವರ ಸಂಖ್ಯೆ ಹೆಚ್ಚುತ್ತ ನಡೆದಿದ್ದಿತು. ಇದರ ಸ್ವತಂತ್ರ ಚಿಕಿತ್ಸಕ ಮನೋಭಾವದಿಂದಾಗಿ ಸಾಮಾಜಿಕ ಪ್ರಜ್ಞೆಯ ಲಕ್ಷಣಗಳು ಬರೆಹದಲ್ಲಿ ತೋರಿಬಂದವು. ಪುರಾಣ ಮುಂತಾದ ಸಂಪ್ರದಾಯಿಕ ಸಾಮಗ್ರಿಯನ್ನು ಬದಿಗಿರಿಸಿ ಈ ಲೇಖಕರು ಆಧುನಿಕ ಜೀವನ ಮಾರ್ಗ ದಿಂದ ವಸ್ತು, ವಿಚಾರಗಳನ್ನು ಅಭಿವ್ಯಕ್ತಿಗಾಗಿ ಆಯ್ದುಕೊಂಡರು; ಸ್ವತಂತ್ರ ರೀತಿಯಿಂದ ಬರೆಯತೊಡಗಿದರು. ಪ್ರಬಂಧ, ಜೀವನ ಚರಿತ್ರೆ, ನಾಟಕ, ಕಾದಂಬರಿ ಮುಂತಾದ ನವೀನ ಸಾಹಿತ್ಯ ಪ್ರಕಾರಗಳನ್ನು ರೂಢಿಸಿದರು. ಕನ್ನಡವು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ್ದೆಂಬ ಅಂಶವು ಬೆಳಕಿಗೆ ಬಂದು; ಕನ್ನಡದ ವಿಶೇಷ ಅಧ್ಯಯನ ನಡೆಯಿತು, ಶಾಸನ ಮುಂತಾದ ಇತಿಹಾಸದ ಆಕರಗಳ ಶೋಧವಾದ್ದರಿಂದ ಕರ್ನಾಟಕದ ಹಿಂದಿನ ವೈಭವವು ಕಣ್ಣಿಗೆ ಕಟ್ಟುವಂತಾಯ್ತು. ಇತ್ತ ತೆಲುಗು, ಬಂಗಾಲಿ, ಇಂಗ್ಲಿಶ್—ಮುಂತಾದ ಭಾಷೆ ಗಳಿಂದಲೂ ಹೊಸ ಮಾದರಿಯ ಗ್ರಂಥಗಳು ಅನುವಾದಗೊಂಡವು. ಅದರಿಂದ, ಹೊಸ ಗನ್ನಡವು ೧೮೧೦ನೆಯ ದಶಕದಿಂದ ಅಥವಾ (೧೭೪೦ರಿಂದ) ಉದಯವಾಗಿದ್ದರೂ, ಅದರ ಹೊಂಬೆಳಗಿನ, ನವೋದಯದ ಕಾಲವನ್ನು ೧೮೮೦ನೆಯ ದಶಕದಿಂದಲೇ ಗ್ರಹಿಸ ಬೇಕಾಗುತ್ತದೆ.

ನವೋದಯದ ಈ ಅಭಿಯೋಗದಲ್ಲಿ ಚಾಮರಾಜ ಒಡೆಯರ ಪಾತ್ರವು ಹಿರಿದಾ

ದುದು. ಚಾಮರಾಜರು ಮುಮ್ಮಡಿಯವರಷ್ಟೇ ಯೋಗ್ಯತೆಯುಳ್ಳವರಿದ್ದರು. ಇಷ್ಟೇ, ಅವರ ಆಳ್ವಿಕೆಯು (೧೮೮೧-೧೮೯೪) ತಂದೆಯದಷ್ಟು ದೀರ್ಘಕಾಲದ್ದಲ್ಲ, ಆಡಳಿತದ ಅನೇಕ ಕಷ್ಟಗಳು ಒದಗಿ ಬಂದಿದ್ದರೂ ಮುಮ್ಮಡಿಯವರಂತೆಯೇ ವಿದ್ಯಾಪಕ್ಷಪಾತಿಯೂ ಉದಾರರೂ ಆಗಿದ್ದರು. ಹೀಗಾಗಿ ಆಸ್ಥಾನದ ವಿದ್ವತ್ಪರಂಪರೆ ಹಾಗೂ ಗ್ರಂಥರಚನೆ ಮುಂದುವರಿದುವು. ಈ ಸಂದರ್ಭದಲ್ಲಿ ಎದ್ದು ತೋರುವ ಅಂತರವೆಂದರೆ ಚಾಮರಾಜರ ಆಸ್ಥಾನ ವಿದ್ವಾಂಸರು ಕನ್ನಡಭಿಮಾನವನ್ನು ವಿಶೇಷವಾಗಿಟ್ಟುಕೊಂಡು ತಾಯ್ನುಡಿ ಯಲ್ಲಿಯೇ ವಾಙ್ಮಯ ಸೇವೆಯನ್ನು ಕೈಕೊಂಡರು, ಇದಕ್ಕೆ ಸ್ವತಹ ಚಾಮರಾಜರ, ದಿವಾನ್ ಸಿ. ರಂಗಾಚಾರ್ಲುರವರ ಹಾಗೂ ಅರಮನೆಯ ಅಧಿಕಾರಿಗಳಾದ ಅಂಬಿಲ್ ನರಸಿಂಹಯ್ಯಂಗಾರರ ಪ್ರೋತ್ಸಾಹವಿದ್ದಿತು.

ಚಾಮರಾಜ ಒಡೆಯರು ಯಾವ ಗ್ರಂಥವನ್ನೂ ರಚಿಸಲಿಲ್ಲ. ಆದರೆ ಮುಮ್ಮಡಿ ಯವರ ಕಾಲದಲ್ಲಿ ರಚಿತವಾದ ಕೃತಿಗಳ ಮುದ್ರಣ, ಪ್ರಕಟನೆಗಳಿಗೆ ಚಾಲನೆ ಇತ್ತರು. ಕನ್ನಡದ ಅಭ್ಯಾಸವನ್ನು ವ್ಯಾಪಕಗೊಳಿಸಲು ಅವರು 'ಕರ್ಣಾಟಕ ಭಾಷೋಜ್ಜೀವಿನೀ ಸಭೆ'ಯನ್ನು ಸ್ಥಾಪಿಸಿದರು. ಮಹಾರಾಜಾ, ಮಹಾರಾಣಿ ಕಾಲೇಜುಗಳನ್ನು ಅಭಿವೃದ್ಧಿ ಗೊಳಿಸಿದರು. ಮಹಾರಾಣಿ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯರಿಗೋಸ್ಕರವೇ ಹಲವು ಕನ್ನಡ ಗ್ರಂಥಗಳ ರಚನೆಯಾದದ್ದು ಕನ್ನಡದ ಬೆಳವಣಿಗೆಯ ಒಂದು ದ್ಯೋತಕವಾಗಿದೆ.

ಇವೆಲ್ಲಕ್ಕಿಂತ ಮಿಗಿಲಾದ ಅವರ ಸಾಧನೆಯೆಂದರೆ ನಾಟಕ ಕಲಾಭಿವೃದ್ಧಿ. ತಮ್ಮ ಹದಿಹರೆಯದಲ್ಲಿ (೧೮೭೭/೭೮) ನೋಡಿದ್ದ ಮರಾಠೀ – ಪಾರ್ಸೀ ಕಂಪೆನಿಗಳ ನಾಟಕ ಗಳಿಂದ ಪ್ರೇರಣೆಗೊಂಡು ಕನ್ನಡದಲ್ಲಿಯೂ ನಾಟಕಗಳನ್ನು ಬರೆಯಿಸಿ ಆಡಿಸುವುದಕ್ಕೆ ಬದ್ಧಕಂಕಣರಾದರು. ಕನ್ನಡ ರಂಗಭೂಮಿಯನ್ನು ದಶಾವತಾರದ, ಬಯಲಾಟದ, ಮಟ್ಟದಿಂದ ಮುಂದಕ್ಕೆ ಕೊಂಡೊಯ್ದರು. ಮೊದಲಿಗೆ ಸಂಸ್ಕೃತ ನಾಟಕಗಳನ್ನು ಅನುವಾದಿಸಲು ಆಸ್ಥಾನ ವಿದ್ವಾಂಸರಿಗೆ ಸೂಚನೆ ಇತ್ತರು. ಹಾಗೆ ಸಿದ್ಧಗೊಂಡ ಪ್ರಥಮ ಅನುವಾದವೇ ಬಸವಪ್ಪಶಾಸ್ತ್ರಿಗಳ ಶಾಕುಂತಲ. ಕ್ರಿ.ಶ. ೧೮೮೧ ನೆಯ ವರ್ಷಾಂತ್ಯದಲ್ಲಿ ಜರುಗಿದ ಅದರ ಎರಡು ರಂಗ ಪ್ರಯೋಗಗಳು ಆಗಿನ ಕಾಲಕ್ಕೆ ಹೊಸ ವಿಕ್ರಮವನ್ನೆ ಸ್ಥಾಪಿಸಿದುವು. ರಾಜರ ಪ್ರೋತ್ಸಾಹದಿಂದ ರೂಪುಗೊಂಡ ಈ ಕಂಪೆನಿಗೆ 'ಶ್ರೀ ಚಾಮರಾಜೇಂದ್ರ ಕರ್ಣಾಟಕ ನಾಟಕ ಸಭೆ' ಯೆಂದು ಕರೆದುದು ಸಹಜವೇ ಆಗಿದೆ.

ಚಾಮರಾಜರಿಗೆ ನಾಟಕ ಕಲೆಯಲ್ಲಿ ಅದೆಂಥ ಆಸಕ್ತಿ ! ತಾವು ಸಂಚಾರಕ್ಕೆ ಹೋದಾಗ ಪಾತ್ರಧಾರಿಗಳನ್ನು ಕರೆದೊಯ್ಯುತ್ತಿದ್ದರಂತೆ. ವೇಷಭೂಷ, ರಂಗ ಸಜ್ಜಿಕೆಗಳನ್ನು ನೋಡಿಕೊಂಡು ಬರಲು ಕಲಾವಿದರನ್ನು ದೂರದ ಮುಂಬಯಿಗೆ ಕಳಿಸಿದುದೂ ಉಂಟು. ಆಸ್ಥಾನ ವಿದ್ವಾಂಸರಿಗೆ ಸಲ್ಲುತ್ತಿದ್ದ ಮರ್ಯಾದೆ ಇವರಿಗೂ ಸಲ್ಲುತ್ತಿತ್ತೆನ್ನಬಹುದು. ಇಷ್ಟೇ ಅಲ್ಲ, ನಾಟಕ ರಚನೆ, ಸಂಗೀತ, ನಿರ್ದೇಶನ ಮುಂತಾದ ಅಂಶಗಳಲ್ಲಿ ಆಸ್ಥಾನ ವಿದ್ವಾಂಸರು ನೆರವಾಗಬೇಕಿತ್ತು. ಮುಂಬಯಿ ಕರ್ನಾಟಕದಲ್ಲಿ ಶಾಂತಕವಿ ಮೊದಲಾದವರಿಂದ ೧೮೭೦ ರ ದಶಕದಲ್ಲಿಯೇ ನಾಟಕ ರಚನೆ

ಆರಂಭವಾಗಿದ್ದತಷ್ಟೇ. ಚಾಮರಾಜರು ಈ ಕಲೆಯನ್ನು ಎತ್ತಿ ಹಿಡಿಯದೇ ಹೋಗಿದ್ದರೆ ಮೈಸೂರು ಸಂಸ್ಥಾನವು ಈ ಕ್ಷೇತ್ರದಲ್ಲಿ ಎರಡುಮೂರು ದಶಕಗಳಷ್ಟು ಹಿಂದೆ ಬೀಳುತ್ತಿತ್ತು.

ಚಾಮರಾಜರ ಈ ಪ್ರೋತ್ಸಾಹವು ಬೇರೆ ನಾಟಕ ಕಂಪೆನಿಗಳು ಹುಟ್ಟಿಕೊಳ್ಳುವುದಕ್ಕೆ ನೆರವಾಯಿತು. ರಾಜಧಾನಿ ನಾಟಕ ಕಂಪನಿ (೧೮೮೨), ಗೊಲ್ಲರ ಪೇಟೆ ಕಂಪೆನಿ (೧೮೮೪), ಗುಬ್ಬಿ ನಾಟಕ ಕಂಪೆನಿ (೧೮೮೬), ಸರಸ್ವತೀ ವಿಲಾಸ ನಾಟಕ ಸಭಾ (೧೮೮೬) ಮುಂತಾದ ಸಂಸ್ಥೆಗಳು ಸ್ಥಾಪಿತವಾದುವು. ಇದರಿಂದಾಗಿ ಮೈಸೂರಲ್ಲದೆ, ಬೆಂಗಳೂರು ಮುಂತಾದ ಊರುಗಳಲ್ಲಿಯೂ ನಾಟಕ ಪ್ರಯೋಗಗಳು ನಡೆದುವು. ಸುಪ್ರಸಿದ್ಧ ವರದಾಚಾರ್ಯರು ೧೯೦೪ ರಲ್ಲಿ ರತ್ನಾವಳಿ ಥಿಯೆಟ್ರಿಕಲ್ ಕಂಪನಿಯನ್ನು ಸ್ಥಾಪಿಸಿ ನಾಟಕಗಳನ್ನಾಡತೊಡಗಿದಾಗ, ಕಂಪನಿ ನಾಟಕವು ಪ್ರಬುದ್ಧ ದಶೆಯನ್ನು ತಲುಪಿದ್ದಿತೆನ್ನಬಹುದು.

ಸಂಸ್ಕೃತ ನಾಟಕಗಳಲ್ಲದೇ ಇಂಗ್ಲಿಶ್ ನಾಟಕಗಳನ್ನು ಸಹ ಭಾಷಾಂತರಿಸಲು ಚಾಮರಾಜರು ಅಪ್ಪಣೆಯಿತ್ತರು. ಅದರ ಒತ್ತಡ ಎಷ್ಟೆಂದರೆ, ಬಸವಪ್ಪ ಶಾಸ್ತ್ರಿಗಳಂಥ ಸಂಸ್ಕೃತ ವಿದ್ವಾಂಸರು ಶೆಕ್ಸಪಿಯರನ ನಾಟಕವೊಂದರ ಅನುವಾದಕ್ಕೆ ತೊಡಗಿದುದು! ಶೆಕ್ಸಪಿಯರನ ಅನುವಾದಗಳನ್ನು ಪ್ರಕಟಿಸಿದ ಮೈಸೂರಿಗರಲ್ಲಿ ಎ. ಆನಂದರಾಯರು ಮೊದಲಿಗರೆಂದು ತೋರುತ್ತದೆ. ಅವರು ಶ್ರೀಕಂಠೇಶಗೌಡರಂತೆ ಲಾಯರ್ ಪರೀಕ್ಷೆ ಪಾಸಾಗಿದ್ದರು; ಮುನ್ಸೀಫರಾಗಿ ಕೆಲಸ ಮಾಡುತ್ತಿದ್ದರು. ಅವರು ಅನುವಾದಕ್ಕೆ ಎತ್ತಿಕೊಂಡ ಮೊದಲ ನಾಟಕ – ರೋಮಿಯೊ ಎಂಡ್ ಜ್ಯೂಲಿಯೆಟ್. ಕನ್ನಡದಲ್ಲಿ ಅದಕ್ಕೆ 'ರಾಮವರ್ಮ ಲೀಲಾವತಿ' – ಎಂದು ನಾಮಕರಣ ಮಾಡಿದರು (ಸು. ೧೮೮೫). ಇಂಥ ಕಾರ್ಯದಲ್ಲಿ ಅವರಿಗೆ ಸಂಸ್ಕೃತ ನಾಟಕಗಳೇ ಮಾದರಿಯಾಗಿದ್ದುವಾದ್ದರಿಂದ ಅಲ್ಲಿರುವಂತೆಯೇ ಹಾಡುಗಳನ್ನು ಸೇರಿಸಲಾಯಿತು. ಈ ನಾಟಕವು ಬೇಗ ರಂಗದ ಮೇಲೆ ಪ್ರಯೋಗ ಹೊಂದಿತು. ಅದರಲ್ಲಿ ಭಾರತೀಯ ಪರಿಸರವೆ ಇದ್ದರೂ ಹೊಸ ಸನ್ನಿವೇಶಗಳಿಂದ ಕೂಡಿದ ಪ್ರಥಮ ನಾಟಕವಾದ್ದರಿಂದ ಪ್ರೇಕ್ಷಕರು ಮೆಚ್ಚಿಕೊಂಡರು. ಮುಂದುವರಿದು ಆನಂದರಾಯರು 'ಮರ್ಚೆಂಟ್ ಆಫ್ ವೆನಿಸ್' (ಪಾಂಚಾಲಿ ಪರಿಣಯ) ಮತ್ತು 'ಹ್ಯಾಮ್ಲೆಟ್' ನಾಟಕಗಳನ್ನು ಅನುವಾದಿಸಿದರು. ಇದೇ ಕಾಲಕ್ಕೆ ಎಂ. ಎಸ್. ಪುಟ್ಟಣ್ಣ ಅವರು ಶೆಕ್ಸಪಿಯರನ 'ಕಿಂಗ್ ಲಿಯರ್' ನಾಟಕವನ್ನು 'ಹೇಮಚಂದ್ರರಾಜ ವಿಲಾಸ' ವೆಂಬ ಹೆಸರಿನಲ್ಲಿ ಭಾಷಾಂತರ ಮಾಡಿದರು. ಈ ನಾಟಕ ಪ್ರಯೋಗಗಳಿಗೂ ಚಾಮರಾಜರ ಪ್ರೋತ್ಸಾಹ ದೊರೆಯಿತು.

ಆರಂಭಕಾಲದ ಈ ಇಂಗ್ಲಿಶ್ ನಾಟಕಾನುವಾದವು ಹಲವು ಆಭಾಸಗಳಿಗೆ ಎಡೆಗೊಟ್ಟಿತು. ಸಂಸ್ಕೃತ ನಾಟಕಗಳ ಹಿಂದೂ ಸನ್ನಿವೇಶ, ಕಥಾವಸ್ತು ಮತ್ತು ಪಾತ್ರಸೃಷ್ಟಿ—ಇವು ಪರಿಚಿತವೇ. ಆದ್ದರಿಂದ ಅವುಗಳ ಕನ್ನಡ ರೂಪವು ಸಹಜ ಸುಲಭವಾಯಿತು, ಆದರೆ ಇಂಗ್ಲಿಶ್ ನಾಟಕಗಳಲ್ಲಿ ಕಂಡು ಬರುವ ಪಾಶ್ಚಾತ್ಯ ಆಚಾರ - ವಿಚಾರ

ಗಳನ್ನು ಹಾಗೇ ಇಡುವುದೆ? ಅಥವಾ ನಮ್ಮ ನಡೆವಳಿಕೆಗೆ ತಕ್ಕಂತೆ ಬದಲಾಯಿಸಿ ಕೊಳ್ಳುವುದೆ? ಇಲ್ಲವೆ ಆ ಸನ್ನಿವೇಶವನ್ನೇ ಬಿಟ್ಟುಬಿಡುವುದೆ? ಇವೇ ಮೊದಲಾದ ಸಮಸ್ಯೆಗಳನ್ನು ಆನಂದರಾವ್ ಮತ್ತು ಪುಟ್ಟಣ್ಣ ಎದುರಿಸಬೇಕಾಗಿ ಬಂದಿತು.

ಇವರಿಬ್ಬರ ಅನಂತರ ಮೈಸೂರ ಕಡೆಯಲ್ಲಿ ಇಂಗ್ಲಿಶ್ ನಾಟಕಾನುವಾದಕ್ಕೆ ಉದ್ಯಮಿಸಿದವರೇ ನಮ್ಮ ಶ್ರೀಕಂಠೇಶಗೌಡರು. ಅವರು ತೆಗೆದುಕೊಂಡ ಶೆಕ್ಸಪಿಯರ್ ನಾಟಕಗಳೆಂದರೆ 'ಮ್ಯಾಕ್‌ಬೆತ್' ಮತ್ತು 'ಮಿಡ್‌ಸಮರ್ ನೈಟ್ಸ್ ಡ್ರೀಮ್'. ಮೊದಲಿನವರ ಅನುವಾದ ಕಾಲಕ್ಕೆ (ಪ್ರತಾಪರುದ್ರದೇವ) ಶ್ರೀಕಂಠೇಶಗೌಡರಿಗೆ ಸಹ ಮೇಲೆ ಹೇಳಿದ ಸಮಸ್ಯೆಗಳು ಎದುರಾದುವು. ಆದರೆ ಎರಡನೆಯ ಅನುವಾದದಲ್ಲಿ (ಪ್ರಮೀಳಾರ್ಜುನೀಯ) ಈ ಸಮಸ್ಯೆಗಳನ್ನು ಅವರು ಬಹುಮಟ್ಟಿಗೆ ನೀಗಿದ್ದುದು ಅವರ ಪ್ರತಿಭೆಯ ಲಕ್ಷಣವೆನ್ನಬಹುದು.

ಶ್ರೀಕಂಠೇಶಗೌಡರಿಗೆ ಚಾಮರಾಜರ ವಿಷಯದಲ್ಲಿ ಅಪಾರವಾದ ಭಕ್ತ್ಯಾದರ ಗಳಿದ್ದುವು. ಎಂದೇ ಅವರು ತೀರಿಕೊಂಡ ಅನಿತರಲ್ಲಿ 'ಚಾಮನೃಪ ಚಂದ್ರ ಪ್ರಭ' ವೆಂಬ ಚಮರಗೀತೆಯನ್ನು (ಶತಕ) ಬರೆದರು. ಇದು ಕಂದದಲ್ಲಿದ್ದು, ದೊರೆಗಳ ರಾಜ್ಯ ಭಾರದ ಸಾಧನೆಗಳನ್ನೂ ಜನಹಿತ ಕಾರ್ಯಗಳನ್ನೂ ವಿವರಿಸುತ್ತದೆ. ಇದಲ್ಲದೆ ಗೌಡರು. ತಮ್ಮ ಪ್ರಥಮ ನಾಟಕವನ್ನು ಅವರಿಗೇನೆ ಅರ್ಪಿಸಿದ್ದಾರೆ. ಅವರ ಅನಂತರ ಪಟ್ಟಕ್ಕೆ ಬಂದ ನಾಲ್ವಡಿ ಕೃಷ್ಣರಾಜರಲ್ಲಿ ಸಹ ಗೌಡರು ಇದೇ ಬಗೆಯ ಗೌರವವನ್ನಿಟ್ಟುಕೊಂಡು ಬಂದರು. ತಮ್ಮ ಪ್ರಮೀಳಾರ್ಜುನೀಯ ನಾಟಕವನ್ನು ಅವರಿಗೆ ಅರ್ಪಿಸುವುದರ ಮೂಲಕ ಅದನ್ನು ವ್ಯಕ್ತಪಡಿಸಿದ್ದಾರೆ.

ಇನ್ನೀಗ ಶ್ರೀಕಂಠೇಶಗೌಡರ ಗದ್ಯ ಬರೆಹದ ಹಿನ್ನೆಲೆಯನ್ನು ತುಸು ನೋಡೋಣ. ಆಗಿನ ಕಾಲದ ಗದ್ಯ ಲೇಖಕರಲ್ಲಿ ಎರಡು ಬಗೆ. ಸಾಂಪ್ರದಾಯಿಕ ಸಾಹಿತ್ಯದಲ್ಲಿ ಗಮನ ವಿರಿಸಿಕೊಂಡವರದು ಒಂದು ಬಗೆ. ಇವರು ಸಂಸ್ಕೃತ, ಕನ್ನಡ ಭಾಷೆಗಳನ್ನೂ ಪುರಾಣ ಶಾಸ್ತ್ರಗಳನ್ನೂ ಚೆನ್ನಾಗಿ ಅಭ್ಯಸಿಸಿದವರು. ಆದರೂ ಸಾಮಾನ್ಯ ವಾಚಕರಿಗಾಗಿ ಸುಲಭ ಸಾಹಿತ್ಯವನ್ನು ರಚಿಸಬೇಕೆಂದರು. ವ್ಯಾಕರಣಾದಿ ಗ್ರಂಥ ರಚನೆ, ಪ್ರಾಚೀನ ಕೃತಿಗಳ ಟೀಕೆ/ಅನುವಾದ ಸಹಿತವಾದ ಪ್ರಕಟನೆಗೆ ಗಮನವಿತ್ತರು. ಚಾಮರಾಜರು ನಾಟಕ ಕಲೆಗೆ ಪ್ರೋತ್ಸಾಹವೀಯುತ್ತಿದ್ದುದನ್ನು ಕಂಡು ಸ್ವತಂತ್ರ ಪೌರಾಣಿಕ ನಾಟಕ ಗಳನ್ನು ಬರೆದರು. ಇತ್ತ ಶಾಲೆ, ಟ್ರೇನಿಂಗ್ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ದ್ದವರು ಹೊಸ ಪೀಳಿಗೆಯವರಲ್ಲಿ ಕನ್ನಡ ಪ್ರೇಮವನ್ನು ಕುದುರಿಸಿದರು. ಇಂಥ ಪಂಡಿತ ವರ್ಗದ ಲೇಖಕರೆಂದು ಬಿ. ಮಲ್ಲಪ್ಪ, ಜಯರಾಯಾಚಾರ್ಯ, ಶ್ರೀನಿವಾಸ ರಾಘವಾಚಾರ್, ಪಿ ಕರಿಬಸವಶಾಸ್ತ್ರಿ, ಎಂ. ರಾಮಸ್ವಾಮಿಶಾಸ್ತ್ರಿ—ಇವರನ್ನು ಹೆಸರಿಸ ಬಹುದು. ಶ್ರೀಕಂಠೇಶಗೌಡರಿಗೆ ಇಂಥ ಅನೇಕರ ಪರಿಚಯವಿದ್ದಿತಲ್ಲದೇ, ಅವರ ವಿಷಯದಲ್ಲಿ ಆದರ ಭಾವವನ್ನು ತಳೆದಿದ್ದರು. ಶ್ರೀನಿವಾಸ ರಾಘವಾಚಾರ್ ಮತ್ತು

ಕರಿಬಸವ ಶಾಸ್ತ್ರಿ—ಇವರ ನೆರವನ್ನು ಗೌಡರು ತಮ್ಮ ಗ್ರಂಥೋದ್ಯಮದಲ್ಲಿ ಧಾರಾಳವಾಗಿ ಪಡೆದಿದ್ದಾರೆ.

ಇನ್ನೊಂದು ಬಗೆಯವರು ಪಾಶ್ಚಾತ್ಯ ರೀತಿಯ ಶಿಕ್ಷಣವನ್ನು ಹೊಂದಿದವರು; ಸರಕಾರೀ ನೌಕರಿಯಲ್ಲಿದ್ದವರು. ಇವರಲ್ಲಿ ಕೆಲವರಿಗೆ ಇಂಗ್ಲಿಶ್ ಜೊತೆಗೆ ಬಂಗಾಲೀ ಅಥವಾ ಇತರ ಸೋದರ ಭಾಷಾ ಪರಿಚಯವೂ ಇದ್ದಿತು. ಈ ಪದವೀಧರರು ಮೇಲೆ ಹೇಳಿದ ವಿದ್ವಾಂಸರಷ್ಟು ಅಲ್ಲವಾದರೂ, ನಮ್ಮ ಪ್ರಾಚೀನ ವಿದ್ಯಾಪರಂಪರೆಯನ್ನೂ, ಸಂಸ್ಕೃತ ಕನ್ನಡ ಕಾವ್ಯ ಸಾಹಿತ್ಯವನ್ನೂ ತಿಳಿದವರಾಗಿದ್ದರು. ಇವರಲ್ಲಿ ಅನೇಕರು ಅಧ್ಯಾಪಕ ವೃತ್ತಿಯಲ್ಲಿದ್ದರಾದ್ದರಿಂದ ಸಾಹಿತ್ಯಿಕ ಗೈಮೆಗೆ ಅವರ ಉದ್ಯೋಗವು ಉತ್ತೇಜನಕರವಾಗಿದ್ದಿತು. ಸರಕಾರೀ (ರೆವಿನ್ಯೂ, ನ್ಯಾಯ) ಖಾತೆಗಳಲ್ಲಿದ್ದವರು ಸಹ ಸಾಹಿತ್ಯಿಕ ಒಲವನ್ನು ತೋರಿದರು. ಮುಖ್ಯತಃ ಇಂಗ್ಲಿಶ್‌ನ ಉತ್ತಮ ಕಥನಗಳನ್ನು ಕನ್ನಡದಲ್ಲಿ ತಂದರು; ನಾಟಕಗಳಂತೂ ಸರಿಯೇ. ಕೆಲವು ವಿದ್ಯಾವಂತರು ಪತ್ರಿಕೋದ್ಯಮದತ್ತ ಮನಸ್ಸುಗೊಟ್ಟುದು ಹೊಸಗನ್ನಡದ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಹೆಜ್ಜೆಯಾಗಿದೆ, ಪ್ರಚಲಿತ ವಿಷಯಗಳನ್ನು ಕುರಿತ ಗದ್ಯ ಬರವಣಿಗೆಯು ಇಲ್ಲಿಂದಲೇ ಮೊದಲಾಯಿತು. ಇಂಥ ಹೊಸ ದೃಷ್ಟಿಯ ಗದ್ಯ ಲೇಖಕರೆಂದು ಎಂ. ಬಿ. ಶ್ರೀನಿವಾಸಯ್ಯಂಗಾರ್, ಬಿ. ವೆಂಕಟಾಚಾರ್ಯ, ಆರ್. ಅಣ್ಣಾಜಿರಾವ್, ಎಂ. ಎಸ್. ಪುಟ್ಟಣ್ಣ, ಎಂ. ಶ್ಯಾಮರಾವ್, ಎಂ. ವೆಂಕಟಕೃಷ್ಣಯ್ಯ, ಚ. ವಾಸುದೇವಯ್ಯ, ಆರ್, ರಘುನಾಥರಾವ್—ಇವರನ್ನು ಹೆಸರಿಸಬೇಕು. ಇವರೆಲ್ಲ ಶ್ರೀಕಂಠೇಶಗೌಡರ ಸಮಕಾಲೀನರು, ಹಾಗೂ ಅನೇಕರು ಅವರ ಮಿತ್ರರೂ ನಿಕಟವರ್ತಿಗಳೂ ಆಗಿದ್ದರು.

ಅಂದಿನ ಲೇಖಕರಲ್ಲಿ ಮೇಲೆ ಹೇಳಿದ ಎರಡು ಪ್ರಕಾರಗಳು ಕಟ್ಟುನಿಟ್ಟಿನದ್ದಾಗಿರಲಿಲ್ಲ; ಪದವೀಧರರು ಪರಂಪರಾಗತ ಸಾಹಿತ್ಯವನ್ನು ನಿರ್ಮಿಸಲೇ ಇಲ್ಲವೆಂದಲ್ಲ. ಎಂದರೆ ಆಗಿನ ಕಾಲದ ಸಾಹಿತ್ಯವು ಸಂಧಿಕಾಲದ್ದೂ ಸಮ್ಮಿಶ್ರವೂ ಆಗಿದ್ದಿತು. ಅದರ ಪರಿಣಾಮವನ್ನು ನಾವು ಶ್ರೀಕಂಠೇಶಗೌಡರ ಸಾಹಿತ್ಯ ಸೃಷ್ಟಿಯಲ್ಲಿಯೂ ಕಾಣುತ್ತೇವೆ.

ಪದವೀಧರ ಲೇಖಕರು ಗ್ರಂಥ ಪ್ರಕಾಶನವನ್ನೂ ಕೈಕೊಂಡದ್ದು ಒಂದು ವಿಶೇಷದ ಸಂಗತಿ. ಅದುವರೆಗೆ ಗ್ರಂಥ ಪ್ರಕಾಶನವು ಸರಕಾರದ ಶಿಕ್ಷಣಖಾತೆಯ ಬೇಡಿಕೆ, ಮಿಶನ್ ಸಂಸ್ಥೆಗಳ ಮತಪ್ರಸಾರ ಮತ್ತು ಖಾಸಗೀ ವ್ಯಕ್ತಿಗಳ ವ್ಯಾಪಾರೀಗಳಿಕೆ—ಇವುಗಳ ಸುಳಿಯಲ್ಲಿ ಸಿಕ್ಕಿಕೊಂಡಿತ್ತು. ಸಾಹಿತ್ಯ ಪ್ರಸಾರದ ದೃಷ್ಟಿಯಿಂದ ಗ್ರಂಥಗಳನ್ನು ಪ್ರಕಟಿಸಬೇಕೆಂದು ಮೈಸೂರಿನ ಪದವೀಧರರು ಯೋಚಿಸಿ ೧೮೮೨ ರ ಸುಮಾರಿಗೆ ಅಂಥ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಅದನ್ನು 'ಗ್ರ್ಯಾಜುಯೇಟ್ ಟ್ರೇಡಿಂಗ್ ಅಸೋಸಿಯೇಷನ್' ಎಂದು ಕರೆದುದು ಅನ್ವರ್ಥಕವಾಗಿದೆ. ಮುದ್ರಿತ ಗ್ರಂಥಗಳ ಪ್ರಸಾರವು ಅವರ ಪ್ರಾರಂಭದ ಉದ್ದೇಶವಾಗಿದ್ದಿತು. ಸಂಸ್ಥೆಯವರು ಮರು ವರ್ಷವೆ ಅಚ್ಚುಕೂಟವೊಂದನ್ನು ಸ್ಥಾಪಿಸಿ ಗ್ರಂಥ ಪ್ರಕಟನೆಗೆ ತೊಡಗಿದರು. ಅದಕ್ಕಾಗಿ ಪತ್ರಿಕೆಯನ್ನು ಮಾಧ್ಯಮವಾಗಿಟ್ಟುಕೊಂಡರು. ಕರ್ನಾಟಕ ಗ್ರಂಥಮಾಲೆ ಎಂಬ ಹೆಸರಿಟ್ಟು

ಕೊಂಡ ಈ ಪತ್ರಿಕೆಯು ಸಾಂಪ್ರದಾಯಿಕ ಕೃತಿಗಳನ್ನೂ ಇಂಗ್ಲಿಶ್ classicsಗಳ ಅನುವಾದವನ್ನೂ ಒಟ್ಟೊಟ್ಟಿಗೆ ಪ್ರಕಟಿಸತೊಡಗಿತು, ಪುಸ್ತಕ ರೂಪದಲ್ಲಿ ಹೊರಬಂದ ಮೊದಲ ಕೃತಿಯೆಂದರೆ, 'ಚಂಡಮಾರುತ'–ಶೆಕ್ಸಪಿಯರನ 'ಟೆಂಪೆಸ್ಟ್' ನಾಟಕದ ಗದ್ಯಾನುವಾದ. ಕ್ರಮೇಣ ಇಂಗ್ಲಿಶ್ ಅನುವಾದಗಳಿಗೆ ಹೆಚ್ಚಿನ ಪ್ರಾಶಸ್ತ್ಯವೊದಗಿತು. ಜೊತೆಗೆ ಬಂಗಾಲೀ ಗ್ರಂಥಗಳ ಅನುವಾದಕ್ಕೂ ಆಸ್ಪದ ದೊರೆಯಿತು. ಜಿ. ಟಿ. ಎ ಸಂಸ್ಥೆಯ ಹುಟ್ಟು ಮತ್ತು ಕಾರ್ಯ ಹೊಸಗನ್ನಡದ ಚರಿತ್ರೆಯಲ್ಲಿ ಅಳಿಸಲಾಗದ ಘಟನೆಯಾಗಿದೆ. ಅದರ ಆರಂಭದ ಕಾರ್ಯಕರ್ತರೆಂದು ಬಾಪು ಸುಬ್ಬರಾವ್, ಅಪ್ಪಣ್ಣ ಶೆಟ್ಟಿ, ಎಲ್ ಜಯರಾವ, ಹಾಗೂ ಎಂ. ಶಾಮರಾವ—ಇವರನ್ನು ಹೆಸರಿಸಬೇಕು.

ಜಿ. ಟಿ. ಎ. ಸಂಸ್ಥೆಯ ಸ್ಥಾಪನೆಯಲ್ಲಿ ಶ್ರೀಕಂಠೇಶಗೌಡರ ಅಂಗವಿದ್ದಿತೆಂಬುದರಲ್ಲಿ ಸಂದೇಹವಿಲ್ಲ. ಅವರ ಎಲ್ಲ ಕೃತಿಗಳು (ಭವಾನಿ ಬಾಳು ಒಂದನ್ನು ಬಿಟ್ಟು) ಈ ಸಂಸ್ಥೆಯ ವತಿಯಿಂದಲೇ ಮುದ್ರಣಗೊಂಡಿವೆ—ಚಾಮನೃಪ ಚಂದ್ರಪ್ರಭದಿಂದ ಮೊದಲುಗೊಂಡು. ಮೇಲೆ ಹೇಳಿದ ಅವರ ನಾಟಕಾನುವಾದಗಳು ೧೮೯೫–೯೬ ರಲ್ಲಿ ಪ್ರಕಟವಾದುವು. ಜೊತೆಗೆ ಕಥಾನುರೂಪವನ್ನು ಅವರು ಮೆಚ್ಚಿಕೊಂಡಿದ್ದರು, ಹೇಗೂ ಆ ಬಗೆಯಲ್ಲಿ ಚಂಡಮಾರುತವು ಪ್ರಕಟವಾಗಿದ್ದಿತು. ಶ್ರೀಕಂಠೇಶಗೌಡರು 'ಚಿಕ್ಕ ಬಣಜಿಗರು' (ಮೂಲ: ಹೆನ್ರಿ ಫೀಲ್ಡಿಂಗ್) ಮತ್ತು 'ಕನ್ಯಾವಿತಂತು' (ಮೆರಿಯಾ ಎಜ್‌ವರ್ಥ್) ಇವನ್ನು ಬರೆದು ಪ್ರಕಟಿಸಿದರು. ಅವರ ಇಂಗ್ಲಿಶ್ ಅನುವಾದ ಕೃತಿಗಳೆಲ್ಲವಕ್ಕೂ English Classics for Canerese Reader ಎಂಬ ಶಿರೋನಾಮೆಯಿದೆ. ಈ ಸದರಿನಲ್ಲಿ ಜಿ. ಟಿ. ಎ. ಸಂಸ್ಥೆಯವರು ಅನೇಕ ಗ್ರಂಥಗಳನ್ನು ಹೊರತಂದದ್ದು ಗಣನೀಯವಾಗಿದೆ.

ಶ್ರೀಕಂಠೇಶಗೌಡರ ತೃತೀಯ ಸಾಹಿತ್ಯ ಕ್ಷೇತ್ರವೆಂದರೆ ಪತ್ರಿಕೋದ್ಯಮ. ಅದರ ಹಿನ್ನೆಲೆಯನ್ನು ತುಸು ನೋಡೋಣ. ಅವರು 'ಸುರಭಿ' ಎಂಬ ಮಾಸಿಕವನ್ನು ೧೮೯೬ ರಲ್ಲಿ ಹೊರಡಿಸಿದರು. ಆ ವೇಳೆಗೆ ಕನ್ನಡ ಪತ್ರಿಕೋದ್ಯಮವು ಆರಂಭವಾಗಿ ಅರ್ಧ ಶತಮಾನ ಸಂದಿದ್ದಿತು. ಆಗ ಸುದ್ದಿ ಪತ್ರಿಕೆಗಳಿಗೆ ಪ್ರಾಧಾನ್ಯ. ಹಿಂದೂ ಕ್ರೈಸ್ತ ಧರ್ಮ ಪ್ರಸಾರಕ್ಕಾಗಿ ಕೆಲವು ಪತ್ರಿಕೆಗಳು ಹೊರಟಿದ್ದವು. ಇತ್ತ ಆಧುನಿಕ ವಿಚಾರಗಳನ್ನು ಮಂಡಿಸುವಂಥ ಹಾಗೂ ಲಲಿತ ವಾಙ್ಮಯವನ್ನು ಪ್ರಕಟಿಸುವಂಥ ಮಾಸಪತ್ರಿಕೆಗಳು ಸಹ ನಾಡಿನ ವಿವಿಧ ಕಡೆಗಳಲ್ಲಿ ತೋರಿಬಂದಿದ್ದುವು (ಶೋಧಕ—ಧಾರವಾಡ ; ಸುದರ್ಶನ—ಉಡುಪಿ ; ಹಿತೋಪದೇಶ—ಮುಂಬಯಿ); ಮೈಸೂರು ಸಂಸ್ಥಾನದಲ್ಲಿ ಹಿತಬೋಧಿನೀ (೧೮೮೮–) ಮತ್ತು ವಿದ್ಯಾದಾಯಿನೀ (೧೮೯೩–) ಈ ಮಾಸಿಕಗಳ ಹೆಸರು ಎದ್ದು ಕಾಣುವಂತಿದ್ದಿತು. ಲೌಕಿಕ ವಿಷಯಗಳನ್ನೊಳಗೊಂಡ ಇಂಥದೊಂದು ಪತ್ರಿಕೆಯನ್ನು ನಡೆಸಬೇಕೆಂಬ ವಿಚಾರವು ಶ್ರೀಕಂಠೇಶಗೌಡರಲ್ಲಿ ತಲೆದೋರಿದ್ದರೆ ಅದು ಸಹಜವೇ ಎನ್ನಬೇಕು. ಅವರು ತಮ್ಮ ಹಿರಿ ಕಿರಿಯ ಬರಹಗಳಿಗೆ ಮುಕ್ತ ಅವಕಾಶ ವಿರಲೆಂದು 'ಸುರಭಿ' ಯನ್ನು ಆರಂಭಿಸಿ ಒಂದೆರಡು ವರ್ಷ ನಡೆಸಿಕೊಂಡು ಬಂದರು.

ಅದರ ಫಲವಾಗಿ ಕೆಲವು ಚರಿತ್ರೆಗಳೂ ಹಾಸ್ಯಲೇಖಗಳೂ ಲಭ್ಯವಾಗಿವೆ. ಈ ಪತ್ರಿಕೆಯನ್ನು ಮುಂದುವರಿಸಲು ಅವರ ಮುನ್ಸಿಫ್ ನೌಕರಿಯಿಂದ ಆತಂಕ ಒದಗಿರಬೇಕು. ಗೌಡರು ತಮ್ಮ ಮಿತ್ರ ಶಾಮರಾಯರು ಹೊರಡಿಸುತ್ತಿದ್ದ 'ವಿದ್ಯಾದಾಯಿನಿ'ಯಲ್ಲಿಯೂ ಹಲವು ಬಿಡಿ ಲೇಖಗಳನ್ನು ಬರೆದಿದ್ದಾರೆ. ಇದೇ ವಿದ್ಯಾದಾಯಿನಿಯಲ್ಲಿ 'ಪ್ರತಾಪರುದ್ರದೇವ' ನಾಟಕದ ಮೇಲೆ ಟೀಕೆ—ಪ್ರತಿಟೀಕೆಗಳು ಪ್ರಕಟವಾದುವೆಂಬುದನ್ನು ಪ್ರಾಸಂಗಿಕವಾಗಿ ಇಲ್ಲಿ ಹೇಳಬಹುದು.

ಯಾವ ಲೇಖಕನೇ ಆಗಲಿ ತನ್ನ ಕಾಲದಲ್ಲಿ ಲಭ್ಯವಿರುವ ವಾಙ್ಮಯವನ್ನು ಪರಿಶೀಲಿಸದೇ ಇರನು. ಈ ಪರಿಶೀಲನೆ/ವ್ಯಾಸಂಗದ ಅದರಂತೆ ಆಗಿನ ಸಾಹಿತ್ಯಿಕ ವಾತಾವರಣದ ಪ್ರಭಾವಕ್ಕೆ ಒಳಗಾಗುವನು. ಎಂಥ ಪ್ರತಿಭಾವಂತನಿಗೂ ಇದು ಅನ್ವಯಿಸುವುದು. ಆದರೆ ಯಾವದೊಂದರ ಪ್ರಭಾವಕ್ಕೆ ಒಳಗಾಗಿದ್ದರೂ, ಬೇರೊಬ್ಬರ ವಿಚಾರಸರಣಿಯನ್ನು ಸ್ವೀಕರಿಸಿದ್ದರೂ ಅದನ್ನು ಆತ್ಮಸಾತ್ ಮಾಡಿಕೊಂಡು, ಚೆನ್ನಾಗಿ ಅರಗಿಸಿಕೊಂಡು ಬೇರೊಂದು ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವಾಗ ಎಷ್ಟರ ಮಟ್ಟಿಗೆ ಸ್ವೋಪಜ್ಞತೆಯನ್ನು ತೋರಿಸಿದ್ದಾನೆಂಬುದರಲ್ಲಿ ಅವನ ಹಿರಿಮೆ–ಗರಿಮೆ ವ್ಯಕ್ತವಾಗುತ್ತದೆ. ಒಂದು ನಿದರ್ಶನದಿಂದ ಇದನ್ನು ಸ್ಪಷ್ಟಪಡಿಸಬಹುದು. ನಮ್ಮ ಜಾನಪದ ರಂಗಭೂಮಿಯಲ್ಲಿ, ಅಥವಾ ಯಕ್ಷಗಾನದಲ್ಲಿ ಪೌರಾಣಿಕ ಪ್ರಸಂಗಗಳಿದ್ದು ಆಧುನಿಕವೆನ್ನಿಸುವ ಸಾಮಾನ್ಯ ಪಾತ್ರಗಳನ್ನು ತಂದು ಹಾಸ್ಯಸನ್ನಿವೇಶವನ್ನು ಒದಗಿಸುತ್ತಾರೆ. ಇದೇ ಕ್ರಮವನ್ನು ಆರಂಭಕಾಲದ ನಮ್ಮ ನಾಟಕಕಾರರು ತಮ್ಮ ಪೌರಾಣಿಕ ನಾಟಕಗಳಲ್ಲಿ ತಂದಿದ್ದಾರೆ. ಸರಗೂರು ವೆಂಕಟರಮಣಾಚಾರ್ಯರೆಂಬ ಗೌಡರ ಸಮಕಾಲೀನರು ಸೂರ್ಯನ ಕನ್ಯೆಯ ವಿವಾಹದ ಕುರಿತಾದ 'ತಪತೀ ಪರಿಣಯ' ನಾಟಕವನ್ನು ಬರೆದಿದ್ದು, ಅದರಲ್ಲಿ ಸುರುವಿಗೆ ಇಂದಿನ ಕೋರ್ಟುಗಳ ಮೊಕದ್ದಮೆಯ ಸನ್ನಿವೇಶವನ್ನು ತಂದಿದ್ದಾರೆ. ಶ್ರೀಕಂಠೇಶಗೌಡರು ಸಹ ತಮ್ಮೆರಡು ನಾಟಕಗಳಲ್ಲಿ ಇಂಥ ಪ್ರಸಂಗಗಳನ್ನು ಸೃಷ್ಟಿಸಿದ್ದಾರೆ: ಪ್ರಮೀಳಾರ್ಜುನೀಯದಲ್ಲಿ ಆಟಕಟ್ಟುವ ಮಡಿವಳ ಮಾಚಯ್ಯ, ಸಂಗಡಿಗರು, ಸೀತಾಸ್ವಯಂವರದಲ್ಲಿ ಭೂರಿ ಭೋಜನದ ಬ್ರಾಹ್ಮಣರು. ಇವು ಅತ್ಯಂತ ಹೃದ್ಯವಾಗಿದ್ದು, ಅವರ ಕಲ್ಪಕತೆ ತಾನೇ ತಾನಾಗಿ ಅರಳಿದೆ. ಎರಡೇ ವರ್ಷದ ಅವಧಿಯಲ್ಲಿ ತಮ್ಮ ಹೆಚ್ಚಿನ ಕೃತಿಗಳನ್ನು ಬರೆದು ಮುಗಿಸಿದ ಶ್ರೀಕಂಠೇಶಗೌಡರ ಪ್ರತಿಭೆ ನಿಸ್ಸಂಶಯವಾಗಿ ಮೇಲ್ಮಟ್ಟದ್ದು.

ಕನ್ನಡದ ಮೊದಲ ಕಾದಂಬರಿಗಳ ಚಾರಿತ್ರಿಕ ಹಿನ್ನೆಲೆ

ಕಾದಂಬರಿಗಳಲ್ಲಿ ಹಲವು ವಿಧ: ಸಾಮಾಜಿಕ, ಪತ್ತೇದಾರಿ, ಐತಿಹಾಸಿಕ, ಅದ್ಭುತ ರಮ್ಯ, ಪೌರಾಣಿಕ ಇತ್ಯಾದಿ. ಇನ್ನು ಇವು ಒಂದೊಂದರಲ್ಲಿ ಅನುವಾದಿತ, ಸ್ವತಂತ್ರ ಎಂಬ ಬಗೆಯನ್ನೂ ಗಣಿಸಬೇಕು. ಈ ಪ್ರತಿಯೊಂದು ರಂಗದಲ್ಲಿ ಮೊದಲ ಕೃತಿ ಯಾವುದು, ಅನಂತರದ್ದು ಯಾವುದು ಎಂಬುದರ ವಿವೇಚನೆ ಮಾಡಿ, ಚಾರಿತ್ರಿಕ ಹಿನ್ನೆಲೆಯನ್ನು ಕೊಡುವುದು ಪ್ರಸ್ತುತ ಲೇಖನದ ಉದ್ದೇಶ.

ಹೊಸಗನ್ನಡದ ಕಾದಂಬರಿಗೆ ಇಂಗ್ಲಿಶ್ ಕಾದಂಬರಿ ಪ್ರೇರಣೆಯನ್ನೊದಗಿಸಿತು. ಮತ್ತು ಇಂಗ್ಲಿಶ್‌ನಿಂದ ನೇರವಾಗಿ ಬಾರದೇ ಹೋದರೂ, ಸುರುವಿಗೆ ಬಂಗಾಲೀ, ಮರಾಠೀ ಕಾದಂಬರಿಗಳ ಮೂಲಕ ಅದು ತನ್ನ ಪ್ರಭಾವ ಬೀರಿತೆಂಬುದು ಸರ್ವವಿದಿತ. ಆದರೆ ವಿಸ್ತಾರವಾದ ಕಥಾನಕವುಳ್ಳ, ಕಲ್ಪನಾಪ್ರಧಾನವಾದ ಈ ಬಗೆಯ ಸಾಹಿತ್ಯರೂಪ ಭಾರತೀಯರಿಗೆ ಹೊಸತಲ್ಲ. ಸಂಸ್ಕೃತ ಸಾಹಿತ್ಯದಲ್ಲಿ ಅದಕ್ಕೆ ಆಖ್ಯಾಯಿಕೆ ಎಂದು ಹೆಸರು. ಬಾಣನ ಕಾದಂಬರಿಯು ಇಂಥ ಆಖ್ಯಾಯಿಕೆಗಳಲ್ಲಿ ಆದಿಮವಾಗಿ ಪರಿಚಿತವಾದುದು. ಅನಂತರ ಸಂಸ್ಕೃತದಲ್ಲಿ, ಅದರಂತೆ ಹಳಗನ್ನಡದಲ್ಲಿ ಸಹ ಹಲವಾರು ಆಖ್ಯಾಯಿಕೆಗಳು ತಲೆದೋರಿವೆ.

ಹಳಗನ್ನಡದಿಂದ ಹೊಸಗನ್ನಡಕ್ಕೆ ಸಾಗಿ ಬಂದ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಸಂಧಿಕಾಲದ ಅವಧಿಯೊಂದಿದೆ. ಅದುವೆ ೧೯ನೇ ಶತಮಾನದ ಪೂರ್ವಾರ್ಧ ಕಾಲ. ಈ ಅವಧಿಯಲ್ಲಿ ಎಂದರೆ ಇಂಗ್ಲಿಶ್ ಕಾದಂಬರಿಯ ಪ್ರಭಾವ ತಲೆದೋರುವುದಕ್ಕೆ ಮುಂಚೆ, 'ಕಾದಂಬರಿ' ಎಂಬ ಅಭಿಧಾನಕ್ಕೆ ಯೋಗ್ಯವಾದ ಮೂರು ಕೃತಿಗಳು ಮೂಡಿಬಂದವು:

ಯಾದವನ ''ಕಲಾವತೀಪರಿಣಯ''

ಮುಮ್ಮಡಿಯವರ ''ಸೌಗಂಧಿಕಾ ಪರಿಣಯ'', ಮತ್ತು

ಕೆಂಪುನಾರಾಯಣನ ''ಮುದ್ರಾಮಂಜೂಷ''.

ಮೊದಲಿನ ಎರಡು ಕೃತಿಗಳು ಅದ್ಭುತರಮ್ಯ ಕಥಾನಕಗಳು. ಅವುಗಳಲ್ಲಿಯ ''ಪರಿಣಯ'' ಪದವು ''ರೋಮಾನ್ಸ್'' ಸೂಚಕವಾದುದಲ್ಲವೆ? ಅವಕ್ಕೆ ಕಾಲ್ಪನಿಕವಾದ ಪೌರಾಣಿಕ ಹಿನ್ನೆಲೆ ಇದ್ದು ದೇವತೆಗಳು ಮಾಯಾವಿಗಳು ಕಾಣಿಸಿಕೊಳ್ಳುತ್ತಾರೆ. ''ಕಲಾವತೀ ಪರಿಣಯ''ವು ದಂಡಕವೃತ್ತದಲ್ಲಿದ್ದು ಪದ್ಯಗಂಧಿ ಗದ್ಯವಾಗಿದೆ. ಸ್ವತಂತ್ರವೂ ನವೀನವೂ ಆದ ಅದರ ಕಥಾವಸ್ತು ಇಷ್ಟೊಂದು ಹೃದ್ಯವಾಗಿದೆಯಲ್ಲ, ಅದನ್ನು ಹೊಸಗನ್ನಡ

ಗದ್ಯದಲ್ಲಿ ಬರೆದುದಾದರೆ ಇಂದಿನ ವಾಚಕರನ್ನು ಸಹ ರಂಜಿಸಬಲ್ಲುದು. ಎಂತಲೇ ಗೋವಿಂದ ಪೈಗಳು ತಮ್ಮ ಸಮ್ಮೇಳನಾಧ್ಯಕ್ಷ ಭಾಷಣದಲ್ಲಿ (೧೯೫೦) ಇದನ್ನು ಕನ್ನಡದ ಪ್ರಥಮ ಕಾದಂಬರಿ ಎಂದು ಹೆಸರಿಸಿದರು.

ಯಾದವನು ಮುಮ್ಮಡಿ ಕೃಷ್ಣರಾಜರ ಆಸ್ಥಾನದಲ್ಲಿದ್ದನು. ಅವರ ಪ್ರೀತಿಪಾತ್ರನಾಗಿದ್ದನು. ಒಮ್ಮೆ ರಾಜರು ಆಡಿದ ಲಘುಮಾತಿನಿಂದ ಬೇಸರಗೊಂಡು, ತನ್ನ ಊರಾದ ದೊಡ್ಡಬಳ್ಳಾಪುರಕ್ಕೆ ಹೊರಟುಬಿಟ್ಟನು. ಆ ಕಾಲದಲ್ಲಿ ಬರೆದ ಕೃತಿಯಿದು (ಸು. ೧೮೧೫). ಕಥಾನಾಯಿಕೆಯಾದ ಕಲಾವತಿಯೂ ತುಂಬಾ ಸ್ವಾಭಿಮಾನಿ. ಸೌರಾಷ್ಟ್ರ ದೇಶದ ಕುವಲಯಾಪೀಡನ ಮಗಳಾದ ಅವಳನ್ನು ಬೃಹದ್ರಥನೆಂಬ ರಾಜಕುಮಾರನು ಮೋಹಿಸುತ್ತಾನೆ. ಅವಳೂ ಅಷ್ಟೇ. ಆ ದಿನ ಬೆಳುದಿಂಗಳ ಇರುಳಿನಲ್ಲಿ ಅವನು ಕಲಾವತಿಯ ಅಂತಃಪುರವನ್ನು ಪ್ರವೇಶಿಸುತ್ತಾನೆ. ಆಗಲೇ ಅವಳೊಂದಿಗೆ ಬೆರೆಯುವ ಆತುರ, ಅವನಿಗೆ. ''ಮದುವೆಯಾಗುವ ವರೆಗೆ ತಡೆಯೋಣ' ಎಂಬುದು ಕಲಾವತಿಯ ಸಪ್ರೇಮ ಸೂಚನೆ. ಆಗ ಸಿಟ್ಟಿಗೆದ್ದ ರಾಜನು ''ನಿನ್ನನ್ನು ಮದುವೆಯಾಗುವೆ. ಆದರೆ ತೊರೆಯುವೆ'' ಎನ್ನುತ್ತಾನೆ. ಕಲಾವತಿಯು ''ಧರ್ಮವಶಳಾಗಿ ನಾನು ಬೇಡವೆಂದೆ. ಇಷ್ಟಕ್ಕೂ ನೀವು ಮುಳಿದು ನನ್ನನ್ನು ತೊರೆಯುವುದಾದರೆ ಉಪಾಯವಿಲ್ಲ. ಎಂತಾದರೂ ನಿಮ್ಮ ಅಂಗ ಸಂಗ ಮಾಡಿ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಕುವರನಿಂದ ನಿಮ್ಮ ನಿಗ್ರಹ ಮಾಡಿಸುವೆ'' ಎಂದು ಮರುಪ್ರತಿಜ್ಞೆ ಮಾಡುತ್ತಾಳೆ.

ಇತ್ತ ಕುವಲಯಾಪೀಡನಿಗೆ ಬೃಹದ್ರಥನು ಯುದ್ಧವೊಂದರಲ್ಲಿ ಜಯ ಗಳಿಸಿ ಕೊಟ್ಟದ್ದರಿಂದ ತನ್ನ ಮಗಳನ್ನು ಅವನಿಗೆ ಧಾರೆಯೆರೆದು ಕೊಡಲು ಸ್ವಾಭಾವಿಕವಾಗಿಯೇ ಮುಂಬರುತ್ತಾನೆ.

ಅದು ವಿವಾಹದ ಪ್ರಥಮ ರಾತ್ರಿ. ಆದರೇನು? ಬೃಹದ್ರಥನು ತನ್ನ ಪ್ರತಿಜ್ಞೆಯಿಂದಾಗಿ ಸಮಾಗಮವಿಲ್ಲದೆ ತನ್ನ ರಾಜಧಾನಿಗೆ ಹಿಂತಿರುಗುತ್ತಾನೆ. ಪರಿತ್ಯಕ್ತೆಯಾದ ಕಲಾವತಿಯು ಓರ್ವ ದೇವವರ್ಣಿನಿಯ ಕೃಪೆಯಿಂದ ರೂಪವನ್ನೇ ಬದಲಿಸಿಕೊಂಡು ''ಮದನಮಂಜರಿ''ಯಾಗಿ ಬೃಹದ್ರಥನಲ್ಲಿಗೆ ಬರುತ್ತಾಳೆ. ತನ್ನ ಸಂಗೀತ ಕಲೆ, ಬುದ್ಧಿಮತ್ತೆಗಳಿಂದ ಅವನನ್ನು ವಶಪಡಿಸಿಕೊಳ್ಳುತ್ತಾಳೆ. ಅವನಿಂದ ಗರ್ಭ ತಾಳಿದ ಮೇಲೆ ತನ್ನ ಊರಿಗೆ ಮರಳಬಯಸುತ್ತಾಳೆ—ಪ್ರತಿಜ್ಞಾಪೂರ್ತಿಗಾಗಿ ! ಆಗ ರಾಜನು ''ನಿನ್ನನ್ನು ಬಿಟ್ಟಿರಲಾರೆ'' ಎಂದು ಶೋಕಿಸುತ್ತಿದ್ದಾಗ, ಕಲಾವತಿಯು ಕೊಡುವ ಉತ್ತರವಿದು: ''ಅಂಥ ಚಿಂತೆಯು ಕೋಮಲೆಯರಿಗಲ್ಲದೆ, ಕಠಿಣ ಹೃದಯದ ಗಂಡಸರಿಗಲ್ಲ. ಬೇಕಿದ್ದರೆ ನಿನ್ನಿಂದ ವಂಚಿತಳಾದ ಕಲಾವತಿಯನ್ನು ಕೇಳು !''

ತವರಿಗೆ ಬಂದ ಕಲಾವತಿಯು ಗಂಡು ಮಗುವನ್ನು ಹಡೆದ ಮೇಲೆ ಕ್ರಮೇಣ ಬೃಹದ್ರಥನಿಗೆ ನಿಜ ಸಂಗತಿ ತಿಳಿಯುತ್ತದೆ. ಆದರೆ ಪ್ರಸಂಗ ಮಿಂಚಿಹೋಗಿದೆ! ಮಗನಾದ ಕುಂಡಲಶ್ರವನು ದೊಡ್ಡವನಾಗಿ, ವೀರಾಗ್ರಣಿಯೆನಿಸಿ ಬೃಹದ್ರಥನನ್ನು ಯುದ್ಧದಲ್ಲಿ

ಎದುರಿಸುತ್ತಾನೆ: ವಿಶಿಷ್ಟ ವ್ಯೂಹವೊಂದನ್ನು ರಚಿಸಿ ತಂದೆಯನ್ನು ಪಂಜರದಲ್ಲಿ ಬಂಧಿಸಿ, ತಾಯಿಯ ಪ್ರತಿಜ್ಞೆಯನ್ನು ಪೂರ್ಣಗೊಳಿಸುತ್ತಾನೆ.

ಈ ಕಥಾನಕದಲ್ಲಿಯ ಕೆಲವು ಘಟನೆಗಳು ಅಲೌಕಿಕವೆನಿಸಿದರೂ ಅವಾಸ್ತವವಲ್ಲ. ವರ್ಣನೆಗಳು ಸಾಕಷ್ಟಿವೆ. ಆದರೆ ಅದರಿಂದ ಕಥಾನಿರೂಪಣೆಯು ಕುಂಠಿತವಾಗಿಲ್ಲ. ಮಹತ್ವದ್ದೆಂದರೆ, ಇಂದಿನ ಕಾದಂಬರಿಗಳ ಒಂದು ಲಕ್ಷಣವಾದ—ಮಾನವ ಸಹಜ ನಡವಳಿಕೆಯನ್ನು ಇಲ್ಲಿಯ ಪಾತ್ರಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ ಕಲಾವತಿ–ಬೃಹದ್ರಥರ ವಿವಾಹಪೂರ್ವದ ಮತ್ತು ಅನಂತರದ ತೊಳಲಾಟದ ಚಿತ್ರಣ.

ಮುಂದೆ ತಡವಾಗಿ ಎಂದರೆ ೧೮೬೦ ನೆಯ ದಶಕದಲ್ಲಿ ಈ ಗ್ರಂಥವು ಅಚ್ಚಾಯಿತು. ಅಂದಿನ ಕಾಲಕ್ಕೆ ಜನಪ್ರಿಯವಾಗಿದ್ದಿತಲ್ಲದೆ, ಮದ್ರಾಸ್ ವಿಶ್ವವಿದ್ಯಾನಿಲಯದವರು ಅದನ್ನು ಪಠ್ಯವಾಗಿ ಗೊತ್ತುಪಡಿಸಿದ್ದರು. ಸ್ವೋಪಜ್ಞತೆಯಿಂದ ಕೂಡಿದ ಮತ್ತು ರಸ ಸ್ಯಂದಿಯಾದ ಈ ಕೃತಿ ಗಣನೀಯವಾದುದು.

ಕೆಲವೇ ವರ್ಷಗಳ ಅನಂತರ ಮುಮ್ಮಡಿ ಕೃಷ್ಣರಾಜರ "ಸೌಗಂಧಿಕಾ ಪರಿಣಯ"ವು ರಚಿತವಾಯ್ತು (೧೮೨೧). ರಾಜರ ಮತ್ತು ಅವರ ಹೆಸರಿನ ಎಲ್ಲ ಕೃತಿಗಳು ಧಾರ್ಮಿಕವಾಗಿದ್ದರೆ ಇದು ಮಾತ್ರ "ಶೃಂಗಾರ ರಸಕ್ಕೆ ಶಿರೋಭೂಷಣ"ವಾದ ನವೀನ ಕೃತಿಯೆನಿಸಿತು. ಕಥೆಯು ದೇವೇಂದ್ರನನ್ನು ಕುರಿತದ್ದು. ಆತ ಮುನಿಶಾಪದಿಂದ ಭೂಲೋಕದಲ್ಲಿ ಕರ್ನಾಟಕದಲ್ಲಿಯೇ ಸುಗಂಧರಾಜನಾಗಿ ಅವತರಿಸುತ್ತಾನೆ. ಅವನ ಶಚಿದೇವಿಯು ಇದೇ ರೀತಿ—ಕಲಿಂಗ ದೇಶದಲ್ಲಿ ಸೌಗಂಧಿಕೆಯಾಗಿ ಹುಟ್ಟಿಬರುತ್ತಾಳೆ. ಅವಳ ಸ್ವಯಂವರಕ್ಕಾಗಿ ಎಂಟು ಪಣಗಳು. ಅವನ್ನು ಗೆಲ್ಲದೆ ಇತರರು ಹತಾಶರಾದಾಗ ನಮ್ಮ ಸುಗಂಧರಾಜನು ಅವನ್ನು ಸಾಹಸದಿಂದ ಪಡೆದು ಸೌಗಂಧಿಕೆಯ ಕೈಹಿಡಿಯುವನು. ಈ ಪಣಗಳನ್ನು ಗೆದ್ದು ತಂದ ಕಥಾನಕವೇ ವಿಸ್ತಾರವಾದುದು. ಜೊತೆಗೆ ಆಗಮ, ಯೋಗ ಶಾಸ್ತ್ರ ಮುಂತಾದ ನೂರೆಂಟು ವಿಷಯುಗಳು ಸೇರಿ, ಕಾದಂಬರಿಯು ೧೦೦೦ ಪುಟಗಳನ್ನು ಮಿಕ್ಕಿದೆ. ಮಹತ್ವದ ಮಾತೆಂದರೆ ಅದರ ಭಾಷೆಯು ಹೊಸಗನ್ನಡಕ್ಕೆ ತೀರ ಸಮೀಪ ವರ್ತಿಯಾಗಿದೆ. ಕೆಂಪುನಾರಾಯಣನ "ಮುದ್ರಾಮಂಜೂಷ"ವು (೧೮೨೩) "ಮುದ್ರಾ ರಾಕ್ಷಸ" ಸಂಸ್ಕೃತ ನಾಟಕದ ರೂಪಾಂತರ ಎಂಬ ಭಾವನೆಯಿದೆ. ಅದು ಸರಿಯಲ್ಲ. ಆ ನಾಟಕದ ೧/೪ ಭಾಗವನ್ನಷ್ಟೆ ಕೆಂಪುನಾರಾಯಣ ಸ್ವೀಕರಿಸಿದ್ದಾನೆ. ಅದರಲ್ಲಿಯೂ ಸಾಕಷ್ಟು ಬದಲಾವಣೆ ಮಾಡಿಕೊಂಡಿದ್ದಾನೆ. ಅಲ್ಲದೆ ನಾಟಕ ರೂಪವನ್ನು ನೇರವಾದ ಗದ್ಯಕ್ಕೆ ತಿರುಗಿಸಿದ್ದಾನೆ. ಆದಕಾರಣ ಇದನ್ನು ಸ್ವತಂತ್ರ ಐತಿಹಾಸಿಕ ಕಾದಂಬರಿಯೆಂದೇ ತಿಳಿಯತಕ್ಕದ್ದು.

ರಾಜನೀತಿಯ ಚಾತುರ್ಯವುಳ್ಳ ಈ ಕಥಾನಕವು ಎಂದಿಗೂ ವಾಚಕರ ಮನಸ್ಸನ್ನು ಸೆರೆಹಿಡಿಯುವಂಥದು. ಮೇಲಣ ಎರಡು ಕೃತಿಗಳಲ್ಲಿ ಕಂಡು ಬರುವ ಅದ್ಭುತ, ಅಲೌಕಿಕ ಸನ್ನಿವೇಶಗಳು ಇದರಲ್ಲಿ ಇಲ್ಲವೆ ಇಲ್ಲ. ಅನವಶ್ಯಕ ವರ್ಣನೆಗಳೂ ದೊರೆಯುವುದಿಲ್ಲ. ಶೃಂಗಾರಕ್ಕಂತೂ ಸಂಪೂರ್ಣ ಸೊನ್ನೆ. ಮಾನವ ಸ್ವಭಾವದ, ವಿಶೇಷತ: ವ್ಯವಹಾರ ಕೌಶಲದ ಚಿತ್ರಣದಲ್ಲಿ ಕೆಂಪುನಾರಾಯಣನು ಅತ್ಯಂತ ಪಳಗಿದವನಾಗಿದ್ದಾನೆ. ನಮಗೆ

ಪ್ರಸ್ತುತವಾದ ಒಂದು ಅಂಶವೆಂದರೆ ಕಥನಕ್ಕೆ ಸೂಕ್ತವಾದ ನೇರ ನಿರೂಪಣೆ—ಒಟ್ಟಿನಲ್ಲಿ ಇದು ಆಖ್ಯಾಯಿಕೆಯ ಪ್ರಕಾರದಿಂದ ಬಿಡುಗಡೆ ಹೊಂದಿ ಇಂದಿನ ಕಾದಂಬರಿಯೆಂದು ಕರೆಯಿಸಿಕೊಳ್ಳುವ ಹವಣಿಕೆಯಲ್ಲಿದೆ.

ಇಂಗ್ಲಿಶ್ ಭಾಷೆಯ ಸಂಪರ್ಕದ ಗಂಧವೂ ಇಲ್ಲದಿದ್ದ ಕಾಲದಲ್ಲಿ ಸ್ವತಂತ್ರವಾಗಿ ರಚಿತವಾದ ಸತ್ವಪೂರ್ಣ ಕಥಾನಕಗಳಿವು. ಇವನ್ನು ಕಡೆಗಣಿಸಿದರೆ ಹೊಸಗನ್ನಡ ಸಾಹಿತ್ಯ ಚರಿತ್ರೆ ಅಪೂರ್ಣವಾಗುತ್ತದೆ. ಕಾದಂಬರೀ ಕ್ಷೇತ್ರದ ಈ ಪ್ರವರ್ತಕರಿಗೆ ಅಪಚಾರವೆಸಗಿದಂತಾಗುತ್ತದೆ.

ಕ್ರಿ. ಶ. ೧೮೩೦ ನೆಯ ದಶಕದಿಂದ ಇಂಗ್ಲಿಶ್ ಶಿಕ್ಷಣ ಕ್ರಮವು ನಾಡಿನಲ್ಲಿ ನೆಲೆಗೊಳ್ಳತೊಡಗಿತು. ಕ್ರಮೇಣ ಇಂಗ್ಲಿಶ್ ಕಾದಂಬರಿಗಳ, ನಾಟಕಾದಿಗಳ ಪ್ರಸಾರ-ವಾಚನಗಳು ಹಬ್ಬಿದವು. ಪರಿಣಾಮವಾಗಿ ವಾಲ್ಟರ್ ಸ್ಕಾಟ್‌ನಂತಹ ಆಗಿನ ಹೆಸರಾಂತ ಕಾದಂಬರಿಕಾರರ ಕೃತಿಗಳು ಅನುವಾದಗೊಳ್ಳಬೇಕಿತ್ತು. ಶೇಕ್ಸ್‌ಪಿಯರನ ನಾಟಕಗಳಿಗೆ ಮಾತ್ರ ಆ ಸದವಕಾಶ ಒದಗಿತು; ಕಾದಂಬರಿಗಳಿಗಲ್ಲ. ಕ್ರಿ. ಶ. ೧೮೯೦ ನೆಯ ದಶಕದವರೆಗೆ ಮೇಲ್ಪಟ್ಟವ ಒಂದಾದರೂ ರಂಜನೀಯ ಕಾದಂಬರಿ ಇಂಗ್ಲಿಶ್‌ನಿಂದ ಕನ್ನಡಕ್ಕೆ ಬರಬಾರದೆಂದರೆ ?

ಜಾನ್ ಬನ್ಯನ್ನನ ''ಯಾತ್ರಿಕನ ಸಂಚಾರ'' ೧೮೪೨ ರಲ್ಲಿ ತಲೆದೋರಿತೇನೊ ನಿಜ. ಎಷ್ಟೆಂದರೂ ಅದು ಕ್ರೈಸ್ತ ಧಾರ್ಮಿಕ ಕೃತಿ. ಕಾದಂಬರಿ ಎಂಬ ಇಂದಿನ ಅರ್ಥ ಅದಕ್ಕೆ ಹೊಂದುವುದಿಲ್ಲ. ಅದೇ ಡ್ಯಾನಿಯಲ್ ಡೀಫೋನ 'ರಾಬಿನ್‌ಸನ್ ಕ್ರೂಸೊ' ಕಾದಂಬರಿ ಹೌದು. ಆದರೆ ಅದನ್ನು ಅನುವಾದಿಸಿದ ಎಸ್. ಬಿ. ಕೃಷ್ಣಸ್ವಾಮಿ ಅಯ್ಯಂಗಾರರಲ್ಲಿ (೧೮೫೪) ಕಾದಂಬರಿಯ ಮೂಲೋದ್ದೇಶವಾದ ಜನರಂಜನೆಯ ದೃಷ್ಟಿಯಿರದೆ, ಅದನ್ನು ವಿದ್ಯಾರ್ಥಿಗಳಿಗಾಗಿ ಅವರು ಅನುವಾದಿಸಿದ್ದರು. ಹಾಗಿದ್ದರೂ ಇದನ್ನೇ ಹೊಸಗನ್ನಡದ ಪ್ರಥಮ ಅನುವಾದಿತ ಕಾದಂಬರಿಯೆಂದು ತಿಳಿಯೋಣ.

ಇಂಗ್ಲಿಶ್ ಕೃತಿಗಳನ್ನು, ತಡವಾಗಿಯಾದರೂ ಕನ್ನಡದಲ್ಲಿ ಅನುವಾದಿಸಬೇಕೆಂಬ ಕಾರ್ಯದಲ್ಲಿ ಉದ್ಯುಕ್ತರಾದ ಜಿ. ಟಿ. ಎ. ಪ್ರೆಸ್ಸಿನವರ ಎತ್ತುಗಡೆಯನ್ನು ವಿಶೇಷವಾಗಿ ಹೆಸರಿಸಬೇಕು (೧೮೯೦ನೇ ದಶಕ). ಆದರೆ 'English Classics' ಎಂಬ ಹೆಸರಿನಲ್ಲಿ ಪ್ರಕಟವಾದ ಅವೆಲ್ಲವೂ ಮೇಲ್ಮಟ್ಟದವೇನಲ್ಲ. ಬಾಪು ಸುಬ್ಬರಾಯರ ''ನಿರ್ಭಾಗ್ಯ ಮುರಾದ'', ಶ್ರೀಕಂಠೇಶಗೌಡರ ''ಕನ್ಯಾವಿತಂತು'' ವಿನ ಮೂಲರೂಪಗಳು ಇಂಗ್ಲಿಶ್ ಸಾಹಿತ್ಯದಲ್ಲಿಯ ಯಃಕಶ್ಚಿತವಾದ ಕೃತಿಗಳು. ಅದೇ, ಎಂ. ಎಸ್. ಪುಟ್ಟಣ್ಣನವರು ''ಸುಮತಿ-ಮದನ ಕುಮಾರರ ಚರಿತ್ರೆ''ಯನ್ನು ೧೮೯೭ ರಲ್ಲಿ ಪ್ರಕಟಿಸುವಲ್ಲಿ (ಮೂಲ: ಥಾಮಸ್ ಡೇನ ಸ್ಯಾಂಡ್‌ಫರ್ಡ್ ಎಂಡ್ ಮಾರ್ಟಿನ್) ಹೆಚ್ಚಿನ ಸದಭಿರುಚಿಯನ್ನು ತೋರಿದ್ದಾರೆ.

ಇಂಗ್ಲಿಶ್ ಸಾಹಿತ್ಯಾಭ್ಯಾಸವು ಮರಾಠೀ, ಬಂಗಾಲಿ, ತೆಲುಗು ಭಾಷೆಗಳಲ್ಲಿ ಕಾದಂಬರೀ ನಿರ್ಮಾಣಕ್ಕೆ ನಿಮಿತ್ತವಾಗಿದ್ದಿತಷ್ಟೆ. ಈ ಭಾಷೆಗಳದ್ದೇ ಕಾದಂಬರಿಗಳು ಕನ್ನಡದಲ್ಲಿ

ಮೈದಾಳಿದ ಬಗೆಯನ್ನು ತುಸು ನೋಡುವ. ಹಾಗೆ ಮೊದಲು ಬಂದ ಕೃತಿ, ಬಾಬಾ ಪದಮಂಜಿಯ "ಯಮುನಾ ಪರ್ಯಟನ." ಈ ಮರಾಠೀ ಕೃತಿಯಲ್ಲಿ ವಿಧವೆಯರ ಗೋಳಿನ ವರ್ಣನೆಯಿದೆ. ಹಿಂದೂ ಧರ್ಮದ ಲೋಪದೋಷಗಳನ್ನು ತೋರಿಸುವ ಈ ಅತಿರೇಕದ ಚಿತ್ರಣದಲ್ಲಿ ಸಾಮಾಜಿಕ ಕಾದಂಬರಿಯೊಂದು ಕನ್ನಡದಲ್ಲಿ ಬಂದಿತಲ್ಲ ಎಂಬ ಹೆಗ್ಗಳಿಕೆಯನ್ನು ಹಿಡಿಯುವಂತಿಲ್ಲ. ಆದರೂ ಕನ್ನಡದ ಪ್ರಥಮ ಅನುವಾದಿತ ಸಾಮಾಜಿಕ ಕಾದಂಬರಿಯೆಂದು ಇದನ್ನು ಗಣಿಸತಕ್ಕುದು.

ಮೇಲೆ ಉಲ್ಲೇಖಿಸಿದ ಕೃತಿಗಳನ್ನು ಓದಿ ಕಾದಂಬರೀ ವಾಚನದ ಅಭಿರುಚಿಯನ್ನು ಬೆಳೆಸಿಕೊಳ್ಳುವಂತಿರಲಿಲ್ಲ. ಅಥವಾ ಅಂಥವನ್ನು ಬರೆಯಬೇಕೆಂಬ ಹಂಬಲವನ್ನು ಮೂಡಿಸಿಕೊಂಡ ಲೇಖಕರೂ ಬಹುಶಃ ಸಿಕ್ಕಲಾರರು. ಆದರೆ ಕಾದಂಬರಿಯ ವಾಚನ, ಲೇಖನ ಎರಡಕ್ಕೂ ಪ್ರೇರಣೆಯನ್ನು ಮೊದಲಿಗೆ ಒದಗಿಸಿದವರೆಂದರೆ ಗಂಗಾಧರ ಮಡಿವಾಳೇಶ್ವರ ತೂರಮರಿಯವರು. (ಚುರಮರಿ, ಅಲ್ಲ! ಅವರು ಬೇರೆ) ಮುಂಬಯಿಯ ಶಿಕ್ಷಣ ಖಾತೆಯಲ್ಲಿ ಕನ್ನಡ ವಿದ್ವಾಂಸರಾಗಿದ್ದ ತೂರಮರಿಯವರು ಬಾಣನ ಕಾದಂಬರಿಯನ್ನು ೧೮೭೫ ರ ಸುಮಾರಿಗೆ ಅನುವಾದಿಸಿದರು.

ಈ ಕನ್ನಡ ಕೃತಿಯ ಹೆಚ್ಚುಗಾರಿಕೆ ಎರಡು ರೀತಿಯದು. ಬಾಣನ ಗದ್ಯವೆಂದರೆ ಸಾಮಾನ್ಯರಿಗೆ ಉಕ್ಕಿನ ಕಡಲೆ! ಆದರೆ ಕ್ಲಿಷ್ಟತೆಯು ಒಂದಿನಿತೂ ತೋರಿಬರದಂತೆ ತಿಳಿಯಾದ ಗದ್ಯದಲ್ಲಿ ಪ್ರಾಸಾದಿಕ ಶೈಲಿಯಲ್ಲಿ ಬರೆದುದು, ವರ್ಣನೆಗಳನ್ನು ಮಿತಗೊಳಿಸಿ ಕಥಾನಕದತ್ತ ನೇರವಾದ ದೃಷ್ಟಿಯನ್ನು ಇರಿಸಿಕೊಂಡುದು, ಮತ್ತು ಬಿಚ್ಚು ಮಾತಿನ ಅಚ್ಚಗನ್ನಡದ ಬಳಕೆಯ ಶಬ್ದಗಳುಳ್ಳ, ಈ ಶೈಲಿಯು ಉತ್ತರ ಕರ್ನಾಟಕದಲ್ಲಿ ಮುಂದೆ ಅರ್ಧ ಶತಮಾನದವರೆಗೂ ಉಳಿದುಕೊಂಡು ಬಂದುದು ಅಲ್ಪ ಸಾಧನೆಯೆನ್ನಬಹುದೆ? ಅಖಿಲ ಕರ್ನಾಟಕದ ಮೆಚ್ಚುಗೆಯನ್ನು ಪಡೆದಿದ್ದ ಗಳಗನಾಥರ ಶೈಲಿಯ ಮೂಲ ಬೇರು ತೂರಮರಿಯವರ ಕಾದಂಬರಿಯಲ್ಲಿದೆ. ಹೊಸಗನ್ನಡ ಗದ್ಯಶಿಲ್ಪಿ ಎಂಬ ಮಾತನ್ನೂ ಅನೇಕರಿಗೆ ಅನ್ವಯಿಸಿ ಇಂದು ಧಾರಾಳವಾಗಿ ಉಪಯೋಗಿಸುತ್ತಿದ್ದೇವೆ. ಅಷ್ಟಷ್ಟರ ಮಟ್ಟಿಗೆ ಅವರೆಲ್ಲರಿಗೆ ಅನ್ವಯಿಸುವಂತಹದೇ. ಆದರೆ ಕಾಲಾನುಕ್ರಮದಲ್ಲಿ ಇಂದಿನ ಗದ್ಯದ ಪ್ರಥಮ ರೂವಾರಿಯೆಂದು ಗಂಗಾಧರ ಮಡಿವಾಳೇಶ್ವರ ತೂರಮರಿಯವರನ್ನೇ ಎಣಿಸತಕ್ಕುದು.

ಈ ಕೃತಿಯು ರಚಿತವಾದ ೨೫ ವರ್ಷಗಳ ಅನಂತರ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯಾಯಿತು (೧೮೯೦). ಕನ್ನಡ ಗ್ರಂಥಕರ್ತರಿಗೆ ಪ್ರೋತ್ಸಾಹವೀಯಬೇಕೆನ್ನುವುದು ಅದರ ನಿರ್ದಿಷ್ಟ ಧ್ಯೇಯವಾಗಿದ್ದಿತು. ಸಂಘದ ಸದಸ್ಯರು ಅದಕ್ಕಾಗಿ ಪ್ರತ್ಯೇಕವಾಗಿ ದೇಣಿಗೆಯನ್ನು ಕೊಡುತ್ತಿದ್ದರು. ಸಂಘದ ಪ್ರಥಮ ವಾರ್ಷಿಕ ಸಭೆಯಲ್ಲಿ (೨೭-೯-೧೮೯೧) ಮೂವರು ಸದ್ಗೃಹಸ್ಥರು "ಕನ್ನಡದಲ್ಲಿ ಹೊಸ ಕಾದಂಬರಿಯನ್ನು ಗಂಗಾಧರಯ್ಯನವರ ಕಾದಂಬರಿಯಷ್ಟಾಗಲಿ,

ಹೆಚ್ಚಾಗಲಿ—ಯೆಲ್ಲಕ್ಕೂ ಉತ್ತಮವಾಗಿ ಬರಿದವನಿಗೆ'' ಮೂವತ್ತು ರೂಪಾಯಿ ಇನಾಮನ್ನು ಜಾಹೀರು ಮಾಡಿದರು ! ಅಷ್ಟರಮಟ್ಟಿಗೆ ತೂರಮರಿಯವರ ಕಾದಂಬರಿಯು ಮಾದರಿಯಾಗಿಬಿಟ್ಟಿತು.

ತೂರಮರಿಯವರು ಯಾವುದೊಂದು ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಬಲ್ಲವರಾಗಿದ್ದರು. ಮಹಾಶ್ವೇತೆಯ ದಾಸಿಯಾದ ತರಲಿಕೆಯು, ಪುಂಡರೀಕ ನಿಂದ ಪ್ರೇಮಪತ್ರವನ್ನು ತಂದಾಗಿನ ಈ ಸಂದರ್ಭವನ್ನು ಮಾದರಿಯಾಗಿ ಇಲ್ಲಿ ಗಮನಿಸೋಣ, ಮಹಾಶ್ವೇತೆಯೇ ಅದನ್ನು ಹೇಳುತ್ತಿದ್ದಾಳೆ:

"ನನ್ನ ದಾಸಿಯು ಎರಡನೇ ಸಾರಿ ಆ ಋಷಿಕುಮಾರನ ದರ್ಶನ ತಕ್ಕೊಂಡು ಆತನ ಕೂಡ ಮಾತಾಡಿ ಬಂದದರಿಂದ ಅವಳು ಅತಿ ಭಾಗ್ಯವಂತಳೆಂದು ಎಣಿಸಿದೆನು. ದಾಸಿಯಾದರೂ ಆಕೆಯ ಕೂಡ ಆದರದಿಂದಲೂ ಪ್ರೀತಿಯಿಂದಲೂ ಮಾತನಾಡಿದೆನು. ಆಕೆಯನ್ನು ಜೀವದ ಗೆಳತಿಯ ಮಾಡಿಕೊಂಡು, ಗಲ್ಲವ ಹಿಡಿದು ಮುಂಗುರುಳು ತೀಡಿ, "ತರಲಿಕೇ, ಆ ಋಷಿಕುಮಾರನು ಏನೇನು ಅಂದನು ? ನೀನು ಎಷ್ಟು ಹೊತ್ತು ಅವನ ಬಳಿಯಲ್ಲಿದ್ದಿ ?'' ಎಂದು ಮತ್ತೆ ಮತ್ತೆ ಆ ಋಷಿಕುಮಾರನ ಮಾತನ್ನೇ ಆಕೆಯ ಕೂಡ ಮಾತನಾಡುತ್ತ ಸಂಜೆಯ ತನಕ ಹೊತ್ತುಗಳೆದೆನು.''

ಬಾಣನ ಗದ್ಯವನ್ನು ಓದಿದವರಿಗೆ ಅದಕ್ಕೂ ಈ ಕನ್ನಡ ರೂಪಕ್ಕೂ ಎಷ್ಟೊಂದು ಅಂತರವಿದೆಯೆಂಬುದು ತಟ್ಟನೆ ಗೊತ್ತಾದೀತು. ಕ್ರಿ. ಶ. ೧೮೭೫ ಕ್ಕೆ ಮುಂಚೆ ಯಾರೂ ಇಂಥ ಲಲಿತ ಕನ್ನಡದಲ್ಲಿ ಬರೆದಿರಲಿಲ್ಲ.

ಹತ್ತು ವರ್ಷಗಳ ಅನಂತರ ಪ್ರಕಟವಾದ "ದುರ್ಗೇಶ ನಂದಿನಿ''ಯು (೧೮೮೫) ದಿಟ್ಟವಾದ ಹೊಸ ಹೆಜ್ಜೆಯನ್ನಿಟ್ಟ ಕೃತಿ. ಬಿ. ವೆಂಕಟಾಚಾರ್ಯರು ಬಂಗಾಲೀ "ನಾವೆಲು'' ಗಳನ್ನು ಅನುವಾದಿಸಲು ಎತ್ತಿಕೊಂಡ ಕೃತಿಗಳಲ್ಲಿ ಇದುವೆ ಮೊದಲಿನದು. ತಮ್ಮ ಇಂಗ್ಲಿಶ್ ಪೀಠಿಕೆಯಲ್ಲಿ ಅವರು A novel in the sence it is understood in English is not familiar to the Kanerese speaking Public ಎಂದಿದ್ದಾರೆ. ಕಾದಂಬರಿಯ ಇತಿಹಾಸ ದೃಷ್ಟಿಯಿಂದ ಇದು ಮಹತ್ವದ ಹೇಳಿಕೆ ಯಾಗಿದೆ. ಈಗಾಗಲೇ ಮೇಲೆ ವಿವೇಚಿಸಿದಂತೆ ಇಂಗ್ಲಿಶ್ ಸಾಹಿತ್ಯದಲ್ಲಿ ನೆಲೆಗೊಂಡಿದ್ದ ಸಾಮಾಜಿಕ, ಐತಿಹಾಸಿಕ ಕಾದಂಬರಿಗಳು ಕನ್ನಡದಲ್ಲಿ ಅದುವರೆಗೆ ಬಂದಿರ ಲಿಲ್ಲ. ಬಾಬಾ ಪದಮಂಜಿ, ತೂರಮರಿಯವರು ಮೇಲಿನ ದೃಷ್ಟಿಯನ್ನಿಟ್ಟುಕೊಂಡು ಕಾದಂಬರಿಗೆ ಕೈಹಾಕಿದವರಲ್ಲ. ಇತ್ತ "ರಾಬಿನ್‌ಸನ್ ಕ್ರೂಸೊ'' ಅನುವಾದವು ವಿದ್ಯಾರ್ಥಿಗಳಿಗಾಗಿ ಇದ್ದಿತೆಂಬುದನ್ನು ನೋಡಿದ್ದೇವೆ.

ಮುಂದುವರಿದು ಬಿ. ವೆಂ. ಈ ನಾವೆಲುಗಳ ಉದ್ದೇಶವೇನೆಂಬುದನ್ನು ಹೀಗೆ ಹೇಳಿದ್ದಾರೆ :

"ಸಮಾಜದ ಹಾಗೂ ಸಮಾಜದ ಅಂಗಭೂತನಾದ ಮನುಷ್ಯನ, ಚರಿತ್ರೆಯ ಪ್ರತಿ ಚಿತ್ರವಾಗಿ ಪ್ರತಿ ಒಬ್ಬ ಪಾಠಕರ ಮನಸ್ಸಿಗೂ ಮುಕುರ ಸ್ವರೂಪವಾಗಿರಬೇಕು.

ನಾವೆಲುಗಳು ಶುದ್ಧವಾದ ಉದ್ದೇಶವುಳ್ಳವುಗಳಾಗಿದ್ದರೆ ಅವು ಸಮಾಜತತ್ವ ಅಥವಾ ಸಮಾಜವಿಜ್ಞಾನವಾಗಿ (Socialogy) ಪರಿಣಮಿಸುವುವು.

ಪ್ರಾಂತಭೇದದಿಂದಾಗಿ ಬಿ. ವೆಂಕಟಾಚಾರ್ಯರ ನಾವೆಲುಗಳು ಉತ್ತರ ಕರ್ನಾಟಕದಲ್ಲಿ ಸುರುವಿಗೆ ಪ್ರಚುರವಾಗಲಿಲ್ಲವೆಂದೇ ಹೇಳಬೇಕು. ಹೀಗಾಗಿ ಕಾದಂಬರೀ ಲೇಖನ ವಿಚಾರ ದಲ್ಲಿ ಪ್ರತ್ಯೇಕವಾದ ಪ್ರಯತ್ನಗಳೇ ನಡೆದುವು. ಕ್ರಿ. ಶ. ೧೮೯೦ರಲ್ಲಿ ಸ್ಥಾಪಿತ ವಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಪಾರಿತೋಷಕಗಳನ್ನಿರಿಸಿ ಲೇಖಕರಿಗೆ ಪ್ರೋತ್ಸಾಹವೀಯುತ್ತಿದ್ದುದನ್ನು ನೋಡಿದ್ದೇವೆ. ಕಾದಂಬರೀ ಕ್ಷೇತ್ರದಲ್ಲಿ ಅದರ ಪ್ರಯೋಜನ ಪಡೆದವರೊಳಗೆ ಮೊದಲಿಗರೆಂದರೆ ಲಕ್ಷ್ಮಣ ಭೀಮರಾವ ಗದಗಕರರು. ಜೂನ್ ೧೮೯೨ ರಲ್ಲಿ ಪ್ರಕಟವಾದ ಅವರ ಕೃತಿಯ ಹೆಸರು 'ಸೂರ್ಯಕಾಂತ'. ಬಿ. ವೆಂ. ಅವರಂತೆ, ಈ ನೂತನ ಸಾಹಿತ್ಯ ರೂಪವನ್ನು ಗಮನದಲ್ಲಿ ಇರಿಸಿಕೊಂಡೇ ಗದಗಕರರು ಇದನ್ನು ಸ್ವತಂತ್ರವಾಗಿ ರಚಿಸಿದ್ದಾರೆ. ಇದರ ಕಥಾವಸ್ತು ಪೇಶ್ವೆಯರ ಕಾಲದ ಅಥವಾ ೧೮ ನೇ ಶತಮಾನದ ಅವಧಿಗೆ ಸಂಬಂಧಿಸಿದುದು. ಸೂರ್ಯಕಾಂತನು ಹಳ್ಳಿಯೊಂದರ ಬಡಕುಟುಂಬದಲ್ಲಿ ಜನಿಸಿದವನು. ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಮನೆಬಿಟ್ಟು ಹೋಗುವನು ರಾಜನೊಬ್ಬನ ಆಸ್ಥಾನದಲ್ಲಿ ನೆಲೆನಿಂತು ತನ್ನ ಶೌರ್ಯ ಹಾಗೂ ಬುದ್ಧಿಮತ್ತೆಯಿಂದ ಪ್ರಗತಿ ಹೊಂದಿ ಸರದಾರನಾಗುವನು. ಇತ್ತ ಅವನ ತಂದೆತಾಯಿಗಳಿಗೆ ಇದಾವುದರ ಕಲ್ಪನೆಯೇ ಇಲ್ಲ. ವೈಭವದ ಪರಿವಾರದೊಡಗೂಡಿ ಮಗನು ತಮ್ಮನ್ನು ಕರೆದೊಯ್ಯ-ಬಂದಾಗ ಅವರಿಗಾದ ಹಿಗ್ಗು ಅಷ್ಟಿಷ್ಟಲ್ಲ. ಸದಾಚಾರ ಬೋಧನೆಯೇ ಈ ಕಾದಂಬರಿಯ ಉದ್ದೇಶ. ಕಾದಂಬರಿಯಲ್ಲಿ ಇತಿಹಾಸದ ಆವರಣ ಮಾತ್ರ ಇದೆ. ಒಳಗಿನ ಹೂರಣವೆಲ್ಲ ಸಾಮಾಜಿಕವಾದುದು. ಕಥೆಯಲ್ಲಿ ಆಗಲೀ, ನಿರೂಪಣೆಯಲ್ಲಾಗಲೀ ಹೇಳಿಕೊಳ್ಳುವಂತಹದೇನೂ ಇಲ್ಲ.

ಗದಗಕರ ವಿರಚಿತವಾದ ಈ ಕೃತಿಯ ಇನ್ನೊಂದು ವೈಶಿಷ್ಟ್ಯವೆಂದರೆ ''ಕಾದಂಬರಿ'' ಎಂಬ ಅಭಿಧಾನವನ್ನು ಅದು ಮೊದಲ ಬಾರಿ ಹೊಂದಿದ್ದುದು. ಅವರಿಗೆ ಈ ಹೊಸ ಸಾಹಿತ್ಯರೂಪದ ಸ್ಪಷ್ಟ ಕಲ್ಪನೆ ಇದ್ದಿತು.

ಜನರಲ್ಲಿ ಓದುವ ಅಭಿರುಚಿ ಹುಟ್ಟದ ಹೊರ್ತು ಯಾವ ಭಾಷೆಯೂ ಉತ್ತಮ ಸ್ಥಿತಿಯಲ್ಲಿ ಬರಲಾರದು. ಇಂಥ ಅಭಿರುಚಿಯನ್ನು ಹುಟ್ಟಿಸಬೇಕಾದರೆ ಕಾದಂಬರಿ, ಇತಿಹಾಸ,ನಾಟಕ ಮುಂತಾದ ಪುಸ್ತಕ ಸಾಮಗ್ರಿಯು, ಅವಶ್ಯವಾಗಿ ಬೇಕಾಗುತ್ತದೆ...ಈ ಕೊರತೆಯನ್ನು ನನ್ನ ಕೈಲಾದ ಮಟ್ಟಿಗೆ ನಿವಾರಿಸಬೇಕೆಂದು ಆಶೆಯುಳ್ಳವನಾಗಿ ಈ ಚಿಕ್ಕ ಕಾದಂಬರಿಯನ್ನು ಬರೆದಿದ್ದೇನೆ.

''ಪ್ರಜಾವಾಣಿಯು'ಯ ಸಾಪ್ತಾಹಿಕದಲ್ಲಿ ಬಂದ (೨೪-೬-೧೯೭೩), ಕ. ವೆಂ. ರಾಜಗೋಪಾಲರ ಲೇಖನದಲ್ಲಿ ''ಕಾದಂಬರಿ'' ಎಂಬ ಹೆಸರು ಹೇಗೆ ಬಂದಿತು ಎಂಬುದರ ಪ್ರಸ್ತಾಪವಿದೆ. ಅದು ಮರಾಠಿಯಿಂದ ಬಂದಿರಲಾರದು ಎಂಬ ಸಂಶಯವನ್ನು ಅವರು ವ್ಯಕ್ತ ಮಾಡಿದ್ದಾರೆ. ರಾಜಗೋಪಾಲರು ಮುಂದುವರಿದು, ೧೮೯೨ ರಲ್ಲಿ

ಪ್ರಕಟವಾದ, ನಾಗವರ್ಮನ ಹಳಗನ್ನಡ ಕಾವ್ಯವಾದ ''ಕರ್ನಾಟಕ ಕಾದಂಬರಿ''ಯ ಪ್ರಭಾವವು ಅತಿಶಯವಾಗಿದ್ದು, ಕನ್ನಡ ಕಾದಂಬರೀ ಲೇಖನದ ಪರಂಪರೆಗೆ ತಾಯಿಯಾಗಿರಬೇಕು ಎಂದು ಊಹಿಸಿದ್ದಾರೆ.

ಇದು ಸತ್ಯವಿದೂರವಾದುದೆಂಬುದು ಸ್ಪಷ್ಟವಾಗಿದೆ. ಏಕೆಂದರೆ ೧೮೯೨ ರಷ್ಟು ತಡವಾಗಿ ಪ್ರಕಟವಾದ ಈ ಹಳಗನ್ನಡ ಕಾವ್ಯವನ್ನು ಓದಿ ಕಾದಂಬರಿಯನ್ನು ಬರೆಯಲು ಯಾರಾದರೂ ಉದ್ಯುಕ್ತರಾಗಬಹುದೆ? ಇದಕ್ಕಿಂತ ಮುಂಚೆಯೇ ಬಿ. ವೆಂಕಟಾಚಾರ್ಯರು, ಇತರ ಕೆಲವರು ಬರೆಯತೊಡಗಿದ್ದರಲ್ಲ? ಅಲ್ಲದೆ, ಈ ಹೊಸ ಸಾಹಿತ್ಯ ಪ್ರಕಾರಕ್ಕೆ ಬಂಗಾಲೀ, ಮರಾಠೀ ಕೃತಿಗಳ ಮೂಲಕವಾದ ಇಂಗ್ಲಿಶ್ ಕಾದಂಬರಿಗಳ ಪ್ರಭಾವವೇ ಕಾರಣವೆನ್ನುವುದು ನಿಚ್ಚಳವಿದೆ. ಹಾಗೇ ದೇಶೀಯ ಪ್ರಭಾವದ ಮಾತನ್ನು ಗಮನಿಸುವುದೇ ಆದರೆ, ೧೮೭೫ ರಷ್ಟು ಹಿಂದೆ ಪ್ರಕಟವಾಗಿ ೧೮೯೨ರೊಳಗಾಗಿ ಎರಡು ಆವೃತ್ತಿಗಳನ್ನು ಕಾಣುವಷ್ಟು ಜನಪ್ರಿಯವಾಗಿದ್ದ ತೂರಮರಿಯವರ ಬಾಣ ಕಾದಂಬರಿಯು ಅಂಥ ಪ್ರಭಾವವನ್ನು ಬೀರಿತು; ಅರ್ಥಾತ್ ಉತ್ತರ ಕರ್ನಾಟಕದ ಮಟ್ಟಿಗೆ!

''ನಾಗವರ್ಮ ಕೃತ ಕರ್ಣಾಟಕ ಕಾದಂಬರಿಯ ಪ್ರಸಿದ್ಧಿ ಕನ್ನಡದಲ್ಲಿಲ್ಲದೆ ಹೋಗಿದ್ದರೆ, ಕೆಲವು ಪಂಡಿತರು ಊಹಿಸುವಂತೆ ಮರಾಠೆಯವರ ನಾವೆಲ್= ಪ್ರಬಂಧ= ಕಾದಂಬರಿ ಎಂಬ ಸೂತ್ರಕ್ಕೆ ಅಧಿಕಾರಿಗಳಾಗುತ್ತಿದ್ದರೆಂದು ಕಾಣುತ್ತದೆ. ಒಟ್ಟಿನಲ್ಲಿ ಕರ್ಣಾಟಕ ಕಾದಂಬರಿಯು ತನ್ನ ಹೆಸರನ್ನು ಕನ್ನಡಕ್ಕೆ ದಾನಮಾಡಲು ಕೆಲವು ಕೃತಿಗಳೂ ಅಲ್ಲದೆ ಆರೆಂಟು ವರ್ಷಗಳೂ ಬೇಕಾದುವೆಂದು ಹೇಳಬಹುದು.''

ಇದು ಕ. ವೆಂ. ರಾಜಗೋಪಾಲರ ನಿಲುವು. ಕಾದಂಬರಿ= ಕಲ್ಪಿತ ಕಥಾ ಎಂಬ ಅರ್ಥವನ್ನು ೧೮೨೭ ರಷ್ಟು ಹಿಂದೆಯೇ ಹೊರಬಂದ ''ಮರಾಠೀ ಭಾಷೇಚಾ ಕೋಶ'' ದಲ್ಲಿ ಕೊಡಲಾಗಿದೆ. ಮುಂದೆ ೧೮೬೯ ರಲ್ಲಿ ಪ್ರಕಟವಾದ ''ವಿಚಿತ್ರಪುರೀ'' ಎಂಬ ಮರಾಠೀ ಕಥಾನಕಕ್ಕೆ ಕಾದಂಬರಿ ಎಂದು ನಾಮಕರಣವಿದೆ. ಆಮೇಲಿನ ಎರಡು ದಶಕಗಳಲ್ಲಿ ಪ್ರಕಟವಾದ ದೀರ್ಘ ಕಥಾನಕಗಳಿಗೆ 'ಕಾದಂಬರಿ'' ಎಂದೇ ಹೆಸರಿಸಲಾಗಿದೆ. ಇದರಿಂದಾಗಿ ಮರಾಠಿಯೊಡನೆ ವಿಶೇಷ ಹೊಕ್ಕು ಬಳಕೆಯಲ್ಲಿದ್ದ ಉತ್ತರ ಕರ್ನಾಟಕಸ್ಥರಿಗೆ ಕಾದಂಬರಿ–ಎಂದರೆ ಇಂದು ನಾವು ತಿಳಿದಿರುವ ಅರ್ಥವೇ ಪರಿಚಿತವಾಗಿದ್ದಿತು. ಮೇಲೆ ಉದ್ಧರಿಸಲಾದ ವಿದ್ಯಾವರ್ಧಕ ಸಂಘದವರ ನಿರ್ಣಯದಲ್ಲಿ ಆ ಅರ್ಥ ಅಡಗಿದೆ. ಗಳಗನಾಥರ ''ಪದ್ಮನಯನಾ'' (೧೮೯೮), ಅರಳಿ ಎಂಬುವರ ''ಕನ್ನಡ ಶೌರ್ಯಸಾಗರ'' ೧೮೯೯), ಇವುಗಳಿಗೆ ''ಕಾದಂಬರಿ'' ಎಂಬ ನಾಮಧೇಯವೇ ಇದೆ.

ಮೋಜೆಂದರೆ ಮೈಸೂರು ಸಂಸ್ಥಾನದಲ್ಲಿ ಪ್ರಕಟವಾದ ಯಾವ ಕಾದಂಬರಿಗಳಿಗೂ ೧೯೨೦ ನೆಯ ದಶಕದ ವರೆಗೆ '' ಕಾದಂಬರಿ'' ಎಂಬ ನಾಮಕರಣವಿರಲಿಲ್ಲ. ಗಳಗನಾಥರ ಐತಿಹಾಸಿಕ ಕೃತಿಗಳ ಮೂಲಕ ಅದರ ಪರಿಚಯವಾಗಿದ್ದರೂ, ಅದು ಮೈಸೂರಸ್ಥರಿಗೆ ಸ್ವೀಕೃತವಾಗಿರಲಿಲ್ಲ. ಬಿ. ವೆಂಕಟಾಚಾರ್ಯರೂ '' ನಾವೆಲು '' ಎಂದು ಕೊನೆ

ವರೆಗೆ ಹೇಳುತ್ತ ಹೋದರು. " ಶೃಂಗಾರ ಚಾತುರ್ಯೋಲ್ಲಾಸಿನೀ " ಯ ಲೇಖಕರೂ ನಾವೆಲು ಎಂದೇ ಕರೆದರು. " ಮಾಡಿದ್ದುಣ್ಣೋ ಮಹಾರಾಯಾ " (೧೯೧೫) ಎಂಬ ಉತ್ತಮ ಸಾಮಾಜಿಕ ಕಾದಂಬರಿಯನ್ನು ಬರೆದ ಎಂ. ಎಸ್. ಪುಟ್ಟಣ್ಣನವರಾದರೂ " ಕಾದಂಬರಿ " ಯೆಂಬ ಹೆಸರಿನ ಗೊಡವೆಗೆ ಹೋಗಲಿಲ್ಲ.

ಕ್ರಿ. ಶ. ೧೯೧೦ ಮತ್ತು ೧೯೨೦ ರ ದಶಕಗಳಲ್ಲಿ ಹೆಚ್ಚು ಕಾದಂಬರಿಗಳನ್ನು ಬರೆದ ಮೈಸೂರಸ್ಥರೆಂದರೆ, ಶ್ರೀಮತಿ ತಿರುಮಲಾಂಬಾ ಅವರು. ಸತಿಹಿತೈಷಿಣೀ ಗ್ರಂಥ ಮಾಲೆಯ ಮೂಲಕ ನಭಾ ಮುಂತಾದ ಸಾಮಾಜಿಕ ಕಾದಂಬರಿಗಳನ್ನು ಬೆಳಕಿಗೆ ತಂದರು. ಆದರೆ ತಮ್ಮ ಪೂರ್ವಾರ್ಧದ ಕೃತಿಗಳಿಗೆ " ಕಾದಂಬರಿ " ಎಂದೆನ್ನಲಿಲ್ಲ. ಅವರ ಕೃತಿಗಳನ್ನು ೧೯೧೮ ರ ಸುಮಾರಿಗೆ (ಪ್ರಕಟಣೆ : ೧೯೨೩) ವಿಮರ್ಶೆ ಮಾಡಿದ ಮಾಸ್ತಿಯವರು ತಮ್ಮ ಲೇಖನದಲ್ಲಿ ಒಮ್ಮೆಯೂ " ಕಾದಂಬರಿ " ಶಬ್ದವನ್ನೇ ಬಳಸಿಲ್ಲ !

ಸಾರಾಂಶ, ಈ ನೂತನ ಸಾಹಿತ್ಯಕ್ಕೆ ಕಾದಂಬರಿ ಎಂದು ಮೊದಲಿಗೆ ಕರೆದವರು ಮರಾಠಿಗರು. ಅದನ್ನು ಉತ್ತರ ಕರ್ನಾಟಕದವರು, (ಅದರಂತೆ ಗುಜರಾತಿಗಳು) ಸ್ವೀಕರಿಸಿದರು. ಮೈಸೂರು ವಿಭಾಗದಲ್ಲಿ " ನಾವೆಲು " ಎಂದಿದ್ದಿತು. ಆ ಪ್ರದೇಶದಲ್ಲಿ ಗಳಗನಾಥರ ಕಾದಂಬರಿಗಳ ಪ್ರಸಾರವು ಹೆಚ್ಚಿದಂತೆಲ್ಲ (೧೯೦೮–೧೯೨೮) ಕಾದಂಬರಿ ಎಂಬ ಹೆಸರನ್ನು ಸ್ವೀಕರಿಸಬೇಕಾಗಿ ಬಂದಿತು. ಅ.ನ.ಕೃ., ಮತ್ತು ಕಾರಂತರು ಈ ಸಾಹಿತ್ಯ ರೂಪದಲ್ಲಿ ಪ್ರವೇಶಿಸುವಲ್ಲಿಗೆ (೧೯೩೦ ನೆಯ ದಶಕ) ಅದು ಕರ್ನಾಟಕದಲ್ಲಿ ಸಾರ್ವತ್ರಿಕವಾಯಿತು.

" ಶೃಂಗಾರ ಚಾತುರ್ಯೋಲ್ಲಾಸಿನೀ " ಗಿಂತ ಮುಂಚೆ ಪ್ರಕಟವಾದ ಹಾಗೂ ಸ್ವತಂತ್ರವೆನ್ನಬಹುದಾದ ಇನ್ನೂ ಒಂದು ಕೃತಿಯಿದೆ. ಅದುವೆ ರೆಂಟಾಳ ವೆಂಕಟ ಸುಬ್ಬಾರಾವು ಪಂತರ " ಕೇಸರೀ ವಿಲಾಸ ". ಪ್ರಕಟನ ವರ್ಷ ೧೮೯೫.

" ಲೇಖಕ " ಪತ್ರಿಕೆಯು ಫೆಬ್ರುವರಿ ೧೯೫೪ ರ ಸಂಚಿಕೆಯಲ್ಲಿ ಅದನ್ನು ಪ್ರಥಮ ಸ್ವತಂತ್ರ ಕಾದಂಬರಿ ಎಂದು ಹೇಳಿದ್ದಿದೆ. ವೆಂಕಟಸುಬ್ಬಾರಾವು ಅವರ ಮಾತೃಭಾಷೆ ತೆಲುಗು. ಮದ್ರಾಸದಲ್ಲಿ ವಕೀಲರಾಗಿದ್ದ ಅವರು ತೆಲುಗು ಭಾಷೆಯಲ್ಲಿ ಇನ್ನೂ ೨–೩ ಕೃತಿಗಳನ್ನು ರಚಿಸಿದ್ದಾರೆ. ಅವರಿಗೆ ಪರಿಜ್ಞಾನವಿದ್ದಿತು. ಆದ್ದರಿಂದ ಅವರೇ ಅದನ್ನು ಕನ್ನಡದಲ್ಲಿಯೂ ರಚಿಸಿ (ಅನುವಾದಿಸಿ?) ಏಕಕಾಲಕ್ಕೆ ಎರಡೂ ಭಾಷೆಗಳಲ್ಲಿ ಪ್ರಕಟಿಸಿದರು ! (ಆಧಾರ : ಭಾರತ ಸರಕಾರದ Report on Publications issued & registered—ಇದರ ೧೮೯೫ರ ವರದಿ) " ಒಂದು ವಿಚಿತ್ರ ನೂತನ ಪ್ರಬಂಧ "ವೆಂದು ಹೆಸರಿಸಲಾದ ಈ ಕೃತಿಯಲ್ಲಿ ಧನಕೋಟಿ ಎಂಬ ರಾಜನಿದ್ದಾನೆ. ಜೊತೆಗೆ ಕೇಸರಿ ಎಂಬ ಸ್ತ್ರೀ ಸ್ವಾತಂತ್ರ್ಯವನ್ನು ಬಯಸುವ ತರುಣಿ ಇದ್ದಾಳೆ. ಆದ್ದರಿಂದ 'ಸೂರ್ಯಕಾಂತ' ದಂತೆ ಇದಾದರೂ ಅರ್ಧ ಐತಿಹಾಸಿಕ, ಅರ್ಧ ಸಾಮಾಜಿಕ ಕೃತಿ ಎನ್ನಬಹುದು. ಒಟ್ಟಿನಲ್ಲಿ " ಕೇಸರೀವಿಲಾಸ "ವನ್ನು ಕನ್ನಡದ ಪ್ರಥಮ ಸ್ವತಂತ್ರ ಸಾಮಾಜಿಕ "ಕಾದಂಬರಿ" ಯೆಂದು ಹೇಳಲು ಬಾರದು.

ಇನ್ನೀಗ "ಶೃಂಗಾರ ಚಾತುರ್ಯೋಲ್ಲಾಸಿನೀ". ಅದರ ವಿವರ ಪರಿಚಯವನ್ನು ರಾಜಗೋಪಾಲರು ತಮ್ಮ ಲೇಖದಲ್ಲಿ ಮಾಡಿಕೊಟ್ಟಿದ್ದಾರೆ. 'ಪ್ರಪ್ರಥಮ ಸ್ವತಂತ್ರ' ಕಾದಂಬರಿಯೆಂದು ಹೊಗಳಿದ್ದಾರೆ. "ಸೂರ್ಯಕಾಂತ"ವು ಹುರುಳಿಲ್ಲದ ಕೃತಿಯಾಗಿದ್ದರೆ, ಇದು ಒಂದು ಅಸಂಬದ್ಧ ಪ್ರಲಾಪ! ಆದರೂ ಕನ್ನಡ ಕಾದಂಬರಿಯ ಇತಿಹಾಸದಲ್ಲಿ ಅದಕ್ಕೆ ಬೇರೊಂದು ರೀತಿಯಲ್ಲಿ ಸ್ಥಾನವಿದೆ. ಲೇಖಕರಾದ ಬಿ. ಮುರಿಗೆಪ್ಪ ಸೋಮಾರಾಧ್ಯನು ಕಾಲೇಜ ವಿದ್ಯಾರ್ಥಿ. ಕೃತಿಯ ಆರಂಭದಲ್ಲಿ ಸರಸ್ವತಿಯ ಸ್ತುತಿ ಮಾಡುತ್ತ "ಆ ದೇವಿಯೆ ಸುಪ್ರೀತಮಕ್ಕೆ ವಿದಾರ್ಥಿಗಳೋಳ್" ಎಂದು ಶುಭವನ್ನು ಕೋರಿದ್ದಾನೆ. "ಪ್ರಪ್ರಥಮ ಸ್ವತಂತ್ರ" ಎಂಬ ಪ್ರಾಶಸ್ತ್ಯ ಇದಕ್ಕೆ ದಕ್ಕದೇ ಹೋದರೂ ವಿದ್ಯಾರ್ಥಿಯೊಬ್ಬನಿಗೆ ಅನ್ವಯಿಸಿ ಹಾಗೆಂದು ವಿಶೇಷಿಸಬಹುದು.

ಮರುವರ್ಷ ಎಂದರೆ ೧೮೯೭ ರಲ್ಲಿ ಇನ್ನೊಂದು ವಿಶಿಷ್ಟ ಕೃತಿ ಹೊರಬಂದಿತು. ಅದುವೆ "ಚೋರಗ್ರಹಣತಂತ್ರ." ಪತ್ತೇದಾರಿ ಕಾದಂಬರಿ ಕನ್ನಡದಲ್ಲಿ ಪ್ರಪ್ರಥಮ ಅಲ್ಲದೆ ಸ್ವತಂತ್ರವಾದುದು. ಕಥೆ ಹೀಗಿದೆ :

ಓರ್ವ ಗಣ್ಯ ವ್ಯಕ್ತಿಯ (ದ್ವಿತೀಯ) ಪತ್ನಿಯನ್ನು ಯಾರೊ ಕಳ್ಳರು ಅಪಹರಿಸುತ್ತಾರೆ. ಅವಳ ಪತ್ತೆ ಮಾಡಲು, ಪತ್ತೇದಾರ ಭೀಮ ಮತ್ತು ಅವನ ಹಸ್ತಕಳಾದ ಸುಶೀಲೆ ಉದ್ಯುಕ್ತರಾಗುತ್ತಾರೆ. ಕೊನೆಯಲ್ಲಿ ಅವಳು ಹಾಗೂ ಅವಳ ಮಗು ಇವರೇ ಕಳ್ಳರ ತಂಡದ ಸದಸ್ಯರಾಗಿದ್ದ ಸಂಗತಿ ಹೊರಪಟ್ಟು ಅವರಿಗೆ ಶಿಕ್ಷೆಯಾಗುತ್ತದೆ.

ಅಚ್ಚರಿಯ ಸಂಗತಿಯೆಂದರೆ ಇಂಥ ಕಥೆಯನ್ನು ಬರೆಯಲು ಮನಸ್ಸು ಮಾಡಿದವರು, ಮೈಸೂರಿನ ಶ್ರೇಷ್ಠ ಪತ್ರಿಕಾಕರ್ತರೂ ರಾಜಕೀಯ ಧುರೀಣರೂ ಆಗಿದ್ದ ತಾತಯ್ಯ ಎಂ. ವೆಂಕಟಕೃಷ್ಣಯ್ಯನವರು. ಇವರಲ್ಲಿ ಖೂನಿ – ಮಾರಾಮಾರಿಯ, ರಹಸ್ಯದ ಕತೆಯೊಂದನ್ನು ಹೇಳಬೇಕೆಂದಿರದೆ, ಕಳವು ಕೊಲೆ ಮೋಸಗಳಲ್ಲಿ ನಿರತರಾದ ಭಂಡರಿಗೆ ದಂಡನೆ ತಪ್ಪಿದ್ದಲ್ಲ ಎಂಬುದನ್ನೂ, ಚೋರಗ್ರಹಣ ವಿಚಾರದಲ್ಲಿ ಪೋಲೀಸರ ತಂತ್ರಗಳನ್ನೂ ವಿವರಿಸುವುದು ಅವರ ಉದ್ದೇಶವಾಗಿದ್ದಿತು.

ಅದರ ಮರುವರ್ಷದ ಪ್ರಕಟಣೆಯು ಗಳಗನಾಥರ 'ಪದ್ಮನಯನಾ'. ಇದು 'ಕಲಾವತೀಪರಿಣಯ' ಮಾದರಿಯ ಅದ್ಭುತ ರಮ್ಯ ಕಥಾನಕವಾಗಿದೆ. ಅದನ್ನು ಅವರು ಬರೆಯುವುದಕ್ಕೆ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಅದರ ಪಾರಿತೋಷಕವೇ ನಿಮಿತ್ತವಾಯಿತು. ಗಳಗನಾಥರು ತಮ್ಮ ಅನುವಾದಗಳಿಂದಲೇ ಪ್ರಸಿದ್ಧರಾಗಿದ್ದರೂ ಅವರ ಮೊತ್ತ ಮೊದಲಿನ ಕಾದಂಬರಿಯು (ಅದರಂತೆ ಕೊನೆಯದು ಸಹ) ಸ್ವತಂತ್ರವಾದುದು.

ಕ್ರಿ. ಶ. ೧೮೯೯ ನೆಯ ವರ್ಷವು ಕನ್ನಡದ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿಯಾದ 'ಇಂದಿರಾಬಾಯಿ' ಪ್ರಕಟವಾದ ಸುಯೋಗದ ವರ್ಷವಾಗಿದೆ. (ಪ್ರಜಾವಾಣಿಯ ಕಾದಂಬರಿಯ ಕುರಿತಾದ ಲೇಖನ ಮಾಲೆಯಲ್ಲಿ ಈಗಾಗಲೇ ಅದರ ಪರಿಚಯ ಬಂದಿದೆ.) ಆಗಿನ ಜಿಲ್ಲಾಧಿಕಾರಿ ಕೌಚ್‌ಮನ್ ಅದನ್ನು ಇಂಗ್ಲಿಶ್‌ಗೆ

ಅನುವಾದಿಸುವಷ್ಟು ಅದು ಮಹತ್ವವನ್ನು ಪಡೆದಿದ್ದಿತು. (ಉರ್ದು ಭಾಷೆಯಲ್ಲಿಯ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿಯೂ ಇದೇ ವರ್ಷ ಪ್ರಕಟವಾಗಿದೆ.)

ಅದೇ ವರ್ಷ ಗೂಳೆಪ್ಪ ಕೊಟ್ರಪ್ಪ ಅರಳಿಯವರು ''ಕನ್ನಡ ಶೌರ್ಯಸಾಗರ'' ವನ್ನು ಬರೆದಿದ್ದು, ಅದನ್ನು ವಿದ್ಯಾವರ್ಧಕ ಸಂಘವೇ ಪ್ರಕಟಿಸಿತು. ಇಲ್ಲಿ ಕನ್ನಡ ಎಂಬ ಪದಕ್ಕೆ ವಿಶೇಷ ಅರ್ಥವೇನೂ ಇರದೆ, ಕನ್ನಡದಲ್ಲಿ ಬರೆದದ್ದು ಎಂದಷ್ಟೆ ಪರಿಗಣಿಸ ಬೇಕು. ಕಥೆ ಸ್ವತಂತ್ರವಾದುದು ಮತ್ತು ಪೌರಾಣಿಕ ಹಿನ್ನೆಲೆಯುಳ್ಳದ್ದು. ಆದರೆ ''ಪದ್ಮನಯನಾ''ದಲ್ಲಿಯ ಸಂವಿಧಾನ ಚಾತುರ್ಯ, ಪಾತ್ರ ಪುಷ್ಟಿ—ಇವು 'ಶೌರ್ಯಸಾಗರ' ದಲ್ಲಿ ದೊರೆಯಲಾರವು.

ಗುಳವಾಡಿ ವೆಂಕಟರಾಯರ ಅನಂತರ ಇನ್ನಾರು ಸ್ವತಂತ್ರ ಸಾಮಾಜಿಕ ಕಾದಂಬರಿ ಬರೆದರು? ಆ ಸ್ಥಾನವು ಮೈಸೂರಿನ ಜಿ. ರಾಘವೇಂದ್ರರಾವ್ ಎಂಬವರಿಗೆ ಸಲ್ಲುತ್ತದೆ. ಕ್ರಿ. ಶ. ೧೯೦೨ ರಲ್ಲಿ ಪ್ರಕಟವಾದ ಅವರ ''ಸೀತೆ'' ಒಂದು ಕಲ್ಪಿತ ಕಥೆ ಹಾಗೂ ಕನ್ನಡದಲ್ಲಿ ಒಂದು 'Original novel' ಎಂಬುದಾಗಿ ಅಭಿಧಾನವನ್ನು ಹೊತ್ತಿದೆ. ಅದೊಂದು ಕಿರು ಕಾದಂಬರಿ.

ಹೀಗಿದೆ ಕನ್ನಡ ಕಾದಂಬರೀ ರಚನೆಯ ಆರಂಭಕಾಲ. ಯಾವುದೊಂದು ಸಾಹಿತ್ಯ ಪ್ರಕಾರವು ಒಮ್ಮಿಂದೊಮ್ಮೆಲೆ ದೊಡ್ಡ ಪ್ರಮಾಣದಲ್ಲಿ ಮೂರ್ತ ಸ್ವರೂಪ ತಾಳುವು ದಿಲ್ಲ. ಷಟ್ಪದಿ, ಚಂಪೂ ರೂಪಗಳಿಗೂ ಈ ಮಾತು ಅನ್ವಯಿಸುತ್ತದೆ. ವಚನಸಾಹಿತ್ಯವು ಬಸವಣ್ಣನವರಿಗಿಂತ ಮುಂಚೆಯೂ ಇದ್ದಿತು. ಇಂದು ಮಾಸ್ತಿಯವರನ್ನು ಸಣ್ಣ ಕತೆಗಳ ಜನಕರೆಂದು ನಾವು ಕರೆದರೂ ಅವರಿಗಿಂತ ಹಿಂದೆ ಪ್ರಯತ್ನ ಮಾಡಿದವರು ಇರುವ ರಲ್ಲವೆ. ಕಾದಂಬರಿ ಸಾಹಿತ್ಯಪ್ರಕಾರಕ್ಕೂ ಈ ಮಾತು ಅನ್ವಯಿಸುವುದು. ಈ ಚಾರಿತ್ರಿಕ ಹಿನ್ನೆಲೆಯನ್ನು ತಿಳಿದುಕೊಳ್ಳದೆ, ಕೃತಿಗಳ ಮಹತ್ವವನ್ನು ಮಾತ್ರ ಗುರುತಿಸಿ, ಅವುಗಳ ಮೌಲ್ಯಮಾಪನ ಮಾಡುವುದು ಸಮರ್ಪಕವಾಗುವುದಿಲ್ಲ.

ಇಂತು ಹೊಸಗನ್ನಡದಲ್ಲಿ ಎದ್ದು ಕಾಣುವ ಸಾಹಿತ್ಯ ಪ್ರಕಾರವೆನಿಸಿದ ಕಾದಂಬರಿಯ ಆರಂಭದ ಚರಿತ್ರೆಯು ೧೮೮೫ ರಿಂದ ಮೊದಲಾಗಿ ''ಇಂದಿರಾಬಾಯಿ'' ಯ ವರೆಗೆ ಮುಂದುವರಿಯುತ್ತದೆ. ಈ ಕಾಲದಲ್ಲಿಯ ಹೆಚ್ಚಿನ ಕೃತಿಗಳು ಹಸಿಬಿಸಿ ಯಾಗಿದ್ದುದು ಸಹಜವೇ ಆಗಿದೆ. ಎಷ್ಟೆಂದರೂ ಅವು ಆರಂಭದ ಕೃತಿಗಳು. ಇನ್ನು ಸತ್ವಪೂರ್ಣ ಕೃತಿಗಳೆಂದು ಯಾದವನ ''ಕಲಾವತೀ ಪರಿಣಯ'', ಕೆಂಪುನಾರಾಯಣನ ''ಮುದ್ರಾಮಂಜೂಷ'', ತುರಮರಿಯವರ ''ಬಾಣ ಕಾದಂಬರಿ'' ಮತ್ತು ಗುಳವಾಡಿ ಯವರ ''ಇಂದಿರಾಬಾಯಿ''—ಇವನ್ನು ಗಣಿಸಬೇಕು. ಹಾಗೂ ಕನ್ನಡ ಕಾದಂಬರಿಯ ತೇರನ್ನು ಮುಂದೆಳೆದವರೆಂದು ಬಿ. ವೆಂಕಟಾಚಾರ್ಯರನ್ನೂ, ಗಳಗನಾಥರನ್ನೂ ಮನಸಾರೆ ವಂದಿಸಬೇಕು.

ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು

ಹೆಸರು	ಲೇಖಕ/ಅನುವಾದಕ	ವರ್ಷ	ಲಕ್ಷಣ
	(೧) ಅದ್ಭುತರಮ್ಯ/ಪೌರಾಣಿಕ		
ಕಲಾವತೀ ಪರಿಣಯು	ಯಾದವ	೧೮೧೫(ಸು)	ಆದ್ಯ; ಸ್ವತಂತ್ರ, ಆದರೆ ಹಳಗನ
ಸೌಗಂಧಿಕಾ ಪರಿಣಯು	ಮುಮ್ಮಡಿ ಕೃಷ್ಣರಾಜರು	೧೮೨೦	ಪ್ರಥಮ ಬೃಹತ್ ಕಾದಂಬರಿ
ಬಾಣ ಕಾದಂಬರಿ	ಬಾಣ/ತೂರಮರಿ	೧೮೭೫(ಸು)	ಹೊಸಗನ್ನಡ ಗದ್ಯಶೈಲಿಗೆ ನಾಂದಿ
ಪದ್ಮನಯನಾ	ಗಳಗನಾಥ	೧೮೯೮	ಸತ್ವಪೂರ್ಣ, ಸ್ವೋಪಜ್ಞಕೃತಿ
ಕನ್ನಡ ಶೌರ್ಯಸಾಗರ	ಆರಳಿ ಗೂಳೆಪ್ಪ	೧೮೯೯	—
	(೨) ಐತಿಹಾಸಿಕ		
ಮುದ್ರಾಮಂಜೂಷ	ಕೆಂಪುನಾರಾಯಣ	೧೮೨೩	ಆದ್ಯ ಕೃತಿ, ಬಹುಮಟ್ಟಿಗೆ ಸ್ವತಂ
ರಾಬಿನ್‌ಸನ್ ಕ್ರೂಸೊ	ಡಿಫೊ/ಕೃಷ್ಣಸ್ವಾಮಿಅಯ್ಯಂಗಾರ್	೧೮೫೪	ಇಂಗ್ಲಿಶ್ ಅನುವಾದದ ಮೊದಲ
ದುರ್ಗೇಶನಂದಿನಿ	ಬಂಕಿಮಚಂದ್ರ/ವೆಂಕಟಾಚಾರ್	೧೮೮೫	ಬಂಗಾಲಿಯಿಂದ ಬಂದ ಪ್ರಥಮ ಕ
ಸೂರ್ಯಕಾಂತ	ಲಕ್ಷ್ಮಣರಾವ್ ಗದಗಕರ	೧೮೯೨	ಪ್ರಥಮ, ಸ್ವತಂತ್ರ, ಐತಿಹಾಸಿಕ
ಕನ್ಯಾವಿತಂತು	ಎಚ್. ಟೇಲರ್/ಶ್ರೀಕಂಠೇಶಗೌಡ	೧೮೯೫	ಇಂಗ್ಲಿಶ್‌ನಿಂದ
ಸುಮತಿಮದನಕುಮಾರ ಚರಿತ್ರೆ	ಡೇ/ಪುಟ್ಟಣ್ಣ	೧೮೯೫	,,
ವಿವೇಕ ಚಂದ್ರಿಕೆ	ವೀರೇಶಲಿಂಗಂ/ಸೋಮನಾಥಯ್ಯ	೧೮೯೫	ತೆಲುಗಿನಿಂದ ಪ್ರಥಮಾನುವಾದ
ಶೃಂಗಾರಚಾತುರ್ಯೋಲ್ಲಾಸಿನೀ	ಗುಬ್ಬಿ ಮುರಿಗಾರಾಧ್ಯ	೧೮೯೬	ದ್ವಿತೀಯ ಸ್ವತಂತ್ರ ಕೃತಿ
	(೩) ಸಾಮಾಜಿಕ		
ಯಮುನಾ ಪರ್ಯಟನ	ಪದಮಂಜಿ/ಬಾಸೆಲ್ ಮಿಶನ್	೧೮೬೯	ಮರಾಠಿಯಿಂದ ಪ್ರಥಮಾನುವಾದ
ಕೇಸರೀವಿಲಾಸ	ರೆಂಟಾಳ ಸುಬ್ಬರಾವು	೧೮೯೫	ತೆಲುಗಿನಿಂದ (ಅಥವಾ ಸ್ವತಂತ್ರ)
ಚೋರಗ್ರಹಣ ತಂತ್ರ	ಎಂ. ವೆಂಕಟಕೃಷ್ಣಯ್ಯ	೧೮೯೭	ಪ್ರಥಮ ಪತ್ತೇದಾರಿ
ಇಂದಿರಾಬಾಯಿ	ಗುಳವಾಡಿ ವೆಂಕಟರಾಯ	೧೮೯೬	ಪ್ರಪ್ರಥಮ ಸ್ವತಂತ್ರ ಕಾದಂಬರಿ
ಸುಕುಮಾರಿ	ಮುಳಿಯಿಲ್/ಬಾಸೆಲ್ ಮಿಶನ್	೧೮೯೯	ಮಲೆಯಾಳಿಯಿಂದ ಪ್ರಥಮಾನುವಾ
ಸೀತೆ	ಜಿ. ರಾಘವೇಂದ್ರರಾಯ	೧೯೦೨	ದ್ವಿತೀಯ ಸ್ವತಂತ್ರ ಸಾಮಾಜಿಕ ಕೃ

ಅಕ್ಕನಾಗಮ್ಮನ ಜೋಗಿಗಳ ಪದ

ಜೆ. ಎಫ್. ಫ್ಲೀಟ್ ಕನ್ನಡದ ಆದ್ಯ ಜಾನಪದ ಸಂಗ್ರಹಕಾರರು. ಮುಂಬಯಿ ಕರ್ನಾಟಕದಲ್ಲಿ ಅವರು ಅಧಿಕಾರಿ ಇದ್ದಾಗ, ೧೮೭೨–೭೪ರ ಅವಧಿಯಲ್ಲಿ ಹಲವು ಲಾವಣಿ, ಹಾಡುಗಳನ್ನು ಸಂಗ್ರಹಿಸಿದರು. ಮತ್ತು ಅವುಗಳಲ್ಲಿ ಐದನ್ನು 'ಇಂಡಿಯನ್ ಎಂಟಿಕ್ವೆರಿ' ಎಂಬ ಅಖಿಲ ಭಾರತ ಮಟ್ಟದ ಪತ್ರಿಕೆಯಲ್ಲಿ ಪ್ರಕಟಿಸಿದರು(೧೮೮೫–೮೮). ಆಗ ಬರೆದ ಪೀಠಿಕೆಯಲ್ಲಿ ಇನ್ನು ಮೂರರ ಉಲ್ಲೇಖ ಮಾಡಿದ್ದರು. ೧೯೭೫ರಲ್ಲಿ ನಾನು ಇಂಗ್ಲೆಂಡಿನಲ್ಲಿದ್ದಾಗ, ಅವು ಮೂರು ಯಾವವು, ಎಲ್ಲಿರಬಹುದೆಂದು ಹುಡುಕುತ್ತಲಿದ್ದೆ. ಆಗ ನನಗೆ, ಅವರು ಸಂಗ್ರಹಿಸಿದ ಹಾಡುಗಳ ಸಮಗ್ರ ಹಸ್ತಪ್ರತಿಯೇ ದೊರಕಿತು— ಬ್ರಿಟಿಶ್ [ಮ್ಯೂಸಿಯಮ್] ಲೈಬ್ರರಿಯಲ್ಲಿ. ಅದರಲ್ಲಿದ್ದುದು ಏಳೆಂಟು ಮಾತ್ರವಲ್ಲ, ಒಟ್ಟಿಗೆ ೩೧ ಲಾವಣಿ/ಹಾಡುಗಳು! ಅವುಗಳಲ್ಲಿ ಈ ಅಕ್ಕನಾಗಮ್ಮನ ಜೋಗಿಗಳ ಪದವೂ ಒಂದು.

ಅವರ ಸಂಗ್ರಹ ಪದ್ಧತಿಯ ವೈಶಿಷ್ಟ್ಯವೆಂದರೆ, ಕನ್ನಡ ಶಾಲಾಮಾಸ್ತರರಿಗೆ, ಹಾಡುಗಳನ್ನು ಕೇಳಿಸಿಕೊಂಡು ಪ್ರತಿಮಾಡಿ ಕಳಿಸಲು ಪರಿಪತ್ರವನ್ನೇ ಹೊರಡಿಸಿದ್ದುದು. ಆಮೇಲೆ ಅವರ ಆಫೀಸಿನಲ್ಲಿಯವನೇ ಒಬ್ಬ ಅದನ್ನು ಇಂಗ್ಲಿಶ್‌ನಲ್ಲಿ ಅನುವಾದಿಸಲು ನೆರವಾಗುತ್ತಿದ್ದನು. ಫ್ಲೀಟರು ಕನ್ನಡ ಮೂಲವನ್ನು ಸ್ವಯಂ ತಿದ್ದುವುದಲ್ಲದೆ, ತಿಳಿದುಬಂದಷ್ಟು ಟಿಪ್ಪಣಿಗಳನ್ನೂ ಬರೆದಿಟ್ಟುಕೊಳ್ಳುತ್ತಿದ್ದರು. ಇವೆಲ್ಲ ಸೇರಿ ಮೇಲ್ತೆಣಿಸಿದ ಹಸ್ತಪ್ರತಿ ರೂಪುಗೊಂಡಿತು. ಈ ಹಸ್ತಪ್ರತಿಯಲ್ಲಿ ಅಕ್ಕನಾಗಮ್ಮನ ಜೋಗಿಗಳ ಪದದ, ಒಂದಲ್ಲ ನಾಲ್ಕು ಪ್ರತಿಗಳಿವೆ—ಬೇರೆಬೇರೆಯವರು ಮಾಡಿದ್ದು. ಉಳಿದ ಅನೇಕ ಹಾಡುಗಳದ್ದು ಒಂದೊಂದೇ ಪ್ರತಿ. ಎಂದರೆ ಈ ಹಾಡು ವ್ಯಾಪಕವಾಗಿ ಜನಬಳಕೆಯಲ್ಲಿದ್ದಿತೆಂದು ಹೇಳಬೇಕು. ಮುಂದೆ, ಇದೇ ಹಾಡು, ೧೮೮೦ನೆಯ ದಶಕದಲ್ಲಿ ಪ್ರಕಟವಾದ, ಮುಂಬಯಿ ಸರಕಾರದ ಕನ್ನಡ ಕವಿತೆಯ ಪಠ್ಯಪುಸ್ತಕದಲ್ಲಿಯೂ ಸೇರ್ಪಡೆಯಾಗಿದ್ದಿತು. ಅಷ್ಟೇ ಅಲ್ಲ, ಲಕ್ಷ್ಮೀಶ, ಷಡಕ್ಷರಿ ಮುಂತಾದ ಮಾರ್ಗಕವಿಗಳ ಪದ್ಯಭಾಗಗಳಿಗೆ ಸಮಾನವಾಗಿ ಅದರಲ್ಲಿ ಸೇರ್ಪಡೆಯಾಗಿದೆ (ಜೊತೆಗೆ ಇನ್ನೂ ಎರಡು ಜೋಗಿಗಳ ಪದಗಳಿವೆ). ಆಗಿನ ಕಾಲದ ಕೆಲವಾದರೂ ವಿದ್ಯಾವಂತರಿಗೆ ಜಾನಪದ ಹಾಡುಗಳ ಸೌಂದರ್ಯ ಗೋಚರವಾಗಿದ್ದಿತೆನ್ನುವ, ಆ ಮೂಲಕ ಸಾವಿರಾರು ಮಕ್ಕಳು ಅದನ್ನು ಓದುವಂತಾಯ್ತು. ಜಾನಪದ ಸಾಹಿತ್ಯದ, ಅದರಲ್ಲಿಯೂ ಈ

ಹಾಡಿನ ಮಹತ್ವವನ್ನು ಫ್ಲೀಟರಂತೆಯೇ ಕಂಡುಕೊಂಡವರು ಇನ್ನಾರೂ ಅಲ್ಲ—ನಮ್ಮ ಗಂಗಾಧರ ಮಡಿವಾಳೇಶ್ವರ ತೂರಮರಿಯವರು !

ಮುಂದೆ ೧೯೨೦ರಲ್ಲಿ ಹುಬ್ಬಳ್ಳಿಯ ವಾಗ್ವಿಲಾಸ ಬುಕ್ ಡಿಪೋದ ಎ. ಆರ್. ಶಿವನಾಗಪ್ಪನವರು ಪ್ರಕಟಿಸಿದ 'ಶಿಂಧು ಬಲ್ಲಾಳನ ಜೋಗಳ ಪದ' ಸಂಗ್ರಹದಲ್ಲಿಯೂ ಈ ಹಾಡು ಕಾಣಿಸಿಕೊಂಡಿದೆ. ಹೀಗೆ ಇದರ ಜನಪ್ರಿಯತೆ ಪ್ರಸಕ್ತ ಶತಮಾನದಲ್ಲಿಯೂ ಮುಂದುವರಿದಿತ್ತೆನ್ನಬೇಕಾಗುವುದು. ವಿಚಿತ್ರದ ಸಂಗತಿಯೆಂದರೆ ಜಾನಪದ ವಾಙ್ಮಯದ ಪುನರುತ್ಥಾನದ ಈಚೆಗಿನ ಅವಧಿಯಲ್ಲಿ ಹೊರಬಂದ ಯಾವದೇ ಸಂಗ್ರಹಗಳಲ್ಲಿ ಈ ಹಾಡು ಪ್ರಕಟವಾದಂತೆ ತೋರುವುದಿಲ್ಲ. ಆದರೆ ಹಳ್ಳಿಗರ ಬಾಯಿಯಲ್ಲಿ ಇಂದಿಗೂ ಇದು ನಲಿದಾಡುತ್ತಿದೆಯಾಗಿ ಶ್ರೀಮತಿ ಶಾಂತರಸರು (ರಾಯಚೂರು) ಹಾಗೂ ಇನ್ನು ಒಬ್ಬಿಬ್ಬರು ಸ್ಥಿರೀಕರಿಸಿದ್ದಾರೆ. ಈ ಹಾಡು ಹೀಗೆ ವಿಶೇಷ ಜನಪ್ರಿಯವಿದ್ದುದರ ಕಾರಣಗಳೆಂದರೆ—ಜನಕ್ಕೆ ಚೆನ್ನಾಗಿ ಗೊತ್ತಿದ್ದ ಬಸವಣ್ಣ, ಅಕ್ಕನಾಗಮ್ಮ, ಚೆನ್ನಬಸವಣ್ಣ, ಇವರುಗಳ ಕಥೆಯನ್ನು ಅದು ಒಳಗೊಂಡಿದ್ದು. ಎರಡನೆಯ, ಆದರೆ ಮುಖ್ಯ ಕಾರಣವೆಂದರೆ, ಮಕ್ಕಳಿಲ್ಲದವರು ಇದನ್ನು ಹಾಡಿದರೆ ಮಕ್ಕಳಾಗುವವು, ಮತ್ತು ಮಗುವಿಗೆ ಅದರಿಂದ ಕಲ್ಯಾಣವಾದೀತು—ಎಂಬ ಶ್ರದ್ಧಾಭಾವನೆ.

ಈ ಜೋಗಳಪದದ ವಿಷಯ—ಬಸವಣ್ಣನ ಅಕ್ಕನಾದ ನಾಗಮ್ಮನು ಚೆನ್ನಬಸವಣ್ಣನಿಗೆ ಜನ್ಮವಿತ್ತದ್ದು. ಶರಣ ಕಕ್ಕೈಯ್ಯನವರ ಪ್ರಸಾದವನ್ನು ಸೇವಿಸಿ, ನಾಗಮ್ಮ ಗರ್ಭವತಿಯಾದಾಗ ಬಿಜ್ಜಳನು ಮಂಚಣ್ಣ ಎಂಬವನ ಚಾಡಿಯ ಮಾತುಗಳನ್ನು ಕೇಳಿ ಅವಳ ಭರ್ತ್ಸನೆ ಮಾಡುತ್ತಾನೆ. ಆಗ ಬಸವಣ್ಣ ಬಿಜ್ಜಳನಿಗೆ ಛೀಮಾರಿ ಹಾಕುವನು. ಮುಂದೆ, ಜನ್ಮತಾಳಿದ ಮಗುವಿಗೆ ಚೆನ್ನಬಸವ ಎಂಬ ನಾಮಕರಣ ಮಾಡಿ, ಹಲವು ಶಿವಶರಣೆಯರು ಜೋಗಳ ಹಾಡಿ ಹೋಗುವರು.

ಈಗ ಕವಿತೆಯ ಪಠ್ಯಭಾಗವನ್ನು ಪರಿಶೀಲಿಸೋಣ. ಫ್ಲೀಟರಿಗೆ ಬಂದ ನಾಲ್ಕು ಹಸ್ತಪ್ರತಿಗಳಲ್ಲಿ ಅಕ್ಷರಿಕೆಯ ಹೆಚ್ಚು ಕಡಿಮೆಗಳು ಮಾತ್ರ ಕಂಡುಬರುತ್ತವೆ. ತೂರಮರಿಯವರು ಪ್ರಕಟಿಸಿದ ಪಠ್ಯದಲ್ಲಿ (ಮಧ್ಯೆ ೧೫ ವರ್ಷಗಳ ಅಂತರ ಇದೆ.) ಕೆಲವು ಶಬ್ದಗಳು, ಸಾಲುಗಳು ಮಾರ್ಪಾಟುಗೊಂಡಿವೆ. ಅದೇ, ಮೂರು ದಶಕಗಳ ಅಂತರದಲ್ಲಿ ಪ್ರಕಟವಾದ ಹುಬ್ಬಳ್ಳಿ ಆವೃತ್ತಿಯಲ್ಲಿ ಸಾಕಷ್ಟು ಹೆಚ್ಚು ಕಡಿಮೆಗಳಿವೆ. ಹೊಸ ಪದ್ಯಗಳೂ ಸೃಷ್ಟಿಯಾಗಿವೆ. (ಒಂದು ಪದ್ಯ ಲುಪ್ತವೂ ಆಗಿದೆ !) ಜಾನಪದ ಸಂಪಾದನಕಾರರಿಗೆ ಇದೊಂದು ಸಮಸ್ಯಾ ಮಾದರಿಯಾಗಬಹುದು. ಪ್ರಕೃತದಲ್ಲಿ, ಫ್ಲೀಟರ ಪ್ರತಿಯನ್ನು ಮುಖ್ಯವಾಗಿಟ್ಟು, ಈ ಹಾಡನ್ನು ಕೆಳಗೆ ಕೊಟ್ಟಿದೆ. ಜೊತೆಗೆ ತೂರಮರಿಯವರ ಪ್ರಕಟನೆಯಲ್ಲಿ ಕಂಡುಬಂದ ಪಾಠಾಂತರಗಳನ್ನು ಚೌಕು ಕಂಸಿನಲ್ಲಿ [ ] ಕಾಣಿಸಿದೆ, ಅದರಂತೆ ಹುಬ್ಬಳ್ಳಿ ಆವೃತ್ತಿಯಲ್ಲಿ ಬಂದ ಹೆಚ್ಚಿನ ಹಾಡುಗಳನ್ನು ದುಂಡು ಕಂಸಿನಲ್ಲಿ ( ) ತೋರಿಸಿದೆ. ಹೀಗಿದೆ ಪದ್ಯ :

ಜೋಯೆನ್ನಿರಿ ಶರಣಸತಿಯರು ಕೂಡಿ
ಜೋಯೆಂದು ಪಾಡಿರಿ ನಲಿನಲಿದಾಡಿ
ತಾಯಿ ನಾಗವ್ವನ ಮಗನ ಮುದ್ದಾಡಿ
ಜೋಯೆಂದು ಚಂನಬಸವನ ಕೊಂಡಾಡಿ । ಜೋ ॥ ಪ ॥

ಶರಣ ಕಕ್ಕೈನವರ ವರಪ್ರಸಾದವನು
ಯರಡಾರು ವರ್ಷವ ಕಾಯ್ದುಕೊಂಡಿಹನು
ದೊರಕಲು ಮನದಲಿ ಹರುಷ ತಾಳಿಹನು
ಭರದಿಂದ ಕೈಕೊಂಡ ಬಂದ ಬಸವನು । ಜೋ ॥ ೧ ॥

ಮಿಕ್ಕ ಪ್ರಸಾದವ ಬಸಂವಣ ತಂದು
ಅಕ್ಕ ನಾಗವ್ವಗೆ ಕೊಟ್ಟರು ಬಂದು
ವುಕ್ಕುತನಾಗಾಯಿ ಶಿವಶಿವಯೆಂದು
ಮುಕ್ಕಂಣ ಗತಿಯೆಂದು ಸಲಿಸಿದಳಂದು । ಜೋ ॥ ೨ ॥

ಪ್ರಸಾದ ಸಲಿಸಲು ಅಕ್ಕ ನಾಗುವಿಗೆ
ಸೂಸಲು ವಡಲೊಳು ನಿಂತಿತು ಬ್ಯಾಗ
ಆಸರಿಕಿ ಬ್ಯಾಸರಿಕಿ ಮನದೊಳಗೀಗ
ಮಾಸಮಾಸಕೆ ದೇಹ ಪಲ್ಲಟವಾಗ । ಜೋ ॥ ೩ ॥

ವೊಂದು ಮಾಸಕೆ ಬಾಯಿ ಹೇಸಿಕಿ ದೋರಿ
ವೊಂದು ಮತ್ತೊಂದಕ ಮಾರಿ ಬಿಳಪೇರಿ
ಮೂರು ಮತ್ತೊಂದಕ ಕಣ್ಣೊಳಸೇರಿ
[....ಮೂರಕೆ ಯದಿ ಹಸರೇರಿ]
ನಾಲ್ಕು ಮತ್ತೊಂದಕ ಯದಿ ಹಸರೇರಿ । ಜೋ ॥ ೪ ॥
[....ಬು ನಾಲ್ಕಕೆ ಕಂಣೊಳ ಸೇರಿ]

ಬಿಡದೈದು ಆರೇಳು ಮಾಸವೆಂಟಾಗೆ
ತೊಡೆ ತೋಳು ತುಂಬುತ ಕುಚ ಕರ್ರಗಾಗೆ
ವೊಡೆದೆದ್ದು ನಾಭಿಯು ನಡೆ ಮಂದವಾಗೆ
ಮಡದಿ ನಾಗವ್ವನ ನಡ ದೊಡ್ಡದಾಗೆ । ಜೋ ॥ ೫ ॥

ಕಂಡು ಕೊಂಡಿಯು ಮಂಚದೇವನು ಬಂದು
[ಕಂಡುಕೊಂಡೀ....]
ಮಂಡಲಪತಿಯಲ್ಲಿ ಉಸುರಿದನಂದು
[ವುಸುರಬೇಕೆಂದು]
ದಂಡನಾಯಕನ ಖ್ಯಾತಿ ಆಗಲಿಯಿಂದು
ಪಂಡಿತರ ಸಭೆಯೊಳು ಕರಿಸೆಂದು ಬಂದು । ಜೋ ॥ ೬ ॥
[ಕರಿಸಬೇಕೆಂದು]

ಬಸವಂಣ ದೊಡ್ಡಾತ ಯಲ್ಲ ಲೋಕದೊಳು
ಬಸುರಾದಳವರಕ್ಕ ಗಂಡನಿಲ್ಲದಲು
ಯಸವ ಬೂದಿ ತಂತ್ರಾದಿ ಶಾಸ್ತ್ರಗಳು
ವಸುಧೀಶ ಕೇಳಯ್ಯ ಕರಿಸಿ ಬ್ಯಾಗದಲು । ಜೋ ॥ ೭ ॥

ಗಂಡನಿಲ್ಲದ ಬಾಲಿ ಬಸುರಾದಳಲ್ಲಾ
ಪಿಂಡ ಶಿಸುವು ತಾನು ಮಾತಾಡುದಲ್ಲಾ
ಮಿಂಡ ಜಂಗಮರು ಮಠದೊಳು ಸೊಲ್ಲಾ
ಭಂಡಾಟ ಆಗುದು ಶಿವ ತಾನೆ ಬಲ್ಲಾ । ಜೋ ॥ ೮ ॥

ಗುಡಿಗುಡಿಸುತ ರಾಯ ಬಲು ಕೋಪದಿಂದ
ಕಡು ಬ್ಯಾಗ ಬಸವಂಣ ಹೇಳು ಹೇಳೆಂದ
ನುಡಿದಾನು ಬಸವಣ್ಣ ಅರಸಿನೊಳಂದು
[ನುಡಿದನು ಮಾತಿನೊಳರಸಿನೊಳಂದು]
ಪೊಡವೀಯೊಳೀ ಮಾತು ಶಿವ ಬಲ್ಲನೆಂದು । ಜೋ ॥ ೯ ॥

ನವಮಾಸ ತುಂಬಲು ಬಿಜ್ಜಳರಾಯಾ
ತವಕಾದಿ ಕರಸಿದ ಅಕ್ಕ ನಾಗಾಯಾ
ಹವಣಿಸಿ ನುಡಿದನು ಯಿದಕೇನುಪಾಯಾ
ಸವರಿಸಿ ಮೊಲಿಮೂಗ ಹೊಡಿಸುವೆ ಬಾಯಾ । ಜೋ ॥ ೧೦ ॥
[ಸವರಿಸು ಮೊಲಿಮೂಗ ಹೊಡಿಸುವೆ ಬಾಯ್‌ಬಾಯ]

(ವಡಿಯಾ ಬಿಜ್ಜಳರಾಯನ ಸದರೀಗೆ ಬಂದೂ
ಅಕ್ಕನಾಗಾಯಿಯು ಮೂರ್ತ ಮಾಡಿದಳಂದೂ

ವಡಿಯಾ ಬಿಜ್ಜಳರಾಯಾ ಕೇಳಿದನಂದೂ । ನಿನ್ನ
ಗರ್ಭದ ವಿವರವ ಪೇಳೆನ್ನ ಮುಂದೂ । ಜೋ ॥ ೧೦ ಅ ॥)*

ಕನ್ಯೆ ನಾಗಾಯಿ ತನ್ನ ಮನಶೀಗೆ ತಂದೂ
ಲಿಂಗಯ್ಯ ಗತಿಯೆಂದು ಸ್ತುತಿಶಿದಳಂದೂ
ಸಂಗನ ಬೆಸನಯ್ಯ ಬೆಸನಾಗೋ ಬಂದೂ । ನಮ್ಮ
ಕಂದ ಚನ್ನಯ್ಯನು ಮಾತಾಡ್ಯಾನಂದೂ । ಜೋ ॥ ೧೦ ಆ ॥)*

ಮಾನ್ಯ ಬಿಜ್ಜಳರಾಯಾ ಬಿಡು ನಿನ್ನ ಶಿಟ್ಟಾ
ಕನ್ನೆಯ ಬೈಲಿಗೆ ತರುಬ್ಯಾಡಾ ಭ್ರಷ್ಟಾ
ಮನ್ನಿಶಿ ಕಳುಹಯ್ಯ ಕೆಟ್ಟಿತು ನಿನ ಪಟ್ಟಾ
ಬೆನ್ನಿಲಿ ಹುಟ್ಟುದು ನೋಡಿನ್ನ ದೃಷ್ಟಾ । ಜೋ ॥ ೧೧ ॥
(ನಾನು ಬೆನ್ನೀಲೆ ಹುಟ್ಟುವೆ ನೋಡಿನ್ನು ದುಷ್ಟಾ)⊙

ಆಗ ಕೈಮುಗಿದಾನು ನಾಗಲಾಂಬಿಕೆಗೆ
ಬ್ಯಾಗನೆ ಉಡುಗೋರಿ ಕೊಳ್ಳವ್ವ ಶರಣಿ
ಬೇಗದಿ ನಡೆಯವ್ವ ಮೊದಲಿದ್ದ ಬಳಿಗೆ
ಸಾಗಿ ಬಂದಳಾಗ ತನ್ನರಮನಿಗೆ । ಜೋ ॥ ೧೨ ॥

ದಿನ ತುಂಬಿ ಹೊತ್ತು ಹೊತ್ತಿಗೆ ಬ್ಯಾನೆ ಬರುತಾ
ಮನೆಯ ಹೆಂಗಳೆಯರು ನಡುಕೆ ಕೈವಿಡುತಾ
ಘನವಾದ ತುರುಬನು ಬಾಯೊಳಗಿಡುತಾ
ಮನೆಯಂನ್ನ ವನುತೇರು† ಚಿಂತಿಸಿ ಬಾಯ್ಬಿಡುತಾ । ಜೋ ॥೧೩॥

---

* ಹುಬ್ಬಳ್ಳಿ ಆವೃತ್ತಿಯ ಈ ಪದ್ಯಗಳಲ್ಲಿ ಮೂರನೆಯ ಸಾಲಿನ ಕೊನೆಗೆ ಮೂರು ಮಾತ್ರೆಯ ಒಂದು ಶಬ್ದ–'ನಮ್ಮ' 'ನಿನ್ನ' ಇತ್ಯಾದಿ ತಪ್ಪದೇ ಬರುತ್ತದೆ. ಇದು ಹಾಡುವವರ ಅನುಕೂಲಕ್ಕಾಗಿ ಎಂಬುದು ಸ್ಪಷ್ಟ.

⊙ ಬಿಜ್ಜಳನನ್ನು ಬೈದದ್ದು ಬಸವಣ್ಣನೊ, ಗರ್ಭಸ್ಥ ಶಿಶುವೊ? ಒಂದು ದೃಷ್ಟಿಯಲ್ಲಿ ಮಂಚಣ್ಣ 'ಪಿಂಡ ಶಿಸುವು ತಾನು ಮಾತಾಡುದಲ್ಲಾ' ಎಂದು ಚಾಡಿ ಹೇಳಿದ್ದನ್ನು ಗಮನಿಸಿದಾಗ, ಗರ್ಭಸ್ಥ ಶಿಶುವೇ ಹಾಗೇ ನುಡಿದಿರುವುದು ಸಮಂಜಸವೆನಿಸೀತು.

† ಮನೆಯೊಳಗಿನ ವನಿತೆಯರು.

ಆಲಸ್ಯವ್ಯಾಕೆಂದು ಬಾಲೇರು ನುಡಿಯೆ
ಬಾಲ ಶ್ರೀಚೆಂನನ ಬೆಂನಿಲೆ ಪಡಿಯೆ
ಬಾಲೆಯು ಕಂಣಿಗೆ ತಂಣೀರ ಬಡಿಯೆ
ಸೂಲಗಿತಿ ನೀನು ಹೊರೆಯುಕ ನಡಿಯೆ । ಜೋ ॥ ೧೪ ॥

ಅಕ್ಕಯ್ಯ ಹಿಡಿ ಮರ ಕುಡಗೋಲು ತಂನೆ
ಹೊಂಕಳ ಹುರಿಯುನು ಕೊಯ್ವನು ಬಂನೆ
ಬಕ್ಕನೆ ಬೇವಿನ ಸೊಪ್ಪುವ ತಂನೆ
ಚಿಕ್ಕ ಕಂದನ ಮೈಯ್ಯ ತೊಳೆವ್ವನು ಬಂನೆ । ಜೋ ॥ ೧೫ ॥

ನಾರಿಗೆ ಸಂಪಿಗಿ ಯಂಣೆಯು ಪೂಸಿ
ನೀರನೆರೆದು ಪಟ್ಟೆ ಮಂಚವ ಹಾಸಿ
ವಾರಿಗಿ ಗೆಳತೇರು ಬೆಂಕಿಯು ಕಾಸಿ
ಧೀರ ಕಂದಯ್ಯನ ಮಗ್ಗಲಗೊಳಿಸಿ । ಜೋ ॥ ೧೬ ॥

(ಹಿಂದಾದಿ ಕೂಡಲ ಸಂಗಮಾ ಬಂದು
ಮಂಗಳಾತ್ಮಗ ಲಿಂಗ ಧರಿಶಿದರಂದೂ
ಅಂಗದಿ ಭಸ್ಮ ರುದ್ರಾಕ್ಷಿಯು ತಂದೂ । ನಮ್ಮ
ಕೂಡಲ ಸಂಗಮಾ ತ್ವರದಿ ತಾ ಬಂದೂ ॥ ೧೬ ಅ ॥)

(ಪಶುಪತಿ ಶಿಸುವಿಗೆ ಹಸ್ತಾವನಿಟ್ಟು
ಮುದ್ದನಾಡಿ ಆಗ ಚುಂಬನವ ಕೊಟ್ಟು
ಸತ್ಯವಾನಡಿಸೆಂದು ವರವನು ಕೊಟ್ಟು । ನಮ್ಮ
ಶಿವ ತಾನು ನಡಿದಾನು ಕಲ್ಯಾಣ ಬಿಟ್ಟು ॥ ೧೬ ಆ ॥)

ಹಿಪ್ಪಲಿ ಕೊಬ್ಬರಿ ಲಾವಂಗ ವೋಡಿ
ವಪ್ಪುವ ಬಜಿಗಳ ಹುವ್ವಕಾಯಿ ಕೂಡಿ
ತಪ್ಪದೆ ಪತ್ರಿಯು ಕಾಯ್ ಹದ ಮಾಡಿ
ತುಪ್ಪದೊಳಗೆ ಕಾರ ಕೊಳ್ಳೆಂದು ನೀಡಿ । ಜೋ ॥ ೧೭ ॥

ಚಿಕ್ಕ ಚೆಂನಬಸವ ಹುಟ್ಟಿದನೆಂದು
ಲೆಖ್ಖವಿಲ್ಲದ ಕಾಳಿ ಸಾರಿದವಂದು
ಅಕ್ಕರ ದಿನದಲ್ಲೆ ಶರಣೇರು ಬಂದು
ಹೊಕ್ಕರು ಬಸವಂಣನರಮನಿಗೆ ಅಂದು । ಜೋ ॥ ೧೮ ॥

ಸತ್ತೆಕ್ಕ ಚಂಗುಳಿ ಕದಿರಿ ರೆಬ್ಬವ್ವಾ
ಉತ್ತುಮ ಶಿವದೇವಿ ವೀರಸಂಗವ್ವಾ
ಸತ್ತ ಗಂಡನ ಪ್ರಾಣ ಪಡೆದ ಚಂನವ್ವಾ
ಮುತ್ತೈದೆ ಶರಣೇರು ಬಂದರು ಬಾಗಿಣಕೆ । ಜೋ ॥ ೧೯ ॥

ಕೋಳೂರು ಕೊಡಗೂಸು ದೋಸಿ ಪಿಡ್ಡವ್ವಾ
ಸೂಳಿ ಬೊಂತಲದೇವಿ ಬಾಲೆ ನಿಂಬೆವ್ವಾ
[ನೂಳಿ ಬೊಂತಲದೇವಿ ಬಾಲೆ ನೆಂಬೆವ್ವಾ]
ಚೊಳಕ್ಕ ಮಲುಹಣಿ ಮಾಯಿದೇವೆವ್ವಾ
ಮೇಲಾದ ಶರಣೇರು ಬಂದರು ಬಾಗಿನಕೆ । ಜೋ ॥ ೨೦ ॥

(ಬಿಜ್ಜಳನ ಸತಿಯರು ಬಂದರ್ಬಾಗಿಣಕ
ಹೆಜ್ಜವಿಲ್ಲದ ಮುತ್ತು ತಂದರಾಕ್ಷಣಕ
ಬಿಜ್ಜಳ ಮಹಾದೇವಿ ಯದ್ದು ಮೇಲಕ । ಬೆಳ್ಳಿ
ಗೆಜ್ಜಿಯನ್ಹಾಕಿದಳು ಶಿವನ ಪಾದಕ್ಕ ॥ ೨೦ ಅ ॥)

ಕಣ್ಗೆ ಕಾಡಿಗಿ ಹಚ್ಚಿ ಬಹು ಚಂದವಾಗಿ
ಬಣ್ಣದ ತೊಟ್ಟಿಲ ಕಟ್ಯಾರು ಬೇಗ
ಚಿಣ್ಣನ ಮಲಗಿಸಿ ಜೋಯೆಂದು ತೂಗಿ
ಚೆಂನ ಬಸವನೆಂದು ಹೆಸರಿಟ್ಟು ಕೂಗಿ । ಜೋ ॥ ೨೧ ॥

ಹೆಸರಿಟ್ಟ ಶರಣೇರು ತೆರಳಿದರಂದು
ಬಸವ್ವ ನೀಲವ್ವನ ಮನೆಯೊಳಗಂದು
ಬಸವನ ಸಲಹುದು ನಾಗವ್ವಗಂದು
ಶಿಸುವೆ ಗತಿಯೆಂದು ಇರುತಿರ್ದಳಂದು । ಜೋ ॥ ೨೨ ॥

ಗುರು ಚಂನಬಸವವನ ಜೋಗಳ ಪದವ
ಹರುಷದಿ ಕೇಳಿದವರಿಗೆ ವರವ
ಕರುಣದಿ ಕೊಡುವನು ಮಕ್ಕಳ ಫಲವ
ತುರುಬಿಯ ಗುಡ್ಡದ ಶಿವಲಿಂಗ ವರವ । ಜೋ ॥ ೨೩ ॥

ಈಗ ಈ ಹಾಡಿನಲ್ಲಿ ಬರುವ ವ್ಯಕ್ತಿ ಮತ್ತು ಘಟನೆಗಳನ್ನು ಪರಿಶೀಲಿಸೋಣ. ಮುಖ್ಯ ವ್ಯಕ್ತಿಯಾದ ಅಕ್ಕನಾಗಮ್ಮ ಬಸವಣ್ಣನಿಗೆ, ಅವನ ಬಾಲ್ಯದಲ್ಲಿ ಮಾತೃ ಸ್ವರೂಪಿಣಿಯಾಗಿದ್ದು, ಅವನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ

ವಹಿಸಿದವಳು. ಮುಂದೆ ಮಾತ್ರ ಬಸವಣ್ಣ ಅವಳಿಗೆ ಗುರುಸ್ವರೂಪನಾಗುವನು. ಅಕ್ಕನಾಗಮ್ಮ ಅವನ ಧಾರ್ಮಿಕ ಯುದ್ಧದಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದಳು. ಹಾಗಿದ್ದರೂ ಆಕೆ ಯೋಗಿನಿ; ಹಿರಿಯ ಶಿವಶರಣೆ. ಅವಳು ರಚಿಸಿದ ವಚನಗಳು ಕೆಲವಿವೆ (೧೨-೧೩). ಅವುಗಳಲ್ಲಿ ಅರ್ಧದಷ್ಟು ಬಸವಣ್ಣನನ್ನು ಹಾಡಿ ಹೊಗಳು ವಂತಹವು. ಅವನು ಶಿವೈಕ್ಯನಾದ ಮೇಲೆ ಅಕ್ಕನಾಗಮ್ಮ ರಚಿಸಿದ ಒಂದೆರಡು ಚರಮಗೀತೆಗಳೂ ಇವೆ.*

ಚನ್ನಬಸವಣ್ಣ ಜನಿಸಿದ್ದು, ಅಕ್ಕನಾಗಮ್ಮ ಸೇವಿಸಿದ ಪ್ರಸಾದಮಹಿಮೆ ಯಿಂದಾಗಿ. ಇದರಲ್ಲಿ ಅವಳ ಗಂಡನ ಪ್ರಸ್ತಾಪವಿಲ್ಲ. ಅವನ ಈ ರೀತಿಯ ಜನನದ ವಿಷಯ ಹದಿಮೂರನೆಯ ಶತಮಾನದಿಂದಲೇ ಪ್ರಚಲಿತವಿದೆ. ಅನೇಕ ಕನ್ನಡ ಕಾವ್ಯ ಗಳು (ಚೆನ್ನಬಸವ ಪುರಾಣವನ್ನೂ ಒಳಗೊಂಡು) ಇದನ್ನೇ ಹೇಳುತ್ತವೆ. ಅವನು ಜನಿಸಿದ 300 ವರ್ಷಗಳ ಅನಂತರದ ಸಿಂಗಿರಾಜ ಪುರಾಣ ಒಂದರಲ್ಲಿ ಮಾತ್ರ, ಅವಳ ಗಂಡ ಶಿವಸ್ವಾಮಿ ಎಂದು ಬರುತ್ತದೆ. ಈ ಶಿವಸ್ವಾಮಿಯ ಪ್ರಸ್ತಾಪ ಮತ್ತೆಲ್ಲಿಯೂ ಇಲ್ಲ. ಮಹಾವ್ಯಕ್ತಿಗಳಿಗೆ ಅಯೋನಿಜತ್ವವನ್ನು ಲೇಪಿಸುವುದರಲ್ಲಿ ಹೊಸತೇನೂ ಇಲ್ಲ. ಉದಾ.ಗೆ ಸೀತೆ, ಯೇಸು, ಶಂಕರಾಚಾರ್ಯರು ಇತ್ಯಾದಿ. ಆದರೆ ಬೇರಾವುದೇ ಶಿವಶರಣ ಅಥವಾ ವೀರಶೈವ ಮಹಾನುಭಾವರ ವಿಷಯದಲ್ಲಿ ಅಯೋನಿಜತ್ವ ಇಲ್ಲ. 'ಕರ್ಣದಿಂ ಜನಿಸಿದವರುಂಟೇ ?' ಎಂಬುದಾಗಿ ಬಸವಣ್ಣನೇ ಬೇರೊಂದು ಸಂದರ್ಭದಲ್ಲಿ ಇಂಥ ಪ್ರಮೇಯವನ್ನು ಅಲ್ಲಗಳೆದಿದ್ದಾನೆ. ಇಂದಿನ ವೈಜ್ಞಾನಿಕ ವಿಚಾರಧಾರೆಯ

---

* ಒಂದನ್ನು ಇಲ್ಲಿ ಕೊಟ್ಟಿದೆ :

ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಡೆ
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಲ್ಲಾ
ಅಯ್ಯಾ, ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರು!
ಅಣ್ಣಾ, ಶಶಿಧರನಟ್ಟಿದ ಪಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದಡೆ
ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ
ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯಾ
ನಿಮ್ಮೊಡನೆ ಅಸಂಖ್ಯಾತ ಮಹಾಗಣಂಗಳು ಹೋದರಣ್ಣಾ
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತಲ್ಲಾ ಬಸವಣ್ಣಾ
ಎನ್ನನೊಯ್ಯದೆ ಹೋದೆಯಲ್ಲಾ ಪಂಚಪುರುಷ ಮೂರ್ತಿ ಬಸವಣ್ಣಾ !
'ಬಸವಣ್ಣಪ್ರಿಯ ಚನ್ನ ಸಂಗಯ್ಯ'ಂಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ ! ॥

ಮುಂದೂ ಇದು ನಿಲ್ಲುವುದಿಲ್ಲ; ಅಥವಾ ಆವಳ ಪತಿ ಅಥವಾ ಚನ್ನಬಸವಣ್ಣನ ಜನಕ ಯಾರೇ ಇರಲಿ, 'ಗಂಡನಿಲ್ಲದ ಬಾಲೆ ಬಸುರಾದಳಲ್ಲಿ' 'ಬಸುರಾದಳವರಕ್ಕ ಗಂಡನಿಲ್ಲದಲೆ' ಎಂದು ಸ್ಪಷ್ಟವಾಗಿ ಈ ಜಾನಪದ ಪದ್ಯದಲ್ಲಿ ಉಕ್ತವಾಗಿರುವುದರಿಂದ, ನಮ್ಮ ಜನ ಇದಕ್ಕೆ ಯಾವ ಅಪಾರ್ಥವನ್ನೂ ಕಲ್ಪಿಸದೇ ತಲತಲಾಂತರಗಳಿಂದ ಇದನ್ನು ಒಪ್ಪಿ ಕೊಂಡಿದೆ; ಗೌರವದಿಂದಲೇ ಕಂಡಿದೆ—ಎಂಬುದನ್ನು ನೆನೆದಿರಬೇಕು.

ಇಲ್ಲಿ ಬಂದಿರುವ ಕಕ್ಕಯ್ಯ ಡೋಹರ ಕಕ್ಕಯ್ಯನವರೇ. ಬಸವಪೂರ್ವ ಪ್ರಮಥ ರಲ್ಲಿ ಹಿರಿಯರು. 'ಬೊಪ್ಪನು ನಮ್ಮ ಡೋಹರ ಕಕ್ಕಯ್ಯ' ಎಂದು ಮುಂತಾಗಿ ಬಸವಣ್ಣ ಅವರನ್ನು ಪೂಜ್ಯ ಭಾವದಿಂದ ನೆನೆದಿದ್ದಾನೆ. ಅವರ ಪ್ರಸಾದವನ್ನು ಅವನು ಹಲವಾರು ವರ್ಷ ಕಾಯ್ದಿರಿಸಿದ್ದರ ಅಂಶವು ಐತಿಹಾಸಿಕ ಸತ್ಯವೆಂಬಂತೆ ಕನ್ನಡ ಕಾವ್ಯಗಳಲ್ಲಿ ಬಂದಿದೆ. ಪ್ರಸಾದವನ್ನು ಹಾಗೆ ಕಾಯ್ದಿರಿಸುವುದರಿಂದ ಕಕ್ಕಯ್ಯನವರು ಅತ್ಯಂತ ಹಿರಿಯರಾದ ಶರಣರಲ್ಲಿ ಒಬ್ಬರಾಗಿದ್ದರೆಂಬುದನ್ನು ಈ ಜೋಗಳ ಪದ ಸ್ಥಿರೀಕರಿಸುತ್ತದೆ.

ಇನ್ನು ಮಂಚಯ್ಯ. ಆ ಹೆಸರಿನ ಮೂವರಲ್ಲಿ ಈತ ಕೊಂಡೆಯ ಮಂಚಣ್ಣ—ಎಂಬುದು ಈ ಹಾಡಿನಲ್ಲಿ ಸ್ಪಷ್ಟವಾಗಿ ಬರುತ್ತದೆ. ಬಸವಣ್ಣನ ಚಟುವಟಿಕೆಗಳನ್ನು ಗುಪ್ತವಾಗಿ ತಿಳಿಸಲೆಂದು ಅವನು ಬಿಜ್ಜಳನಿಂದ ನಿಯೋಜಿತನಾಗಿದ್ದುದು ಪರಿಚಿತ ವಿಷಯವೇ. ಶರಣ ಶಿವನಾಗಯ್ಯನ ಮನೆಯಲ್ಲಿ ನಡೆದ ಘಟನೆಯನ್ನು ಬಿಜ್ಜಳನಿಗೆ ವರದಿ ಮಾಡಿ ಕೆಟ್ಟಹೆಸರು ಗಳಿಸಿಯೇ ಇದ್ದ. ಈಗೂ ಹಾಗೆ ಮಾಡಿದನಲ್ಲದೆ, 'ಮಿಂಡ ಜಂಗಮರು ಮಠದೊಳು ಭಂಡಾಟ' ಮಾಡುವರೆಂದೂ ತಿಳಿಸಿ, ತನ್ನ ಜಂಗಮದ್ವೇಷ ವನ್ನು ವ್ಯಕ್ತಪಡಿಸಿದ್ದುದು ಈ ಪದ್ಯದಿಂದ ಸ್ಥಿರಗೊಳ್ಳುತ್ತದೆ.

ಮಗುವಿಗೆ ಹೆಸರಿಡುವ ನೆಪದಿಂದ ಈ ಜಾನಪದ ಕವಿ ಹಲವಾರು ಶಿವಶರಣೆ, ಶಿವಭಕ್ತೆಯವರನ್ನು ನಮ್ಮ ಜನ ನೆನೆಯುವಂತೆ ಮಾಡಿದ್ದಾನೆ. ಅವರೆಲ್ಲ ಸಮಕಾಲೀನ ರೇನಲ್ಲ. ಕೆಲವರು ಪರಿಚಿತರೂ ಹೌದು. ಉಕ್ತರಾದ ೧೩ ಜನ ಮಹಿಳೆಯರಲ್ಲಿ ಹಲವರು ವಚನಕಾರ್ತಿಯರೂ ಇದ್ದಾರೆ. ಏನಿದ್ದರೂ ಅವರ ಬಗ್ಗೆ ಕೆಲವು ವಿವರಗಳು ಅನುಬಂಧದಲ್ಲಿವೆ.*

ಅಂದ ಹಾಗೆ ಈ ಕವಿ ಯಾರಿರಬಹುದು ? 'ತುರುಬಿಯ ಗುಡ್ಡದ ಶಿವಲಿಂಗ' ಎಂಬ ಮುದ್ರಿಕೆ ಇರುವ ಬೇರೆ ಯಾವ ಕವನಗಳಿವೆಯೋ, ತಿಳಿಯದು. 'ತುರುಬಿಯ ಗುಡ್ಡ' ಎಂಬ ಸ್ಥಳವಾದರೂ ಅಷ್ಟೇ ಅಪರಿಚಿತ.

ಅಕ್ಕನಾಗಮ್ಮನ ಜೋಗಳ ಪದಕ್ಕೆ ಕೆಲವು ವಿಶೇಷತೆಗಳಿವೆ. ಅತ್ಯಂತ ಜನಪ್ರಿಯ ವಾಗಿ, ನೂರಿನ್ನೂರು ವರ್ಷಗಳ ವರೆಗೆ, ಈಗಲೂ ಕೂಡ ಹಳ್ಳಿಯ ಹೆಣ್ಣುಮಕ್ಕಳ ಬಾಯಿಯಲ್ಲಿ ನಲಿಯುವ ಪದ್ಯವಿದು. ಎರಡನೆಯದಾಗಿ, ಇದನ್ನು ಗುರುತಿಸಿದವರಲ್ಲಿ

---

* ಇದನ್ನು ನನಗಾಗಿ, ವಿಶೇಷ ಪರಿಶ್ರಮವಹಿಸಿ, ಪ್ರೊ. ಶಾಂತರಸರು ಸಿದ್ಧಪಡಿಸಿ ಕೊಟ್ಟಿದ್ದಾರೆ, ಈ ಲೇಖನ ಬರೆಯುವುದಕ್ಕೂ ಅವರದೇ ಪ್ರೇರಣೆ.

ಫ್ಲೀಟರು ಮೊದಲಿಗರು. ಆದರೆ ಅದನ್ನು ಗ್ರಂಥವೊಂದರಲ್ಲಿ ಸೇರಿಸಿ ತೂರಮುರಿಯವರು ಇದಕ್ಕೆ ಮುದ್ರಿತಗೊಂಡ ಪ್ರಥಮ ಜಾನಪದ ಕವಿತೆಯೆಂಬ ಪ್ರಾಶಸ್ತ್ಯವನ್ನು ದೊರಕಿಸಿಕೊಟ್ಟಿದ್ದಾರೆ, ಆ ಮೂಲಕ ತೂರಮುರಿಯವರು ಜಾನಪದ ಸಾಹಿತ್ಯ ಪ್ರೇಮಿಗಳೂ ಆಗಿದ್ದರೆಂಬುದನ್ನು ಈ ಮೊದಲು ಪ್ರಸ್ತಾಪಿಸಲಾಗಿದೆ. ಅದರಂತೆ ಚೆನ್ನಬಸವಣ್ಣನ ಜನನದ ಬಗ್ಗೆ ಕನ್ನಡ ಕಾವ್ಯಗಳಲ್ಲಿ ಬಂದಿರುವ ಅಂಶಗಳನ್ನು ಈ ಪದ್ಯ ದೃಢೀಕರಿಸುತ್ತಿದ್ದ ವಿಷಯವನ್ನೂ ಗಮನಿಸಲಾಗಿದೆ. ಇದರಲ್ಲಿ ಬರುವ ಘಟನೆ ಮತ್ತು ವ್ಯಕ್ತಿಗಳು ಇತಿಹಾಸ ಕಾಲದಲ್ಲಿ ಇದ್ದವರು, ಆದ್ದರಿಂದ ಇದು ಚಾರಿತ್ರಿಕ ಕಾವ್ಯವೂ ಹೌದು.

ಅನುಬಂಧ

ಅಕ್ಕನಾಗಮ್ಮನ ಜೋಗಳ ಪದದಲ್ಲಿ ಉಕ್ತರಾದ ಶಿವಶರಣೆಯರು

ಸತ್ಯಕ್ಕ : ಶಿವಮೊಗ್ಗೆ ಜಿಲ್ಲೆಯ ಹಿರೆಜಂಬೂರು ಇವಳ ಗ್ರಾಮ. ಶಿವಭಕ್ತರ ಅಂಗಳ ಗುಡಿಸುವ ಕಾಯಕ. ವಚನಕಾರ್ತಿ. 'ಶಂಭುಜಕ್ಕೇಶ್ವರ' ಎಂಬುದು ಅಂಕಿತ. ಇದುವರೆಗೆ ೨೮ ವಚನಗಳು ದೊರೆತಿವೆ.

ಚಂಗುಳಿ : ಕಾಂಚಿಯ ಸಿರಿಯಾಳ ಸೆಟ್ಟಿಯ ಹೆಂಡತಿ. 'ಚೆಂಗಳೆ'' ಎಂಬುದು ಸರಿಯಾದ ಹೆಸರು. ಈ ದಂಪತಿಗಳು ಜಂಗಮ ಪ್ರೇಮಿಗಳು. ಪರಮ ದಾಸೋಹಿಗಳು. ಶಿವನು ಜಂಗಮರೂಪದಿಂದ ಬಂದು ಎಳೆಯ ಮಾಂಸದ ಅಡಿಗೆ ಬೇಡಿದನಂತೆ. ಆಗ ಇವರು ತಮ್ಮ ಮಗು ಚೇಲಾಳನನನ್ನು ಕೊರಳರಿದು ಎಡೆ ಮಾಡಿದರು. ಆಗ ಶಿವ ಪ್ರತ್ಯಕ್ಷನಾದನಂತೆ. ಸಿದ್ಧರಾಮಕೃತ ಬಸವಸ್ತೋತ್ರ ತ್ರಿವಿಧಿಯಲ್ಲಿ ಇವಳ ಹೆಸರು ಉಕ್ತವಾಗಿದೆ.

ಕದಿರಿ ರೆಬ್ಬವ್ವ : 'ಕದಿರಿ ರೆಮ್ಮವ್ವೆ' ಸರಿಯಾದ ಹೆಸರು. ಕಲ್ಯಾಣ ಪಟ್ಟಣದಲ್ಲಿ ರಾಟೆಯಿಂದ ನೂಲನ್ನು ತೆಗೆಯುವ ಕಾಯಕ ಈಕೆಯದು. ದಾಸೋಹಿ. ವಚನಕಾರ್ತಿ· 'ಕದಿರಿ ರೆಮ್ಮೆಯೊಡೆಯ ಗುಮ್ಮೇಶ್ವರಾ' ಈಕೆಯ ಅಂಕಿತ.

ಶಿವದೇವಿ : ನಿತ್ಯ ಶಿವನಿಗೆ ಧೂಪವರ್ಪಿಸುವ ಕಾಯಕ ಈಕೆಯದು. ಒಮ್ಮೆ ಅದು ದೊರೆಯದೇ ತನು ತೊರೆಯ ಹೋದಾಗ ಶಿವ ಪ್ರತ್ಯಕ್ಷನಾದನಂತೆ.

ವೀರಸಂಗವ್ವ : ವೇಶ್ಯಾವೃತ್ತಿಯ ಈಕೆ ಜಂಗಮಪ್ರೇಮಿ. ಶಿವನನ್ನು ಪ್ರತ್ಯಕ್ಷೀಕರಿಸಿಕೊಂಡವಳು.

ಚಂನವ್ವ: ಕತ್ತಲಿರಾಯ ಮತ್ತು ಚಂದ್ರಪ್ರಭೆ ಇವರ ಮಗನಾದ ಕಾಳಿಂಗರಾಯನ ಹೆಂಡತಿ. ಮೂಲತಃ ಬ್ರಾಹ್ಮಣಿತಿ. ಚಿತ್ರದ ಹುಲಿ ಕಚ್ಚಿ ಕಾಳಿಂಗರಾಯ ತೀರಿಕೊಂಡನಂತೆ. ಸ್ಮಶಾನದಲ್ಲಿ ಮಳೆ ಬಂದು ಎಲ್ಲರೂ ಹೊರಟು ಹೋದರು. ಚೆನ್ನಮ್ಮ ಮಣ್ಣಿನ ನಂದಿಯನ್ನು ಮಾಡಿ ಪೂಜಿಸಿ ಸತ್ತ ಗಂಡನನ್ನು ಮರಳಿ ಪಡೆದಳಂತೆ. ಒಂದು ನಕ್ಷತ್ರಗಳ ಗುಂಪಿಗೆ 'ಚೆನ್ನಮ್ಮನ ದಂಡೆ' ಎಂದು ಹೆಸರು.

ಕೋಳೂರ ಕೊಡಗೂಸು: ಕಲಬುರ್ಗಿ ಜಿಲ್ಲೆಯ ಕೋಳೂರಿನ ಶಿವದೇವ, ಅಲ್ಲಿಯ ಕಲ್ಲೇಶ್ವರಲಿಂಗಕ್ಕೆ ನಿತ್ಯವೂ ಒಂದು ಬಳ್ಳ ಹಾಲನ್ನು ನೈವೇದ್ಯ ಮಾಡುವ ನಿಯಮವುಳ್ಳವ. ಒಮ್ಮೆ ಆತ ಮಡದಿಯೊಡನೆ ಪರವೂರಿಗೆ ಹೋಗಬೇಕಾಗಿ ಬಂತು. ತನ್ನ ನೇಮ ಪಾಲಿಸಲು ಏಳು ವರ್ಷದ ಹಸುಳೆ ಚೆನ್ನಕ್ಕನಿಗೆ ಒಪ್ಪಿಸಿದ. ಅವಳು ಹಾಲನ್ನು ಶಿವನ ಮುಂದಿಟ್ಟು 'ಕುಡಿ' ಎಂದಳು. ಶಿವ ಕುಡಿಯದಾದಾಗ ಪ್ರಾಣ ಕಳೆದುಕೊಳ್ಳಲು ಸಿದ್ಧಳಾದಳು. ಶಿವ ಪ್ರತ್ಯಕ್ಷನಾಗಿ ಕುಡಿದ. ತಂದೆ ಬಂದು ಇದನ್ನು ಕೇಳಿ ನಂಬದಾದ. ಅವನನ್ನು ಮಗಳು ಮಂದಿರಕ್ಕೆ ಕರತಂದಳು. ಶಿವನ ಮುಂದೆ ಮತ್ತೊಮ್ಮೆ ಹಾಲನ್ನು ಇರಿಸಿದಾಗ, ಆ ತಂದೆಯೆದುರು ಶಿವ ಪ್ರತ್ಯಕ್ಷನಾಗಲಿಲ್ಲ. ತಂದೆ ಮಗಳನ್ನು ಶಿಕ್ಷಿಸ ಹೋದಾಗ, ಶಿವ ಚೆನ್ನಕ್ಕನನ್ನು ತನ್ನೊಳಗೆ ಇಟ್ಟುಕೊಂಡ. ಅವಳ ತಲೆಗೂದಲು ತಂದೆಯ ಕೈಯಲ್ಲಿತ್ತು: ಅದಷ್ಟೇ ಕಿತ್ತು ಬಂತು—ಎಂದು ಕಥೆ; ಬಹು ಜನ ಪರಿಚಿತವಾದುದು.

ದೋಸಿ ಪಿಡ್ಡವ್ವಾ: ಪಿಟ್ಟವ್ವೆ–ಎಂದೂ ಹೆಸರಿದೆ. ಚೋಳ ರಾಜ್ಯದ ಮುದಗೊಂಡೆ–ಇವಳ ಊರು. ಮುಪ್ಪಿನಲ್ಲಿ ದೋಸೆ ಮಾಡಿ ಜಂಗಮಾರ್ಚನೆ ಗೈಯ್ಯುತ್ತಿದ್ದಳು. ಕರಿಕಾಲನ ಚೋಳನ ಕೆರೆಗೆ ಮಣ್ಣುಹೊರುವ ಬಿಟ್ಟಿ ಸರತಿ ಇವಳಿಗೂ ಬಂದಿತು. ಮುದುಕಿಯೆಂಬರೂ ಬಿಡದೆ, ರಾಜಭಟರು ಎಳೆದೊಯ್ದರು. ಶಿವನು ಕೂಲಿಯ ವೇಷದಲ್ಲಿ ಬಂದು, ಆಕೆಯ ಮುರುಕು ದೋಸೆ ತಿಂದು ಆಕೆಯ ಪರವಾಗಿ ಆ ಬಿಟ್ಟಿ ಕೆಲಸಕ್ಕೆ ನಿಂತನಂತೆ. ಆತ ಮಣ್ಣು ಹೊರುವಾಗ ಕುಣಿದು ವಿನೋದ ಮಾಡುತ್ತಿದ್ದನೆಂದು ರಾಜಭಟರು ಹೊಡೆದರಂತೆ. ಆ ಏಟುಗಳು ಅವರಿಗೇ ತಿರುಗಿ ಬಿದ್ದವಂತೆ. ಮುಂದೆ ಶಿವನು ಪ್ರತ್ಯಕ್ಷನಾಗಿ ಪಿಟ್ಟವ್ವೆಯನ್ನು ಕೈಲಾಸಕ್ಕೊಯ್ದನಂತೆ.

ಸೂಳೆ ಬೊಂತಾದೇವಿ: ಈ ಹೆಸರಿನವರು ಯಾರೂ ಸೂಳೆಯರಿಲ್ಲ. ಅವರೆಂದರೆ— ಸೂಳೆ ಸಂಕವ್ವೆ, ಸೂಳೆ ನಿಂಬವ್ವೆ. ಬೊಂತಾದೇವಿ ಕಾಶ್ಮೀರರಾಜ ಮಹಾದೇವ ಭೂಪಾಲನ (ಮೋಳಿಗೆ ಮಾರಯ್ಯನ) ತಂಗಿ. ಬೊಂತೆ (ಕೌದಿ) ಹೊದ್ದುಕೊಂಡು ಕಲ್ಯಾಣಕ್ಕೆ ಬಂದುದರಿಂದ ಈಕೆಗೆ ಆ ಹೆಸರು ಬಂದುದು. ನಿಜವಾದ ಹೆಸರು 'ನಿಜದೇವಿ' ಎಂದು. ಅಣ್ಣನಂತೆ ಈಕೆಯೂ ವಚನಕಾರ್ತಿ. 'ಬಿಡಾಡಿ' ಎಂಬುದು ಅಂಕಿತ. ಅಂತೂ ಇಲ್ಲಿ ಬರುವ ಸೂಳೆ ಬೊಂತಾದೇವಿ ಯಾರೆಂದು ನಿಶ್ಚಿತವಾಗಿ ತಿಳಿಯದು.

ಬಾಲೆ ನಿಂಬೆವ್ವ: ಇಬ್ಬರು ನಿಂಬೆವ್ವರು ಆಗಿ ಹೋದರು. ಒಬ್ಬಾಕೆ ಕೊಟ್ಟಣದ ನಿಂಬೆಕ್ಕ, ಶಿವ ಕೇಳಿದನೆಂದು ಸಿರಿಯಾಳ ಸೆಟ್ಟಿ ಮಗನನ್ನು ಅರ್ಪಿಸಿದ್ದನಲ್ಲವೆ, ಆ ಕುರಿತು ಅವನಿಗೆ ತುಸು ಗರ್ವ. ಒಮ್ಮೆ ಈ ಸೆಟ್ಟಿ ಆಕೆಯ ಮನೆಗೆ ಬಂದಾಗ, ಅವಳ ಮಗ ಶಿವನಿ

ಗಾಗಿ ಅಟ್ಟ ಅಡಿಗೆಯನ್ನು ಎಂಜಲಿಸಿದ. ಅಷ್ಟಕ್ಕೇನೆ ಆಕೆ ಮಗನನ್ನು ಕೊಂದಳಂತೆ. ಅದನ್ನು ಕಂಡು ಸಿರಿಯಾಳನ ಅಹಂಕಾರ ತಗ್ಗಿತಂತೆ.

ಇನ್ನೊಬ್ಬ ನಿಂಬೆವ್ವ ವೇಶ್ಯೆ. ಜಂಗಮರಿಗೆ ತನುವರ್ಪಿಸುವ ನೇಮ. ಶಿವ ನಿಳಯದಲ್ಲಿಯೇ ಒಮ್ಮೆ ಜಂಗಮನೊಬ್ಬನ ಸಂಗ. ಆಗ ಶಿವ 'ಇಸ್ಸಿ' ಎಂದಾಗ, ನೀನಲ್ಲದ ತಾಣ ಉಂಟೆ ? ಎಂದಳಂತೆ. ಈಕೆಯನ್ನು ಕುರಿತು ಹರಿಹರ ಒಂದು ರಗಳೆಯನ್ನೇ ಬರೆದಿದ್ದಾನೆ.

ಚೋಳಕ್ಕ : ಆಂಧ್ರದೇಶದ ಭೀಮೇಶ್ವರ ಕ್ಷೇತ್ರದವಳು. ವೇಶ್ಯೆ. ತಂಗಿ ಭೀಮಿಯೊಡನೆ ಬೆಳ್ಳಿ ತಟ್ಟೆಯಲ್ಲಿ ಭೀಮೇಶ್ವರನಿಗೆ ಹುಗ್ಗಿ ಕಳಿಸಿದಳು. ಅದೇ ವೇಳೆಗೆ ಅರಮನೆಯಿಂದ ನೈವೇದ್ಯ ಬಂಗಾರದ ತಟ್ಟೆಯಲ್ಲಿ ಬಂದಿತ್ತು. ಶಿವನಿಂದಾಗಿ ತಟ್ಟೆಯ ಅದಲು ಬದಲು. ಕಳ್ಳತನದ ಆಪಾದನೆ ಮೇಲೆ ಚೋಳಕ್ಕನನ್ನು ಶೂಲಕ್ಕೇರಿಸ ಹೊರಟಾಗ ಶಿವ ಪ್ರತ್ಯಕ್ಷನಾದನಂತೆ. ಹರಿಹರ ಚೋಳಿಯಕ್ಕನ ರಗಳೆಯಲ್ಲಿ ಈ ಪ್ರಸಂಗವನ್ನು ಬೇರೆಯಾಗಿ ಚಿತ್ರಿಸಿದ್ದಾನೆ. ಹುಗ್ಗಿ ತಂದದ್ದು ಸೇವಕಿ. ಮಂದಿರದಲ್ಲಿ ತುಂಬಾ ಗದ್ದಲ. ಒಳ ಹೋಗಲಾಗದ ಸೇವಕಿ ನೀರಿನ ಹರಿಯ ತಟ್ಟೆಯ ಮೂಲಕ ಶಿವನಿಗೆ ಕೊಟ್ಟಳು. ಅವನೇ ಶಿವ ಎಂದು ಹೇಗೆ ಗುರುತಿಸಿದೆ—ಎಂದು ಚೋಳಕ್ಕ ಕೇಳಿದಾಗ ಸೇವಕಿ 'ಅವನ ಕೈಗೆ ಉರಗ ಕಂಕಣವಿತ್ತು', ಎನ್ನುತ್ತಾಳೆ.

ಮಲುಹಣಿ : ಕಾಶ್ಮೀರ ದೇಶದ ಭಾರತೀಪುರದ ಪದ್ಮಾವತಿ ಎಂಬ ವೇಶ್ಯೆಯ ಮಗಳು. ಅದೇ ಊರಿನ ಧನದತ್ತನ ಮಗ ಮಲುಹಣನಲ್ಲಿ ಅನುರಕ್ತೆ. ಆದರೆ ತಾಯಿ, ಮಲುಹಣನ ಹಣವನ್ನೆಲ್ಲ ದೋಚಿ ಅವನನ್ನು ತನ್ನ ಮನೆಯಿಂದ ಹೊರಗೆ ಅಟ್ಟುತ್ತಾಳೆ. ಮಲುಹಣಿಯ ಮೇಲಿನ ವ್ಯಾಮೋಹದಿಂದ, ರಾತ್ರಿ ಅವಳ ಮನೆಯ ಮುಂದೆ ಬಂದು ನಿಲ್ಲುವನು. ಹಿಮದಲ್ಲಿ ಮುಚ್ಚಿ ಹೋದಾಗ, ಶಿವನಲ್ಲಿ ಮೊರೆಯಿಡಲು ಮಲುಹಣಿ ಸೂಚಿಸುವಳು. ಶಿವ ಪ್ರತ್ಯಕ್ಷನಾಗಿ, ಮಲುಹಣಿಯನ್ನು ಅವನಿಗೆ ಕೊಡಿಸುವನು. ಸಂಸ್ಕೃತದಲ್ಲಿ ಈತನ ಶಿವಸ್ತೋತ್ರ ಪ್ರಸಿದ್ಧವಿದೆ. ಹರಿಹರ ಈತನನ್ನು ಕುರಿತು ರಗಳೆ ಬರೆದಿದ್ದಾನೆ.

ಮಾಯಿದೇವವ್ವಾ : ಈಕೆ ಕಲ್ಯಾಣವಾಸಿನಿ. ಜನರಿಗೆ ಶರಣರ ಕಥೆಗಳನ್ನು ಹೇಳುವ ಕಾಯಕ ಕೈಗೊಂಡಿದ್ದಳು.

ಮುದ್ದಣ ಕಂಡ ಶಿವ

ಮುದ್ದಣನ ಯಕ್ಷಗಾನ ಕೃತಿಗಳಾದ ರತ್ನಾವತೀ ಕಲ್ಯಾಣ ಮತ್ತು ಕುಮಾರ ವಿಜಯಗಳಲ್ಲಿ ಶಿವನು ಕಥಾನಾಯಕನಲ್ಲ. ಅದ್ಭುತ ರಾಮಾಯಣ, ಶ್ರೀ ರಾಮ ಪಟ್ಟಾಭಿಷೇಕ ಹಾಗೂ ರಾಮಾಶ್ವಮೇಧಗಳಲ್ಲಿ ರಾಮನೇ ಮುಖ್ಯನಲ್ಲದೆ ಶಿವನಲ್ಲ. ಆದರೂ ಇವೈದೂ ಕೃತಿಗಳಲ್ಲಿ ಶಿವನು ಪ್ರಾಮುಖ್ಯವಾಗಿ ಕಾಣಿಸಿಕೊಳ್ಳುತ್ತಾನೆ! ಮುದ್ದಣನು ಸೃಷ್ಟಿಸಿದ ಯಾವುದೇ ನರ-ದೇವತಾ ಪಾತ್ರಗಳಿಗಿಂತ ಶಿವನು ಉಚ್ಚ ಸ್ಥಾನದಲ್ಲಿದ್ದಾನೆ—ವೈಕುಂಠದ ಶ್ರೀ ಹರಿ ಹಾಗೂ ಅಯೋಧ್ಯೆಯ ರಾಮಚಂದ್ರನೂ ಇದಕ್ಕೆ ಸರಿಸಾಟಿಯಲ್ಲ.

ಅದು ಹೇಗೆ ಸಾಧ್ಯ? ಮುದ್ದಣನು ಹರಿ-ಹರರಲ್ಲಿ ಭೇದ ಮಾಡದ ಅದ್ವೈತಿ. 'ಶಿವನೊಳಂ ತನ್ನೊಳಂ ಭೇದಮೇಂ ತಿಲಮಾತ್ರವಿಲ್ಲ' (ರಾಮಪ.) ಎಂದು ಸ್ವತಃ ಶ್ರೀರಾಮನ ಬಾಯಿಯಿಂದ ಹೇಳಿಸಿದ್ದಾನೆ—ಮುದ್ದಣ. ಮತ್ತಲ್ಲದೆ ರಾಮಚಂದ್ರನು ಶತ್ರುಘ್ನನಿಗೆ 'ಹರಿಹರರೊಳ್ ಭೇದಮನೆಣಿಸದವರಂ ಕಂಡರೆ ನೀನೂ ಅವರಲ್ಲಿ ಭೇದ ಮನೆಣಿಸಬೇಡ' ಎಂದೂ ಉಪದೇಶಿಸಿದ್ದಾನೆ. ಹೀಗಿರುತ್ತ, ಮುದ್ದಣನು ಹರನಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಸಲ್ಲಿಸಿರುವನೆಂಬ ಮಾತು ಮುದ್ದಣಾಭ್ಯಾಸಿಗಳಿಗೆ ಹಿಡಿಸದು. ನಾವಾದರೂ ಮೊದಲು ಹಾಗೇ ತಿಳಿದಿದ್ದೆವು. ಈಗ ಮಾತ್ರ ಮುದ್ದಣನು ಶಿವ ಪಕ್ಷಪಾತಿ—ಎಂಬ ನಿಶ್ಚಿತ ನಿಲುಮೆಗೆ ಬಂದಿದ್ದೇವೆ. ಇದನ್ನು ನಮಗೆ ಮನಗಾಣಿಸಿದ್ದು—ಗಣಕ ಯಂತ್ರ!

ಹೌದು. ಮುದ್ದಣನ ಶಬ್ದಸೃಷ್ಟಿಯ ವ್ಯಾಪ್ತಿ ವೈವಿಧ್ಯಗಳನ್ನು ಗಣಕ ಯಂತ್ರದ ನೆರವಿನಿಂದ ಅಭ್ಯಸಿಸುವ ಯೋಜನೆಯೊಂದನ್ನು ಹಮ್ಮಿಕೊಂಡಿದ್ದು, ಯೋಜನೆಯ ಮೊದಲ ಹಂತವೆಂದು, ಮುದ್ದಣನ ಕೃತಿ ಪಂಚಕದಲ್ಲಿ ಬರುವ ಶಿವನ ಹೆಸರಿನ ಎಲ್ಲ ಶಬ್ದಗಳನ್ನು ಗಣಕಯಂತ್ರಕ್ಕೆ ಪೂರೈಸಿದೆವು. ಅದರ ವಿಶ್ಲೇಷಣೆಯಿಂದ ಶಿವನೇ ಮುದ್ದಣನ ಆರಾಧ್ಯದೈವತವೆಂಬುದು ಸ್ಪಷ್ಟವಾಗಿ ಗೋಚರವಾಯಿತು.

ಮೇಲಣ ಅಧ್ಯಯನಕ್ಕಾಗಿ ನಾವು ಇನ್ನು ಕೆಲವು ದೇವತಾ ಶಬ್ದಗಳನ್ನು ಕಂಪ್ಯೂಟರಿಗೆ ಪೂರೈಸಿದ್ದೆವು. ಆ ಯಂತ್ರವು ವಿಶ್ಲೇಷಿಸಿದ ಪ್ರಕಾರ ಅವನ ವಿವಿಧ ಕೃತಿಗಳಲ್ಲಿ ಎಷ್ಟು ಶಬ್ದಗಳಿವೆಯೆಂಬುದನ್ನು ಈ ಮುಂದಿನ ಪಟ್ಟಿಯಿಂದ ಕಾಣಬಹುದು.

ದೇವತೆ	ರತ್ನಾ	ಕು. ವಿ.	ರಾಮಪ.	ಅ. ರಾ.	ರಾಮಾಶ್ವ	ಒಟ್ಟು
ಬ್ರಹ್ಮ	೬	೪೧	೧೪	೨೬	೧೬	೧೦೩
ಇಂದ್ರ	–	೧೧೯	೧೨	೧೦	೮	೧೪೯
ಹರಿ	೨೭	೪೬	೬	೫೪	೨೬	೧೫೬
ರಾಮಚಂದ್ರ	೨	–	೧೦೬	೧೯	೬೪	೧೯೧
ಹರ	೧೨	೨೧೨	೨೫	೫	೫೧	೩೦೫

ಇಂದ್ರ ಬ್ರಹ್ಮರು ಶಿವನ ಹಿರಿಮೆಗೆ ಸಾಟಿಯಾಗಲಾರರೆಂಬುದು ಸರಿಯೇ. ಹರಿಯನ್ನೂ ಬೇಕಾದರೆ ಕ್ಷಣ ಹೊತ್ತು ಬದಿಗಿರಿಸೋಣ. ಆದರೆ ಒಂದಲ್ಲ, ಮೂರು ಕಾವ್ಯಗಳಲ್ಲಿ ಕಥಾನಾಯಕನಾಗಿ ಬಂದಿದ್ದ ಶ್ರೀರಾಮನನ್ನೂ ಹಿಂದೆ ಹಾಕಿ ಶಿವನು (ಶಬ್ದ ರೂಪದಲ್ಲಿ) ಇಷ್ಟರ ಮಟ್ಟಿಗೆ ಕಾಣಿಸಿಕೊಳ್ಳುವುದಕ್ಕೆ ಏನೆಂದು ಅರ್ಥ ಹಚ್ಚುವಿರಿ?

ಒಟ್ಟಿನ ಪದ ಪ್ರಯೋಗದ ಸಂಖ್ಯೆ ೩೦೫ ಎಂದೆವು. (ಅವುಗಳಲ್ಲಿ ಶಿವ, ಹರ, ಈಶ್ವರ ಎಂಬ ಸಾಮಾನ್ಯ ಬಳಕೆಯಲ್ಲಿ ಪದಗಳನ್ನು ನಾವು ಗಣನೆಗೆ ತೆಗೆದುಕೊಂಡಿಲ್ಲ.) ಈ ೩೦೫ರಲ್ಲಿ ಕೆಲವು ಪುನರುಕ್ತವಾಗುವುದು ಸಹಜವೇ. (ಉದಾ. ಗೆ 'ಇಂದುಶೇಖರ'ವು ನಾಲ್ಕು ಸಲ ಬಂದಿದೆ). ಈ ಪುನರುಕ್ತಿಗಳನ್ನು ಬಿಟ್ಟರೆ, ಮುದ್ದಣನು ಬಳಸಿದ್ದ ಶಿವಾರ್ಥದ ಮೂಲ ಶಬ್ದಗಳು ೧೮೮ ಇವೆ. ಇದು ದೊಡ್ಡ ಸಂಖ್ಯೆಯೇ. ಸಮಾನಾರ್ಥವನ್ನು ಕೊಡುವ ಅಮರಕೋಶದಲ್ಲಿ ಶಿವಪರವಾದ ನಾಮಗಳು ೫೩ ಇವೆ. ಅವುಗಳಲ್ಲಿ ಮುದ್ದಣನು ಬಳಸಿಕೊಂಡದ್ದು ೨೬ ಮಾತ್ರ. ಇನ್ನುಳಿದವು ಹಳೆಯ ಕಾವ್ಯಗಳಿಂದ ಸ್ವೀಕರಿಸಿದವುಗಳು. ಅದಕ್ಕಿಂತ ಹೆಚ್ಚಾಗಿ, ಮುದ್ದಣನೇ ಸೃಷ್ಟಿಸಿ ಕನ್ನಡ ವಾಗ್ದೇವಿಯ ಭಂಡಾರಕ್ಕೆ ಕಾಣಿಕೆಯಾಗಿ ಅರ್ಪಿಸಿದ ಶಬ್ದಗಳು ಸಾಕಷ್ಟಿವೆ. ಈ ಶಬ್ದ ಸಮುದಾಯವನ್ನು ಇನ್ನಷ್ಟು ವಿಶ್ಲೇಷಿಸಿದಾಗ ತೋರಿ ಬಂದ ಶಿವನ ಗುಣ ವಿಶೇಷಗಳ ಹರಹು ನಮ್ಮನ್ನು ಬೆರಗುಗೊಳಿಸಿತು. ಸ್ಥಾಲೀಪುಲಾಕನ್ಯಾಯದಿಂದ ಕೆಲವನ್ನು ಮಾತ್ರ ಇಲ್ಲಿ ನಿರ್ದೇಶಿಸುತ್ತೇವೆ.

ಶಿವನು ತನ್ನ ಹಣೆಗಣ್ಣಿನಿಂದ ಕಾಮನನ್ನು ಸುಟ್ಟು ಹಾಕಿದ ಅಂಶವು ಮುದ್ದಣನನ್ನು ವಿಶೇಷವಾಗಿ ಸೆರೆ ಹಿಡಿದಿದೆ. ಆತ ಹಣೆಗಣ್ಣನೆಂಬುದನ್ನು ಅನಲೇಕ್ಷಣ, ಕೃಶಾನುನೇತ್ರ, ತ್ರಿಲೋಚನ, ನಿಟಿಲನಯನ, ನೀಲಲೋಹಿತ, ಫಾಲಾಕ್ಷ, ಭಾಳಾಕ್ಷ, ರಂಗತ್ರಿಣೇತ್ರ ಮುಂತಾದ ಶಬ್ದಗಳು ಸಾರುತ್ತವೆ. ಜೊತೆಗೆ ಉರಿಗಣ್ಣ, ನೊಸಲ (ಕಣ್ಣ) ಪಣೆಗಣ್ಣ—ಎಂಬ ಅಚ್ಚಕನ್ನಡ ಶಬ್ದಗಳೂ ಇವೆ. ಇನ್ನು ಅವನು ಕಾಮಧ್ವಂಸಿಯೆಂಬುದನ್ನು ಅಂಗಜಾರಿ, ಕಂತುವೈರಿ, ಕಾಮಾರಾತಿ, ಜಿತಮದನ, ಚಿತ್ತಜಾರಿ, ಸ್ಮರಹರ, ಹರಿಸುತಾಹಿತವೆಂಬೀ ಶಬ್ದಗಳ ಬಳಕೆಯಲ್ಲಿ ಕಾಣುತ್ತೇವೆ. ದಪ್ಪಕವಗೆಯ = (ಕಂದರ್ಪಾರಿ) ಎಂಬುದು ಮುದ್ದಣನ ಖಾಸಾ ಸೃಷ್ಟಿ.

ಶಿವನಿಗೆ ಮುಖಗಳು ಒಂದೊ? ಐದೊ? ಪುರಾಣಗಳಲ್ಲಿಯೇ ಈ ಭೇದವಿದೆ. ಮುದ್ದಣನು ಶಿವನನ್ನು ಐಗಳ, ಐಮೊಗ, ಪಂಚವದನನೆಂದು ಕರೆದುದರ ಜೊತೆಗೆ ಅಷ್ಟಮೂರ್ತಿ, ಎಣ್ಮೆಯ್ಯವ ಎಂದೂ ಹೆಸರಿಸಿದ್ದಾನೆ. ಶಿವನ ಬಿಳಿಯ ಕುತ್ತಿಗೆಯು ಕಾಲಕೂಟ ವಿಷದಿಂದ ಕಪ್ಪು-ನೀಲಿ ಬಣ್ಣ ತಾಳಿದುದನ್ನು ಕಂದುಗೊರಲ, ನೀಲಕಂಧರ, ನಂಜುಂಡ, ಶಿತಿಕಂಠ—ಎಂಬೀ ಪದಗಳು ವರ್ಣಿಸುತ್ತವೆ.

ಶಿವನ ಶಿರೋಭೂಷಣಗಳಾದ ಅರ್ಧಚಂದ್ರ ಹಾಗೂ ಗಂಗಾ ಸಲಿಲ—ಇವು ಅರೆದಿಂಗಳ, ಗಂಗೋತ್ತಮಾಂಗ, ತೊರೆವಲೆಯ, ವಿಧುಲಾಂಛನ ಎಂಬ ಪದಗಳ ಮೂಲಕ ನಮ್ಮ ಮನದಲ್ಲಿ ಚೆನ್ನಾಗಿ ನೆಲೆಗೊಳ್ಳುತ್ತವೆ. ಇವುಗಳಲ್ಲಿ ತೊರೆವಲೆಯ ಎಂಬುದು ಮುದ್ದಣನ ಸ್ವಸೃಷ್ಟಿಯೆಂದು ತೋರುತ್ತದೆ. ಶಿವನು ವ್ಯೋಮಕೇಶನೆಂಬ ಕಲ್ಪನೆಯನ್ನು ಮುದ್ದಣನು ವಿಶೇಷವಾಗಿ ಮೆಚ್ಚಿಕೊಂಡಿರಬೇಕೆಂಬುದು, ಬಾಂಗುರುಳ, ಬಾಂಗೂದಲ, ಬಾಂಬೊಚ್ಚದಲೆಯ, ಬಾನ್ನವಿರ ಎಂಬೀ ಸ್ವಸೃಷ್ಟಿಯ ಇಲ್ಲವೆ ಈ ಹಿಂದೆ ಕ್ವಚಿತ್ತಾಗಿ ಬಂದ ಶಬ್ದಗಳ ಬಳಕೆಯಲ್ಲಿ ವ್ಯಕ್ತವಾಗಿದೆ.

ಶಿವನು ಸರ್ಪಭೂಷಣನೆಂಬುದು ಬಹು ಜನಪ್ರೀತವಾದುದು. ಮುದ್ದಣನಿಗೂ ಅಷ್ಟೇ. ಅಹೀನಾಲಂಕೃತಾಂಗ, ದ್ವಿಜರಾಜಧರ, ಫಣಿಕುಂಡಲ, ಭುಜಗತತಿಭೂಷ ಎಂದೆಲ್ಲ ಶಿವನನ್ನು ವರ್ಣಿಸಿದ್ದಾನೆ. ಆದರೆ ಶಿವನು 'ಎಲರುಣಿವೆದೆಯ' (ಸರ್ಪವು ಹೆದೆಯಾಗಿ ಉಳ್ಳವ) ಎಂಬ ಅಂಶವು ಅಪೂರ್ವವಾದುದು. ಇತರ ವೇಷಭೂಷದ ಬಗ್ಗೆ ಹೇಳುವುದಾದರೆ, ಶಿವನು ಸಿತಾಂಗ, ಅರ್ಥಾತ್ ಬೂದಿಬಡಕ. ಅವನ ವ್ಯಾಘ್ರಾಂಬರ ವನ್ನು ಮುದ್ದಣನು 'ಬಗ್ಗದೊವಲುಡೆಯ' ಎಂದು ಕನ್ನಡಿಸಿದ್ದಾನೆ. ತೊವಲುಡೆಯ, ತೊವಲ್ವೊದೆಯ ಎಂದೂ ಕರೆದಿದ್ದಾನೆ.

ಶಿವನನ್ನು ಅರೆಮೆಯ್ಯ, ಅರೆವೆಣ್ಮೆಯ್ಯ ಎಂದು ಹೇಳುವಾಗ, ಆತ ಗಿರಿಜಾಪತಿ ಯೆಂಬುದನ್ನು ಮುದ್ದಣನು ಗಮನಿಸಿರಲೇಬೇಕು. ಆ ಭಾವವನ್ನು ಹೊಮ್ಮಿಸುವ ಅನೇಕ ಶಬ್ದಗಳನ್ನು ಮುದ್ದಣನು ಬಳಸಿದ್ದಾನೆ. ಶಿವನು 'ಅಚಲಾತ್ಮಜಾನನ ಕೈರವಾಬ್ಜ' ಎಂಬುದರ ಹಿಂದಿನ ಕಲ್ಪನೆ ರಮ್ಯವಾದುದು.

ಶಿವನು ಭವನೂ ಹೌದು, ಅಭವನೂ ಹೌದು. ಈಶನೂ ಅಹುದು, ಈಶನೀಶನೂ ಅಹುದು; ಆದರಂತೆ ಕಾಲಕಂಧರ ಕಾಲನು. ಶಿವನನ್ನು ಸಾಂತ(ಶಾಂತ) ಮತ್ತು ಸಬ್ಬ (ಶರ್ವ) ಎಂದು ವಿಶೇಷಿಸಿದುದು ಒಂದು ವಿಶೇಷ. ಇವು ಮುದ್ದಣನ ತದ್ಭವಪ್ರಿಯತೆಯ ಜೊತೆಗೆ ಶಿವನ ಸ್ವರೂಪ ದರ್ಶನಕ್ಕೆ ಹೊಸ ಆಯಾಮಗಳನ್ನು ಜೋಡಿಸಿವೆ.

ಮೇಲಿನ ವಿವೇಚನೆಯಷ್ಟರಿಂದಲೇ ಮುದ್ದಣನು ಶಿವನನ್ನು ಅದೆಷ್ಟು ವೈವಿಧ್ಯ ಮಯವಾಗಿ ರೂಪಿಸಿರುವನೆಂಬುದು ಕಂಡುಬಾರದಿರದು. ಗಮನಿಸಬೇಕಾದ ಇನ್ನೊಂದು ಮಾತೆಂದರೆ, ಶಿವನ ವ್ಯಕ್ತಿತ್ವದ ಅನೇಕ ಅಂಶಗಳು ನಮಗೆ ಗೊತ್ತಿದ್ದುವೇ ಆಗಿದ್ದರೂ, ಅವನ್ನು ಕಾವ್ಯದಲ್ಲಿ ಮೂಡಿಸುವಾಗ ಮುದ್ದಣನು ಹೊಸ ಹೊಸ ಶಬ್ದಗಳನ್ನು ಸೃಷ್ಟಿ ಮಾಡುತ್ತಿದ್ದುದು. ಜೊತೆಗೆ, ಒಮ್ಮೆ ಬಳಸಿದ ಶಬ್ದಗಳನ್ನು ಮತ್ತೆ ಮತ್ತೆ ತರಲು

ಅವನ ಮನಸ್ಸು ಒಡಂಬಡುತ್ತಿದ್ದಿಲ್ಲ. ಶಿವವಾಚಿ ಶಬ್ದಗಳ ೧೮೮ : ೩೦೫ ಈ ಒಟ್ಟಿನ ಪ್ರಮಾಣವನ್ನು (ratio) ಗಮನಿಸಿದಾಗ ಇದು ವೇದ್ಯವಾಗುತ್ತದೆ.

ಇನ್ನೀಗ ಮುದ್ದಣನು ಕಥಾ ಸಂದರ್ಭಗಳಲ್ಲಿ, ಮತ್ತು ಇತರ ವರ್ಣನೆಗಳಲ್ಲಿ ಎಷ್ಟರ ಮಟ್ಟಿಗೆ ಶಿವಪಾರಮ್ಯವನ್ನು ತೋರಿದ್ದಾನೆಂಬುದನ್ನು ನೋಡೋಣ. ಮುದ್ದಣನು ಹಳೆಯ ಕವಿಗಳಂತೆ ದೇವತಾಸ್ತುತಿಯಿಂದ ಕಾವ್ಯವನ್ನು ಆರಂಭಿಸುವ ಪ್ರವೃತ್ತಿಯ ವನಲ್ಲವಾದರೂ, ಮೊದಲಿನ ಮೂರು ಕೃತಿಗಳಲ್ಲಿ ಆ ಕ್ರಮವೇ ಇದೆ, ಹಾಗೆ ಮಾಡುವಾಗ ಅವನು ಶಿವನಿಗೇ ಆದ್ಯತೆಯನ್ನು ನೀಡಿದ್ದಾನೆ. ರತ್ನಾವತೀ ಕಲ್ಯಾಣವನ್ನು 'ಹರಗಿರಿಜೆ ಯರಿಗೆ ಎರಗಿ' ಆರಂಭಿಸುತ್ತಾನೆ. ಹಾಗೂ 'ಪುರಹರನ ಕೃಪೆಯಿಂದ ಮುಂಗಥೆಯನ್ನು ವರ್ಣಿಪೆ'ನೆಂದು ಅದೇ ಪದ್ಯದಲ್ಲಿ ಹೇಳಿದ್ದಾನೆ. ಕುಮಾರವಿಜಯದಲ್ಲಿ ಗಣೇಶಸ್ತುತಿ ಮೊದಲಿಗೆ ಇದೆಯಾದರೂ, ಅದರ ನಂತರದ್ದು ಹರಸ್ತೋತ್ರವೇ. ಇದರಲ್ಲಿ ಕಥೆ ಹೇಳುವ ಸೂತ ಮತ್ತು ಅದನ್ನು ಆಲಿಸುವ ಮುನಿಗಳು ಪುರಹರನನ್ನು 'ನಿಶ್ಚಲ ಚಿತ್ತದಿಂದ ನೆನೆದು' ಮುಂದುವರಿಯುತ್ತಾರೆ. ಶ್ರೀ ರಾಮ ಪಟ್ಟಾಭಿಷೇಕದ ನಾಂದೀಪದ್ಯ ಶಿವ-ರಾಮರಿಬ್ಬರದೂ ಸ್ತುತಿಯಾಗಿದೆ. ಶ್ಲೇಷೆಯಿಂದಾಗಿ, ಕುಮಾರ ವಿಜಯದ ಕೊನೆಯಲ್ಲಿ ಮುದ್ದಣನು 'ಹರನು ಪ್ರೇರೇಪಿಸಿದ ತೆರನಿದೆ ಬರೆದೆ' ಎಂದು ಸ್ಪಷ್ಟಗೊಳಿಸಿ, ಶಿವನ ಹೆಸರಿನಲ್ಲೇ ಮಂಗಳ ಗೀತ ಹಾಡಿದ್ದಾನೆ.

ಮುದ್ದಣನು ತನ್ನ ಕೃತಿ ಪಂಚಕದಲ್ಲಿ ಚಿತ್ರಿಸಿದ ಪಾತ್ರಗಳಲ್ಲಿ ಮುಕ್ಕಾಲು ಪಾಲಿನ ಜನ ಶಿವಭಕ್ತರು. ಅವರಲ್ಲಿ ಎದ್ದು ಕಾಣುವವರೆಂದರೆ ನಾರದ ಹಾಗೂ ಇಂದ್ರ-ಇಂದ್ರಾಣಿಯರು. ವೈಕುಂಠ ಲೋಕದಲ್ಲಿದ್ದುಕೊಂಡು ಸದಾ ವಿಷ್ಣುಧ್ಯಾನದಲ್ಲಿ ನಿರತ ನಾಗಿರಬೇಕಾದ ನಾರದನು ಶಿವದೀಕ್ಷೆಯನ್ನು ಹೊಂದಿದನೆ ? ಎಂದೆನಿಸುವಷ್ಟು ಶಿವ ಧ್ಯಾನ್ಯದಲ್ಲಿ ತೊಡಗಿದ್ದಾನೆ! ಅವನು ನಮಗೆ ಮೊದಲು ಕಾಣಿಸಿಕೊಳ್ಳುವುದು ದೃಢ ವರ್ಮನ ಆಸ್ಥಾನದಲ್ಲಿ. ಆಗಿನ 'ಕಂತು ಪಿತನಂ ಮನದಿ ಚಿಂತಿಸುತ' ಎಂಬೊಂದು ಕುಂಟುಪಂಕ್ತಿಯನ್ನು ಬಿಟ್ಟರೆ, ಮತ್ತಿನದೆಲ್ಲ ಶಿವಸ್ತುತಿಯೇ. ದೃಢವರ್ಮನಾದರೂ ಮೂಲತಃ ಶ್ರೀಕಾಂತನ ಕಟಾಕ್ಷವನ್ನು ಹೊಂದಿದವ. ಆದರೆ ಅವನಿಗೆ ಕರುಣದಿಂದ ಮಕ್ಕಳನ್ನು ದಯಪಾಲಿಸುವವ ಭಾವಜಾರಿಯು. ದೃಢವರ್ಮನ ಹೆಂಡತಿ ಸೌರಂಭೆ ಯಾದರೂ ಪುರಹರನನ್ನು ನೆನೆವುತ್ತ ಮಂತ್ರಪೂತ ಫಲವನ್ನು ಭಕ್ಷಿಸುತ್ತಾಳೆ.

ನಾರದನ ಎರಡನೇ ಭೆಟ್ಟಿ ನಮಗೆ ಶೂರ ಪದ್ಮಾಸುರನ ಆಸ್ಥಾನದಲ್ಲಿ. ಅವನು 'ಕಾಲ ಕಂಧರ ಕಾಲ ಕಾಲ ದಿಶಾ ಪಟ ಫಾಲನಯನ ಶಂಕರ' ಎಂದು ಹಾಡಿಕೊಳ್ಳುತ್ತಲೇ ಒಳಗೆ ಪ್ರವೇಶಿಸುವನು. ಅಲ್ಲಿ ಕಲಹ ಬೀಜವನ್ನು ಬಿತ್ತಿ ಇಂದ್ರನ ಆಸ್ಥಾನಕ್ಕೆ ಹೋದಾಗ ಇಂದ್ರನು ಬರಮಾಡಿಕೊಳ್ಳುವುದು, 'ಈಶ ಗಿರೀಶ ಗಣೇಶ ಮಹೇಶ ಉಮೇಶನ ಕರುಣದ ದಾಸ'ನನ್ನು. ಮತ್ತೊಂದು ಬಾರಿ ಇಂದ್ರನಲ್ಲಿಗೆ ಬಂದಾಗಲೂ ಅವನ ತಾಳ-ತಂಬೂರಿಗಳು ಶಿವಸ್ತೋತ್ರವನ್ನೇ ನುಡಿಸುತ್ತಿದ್ದವು ! ಯಕ್ಷಗಾನಗಳಲ್ಲಿ ಬರುವ ನಾರದ ಪಾತ್ರವು ಶಿವನನ್ನು ಹಾಡಿ ಹೊಗಳುವುದು ಅಪೂರ್ವವಲ್ಲವಾದರೂ

ಮುದ್ದಣ ಸೃಷ್ಟಿಸಿದ ನಾರದ ಮಾತ್ರ ೯೯% ಶಿವಭಕ್ತನೇ ಇದ್ದಾನೆ.*

ರಾಕ್ಷಸನಾದ ಪದ್ಮಾಸುರನು ಇಂದ್ರಾಣಿಯನ್ನು ಅಪಹರಿಸಿಕೊಂಡು ಹೋಗುವ ಬರಿ ವಾರ್ತೆಯಿಂದ ಕಂಗೆಟ್ಟ ಇಂದ್ರನಿಗೂ ಸಾಮಾನ್ಯ ಮನುಷ್ಯನಿಗೂ ಅಂತರವೇ ಇಲ್ಲ. ಇವರಿಂದ ಪಾರಾಗಲು ಗಂಡ ಹೆಂಡತಿಬ್ಬರೂ ಮೊದಲಿನಿಂದ ಕೊನೆಯವರೆಗೆ ಶಿವನನ್ನೇ ನಂಬಿದ್ದಾರೆ. ಪದ್ಮಾಸುರನ ಇಂಗಿತವು ತಿಳಿದಾಗ 'ಏತಕೆ ಮುನಿದನೊ ಶಂಕರನು ?' ಎಂದು ಇಂದ್ರನ ಯೋಚನೆ. ಇಂದ್ರಾಣಿ ? ಡಿಟೊ ! 'ಕಂಗೊರಳ ದಯವನು ತೊರೆದನೆ ?' ಎನ್ನುತ್ತಾಳೆ. ಆ ಮುಂದೆ ಇಂದ್ರನು ಸತಿಯೊಡನೆ 'ವಿಪಿನದೊಳ್ ಈಶನ ಪದಯುಗ ಜಪಿಸುತ್ತ' ಇದ್ದನು. ಅತ್ತ, ಅಮರಾವತಿಯಲ್ಲಿ ಮಗ ಜಯಂತನು ಸೆರೆಹಿಡಿಯಲ್ಪಟ್ಟ ವಾರ್ತೆ ತಿಳಿದಾಗ 'ಚಂದ್ರಶೇಖರನ ಹೊರತು ಎಮ್ಮ ಸಾಕುವರಿಹರೆ' ಎಂದು ಇಂದ್ರಾಣಿ ದುಃಖಿಸುತ್ತಾಳೆ. ಆಗ 'ಕ್ಲೇಶ ಲೇಶ ಬೇಡ. ಮಧುರಭಾಷೆ, ಹರನ ಭಜಿಸಿರು' ಎಂದು ಅವಳ ಪತಿರಾಯನು ಸಮಾಧಾನ ಹೇಳುವನು. ಪದ್ಮಾಸುರನ ತಂಗಿ ಅಜಮುಖಿಯು ತನ್ನ ಮೇಲೆ ಕೈಮಾಡಿದಾಗಲಂತೂ ಇಂದ್ರಾಣಿಯ ಶಿವಭಕ್ತಿ ಉಕ್ಕೇರಿದೆ. 'ನಂಬಿದ ಭಕ್ತರ ಸಲಹುವೆನೆಂಬುವ ಬಿರುದೆಲ್ಲಿಹುದೆಲೆ ಶಂಭು, ಸದಾಶಿವ ಮೃಡ ಎನಗಿಂಬಿಲ್ಲವೆ ಸ್ವಾಮಿ' ಎಂದು ಹಲುಬುತ್ತಾಳೆ. ಜೊತೆಗೆ ಗಿರಿಜೆಯನ್ನೂ ಪ್ರಾರ್ಥಿಸುತ್ತಾಳೆ.

ದೇವೇಂದ್ರನ ಮನಃಸ್ಥಿತಿಯೇ ಹಾಗಿದ್ದಾಗ ಉಳಿದ ದೇವತೆಗಳ ಪಾಡೇನು ? ಮುದ್ದಣನು ಅವರ ಮುಖದಿಂದ ಹಲವಾರು ಸ್ತೋತ್ರಗಳನ್ನು ಹೊರಡಿಸಿ ಆ ಮೂಲಕ ತನ್ನ ಶಿವಭಕ್ತಿ ಪ್ರದರ್ಶಿಸಿದ್ದಾನೆ.

ಮುದ್ದಣನು ಕೈಕೇಯಿಯನ್ನೂ ಶಿವಭಕ್ತೆಯನ್ನಾಗಿ ಮಾಡಿದ್ದಾನೆ. ಸಂದರ್ಭ: ಶ್ರೀ ರಾಮನು ಅಯೋಧ್ಯೆಗೆ ಮರಳಿದ ಮೇಲೆ ತನ್ನ ತಾಯಂದಿರನ್ನು ಕಾಣಹೋಗಿದ್ದುದು. ಕೈಕೇಯಿಯ ಎದುರಿಗೆ ನಿಂತು ರಾಮನು ಮಾತನಾಡಿಸಿದರೂ ಆಕೆ ಮಾತಾಡಲೊಲ್ಲಳು. ಅದರ ಕಾರಣವನ್ನು ಮುದ್ದಣನು ಊಹಿಸಿದ್ದು ಹೀಗೆ : ''ಏಕಚಿತ್ತದಿಂ ಮೌನಗೊಂಡು ಅಭವನಂ ಧ್ಯಾನಿಪಳೆ? '' ಇನ್ನೊಬ್ಬ ಶಿವಭಕ್ತನೆಂದರೆ, 'ಕಾಮಹರನಡಿಯ ನೆನೆವ ಯೋಗಿಯಹೆ' ಎಂದು ಹೇಳಿಕೊಳ್ಳುವ ದೂರ್ವಾಸ. ರಾಜಕುಮರಿ ರತ್ನಾವತಿಯ ಶಿವ ನಿಷ್ಠೆಯು 'ಲೋಕೇಶನಪ್ಪಣೆಯ ಲೋಕದೊಳು ಮೀರ್ವರಾರು' ಎಂದು ತಂದೆಗೆ ಉಪದೇಶಿಸುವಷ್ಟು ಗಾಢವಾದುದು. ಅದನ್ನು ಕೇಳಿ ಅವನಿಗೆ ತುಂಬ ಸಂತೋಷ ವಾಯಿತಂತೆ. ಅವಳ ಪ್ರಿಯಕರನಾದ ವತ್ಸಾಖ್ಯ, ಅದರಂತೆ ಭರತ ಇವರು ಕೂಡ ಶಿವನನ್ನೇ ನೆನೆಯುತ್ತಾರೆ. ಮುದ್ದಣನ ಪಾತ್ರಗಳಿಗೆ ಆಣೆ ಹಾಕುವ ಪ್ರಸಂಗ ಬಂದರೆ, ಜಿತಕಾಲನಾಣೆ, ವಿಧುಧರನಾಣೆ, ಧೂರ್ಜಟಿಯಾಣೆ—ಎಂದೇ ಹೇಳುತ್ತಾರೆ. ಇವರ ಪಾಲಿಗೆ 'ಸಂಕಟ ಬಂದಾಗ ಗಿರಿಜಾರಮಣ'ನಲ್ಲದೆ, ವೆಂಕಟರಮಣನಲ್ಲ !

---

* ಬೇರೆ ಕೆಲವು ಯಕ್ಷಗಾನ ಪ್ರಸಂಗಗಳಲ್ಲಿಯೂ ನಾರದ ಶಿವಭಕ್ತನಾದುದಿದೆ.

ರಾಕ್ಷಸರಿಗೂ ಶಿವನೇ ದೇವರು—ಅವರಲ್ಲಿ ಕೆಲವರನ್ನು ಅವನು ಸಂಹರಿಸಿದ್ದರೂ ಕೂಡ! ದೇವತೆಗಳಂತೂ, ಶಿವನಿಂದಲೇ ಅವರು ಅಷ್ಟು ಸೊಕ್ಕಿಗೇರಿದುದೆಂದು ನೆರೆ ನಂಬಿದ್ದಾರೆ. ಭಾಳನಯನನು ಅವರ ಆಳಾಗಿಹನು'' ಎಂದು ನಿರ್ಭಿಡೆಯಿಂದ ಹೇಳುತ್ತಾರೆ. ಅದ್ಭುತ ರಾಮಾಯಣದಲ್ಲಿ ಶತಕಂಠನಿಗೆ ಮಹಾದೇವನ ಕೃಪಾಪ್ರಸಾದ ಎದ್ದಿತೆಂದೇ, ಅವನು ರಾಮನನ್ನು ಹಣ್ಣು ಮಾಡಿದನು. ಕುಮಾರವಿಜಯದಲ್ಲಿ ಬರುವ ಭಾನುಕೋಪನು ಯುದ್ಧಕ್ಕೆ ಹೊರಡುವ ಮುನ್ನ ತಾಯಿಯ ಬಳಿಗೆ ಹೋದಾಗ, ಆಕೆ 'ಪುರಹರನ ಪಾದವನ್ನು ನೆರೆನಂಬು' ಎನ್ನುತ್ತಾಳೆ. ಅವನ ಬಂಧುವಾದ (ಪದ್ಮಾಸುರನ ಇನ್ನೊಬ್ಬ ಮಗ) ಹಿರಣ್ಯನನ್ನು ನಮಗೆ ಪರಿಚಯಿಸಿಕೊಡುವಾಗ, ಮುದ್ದಣನು 'ಶ್ರೀ ಮಹೇಶ ಪದಾಬ್ಜ ಮಧುಕರ ಪ್ರೇಮಪುತ್ರ' ನೆಂಬ ಶಿಫಾರಸನ್ನು ಅವನಿಗೆ ಕೊಟ್ಟುಬಿಟ್ಟಿದ್ದಾನೆ. ವಿಭೀಷಣನನ್ನು ನೆನಪಿಗೆ ತರುವ ಹಿರಣ್ಯನು ಷಣ್ಮುಖ ನೊಂದಿಗೆ ಯುದ್ಧ ಬೇಡವೆಂಬ ಸಲಹೆಯನ್ನು ಮಾಡಿದ್ದಾಗ, ತಂದೆ ಕೇಳುವುದಿಲ್ಲ. 'ಚಿಂತೆಯಿಲ್ಲ, ಯುದ್ಧದಲ್ಲಿ ಮಡಿದರೆ, ವೃಷಾರೂಢನಂಘ್ರಿಯನ್ನು ಕಾಣಬಹುದು' ಎಂಬ ಮನೋಭಾವ ಅವನದು. ಯುದ್ಧರಂಗದಲ್ಲಿ ಸ್ವತಃ ಶಿವನ ಮಗನೇ ಎದುರಿಗಿದ್ದ ರೇನಾಯಿತು, 'ಪಿನಾಕಿ ಭಕುತರು ನಾವು ರಣದೊಳಪಜಯ ಸೋಕದು' ಎಂಬ ದೃಢಭಕ್ತಿ ಅವನದು.

ಇನ್ನೀಗ ಶ್ರೀಹರಿ, ಅವನ ಸುದರ್ಶನ ಚಕ್ರವು ರುದ್ರಾನುಗ್ರಹದಿಂದ ದೊರೆತು ದೆಂದು ಮುದ್ದಣನು ಹೇಳುತ್ತಾನೆ, ಅದ್ಭುತ ರಾಮಾಯಣದಲ್ಲಿ. ಅದರಲ್ಲಿಯೆ ಒಂದೆಡೆ, ರಾಮನನ್ನು 'ನೀನೆ ಮಾದೇವಂ, ನೀನೆ ಮಾಧವಂ' ಎಂದು ಸೊಗಸಾಗಿ ವರ್ಣಿಸಿದ್ದಿದೆ. ಇಲ್ಲಿ ಹರಿಹರಾಭೇದವು ಸ್ಪಷ್ಟವಾಗಿ ಬಂದಿದೆ. ಇತ್ತ ಪದ್ಮಾಸುರ ರಕ್ಕಸನಿಂದ ಬಂದ ವಿಪತ್ತನ್ನು ಪರಿಹರಿಸಲು ಬ್ರಹ್ಮನ ಸಲಹೆಯ ಮೇರೆಗೆ ಇಂದ್ರನು ದೇವತೆಗಳೊಡನೆ ಕಾತರಭಾವದಿಂದ ವಿಷ್ಣುವಿನ ಬಳಿ ಬಂದರೆ, ಅವನಲ್ಲಿರುವ ಪರಿಹಾರ ಒಂದೇಯೆ, ''ದಯಾಂಭುಧಿ ಚಂದ್ರಶೇಖರನ ಮರೆ ಸಾರು, ನಿಜ ಪತ್ನಿಯೊಡನೆ !'' ಇದಕ್ಕೆ ಪ್ರತಿ ಯಾಗಿ ಒಂದು ಸನ್ನಿವೇಶವು ಕುಮಾರವಿಜಯದಲ್ಲಿ ಬರುತ್ತದೆ. ಗಿರಿಜೆಯು ತನ್ನ 'ಕುಮಾರ'ನನ್ನು ಯುದ್ಧಕ್ಕೆ ಕಳಿಸುವಾಗ ಉಪದೇಶಿಸುವುದು ಹೀಗೆ : ''ರತಿಪತಿಪಿತನ ನೆಚ್ಚುತ ಜತನದಿ ದಿತಿಸುತರನು ಜಯಿಸುತ ಬಾ.''

ಹಾಗೆಂದು ಮುದ್ದಣನ ಮಾಧವನು ನಿಷ್ಕ್ರಿಯನೇನಲ್ಲ. ತನ್ನ ಚೊಚ್ಚಿಲ ಕೃತಿಯಲ್ಲಿ ಮುದ್ದಣನು ಶ್ರೀಕೃಷ್ಣನಿಗೆ ಮಂಗಳವನ್ನು ಹಾಡಿದ್ದಾನೆ. ಅದ್ಭುತ ರಾಮಾಯಣದ ಪೂರ್ವಾರ್ಧದಲ್ಲಿರುವ ಶ್ರೀಮತೀಪರಿಣಯ ಪ್ರಸಂಗದಲ್ಲಿ ಅವನೇ ಕಥಾನಾಯಕನು. ನಾರದನಿಗೆ ಬುದ್ಧಿಗಲಿಸಿದ, ಹೃದ್ಯವಾದ ಆ ಸನ್ನಿವೇಶವನ್ನು ಮುದ್ದಣನು ಆತ್ಮೀ ಯತೆಯಿಂದ ಚಿತ್ರಿಸಿದ್ದಾನೆ. ತಿಳಿಯಬೇಕಾದ್ದೆಂದರೆ, ಮುದ್ದಣನು ಶ್ರೀ ಹರಿಯ ಮಟ್ಟವನ್ನೇನು ಕೆಳಗಿಳಿಸಿಲ್ಲ; ಹರನಿಗೆ ಸಮನಾಗಿಯೆ ಅವನು ಕೊಟ್ಟಿದ್ದಾನೆ. ಆದರೆ ಮಾದೇವನಿಗೆ ಕೊಟ್ಟಷ್ಟು ಮಹತ್ವ – ಪ್ರಾಶಸ್ತ್ಯಗಳನ್ನು ನಮ್ಮ ಮಾಧವನಿಗೆ ಕೊಟ್ಟಿಲ್ಲ !

ಶ್ರೀರಾಮಚಂದ್ರ, ಶಿವರ ಸಂಬಂಧವು ಇದಕ್ಕೂ ಹೆಚ್ಚು ಆಳವಾಗಿ ಬಂದಿದೆ; ವೈವಿಧ್ಯದಿಂದ ಕೂಡಿದೆ. ಶ್ರೀರಾಮನು 'ಇಂದುಶೇಖರನ ಕೃಪೆ ಮೊದಲು ಏಮ್ಮೊಳಾಯ್ತು' ಎಂದೂ, ಕೈಕೇಯಿಯೆದುರು 'ಮಾತೆ ನೀಂ ಪರಸಲ್, ಎಣ್ಮಯ್ಯವಂ ಕರುಣಿಸಲ್' ಎಂದೂ ಶಿವನ ಮೇಲ್ಮೆಯನ್ನು ಒಪ್ಪಿಕೊಂಡಿದ್ದಾನೆ. ಕೈಲಾಸದ ಈ ಬರಿಗೈ ಗೊರವನು, ರಾಮನ ಪಟ್ಟಾಭಿಷೇಕದ ಕಾಲಕ್ಕೆ ಸುವರ್ಣವನ್ನು ಉಡುಗೊರೆಯಾಗಿ ಕೊಟ್ಟನು. ಸ್ವಯಂ ಬಂದು 'ನಿನ್ನ ನರನಟನೆಯಿಂದ ಧರೆಗೆ ಮಂಗಳವಾಯ್ತು....ನಿನ್ನ ವತರಣೆ ಲೇಸು ಪೊಸತಾದುದೆಂದು' ಅಭವಂ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಶಿವನು ರಾಮನಿಗೆ ಹಿರಿಯಣ್ಣನಂತೆ ಇದ್ದರೂ, ರಾಮಾಶ್ವ ಮೇಧದ ಯಾತ್ರೆಯ ಕಾಲಕ್ಕೆ ರಾಮನಿಗೆ ಹೆಚ್ಚಿನ ಪ್ರಾಶಸ್ತ್ಯ ಸಂದಿದೆ. ಇಲ್ಲಿ ಶಿವನೂ ರಾಮನಂತೆ ಭೂಮಿಗಿಳಿದು ಬಂದಿದ್ದಾನೆ. ವೀರಮಣಿ ಎಂಬ ರಾಜನ ಮಗಳು ಇಕ್ಷು ಮತಿಯ ಗಂಡನಾಗಿ, ಅಳಿಯನು ತನ್ನಲ್ಲಿಯೇ ನಿಂತು ರಾಜ್ಯರಕ್ಷಣೆ ಮಾಡಬೇಕೆಂಬುದು, ಮದುವೆಯ ಕಾಲಕ್ಕೆ ಮಾವ ಹಾಕಿದ ಕರಾರು. ಸರಿ; ರಾಮನ ಯಾಗದ ಕುದುರೆ ಬಂದಿತು. ವೀರಮಣಿಯು ಅದನ್ನು ಕಟ್ಟಿಹಾಕಿದಾಗ ಶಿವನು ರಾಮನ ಸೈನ್ಯದ ವಿರುದ್ಧ ಕಾದಾಡ ಬೇಕಾಯಿತು. ಶಿವನು ಹನುಮಂತನೊಡನೆ ಸೆಣಸುತ್ತಿದ್ದಾಗ ಶ್ರೀರಾಮನೇ ಯುದ್ಧ ರಂಗಕ್ಕೆ ಬರಬೇಕೆ! ಆಗ ಯುದ್ಧವನ್ನು ನಿಲ್ಲಿಸಿ, ಶಿವನು ರಾಘವನ ದರ್ಶನಕ್ಕೆ ಧಾವಿಸಿ, ಕುದುರೆಯನ್ನು ಕಟ್ಟಿಹಾಕಿದ ತನ್ನ ತಪ್ಪನು ಮನ್ನಿಸಬೇಕೆಂದು ಕೇಳಿಕೊಳ್ಳುವನು. 'ತನಗುಂ ಶಿವಂಗಂ ಇನಿಸುಂ ಭಿನ್ನವಿಲ್ಲೆ'ಂಬ ಮಾತನ್ನು ರಾಮನು ಬಹಿರಂಗವಾಗಿ ಸಾರುತ್ತಾನೆ. ಇದನ್ನೆಲ್ಲ ಗಮನಿಸಿದಾಗ, ಮುದ್ದಣನು ಚಿತ್ರಿಸಿದುದು ಶಿವ-ರಾಮನನ್ನು; ವಿಷ್ಣುವಿನ ದಶಾವತಾರಗಳಲ್ಲಿ ಒಬ್ಬನಾದ ರಾಮನನ್ನಲ್ಲ, ಎನಿಸುತ್ತದೆ.

ವಿವಿಧ ವರ್ಣನೆಗಳ ಸಂದರ್ಭದಲ್ಲಿ ಮುದ್ದಣನು ಶಿವನನ್ನು ನೇರವಾಗಿ ಪ್ರಶಂಸಿಸಿ, ತನ್ನ ಭಕ್ತಿಯನ್ನು ವ್ಯಕ್ತಪಡಿಸಿದ ಉದಾಹರಣೆಗಳು ಬೇಕಾದಷ್ಟಿವೆ. ಮಳಲಿ ಸುಬ್ಬ ರಾಯರು 'ವಿಧುಧರನ ಸದ್ಭಕ್ತ'ರಂತೆ. ಅವರ ಈ ಪರಮ ಶಿಷ್ಯನು ಅವರಂತೆಯೇ ಇರು ವುದು ಸಹಜವೆನ್ನೋಣವೇ? ಮುದ್ದಣನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ದ್ದಾನೆ. ಶಿವನ ಒಂದು ಹೆಸರನ್ನೇ ತಾನಿಟ್ಟುಕೊಂಡಿದ್ದಾನೆ!! ಲಕ್ಷ್ಮೀ ನಾರಾಯಣ? ಅಲ್ಲ, ಅದು ತೊಟ್ಟಿಲ ಹೆಸರಾಯಿತು. 'ಮುದ್ದಣ' ಎಂಬುದು ಅವನ ತಂದೆತಾಯಿಗಳು ಅಚ್ಚೆಯಿಂದ ಕರೆದ ಹೆಸರಾಯ್ತು. ಮುದ್ದಣನಿಟ್ಟುಕೊಂಡಿದ್ದ ಕಾವ್ಯನಾಮ ಕನ್ನ(ಣ್ಣ)ಡಿಗ! ರಾಮನು ತನ್ನ ಕಣ್ಣನ್ನು ಕಿತ್ತು ಶಿವನ ಪಾದಕ್ಕೆ ಒಪ್ಪಿಸಿದನೆಂಬುದು ಯಾವುದೋ ಪುರಾಣದ ಕಥೆ. ಆದಕಾರಣ ಶಿವನು ಕಣ್ಣು + ಅಡಿ + ಗ = ಕಣ್ಣಡಿಗ. ಅದು ಕನ್ನಡಿಗ ಎಂದಾದುದು ಮುದ್ರಣ ದೋಷವೊ ಮುದ್ದಣನ ಆಶಯವೋ ತಿಳಿಯದು. ಅಂತೂ ಆ ಪದವು ಈ ಮುದ್ದಣನ ಮೂರು ಕೃತಿಗಳಲ್ಲಿ ಪರ್ಯಾಯ ಮುದ್ರಿಕೆಯಾಗಿ ಬಂದಿದೆ.

ಮುದ್ದಣನ ಪೇಟೆಂಟ್ ಆದ ಸಪ್ತಾಕ್ಷರೀ ಮಂತ್ರವನ್ನು ಶಿವನೇ ಮೊದಲು

ಜಪಿಸಿದುದಂತೆ ! ಅದರಿಂದ ಶಿವನಿಗೆ ಸಿದ್ಧಿಯೂ ದೊರೆಯಿತಂತೆ. ರಾಮಚಾರಿತ್ರ್ಯವೆಂಬ ಪೀಯೂಷದ ಕಣಗಳು ಸ್ವರ್ಗದಿಂದ ಭೂಮಿಗೆ ಜಗಳ್ದುವು. ಸರಿ; ಅದು ಮುದ್ದಣನಿಗೆ. 'ಶಿವನ ಜಟಾಜೂಟದಿಂ ಕೆಳಗೆ ಜಗುಳ್ದ ವಿಯದ್ಗಂಗಾಸಲಿಲ'ದಂತೆ ಭಾಸವಾಯಿತು. ಸಮುದ್ರದ ವರ್ಣನೆ ಮಾಡುವಾಗ (ರಾಮಪ. ದಲ್ಲಿ) ಒಂದೆಡೆ 'ಸಮುದ್ರನಾಥನು' ದೇವತೆಗಳೆಲ್ಲ ತನ್ನನ್ನು ಕಡೆಗಣಿಸಿ ತಮ್ಮ ಸ್ವಾರ್ಥ ಸಾಧಿಸಿಕೊಂಡರೆಂದು ಹೇಳುವಂತೆ ತೆರೆಗಳು ಮೊರೆಯುತ್ತಿದ್ದುವೆಂದು ವರ್ಣಿಸಿದ್ದಿದೆ. ಉದಾಹರಣೆಗೆ ಇಂದ್ರ: ಅವನ ಕಾಮಧೇನು ಐರಾವತಗಳೆಲ್ಲ ಸಮುದ್ರಮಂಥನದ ಕಾಲಕ್ಕೆ ದೊರೆತವುಗಳು. ಅಷ್ಟನ್ನೂ ಅವನು ಪಡೆದು ಸಮುದ್ರದ ನೀರನ್ನು ಮೇಘರೂಪದಿಂದ ಹೀರುತ್ತಾನಲ್ಲವೆ. ಆದರೆ ಮೃಡನು ಹಾಗಲ್ಲ ! ವಿಷವನ್ನಿತ್ತರೂ ಆತ ವಿಷವನ್ನೆಣಿಸಲಿಲ್ಲವಂತೆ.

ಇನ್ನಷ್ಟು ಉದಾಹರಣೆಗಳನ್ನು ಕೊಡೋಣವೆ? ವಾಲ್ಮೀಕಿ ಮುನಿಯನ್ನು ವರ್ಣಿಸುವ ಪ್ರಸಂಗದಲ್ಲಿ ಮುದ್ದಣನಿಗೆ ಶಿವನ ವೇಷ-ಭೂಷಣಗಳೇ ಹೋಲಿಕೆಯಾಗಿ ದೊರೆತವು. ರಾಮಾಶ್ವಮೇಧದಲ್ಲಿ ಒಂದೆಡೆ ಹೂಗಳ ವರ್ಣನೆ ಮಾಡಬೇಕೆಂದೆನಿಸಿತು, ಮುದ್ದಣನಿಗೆ. ಅವು ಕಾಮನ ಬತ್ತಳಿಕೆಯಂತಿವೆ, ಎಂದು ಊಹಿಸಿದ. ಯಾಕೆ? ತಪಸ್ಸಿಗೆ ಕುಳಿತಿದ್ದ ಶಿವನನ್ನು ಗೆಲ್ಲಲು ತನ್ನ ಬತ್ತಳಿಕೆಯಲ್ಲಿದ್ದ ಐದು ಬಾಣಗಳು ಸಾಕಾಗಲಿಲ್ಲ ವೆಂದು ಕಾಮನು ಇವನ್ನು ಒಟ್ಟುಗೂಡಿಸಿದನೆಂದು ಮುದ್ದಣ ಕಲ್ಪಿಸಿದ್ದಾನೆ. ಇದೊಂದು ಎಳೆದು ತಂದ ಕಲ್ಪನೆ ಎಂದೆನಿಸಬಹುದು. ಆದರೆ ಮುದ್ದಣನ ಉತ್ಕಟ ಶಿವಭಕ್ತಿಗೆ ಮಿತಿಯೆಲ್ಲಿದೆ? ಅವನು ಶಿವನನ್ನು ತೆಂಗಿನಕಾಯಿಗೂ ತಳಕು ಹಾಕಿದ್ದಾನೆ. ಶಿವನಂತೆ ಅದೂ ಮುಕ್ಕಣ್ಣ ಹಾಗೂ ತೊವಲ್ವೊದೆಯು !

ಮುನಿಗಳ ಆಶ್ರಮ ವರ್ಣನೆಯಲ್ಲಿ, ಅಲ್ಲಿದ್ದ ಪ್ರಾಣಿಗಳು ತಮ್ಮ ವೈರತ್ವವನ್ನು ಮರೆತು ಕೂಡಿಬಾಳುತ್ತಿದ್ದುವೆಂದು ನಮ್ಮ ಪ್ರಾಚೀನ ಕವಿಗಳು ತಪ್ಪದೇ ಹೇಳಿದ್ದಾರೆ. ಮುದ್ದಣನು ಇದಕ್ಕೆ ಹೊರತಲ್ಲ. ವಾಲ್ಮೀಕಿಯ ಆಶ್ರಮದಲ್ಲಿ ಸಿಂಹ, ಎತ್ತು, ನವಿಲು, ಸರ್ಪ—ಈ ಪ್ರಾಣಿಗಳು ಜೊತೆಯಾಗಿ ಇದ್ದುವಂತೆ. ಇವೇ ಪ್ರಾಣಿಗಳನ್ನು ಮುದ್ದಣನು ಆಯ್ದುಕೊಂಡದ್ದರ ಬುದ್ಧಿವಂತಿಕೆ ಹೀಗಿದೆ ! ಸಿಂಹವು ಪಾರ್ವತಿಯ ವಾಹನ; ಬಸವ ಅವನದ್ದೇ. ಇತ್ತ ನವಿಲು ಷಣ್ಮುಖನ ವಾಹನವಾದರೆ, ಹಾವು ಗಣಪತಿಯ ಹೊಟ್ಟೆಯ ಪಟ್ಟಿಯಾಗಿದ್ದಿತು. ತನ್ನ ಬಳಗದವರ ಪರಸ್ಪರ ಕಾದಾಟವನ್ನು ನಿಲ್ಲಿಸಲು ತಾನೇ ವಿಷವನ್ನು ನುಂಗಿದ ಶಿವನು ಮೇಲಣ ನಾಲ್ಕು ಪ್ರಾಣಿಗಳಿಗೆ ಸಹ ಜೀವನದ ಬುದ್ಧಿವಾದ ಹೇಳಿದನೊ ಎಂಬಂತೆ, ಅವು ಅಲ್ಲಿ ಇದ್ದುವಂತೆ ! ಮುದ್ದಣನು ಹಳೆಯ ಕವಿಸಮಯ ವೊಂದನ್ನು ಶಿವನ ಹೆಗ್ಗಳಿಕೆಗೆ ನಿದರ್ಶನವಾಗಿ ಮಾರ್ಪಡಿಸಿಕೊಂಡಿದ್ದಾನೆ.

ಅದರಂತೆ ಋತುವರ್ಣನೆಯೂ ಹಳಗನ್ನಡ ಕಾವ್ಯದಲ್ಲಿ ಕ್ರಮಪ್ರಾಪ್ತವಾದುದು. ಚಳಿಗಾಲ ಬಂದಾಗ ವಿಷ್ಣು ಮೊದಲಾದ ದೇವತೆಗಳು ಹೇಗೆ ತಮ್ಮನ್ನು ರಕ್ಷಣೆ ಮಾಡಿ ಕೊಂಡರೆಂಬುದರ ವರ್ಣನೆ ರಾಮಾಶ್ವಮೇಧದಲ್ಲಿ ಬರುತ್ತದೆ. ಅವರಲ್ಲಿ ಶಿವನ ಹೂಟವು ಅತ್ಯಂತ ಮನೋಜ್ಞವಾಗಿದೆ. ಹಿಮಗಿರಿವಾಸನಾಗಿದ್ದರೂ ಶಿವನು ಹಿಮಕ್ಕೆ ಹೆದರಿ, ಹೊತ್ತ

ಹೊರೆಯಾದ ಚಂದ್ರನನ್ನು ಮೊದಲು ಆಕಾಶಕ್ಕೆ ತಳ್ಳಿದನು. ನೆತ್ತಿಯಲ್ಲಿದ್ದ ಗಂಗೆಯನ್ನು ನೆಲಕ್ಕಿಳಿಸಿದನು. ಇವೆರಡೂ ತಂಪನ್ನು ಹೆಚ್ಚಿಸುವಂಥವು, ತಾನೇ. ಪುಣ್ಯಕ್ಕೆಅವನ ಬಳಿ ಹಣೆಗಣ್ಣಿ ಬೆಂಕಿಯಿದ್ದಿತಲ್ಲ! ಶಿವನು ಅದನ್ನು ಉರಿಮಾಡಿ, ಬಿಸಿಬಿಸಿ ಬೂದಿಯನ್ನು ಮೈತುಂಬ ಬಳಿದುಕೊಂಡ. ಮೇಲೆ ದಪ್ಪನಾದ ಹುಲಿ ಚರ್ಮವನ್ನು ಹೊದ್ದುಕೊಂಡ. ಹೇಗೂ ಅರ್ಧನಾರೀಶ್ವರ! 'ಅಂಗಜವೈರಿಸು ಬೆರೆವೊಡಲೊಳಿರ್ದನು'.

ಇನ್ನೊಂದೇ ನಿದರ್ಶನವನ್ನು ಕೊಟ್ಟು ಮುದ್ದಣನ ಅಂತರ್ಯದ ಶಿವಪ್ರೇಮದ ವಿವರಣೆಯನ್ನು ಮುಕ್ತಾಯಗೊಳಿಸೋಣ. ಇಕ್ಷುಮತಿಯ ಗಂಡನಾಗಿ ಶಿವನು ಒಂದಂಶದಲ್ಲಿ ಭೂಮಿಯ ಮೇಲಿದ್ದುದನ್ನೂ ಮಾವನಿಗಾಗಿ ಯುದ್ಧಕ್ಕೆ ಹೊರಟದ್ದನ್ನೂ ಈ ಮೊದಲು ಪ್ರಸ್ತಾಪಿಸಿದ್ದೇವೆ. ನೆನಪಿಡಿ: ಮೊದಲ ಹೆಂಡತಿ–ಪಾರ್ವತಿಯ ತಂದೆಯನ್ನು ಧ್ವಂಸಮಾಡಿದ ಶಿವನು, ಈ ಕಿರಿಯ ಹೆಂಡತಿಯ ಅಪ್ಪನ ಮನೆಯಳಿಯನಾಗಿದ್ದಾನೆ! ಯುದ್ಧಕ್ಕೆ ಹೊರಡುವ ಮುನ್ನ ಶಿವನು ತನ್ನ ಹರೆಯದ ಪತ್ನಿಯನ್ನು ಬೀಳ್ಕೊಡಲೆಂದು ಬಂದನು. ಆಗ ಆ ಚೆಲುವೆ ಅವನನ್ನು ತಡೆದು ನಿಲ್ಲಿಸಿ, ಆ ಬಾನ್–ಕುರುಳನ ಮುಂಗುರಳನ್ನು ತೀಡಿ, ನೇವರಿಸಿದಳು. ಜಟಾಧರನ ಜಡೆಯನ್ನು ಮುಡಿಗಟ್ಟಿದಳು. ಚಂದ್ರಮೌಳಿಯ ನಡುನೆತ್ತಿಯ ಜೋಲ್ಮುಡಿಗೆ ಪೂಸರವನ್ನು ಮುಡಿಸಿದಳು. ಗಂಗೋತ್ತಮಾಂಗನ ಮುಂದಲೆಗೆ ಶಿರಸ್ತ್ರಾಣವನ್ನು ಅಳವಡಿಸಿದಳು. ಫಣಿಕುಂಡಲನ ಕಿವಿಗೆ ಮಕರಕುಂಡಲವನ್ನಿಟ್ಟಳು. ಕಂದುಗೊರಲನ ಬಿಳಿ ಕೊರಳಿಗೆ ಪಚ್ಚೆಯ ಕಂಠಿಕೆಯನ್ನು ತೊಡಿಸಿದಳು. ರುಂಡಮಾಲನ ಕೊರಳಲ್ಲಿ ರುದ್ರಾಕ್ಷಿ ಮಾಲೆಯನ್ನು ಹಾಕಿದಳು. ವ್ಯಾಘ್ರಚರ್ಮಾಂಬರನಿಗೆ ಉತ್ತಮ ವಸ್ತ್ರಗಳನ್ನು ತೊಡಿಸಿದಳು. ಭಸ್ಮಧರನ ಮೈಗೆ ಗಂಧವನ್ನು ಲೇಪಿಸಿದಳು. ಬೆಳ್ಳಡಿಯನ ಧವಳ ಪಾದಕ್ಕೆ ಬಂಗಾರದ ಪಾದುಕೆಯನ್ನು ಒಪ್ಪಿಸಿದಳು. ತ್ರಿಶೂಲಿಯ ಕೈಗೆ ಬಿಲ್ಲು ಬಾಣಗಳನ್ನು ಕೊಟ್ಟಳು. ಫಾಲನೇತ್ರನ ಹಣೆಗೆ ವೀರಸೇಸೆಯನ್ನಿಕ್ಕಿದಳು.... ಮನಸ್ಸಿನಂತೆ ಮಾದೇವ! ಹೀಗೆ ತನಗಿಷ್ಟಬಂದಂತೆ ಅಲಂಕರಿಸಿ, ಆ ಪಂಚಮುಖನ ಶೋಭೆಯನ್ನು ತಾನೇ ಮೆಚ್ಚಿಕೊಂಡು ಮುದ್ದಿಟ್ಟು ಕಳುಹಿದಳು!

ಈ ರೀತಿಯ ಮಂಗಳ ಮನೋಹರ ಶಿವನ ದರ್ಶನವನ್ನು ನಮಗೆ ಒದಗಿಸಿದ ಮುದ್ದಣನೇ, ನಿನಗೆ ನಮ್ಮ ಮನಃಪೂರ್ವಕ ವಂದನೆಗಳು!

ಈ ಲೇಖನವನ್ನು ಬರೆಯುವಲ್ಲಿ ವಿದ್ವಾನ್ ರಾಮಚಂದ್ರ ಉಚ್ಚಿಲರ ನೆರವನ್ನು ವಿಶೇಷವಾಗಿ ಪಡೆದಿದ್ದೇನೆ.

ಕನ್ನಡದಲ್ಲಿ ಹನಿಗತೆಗಳು

'ಅಲ್ಪಾಕ್ಷರ ರಮಣೀಯಂ ಯಃ ಕಥಯತಿ ಖಲು ವಾಙ್ಮಿ'

ಸಣ್ಣಕತೆಗಳು ನಮಗೆ ಗೊತ್ತಿದ್ದ ವಿಷಯ. ಅವಕ್ಕಿಂತಲೂ ಸಣ್ಣದಾದ ಕತೆಗಳು? ನಮ್ಮ ಸಾಹಿತ್ಯದಲ್ಲಿ ಇದೊಂದು ಹೊಸ ಸಸಿ. ಇದನ್ನು ನೆಟ್ಟು ಐವತ್ತು ವರ್ಷಗಳಾದರೂ ನಾಮಕರಣವೇ ಆಗಿಲ್ಲ! ಹೆಸರಿರದ ಮಗುವಿಗೆ ಬೇಬಿ, ಅಪ್ಪಚ್ಚಿ ಎಂದ ಹಾಗೆ ಇಂಥ ಅತಿ ಸಣ್ಣದಾದ ಕತೆಗಳಿಗೆ ಲಗುಕತೆ, ಕಿರುಕತೆ, ನಿಮಿಷದ ಕತೆ, ಪೋಸ್ಟ್ ಕಾರ್ಡಿನ ಕತೆ—ಎಂದು ತಮಗೆತಮಗೆ ಕಂಡಂತೆ ಕರೆದರು. ಈ ಸಸಿಯನ್ನು ಮೊದಲಿಗೆ ನೆಟ್ಟವರು ರಾಜರತ್ನಂ, 'ಹನಿಗಳು' ಎಂಬ ಸಂಗ್ರಹದ ಮೂಲಕ (೧೯೩೩). ತುಂಬಾ ಅರ್ಥವತ್ತಾದ ಹೆಸರು. ಈ ಬಗೆಯ ಕತೆಗಳಿಗೆ ಜೀವನ ಪ್ರವಾಹದ ಒಂದು ಹನಿಯ ಸ್ವರೂಪವಿದೆ. ನೀರ ಹನಿಯಂತೆಯೇ ಚೆಲುವಾದ ಮಾಟವಿದೆ; ಹೊಳಪು ಇದೆ. ಇದು ತಂಪನ್ನು ಕೊಡಬಲ್ಲುದು. ಕಣ್ಣೀರ ಹನಿಯೂ ಆಗಬಹುದು. ಮತ್ತೊಮ್ಮೆ ಅಮೃತದ ಬಿಂದುವಿನಂತೆ ಚೇತೋಹಾರಿಯೆನಿಸಬಹುದು. ಹೇಗೂ ರಾಜರತ್ನಂ ಈ ಹೊಸ ಪ್ರಕಾರದ ಕತೆಗಳನ್ನು 'ಹನಿಗಳು' ಎಂದು ಹೆಸರಿಸಿ ಆರಂಭಿಸಿದರು. ಆದ್ದರಿಂದ ಇನ್ನು ಮೇಲೆ ಈ ಬಗೆಯ ಕತೆಗಳನ್ನು ಹನಿಗತೆಗಳು—ಎಂದೇ ಕರೆಯೋಣ.*

ಇದು ಇಪ್ಪತ್ತನೆಯ ಶತಮಾನದ ಸೃಷ್ಟಿಯಾದರೂ, ನಮ್ಮ ಪಂಚತಂತ್ರ, ಜಾತಕ, ಉಪನಿಷತ್ತುಗಳಲ್ಲಿ ಕಾಣಿಸಿಕೊಂಡದ್ದೇ ಇದೆ. (ಹಾಗೆ ನೋಡಿದರೆ ಆ ಕೃತಿಗಳಲ್ಲಿ ಹೆಚ್ಚಿನವು ಸಣ್ಣಕತೆಗಳಲ್ಲ; ಹನಿಗತೆಗಳೇ). ಆದರೆ ಈ ಹಳೆಯ ಕತೆಗಳಲ್ಲಿ ನೀತಿ, ತತ್ವಗಳಿಗೆ ಪ್ರಾಧಾನ್ಯ. ಗಾತ್ರವೊಂದರಲ್ಲಿ ಇವೆರಡು ಪ್ರಕಾರಗಳಲ್ಲಿ ಸಾಮ್ಯವು ಕಂಡುಬರುವುದು. ಇಪ್ಪತ್ತನೆಯ ಶತಮಾನದ ಇಂಥ ಕತೆಗಳಲ್ಲಿ ನೀತಿ ಬೋಧೆ, ತತ್ವಪ್ರಣಾಲಿಗಿಂತ, ಕಲಾತ್ಮಕತೆಗೆ, ಜೀವನದರ್ಶನಕ್ಕೆ ಪ್ರಾಧಾನ್ಯ ಬಂದು ವಿಶಿಷ್ಟ ಸ್ವರೂಪವನ್ನು ಪಡೆದಿದೆ.

---

* ಇಂಗ್ಲಿಶ್‌ನಲ್ಲಿ ಇದು Short Short Story. ಮರಾಠಿಯಲ್ಲಿ ಲಘೂತ್ತಮ ಕಥಾ. ಹಿಂದೀಯಲ್ಲಿ ಸಣ್ಣಕತೆಗೆ ಛರಿ ಕಥಾ ಎಂದೇ ಇದ್ದು, ಇಂಥ ಸಣ್ಣದಾದ ಕತೆಗಳನ್ನು ಅವರು ಲಘು ಕಥಾ ಎಂದು ಕರೆಯುತ್ತಾರೆ.

ಇದರ ಉಗಮವೆಲ್ಲಿ ? ನಮ್ಮ ಸಣ್ಣಕತೆಯಂತೆ ಇದಾದರೂ ಪಾಶ್ಚಾತ್ಯ ದೇಶದಿಂದ ಬಂದುದು. ಲಿಬರ್ಟಿ, ಪಾಸಿಂಗ್ ಶೋ, ಕಾಲಿಯರ್ಸ್ ಮುಂತಾದ ಪತ್ರಿಕೆಗಳು ಇಂಥವನ್ನು ಪ್ರಕಟಿಸುತ್ತ ಬಂದವು. ಎಂಬ್ರೂಸ್ ಬಾಯರ್ಸ್, ಒಲಿವರ್ ಶಿನ್ನರ್ ಮೊದಲಾದವರ ಹೆಸರು ಈ ದಿಶೆಯಲ್ಲಿ ಕೇಳಬಂದುವು. ಖಲೀಲ ಜಿಬ್ರಾನನ ರೂಪಕ ಕಥೆಗಳಾದರೂ ಇದೇ ಮಾದರಿಯವು. ನಮ್ಮ ನೆರೆಯ ಮರಾಠಿಯಲ್ಲಿ ವಿ. ಸ. ಖಾಂಡೇಕರ ಮತ್ತು ಭಾ.ಮಾ.ಗೋರೆ, ಗುಜರಾತಿನಲ್ಲಿ 'ಧೂಮಕೇತು' ಎಂಬ ಕಾವ್ಯನಾಮದವರು, ಮತ್ತು ಹಿಂದೀಯಲ್ಲಿ ಸುದರ್ಶನರು ಇಂಥ ಹನಿಗತೆಗಳನ್ನು ಆಗೀಗ ಬರೆದಿದ್ದಾರೆ.

ಹನಿಗತೆಗಳ ಸ್ವರೂಪ, ಲಕ್ಷಣವನ್ನು ವಿವರಿಸುವ ಮುನ್ನ ಮಾದರಿಯೆಂದು ಬಾಯರ್ಸ್‌ರ ಕತೆಯೊಂದನ್ನು ಇಲ್ಲಿ ಕೊಟ್ಟಿದೆ :

''ಒಂದು ಸಲ ಸಿಂಹದ ಕೈಯಲ್ಲಿ ಇಲಿಯೊಂದು ಸಿಕ್ಕಿಕೊಂಡಿತು. ಇಲಿ, 'ನನ್ನನ್ನೀಗ ಬದುಕಿಸಿದರೆ ನಾನೂ ನಿನಗೆ ಉಪಕಾರ ಮಾಡುವ ಪ್ರಸಂಗ ಬಂದೀತು' ಎಂದಿತು. 'ಏನೋ ಸಣ್ಣ ಪ್ರಾಣಿ, ಇದನ್ನು ತಿಂದು ನನ್ನ ಹೊಟ್ಟೆ ಅದೆಷ್ಟು ತುಂಬೀತು.' ಎಂದು ಯೋಚಿಸಿ, ಸಿಂಹವು 'ಹೋಗಲಿ, ಪಾಪ' ಎಂದು ಇಲಿಯನ್ನು ಬಿಟ್ಟಿತು.

ಕೆಲವು ದಿನಗಳ ಅನಂತರ, ಬೇಡನೊಬ್ಬನ ಬಲೆಯಲ್ಲಿ ಆ ಸಿಂಹವು ಸಿಕ್ಕಿಕೊಳ್ಳುವ ದುರ್ಧರ ಪ್ರಸಂಗ ಒದಗಿತು. ಅಲ್ಲಿಯೆ ಹಾದು ಹೋಗುತ್ತಿದ್ದ ಇಲಿಯು, ಎಲ್ಲೋ ಪರಿಚಯದ ಮುಖ ಕಂಡಂತಾಗಿ, ಬಳಿಗೆ ಬಂದಿತು. ಆಗ ಸಿಂಹವು ತಾನು ಅದಕ್ಕೆ ಮಾಡಿದ ಉಪಕಾರವನ್ನು ಗಮನಕ್ಕೆ ತಂದುಕೊಟ್ಟು, 'ಅಯ್ಯಾ, ಈ ಬಲೆಯ ಎಳೆಗಳನ್ನು ಕಡಿದು ನನ್ನನ್ನು ಮುಕ್ತಮಾಡುವಿಯ ?' ಎಂದು ಅಂಗಲಾಚಿತು—ತಾನು ವನರಾಜನೆಂಬುದನ್ನು ಮರೆತು. ಸಿಂಹವು ಬಲೆಯಲ್ಲಿ ಸಿಕ್ಕಿ ಬಿದ್ದುದನ್ನು ಖಾತ್ರಿ ಮಾಡಿಕೊಂಡು ಇಲಿಯು ಹಿಂದಿನಿಂದ ಬಂದು, ಅದರ ಬಾಲವನ್ನು ಕಡಿಯತೊಡಗಿತು !''

ಇಲಿ–ಸಿಂಹದ ಕತೆ ಜಗತ್ತಿನಲ್ಲೇ ಪರಿಚಿತವಾದದ್ದು. ಆದರೆ ಈ ಹನಿಗತೆಯಲ್ಲಿ, ಅದು ನಮ್ಮ ಇಂದಿನ ಜೀವನದ ಒಂದು ಬಗೆಯನ್ನು, ನಮ್ಮ ಮನೋ–ವರ್ತನೆಯನ್ನು ಚಿತ್ರಿಸಲು ಹೇಗೆ ಮಾರ್ಪಟ್ಟಿದೆಯೆಂಬುದನ್ನು ಗಮನಿಸಬೇಕು.

ಹನಿಗತೆಗೆ ಇಂದಿನ ಸಣ್ಣಕತೆಯು ತಂದೆಯೆನ್ನಿರಿ, ಬೇಕಿದ್ದರೆ ಹಿರಿಯಣ್ಣನೆನ್ನಿರಿ. ಎರಡಕ್ಕೂ ಸಾಕಷ್ಟು ಸಾಮ್ಯವಿದೆ. ಆದರೆ ಕಾದಂಬರಿಯು ಗಾತ್ರದಲ್ಲಿ ಕುಗ್ಗಿದರೆ ಸಣ್ಣಕತೆ ಹೇಗೆ ಆಗಲಾರದೋ, ಹಾಗೆಯೇ ಸಣ್ಣಕತೆ ಗಾತ್ರದಲ್ಲಿ ಕಿರಿದಾದ ಮಾತ್ರಕ್ಕೆ ಅದೇನು ಹನಿಗತೆಯಾಗಲಾರದು. ಅರ್ಥಾತ್ ಗಾತ್ರವೆಂಬುದು ಬಾಹ್ಯ ಲಕ್ಷಣ ಮಾತ್ರ. ಹನಿಗತೆಗೆ ತನ್ನದೇ ಆದ ಅಂತಃಸ್ಸತ್ವವಿದೆ. ಆ ದೃಷ್ಟಿಯಿಂದ ಇದು ಭಾವಗೀತೆಗೆ ಹೆಚ್ಚು ಸಮೀಪವಾದುದು.

ಗಾತ್ರವೆಂದಾಗ, ಆರೆಂಟು ಸಾಲಿನಿಂದ ೨–೩ ಪುಟಗಳ ವರೆಗೆ ಹನಿಗತೆಯು ಹರಹು ಇರಬಹುದು. ಗಾತ್ರ ಎಷ್ಟೇ ಇರಲಿ, ಹನಿಯ ಪರಿಮಿತಿ ಒಡೆಯದೇ, ಅದು ಅಂತ್ಯದಲ್ಲಿ

ಪರಿಣಾಮಕಾರಿಯಾಗಿರತಕ್ಕುದು, ಅದಕ್ಕೆ ಇದೊಂದು ಮರಾಠೀ ಕತೆ ನಿದರ್ಶನವಾಗ ಬಲ್ಲುದು :

"ಜನಸಂದಣಿ. ಒಬ್ಬಳು ಒಯ್ಯಾರದಿಂದ ಮುಂದೆ ಸಾಗಿದ್ದಳು. ಹಿಂಭಾಗದಿಂದ ಚೆಲುವಾಗಿ ಕಂಡ ಅವಳನ್ನು ಒಬ್ಬ ಹಿಂಬಾಲಿಸಿದ. ಜನರನ್ನು ಸರಿಸಿ ಹತ್ತಿರ ಬಂದಂತೆ ತನ್ನ ವೇಗ ಹೆಚ್ಚಿಸಿದ. ಹೆಜ್ಜೆಯ ಸಪ್ಪಳ ಕೇಳಿ, ಆಕೆ ಹೊರಳಿ ನೋಡಿದಳು. 'ನೀವೇ?' ಎಂದಳು. ಆಕೆ ಅವನ ಹೆಂಡತಿಯಾಗಿದ್ದಳು!"

ಈಗ ಇಷ್ಟೇ ಚಿಕ್ಕದಾದ ಇನ್ನೊಂದು 'ಕತೆ'ಯನ್ನು ನೋಡೋಣ:

"ಹಳ್ಳಿಗೆ ಹೋಗುವ ದಾರಿಯಲ್ಲಿ ಬಸ್ಸು ಭರದಿಂದ ಹೊರಟಿತ್ತು—ಧೂಳೆಬ್ಬಿಸುತ್ತ. ದೂರದಲ್ಲಿ ಶುಭ್ರ ವಸ್ತ್ರ ಧರಿಸಿದ್ದ ಶಾಸ್ತ್ರಿಗಳೊಬ್ಬರು ಕೈತೋರಿಸಿದರು. ಬಸ್ಸು ತನ್ನವೇಗವನ್ನು ಕಡಿಮೆಗೊಳಿಸಿ, ಅವರ ಬಳಿ ನಿಂತಿತು. 'ಯಾವೂರಿಗೆ' ಕಂಡಕ್ಟರ್ ಕೇಳಿದ. 'ಯಾವ ಊರೂ ಇಲ್ಲ ಇನ್ನು ಹೋಗಬಹುದು' ಎಂದರು ಶಾಸ್ತ್ರಿಗಳು. ಸಿಟ್ಟುಗೊಂಡ ಕಂಡಕ್ಟರ್ ಏನೇನೊ ಅಂದಾಗ ಶಾಸ್ತ್ರಿಗಳು ಮುಗುಳ್ನಕ್ಕು ತಮ್ಮ ಬಟ್ಟೆ ನೋಡಿಕೊಂಡರು."

('ಇದುವೆ ಜೀವ ಇದು ಜೀವನ' ಕಸ್ತೂರಿಯ ಫೆಬ್ರು. ೧೯೭೨ರಲ್ಲಿ ಬಂದದ್ದು.)

ಎರಡನ್ನೂ ಹನಿಗತೆಗಳೆಂದು ಕರೆಯಬಹುದಾದರೂ, ಶಾಸ್ತ್ರಿಗಳ ವೃತ್ತಾಂತದಲ್ಲಿ ಘಟನೆ ಮುಖ್ಯವಾಗಿದೆ. ಎರಡರಲ್ಲೂ ಮಾನವ ಸ್ವಭಾವದ ಚಿತ್ರಣ ಇದೆ. ಆದರೆ ಮೊದಲಿನದರಲ್ಲಿ ಅದರ ಆಳವಿದೆ, ಕಲಾವಂತಿಕೆ ಇದೆ. ಆದ್ದರಿಂದ ಆ ಕತೆ ಹನಿಗತೆಯ ವಾಖ್ಯೆಗೆ ಹೆಚ್ಚು ಸಮೀಪವರ್ತಿಯಾಗಿದೆ.

ಮಾರ್ಚ ೧೯೭೩ರ ಕಸ್ತೂರಿಯಲ್ಲಿ ಇಷ್ಟೇ ಗಾತ್ರದ ಇನ್ನೊಂದು ನಿರೂಪಣೆಯಿದೆ. ಒಬ್ಬ ಕಾಲೇಜ ಲೆಕ್ಚರರ್ ಉಡುಪಿಯಿಂದ ಧಾರವಾಡಕ್ಕೆ ರಾತ್ರಿ ಬಸ್ಸಿಗೆ ಹೊರಟಿದ್ದಾನೆ. ಬಸ್ ಕುಮಟಾ ಮುಟ್ಟುವಾಗ ಬೆಳಕು ಹರಿದಿರಲಿಲ್ಲ. ಚಳಿ ಇದ್ದುದರಿಂದ ಮಫ್ಲರ್ ಸುತ್ತಿಕೊಂಡು ಎಸ್. ಟಿ. ಕ್ಯಾಂಟೀನಿನಲ್ಲಿ ಚಹಾ ಕುಡಿಯುತ್ತಾನೆ. ಆದರೆ ಮಾಣಿ ಬಿಲ್ ಕೊಡುವುದಿಲ್ಲ. ಬಿಲ್ ಕೇಳಿದ್ದಕ್ಕೆ "ನೀವೆಲ್ಲೋ ಈ ಲೈನಿಗೆ ಹೊಸಬರೆಂದು ಕಾಣುತ್ತೀರಿ. ಡ್ರೈವರ್–ಕಂಡಕ್ಟರರ ಕಡೆಯಿಂದಾ ನಾವು ಹಣ ಇಸಕೊಳ್ಳೋಲ್ಲ" ಎನ್ನುತ್ತಾನಂತೆ, ಮಾಣಿ. ಇದೊಂದು ಶುದ್ಧ ಘಟನೆಯಲ್ಲದೆ, ಹನಿಗತೆ ಎನಿಸಿಕೊಳ್ಳುವುದಿಲ್ಲ.

ಪತ್ರಿಕೆಗಳಲ್ಲಿ ಬರುವ 'ನಗೆ ಮಲ್ಲಿಗೆ' 'ನಗೆಹನಿ' ಇವು ಕೂಡ ಗಾತ್ರದಲ್ಲಿ ಚಿಕ್ಕವೇ. ಆದರೆ ಹನಿಗತೆ ಮತ್ತು ಜೋಕುಗಳಲ್ಲಿ ಅಜಗಜಾಂತರವಿದೆ. ಹೆಚ್ಚಿನ ಜೋಕುಗಳು ಸಂಭಾಷಣಾ ರೂಪದಲ್ಲಿರುತ್ತವೆಯಷ್ಟೆ. ಹನಿಗತೆಗಳಲ್ಲಿಯೂ ಸಂಭಾಷಣೆ ಪ್ರಧಾನವಾಗಿಯೇ ಬರಬಹುದು. ಆದರೆ ಅವುಗಳ ಅಂತರವನ್ನು ಗಮನದಲ್ಲಿರಿಸಿಕೊಳ್ಳಬೇಕು.

ಇದೊಂದು ಉದಾರಣೆ: ಗೊಗ್ಗರ ಧ್ವನಿಯ ಹಾಡುಗಾರನೊಬ್ಬ ಹಾಡುತ್ತಿದ್ದ, ಅನೇಕರು ಎದ್ದುಹೋದರು. ಒಂದು ಮಗು ಮಾತ್ರ "ಇನ್ನಷ್ಟು ಹಾಡಿರಿ" ಎಂದಿತು. ನಿನಗಾದರೂ ಮೆಚ್ಚಿಕೆಯಾಯಿತಲ್ಲ" ಎಂದರವರು. "ಹೌದು. ನೀವು ಹಾಡುವಾಗ ನಿಮ್ಮ ಮೀಸೆ ಕುಣಿಯುವುದನ್ನು ನೋಡಲು ಬಲು ಚೆಂದ." ಎಂದಿತಂತೆ ಮಗು. ಇದು ಶುದ್ಧ ಜೋಕೇ ಸರಿ; ಹನಿಗತೆಯಲ್ಲ.

ಹನಿಗತೆಯ ಇನ್ನೊಂದು ಲಕ್ಷಣ, ಅದರ ತೀವ್ರಗತಿಯ ಓಟ. ಸಣ್ಣಕತೆಗೆ ಇರುವ ಆದಿ-ಮಧ್ಯ-ಅಂತ್ಯಗಳು ಇದರಲ್ಲಿ ಇರಬಹುದಾದರೂ ಅಂತ್ಯವೊಂದೇ ಸ್ಫುಟವಾಗಿರುತ್ತದೆ. ಅತ್ತಿತ್ತ ಸ್ವಲ್ಪವೂ ಅಲುಗದೆ ನೇರವಾಗಿ ವಿಷಯಕ್ಕೆ ಧುಮುಕಿ, ವಿಚಾರಗಳನ್ನು ಅಲ್ಪಾಕ್ಷರತ್ವದಲ್ಲಿ ಅಡಕಗೊಳಿಸಿ, ಅಂತ್ಯದ ಕಡೆಗೆ ಧಾವಿಸಲಾಗುತ್ತಿದೆ. 'ಕಿರಿದರಲ್ಲಿ ಪಿರಿದರ್ಥ' ಎಂಬ ಕಾವ್ಯಲಕ್ಷಣ ಗದ್ಯಪ್ರಕಾರದಲ್ಲಿ ಹನಿಗತೆಗೆ ಮಾತ್ರ ಅನ್ವಯಿಸುವುದು. ಆದುದರಿಂದ ಭಾವನೆ ಅಥವಾ ಚಿತ್ರಣ ಎಷ್ಟೇ ಸುಂದರವಾಗಿ ಮತ್ತು ಸ್ವಲ್ಪದರಲ್ಲಿ ಬಂದಿದ್ದರೂ, ಹನಿಗತೆಯ ವಿಧಾನದಲ್ಲಿ ಪ್ರಯೋಜನಕ್ಕೆ ಬಾರವು. ಈ ದೃಷ್ಟಿಯಿಂದ ಆನಂದರ 'ಪಕ್ಷಿಗಾನ'ದ ಅನೇಕ ಕಥನಗಳು ಹನಿಗತೆಗಳಾಗಲಾರವು.

ಹನಿಗತೆಯು ಹೀಗೆ ತೀವ್ರಗತಿಯದಾದರೆ, ಅದರ ಕೊನೆಯು ಅನಪೇಕ್ಷಿತವಾಗುವುದು ಸಹಜವಾದದ್ದು. ಮೇಲೆ ಹೇಳಿದ, ಜನಸಂದಣಿಯ ಕತೆ ಆದರ್ಶವಾದ ಹನಿಗತೆ. ಹೀಗೆ ಅಂತ್ಯದ ಗೌಪ್ಯವು ಸ್ಫೋಟವಾಗಿ, ಓದುಗ ಮತ್ತೆ ಇಡೀ ಕತೆಯನ್ನು ನೆನೆದುಕೊಂಡು ಆದಿ-ಅಂತ್ಯಗಳನ್ನು ಸ್ವಮನ್ವಯಗೊಳಿಸಿಕೊಳ್ಳುವಂತಾದರೆ, ಅದು ಅತ್ಯುತ್ತಮ ಹನಿಗತೆಯೆನ್ನಿಸಿಕೊಳ್ಳುವುದು. ಹಾಗೆ ಇಲ್ಲದುದಕ್ಕೆ ವಿ. ಜಿ. ಭಟ್ಟರ 'ಫೋಟೊ' ಎಂಬ ಕತೆಯನ್ನು ಗಮನಿಸಬಹುದು.

"ಮಹಾರಾಣಿಯ ಎದುರಿಗೆ ಕ್ಯಾಮೆರಾ ಸಜ್ಜಾಗಿ ನಿಲ್ಲಿಸಿ 'ಸ್ವಲ್ಪ ಬಲಕ್ಕೆ .... ಹ್ಞಾ. ಸರಿ....ಸ್ಟೆಡಿ ಪ್ಲೀಜ್ .. ಸ್ವಲ್ಪ. ಹೀಗೆ. ಇನ್ನಷ್ಟು ಕಣ್ಣೀರು. ಪ್ಲೀಜ್ !.... ಕೊಂಚ ಜೋರಾಗಿ ಅಳಬೇಕು. ಮ್ಯಾಡಮ್ .... ಸರಿ .. ಸ್ಟೆಡಿ ಪ್ಲೀಜ್, ಒನ್ .... ಟೂ .... ಥ್ರೀ' ಅನ್ನಲಿಕ್ಕೂ ಮಹಾರಾಣಿಯವರು ಗೊಳೋ ಎಂದು ಅಳಲಿಕ್ಕೂ ಸರಿಯಾಯಿತು. ಫೋಟೋ ಚೆನ್ನಾಗಿ ಮೂಡಿತೆಂದು ಹಿಗ್ಗಿ 'ಥ್ಯಾಂಕ್ ಯೂ' ಅಂದ ಫೋಟೊಗ್ರಾಫರ್.

ಕ್ಯಾಮೆರಾವನ್ನು ಕಟ್ಟಿಕೊಂಡು ಅವನು ಹೊರಗೆ ನಡೆದ. ತನ್ನ ಗಂಡನು [ಹಳೆಯ ಕಾಲದ ಒಬ್ಬ ಪುಡಿ ಸಂಸ್ಥಾನಿಕ] ಸತ್ತುದಕ್ಕಾಗಿ ತನಗಾದ ದುಃಖದ ಫೋಟೊ ತೆಗೆಯಿಸಿ, ಹರಿಸಿದ ಕಂಬನಿಯನ್ನು ಒರಸಿಕೊಳ್ಳುತ್ತ ಮಹಾರಾಣಿಯವರು ಒಳ ಸೇರಿದರು. ಮಹಾರಾಣಿಯ ದುಕ್ಕದ ಪೋಜ್ ಬಹಳ ಚೆನ್ನಾಗಿ ಆಯಿತೆಂದೂ ಅದನ್ನು ಕಂಡು ತಮಗೂ ಅಳು ಬಂದಿತೆಂದೂ ಸೇವಕಿಯರು ಮಾತನಾಡಿಕೊಂಡರು."

ಇಲ್ಲಿ ಮುಕ್ತಾಯ ಅನಿರೀಕ್ಷಿತವಾದುದಲ್ಲ — ಅಷ್ಟೇ ಅಲ್ಲ, ಈ ಕತೆಯಲ್ಲಿ ಇನ್ನೊಂದು ಕೊರತೆ ಇದೆ. ಅದೆಂದರೆ ಕಥಾನಕದಲ್ಲಿ ಯಾವುದೇ ಘರ್ಷಣೆ

ಅಥವಾ ವಿರೋಧ (Conflict, Contrast) ಇಲ್ಲದುದು. ಸಣ್ಣಕತೆಗೆ ಹೇಗೋ ಹಾಗೆಯೇ ಹನಿಗತೆಗೂ ಅದರ ಅಗತ್ಯವಿದೆ. 'ಫೋಟೊ' ಕತೆಯಲ್ಲಿ ರಾಣಿಯ ಕೃತ್ರಿಮ ಪ್ರೇಮ ಕಂಡು ಬಂದಿದ್ದರೂ ರಾಜ – ರಾಣಿಯರ ದಾಂಪತ್ಯದ ಆಭಾಸದ ಒಂದು ಸಣ್ಣ ನಿದರ್ಶನ ಇದ್ದಿದ್ದರೆ, ಈ ಕತೆಗೆ ಮೆರುಗು ಬರುತ್ತಿತ್ತು.

ಈ ಲಕ್ಷಣವನ್ನು ಒಳಗೊಂಡ, ಒಂದು ಪರಿಪೂರ್ಣ ಹನಿಗತೆಯೆನ್ನಬಹುದಾದ ಕತೆ ಇಲ್ಲಿದೆ :

"ಎಡಬಿಡಂಗಿ

ಜರಿ ರುಮಾಲು ರಾಮರಾಯರು ಪತ್ನೀ–ಪುತ್ರ ಸಮೇತರಾಗಿ ರೈಲಿನಲ್ಲಿ ಬಿಜಯ ಮಾಡಿಸಿದ್ದರು. ಅವರು ಕುಳಿತಿದ್ದ ಗಾಡಿಯ ಬಳಿ ಕುರುಡನೊಬ್ಬನು ಬಂದು 'ದರುಮ ಸೋಮಿ!' ಎಂದ. ರಾಯರು ಪಂಚೆಯ ಜರಿಯನ್ನು ತೀಡುತ್ತ, 'ಸೂ – ಮಗನೆ ಧರ್ಮವಂತೆ, ಧರ್ಮ! ನಾವು ಧರ್ಮ ಎಂದು ಕೊಡುವುದು; ಈ ಸೂ–ಮಗ ಬೀಡಿ ಹೊಡೆಯುವುದು. ಏನೂ ಇಲ್ಲ, ಹೋಗು' ಎಂದು ಗದರಿಸಿದರು. 'ಒಂದು ಕಾಸು, ಸೋಮಿ' ಎಂದು ಭಿಕ್ಷುಕನು ಮತ್ತೆ ಹಲುಬಿದನು. 'ಒಂದು ಕಾಸೂ ಇಲ್ಲ. ಅರುಕಾಸೂ ಇಲ್ಲ! ತೊಲಗು.' ಭಿಕ್ಷುಕನು ತೊಲಗಿದನು. ರೈಲೂ ತೊಲಗಿತು. 'ಈ ಸೂ –ಮಕ್ಕಳಿಗೆ ಕೊಡುವುದಕ್ಕೇ ನಾವು ಕಷ್ಟಪಟ್ಟು ಸಂಪಾದಿಸುವುದು' ಎಂದರು ರಾಯರು.

* * *

'ಅಣ್ಣ, ಕಾವೇರಿ ಬಂತು, ಕಾವೇರಿ' ಎಂದು ರಾಯರ ಮಕ್ಕಳೆಲ್ಲ ಕೂಗಿದರು. 'ಕಾವೇರಿಗೆ ಹಾಕುವುದಕ್ಕೆ ಕಾಸು ಎಲ್ಲಾ ಇಟ್ಟುಕೊಂಡಿದೀರಿ, ತಾನೇ?' ಎಂದು ರಾಯರು ಕೇಳಿದರು. ಕಾವೇರಿಗೆ ಕಾಸೆಸೆಯುವುದು ಕೈವಲ್ಯಕ್ಕೆ ಕಾಲುಮಣೆ – ಎಂದವರು ಕಲಿತಿದ್ದರು, ಮಕ್ಕಳಿಗೂ ಕಲಿಸಿದ್ದರು.

'ಅಣ್ಣ, ನನ್ನ ಕಾಸೆಲ್ಲೊ ಕಾಣೆ, ಅಣ್ಣಾ' ಎಂದು ರಾಯರ ಮುದ್ದಿನ ಮಗಳು ಅಳತೊಡಗಿದಳು. 'ಪರವಾ ಇಲ್ಲಮ್ಮ. ಇನ್ನೊಂದು ಕಾಸು ಕೊಡುತ್ತೇನೆ. ಅಳಬೇಡ' ಎಂದು ರಾಯರು, ಕಾವೇರಿ ಎಲ್ಲಿ ಕಳೆದುಹೋಗುತ್ತದೆಯೊ—ಎಂದು ಅವಸರದಿಂದ, ಗಣೇಶನ ಹೊಟ್ಟೆಯಂತಿದ್ದ ತಮ್ಮ ಹಣದ ಚೀಲವನ್ನು ಮಡಿಲಿಗೆ ಬಗ್ಗಿಸಿಕೊಂಡು ಬೆದಕಿದರು. ಅದರಲ್ಲಿ ಬೆಳ್ಳಿಯ ಎಂಟಾಣೆಗಿಂತ ಚಿಕ್ಕ ನಾಣ್ಯ ಕಣ್ಣಿಗೆ ಕಾಣಿಸಲಿಲ್ಲ. ಮತ್ತೆ ಬೆದಕಿದರು, ಊಂಹು. ರಾಯರು 'ತಗೊ ತಗೊ, ಇದನ್ನೇ ಹಾಕು' ಎಂದು ಅವಸರದಲ್ಲಿ ಎಂಟಾಣೆಯ ನಾಣ್ಯವನ್ನೇ ಕಾವೇರಿಗೆ ಬಿಸಾಡಿಸಿ ಬೆಟ್ಟ ಕಡಿದವರಂತೆ ನಿಟ್ಟುಸಿರಿಟ್ಟರು.

ಆ ಚೀಲಕ್ಕೆ ಪುನಃ ಹಣವನ್ನು ತುಂಬಿಕೊಳ್ಳುವಾಗ ರೂಪಾಯಿಗಳ ಮರೆಯಿಂದ ಒಂದು ಬಿಡಿ ಕಾಸು ಇಣಿಕಿ, 'ನೋಡಿದೆಯೊ! ಕೊಟ್ಟೆ ನಿನಗೆ ಗಸ್ತು!' ಎಂದು ಕಣ್ಣು ಹಾರಿಸಿತು."

(ರಾಜರತ್ನಂ : ಹನಿಗಳು)

ಒಂದೇ ಒಂದು ಪುಟದ ಕತೆ ಇದು. ಇದರಲ್ಲಿ ಮಧ್ಯ ಎಂಬುದು ಇಲ್ಲವೆ ಇಲ್ಲ. ನಿರೂಪಣೆ ಕೊನೆಯ ಘಟ್ಟದತ್ತ ಧಾವಿಸಿದೆ. ಬಿಡಿ ಕಾಸೊಂದು ಆ ರೀತಿ ಕಾಣಿಸಿ ಕೊಂಡ ತಿರುವಿನಿಂದಾಗಿ ನಮಗೆ ಮೋಜೆನಿಸುವುದು. ಜೊತೆಗೆ ಧರ್ಮಾಚರಣೆಯಲ್ಲಿ ಈ ಬಗೆಯ ವಿರೋಧಾಭಾಸವುಳ್ಳ ಬೇರೆ ಹಲವಾರು ರಾಮರಾಯರು ನಮ್ಮ ಮನಸ್ಸಿನಲ್ಲಿ ಸುಳಿದು ಹೋಗುವರು.

ನಮ್ಮ ಬಾಳಿನಲ್ಲಿ ಇಂಥ ವಿರೋಧಾಭಾಸಗಳು ಲೆಕ್ಕವಿಲ್ಲದಷ್ಟು. ನಾವು ಆಡುವುದೊಂದು, ಮಾಡುವುದೊಂದು. ಎಣಿಸುವುದೊಂದು; ಆಗೋದು ಮತ್ತೊಂದು. ಹೀಗೆ ಮಾತು–ಕೃತಿ, ಅಪೇಕ್ಷೆ–ಸತ್ಯ ಸ್ಥಿತಿ ಇವುಗಳಲ್ಲಿನ ದ್ವಂದ್ವ–ವಿರೋಧಗಳು ನಮ್ಮ ಇಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ, ಕೌಟಂಬಿಕ–ಈ ಯಾವುದೇ ಮುಖವನ್ನು ತೆಗೆದುಕೊಳ್ಳಲಿ, ಹನಿಗತೆಗೆ ಅಪಾರವಾದ ಸಾಮಗ್ರಿಯನ್ನು ಒದಗಿಸಬಲ್ಲುವು.

ಅನಿರೀಕ್ಷಿತ ಮುಕ್ತಾಯ ಹನಿಗತೆಯಲ್ಲಿ ಯಾವ ಕಾಲಕ್ಕೂ ಅಪೇಕ್ಷಣೀಯ. ಆದರೆ ಹಾಗಿದ್ದರೇನೇ ಹನಿಗತೆ ಪರಿಣಾಮಕಾರಿಯಾಗುತ್ತದೆಂದೇನಲ್ಲ. ರಾಜರತ್ನಂ ಅವರ ಅದೇ 'ಹನಿಗಳು' ಸಂಗ್ರಹದಲ್ಲಿ ಬಂದಿರುವ ಕೊನೆಯದನ್ನು ಆ ದೃಷ್ಟಿಯಿಂದ ಗಮನಿಸುವುದು :

"ಒಂದು ಹನಿ

ಮಹಾಸಾಗರವು ಅಸಾಧ್ಯವಾಗಿ ಘೂರ್ಣಿಸುತ್ತಿತ್ತು. ಹತ್ತೂ ಕಡೆಗಳಿಂದ ಹೊಳೆಗಳು ಬಂದು ಸಾಗರವನ್ನು ಉಕ್ಕಿಸುತ್ತಿದ್ದವು. ಸಾಗರಕ್ಕೆ ಹತ್ತು ಭುಜ ಬಂದಂತಿತ್ತು. ಹೀಗೆ ಮಹಾಪ್ರವಾಹಗಳು ಬಂದು ಸಂಗಮವಾಗುತ್ತಿರುವಾಗ ಮಳೆ ಮೋಡದಿಂದ ಒಂದು ಹನಿಯು ಜಾರಿತು. ಜಾರಿ, ತಾನು ಸೇರಲಿರುವ ಸಮುದ್ರವನ್ನೂ ಅದನ್ನು ಉಕ್ಕಿಸುತ್ತಿರುವ ಹೊನಲುಗಳನ್ನೂ ಕಂಡು ಬೆರಗಾಗಿ ತನ್ನನ್ನೂ ಅವುಗಳನ್ನೂ ತುಲನೆ ಮಾಡಿಕೊಂಡು ಸಿಗ್ಗಾಗಿ ಹಾಗೆಯೇ ನಡುದಾರಿಯಲ್ಲಿ ನಿಂತಿತು.

ಅದರ ತಡೆಯನ್ನು ಕಂಡು ಗಂಭೀರ ಹೃದಯದ ಕಡಲು ಪ್ರೀತಿಯ ನಗುವುಕ್ಕಿಸುತ್ತ 'ಬಾ ! ಬಾ ! ಇಷ್ಟು ಸಿಗ್ಗೇಕೆ? ನಿನ್ನಂತಹ ಹನಿಗಳು, ಕೂಡಿಯೇ ಅಲ್ಲವೆ, ನಾನು ಹೀಗೆ ಬೆಳೆದಿರುವುದು.' ಎಂದು ಕೈನೀಡಿ ಕರೆಯಿತು. ಆಗ ಹನಿಯು ಆನಂದದಿಂದ ಪರವಶವಾಗಿ ಕಣ್ಣುಮುಚ್ಚಿಕೊಂಡು ಜಾರಿತು, ಸಾಗರವನ್ನು ಸೇರಿತು."

ಖಲೀಲ ಜಿಬ್ರಾನನ ಅನೇಕ ರೂಪಕ ಕಥೆಗಳನ್ನು ಈ ಮಾನದಿಂದ ಹನಿಗತೆಗಳ ಬಳಗಕ್ಕೆ ಸೇರಿಸಿಕೊಳ್ಳಬಹುದು.

ಹನಿಗತೆಯ ವಸ್ತುವಿನಲ್ಲಿ ಘರ್ಷಣೆ ಅಥವಾ ನಮ್ಮ ನಡೆವಳಿಕೆಯಲ್ಲಿಯ ವಿರೋಧಾಭಾಸ ಇರಬೇಕು. ಹಾಗೆ ಬಂದಾಗ ಹಾಸ್ಯ, ವಿಡಂಬನೆ ತಂತಾನೆ ಮೂಡಿ ಬಂದು, ಹನಿಗತೆಯು ವಾಚನೀಯ ಹಾಗೂ ಮನನೀಯವಾಗುತ್ತದೆ. ಎಷ್ಟೋ ಹನಿಗತೆಗಳಲ್ಲಿ ವಿನೋದ–ವ್ಯಂಗ್ಯ ನಿರೂಪಣೆಯೊಡನೆ ಹೆಣೆದುಕೊಂಡೇ ಇರುತ್ತದೆ.

ಆದ್ದರಿಂದ ದೊಡ್ಡವಾದ ಹಾಸ್ಯದ ಚುಟುಕಗಳನ್ನು ಹನಿಗತೆಗಳೆಂದು ಭ್ರಮಿಸಿಯಾರು. ಬೀಚಿ ಅವರ 'ಮಾತ್ರೆಗಳು' ಹನಿಗತೆಗಳ ಸಂಕಲನವಾಗಿದ್ದರೆ, ಅವರದೇ 'ತಿಂಮನ ತಲೆ' ಯಲ್ಲಿ ಹನಿಗತೆಗಳಿಲ್ಲ. ಹಾಸ್ಯ, ವಿಡಂಬನೆಗಳುಳ್ಳ, ನಾ. ಕಸ್ತೂರಿಯವರ ಕಥನಾತ್ಮಕ ಬರಹಗಳಲ್ಲಿ ಹನಿಗತೆಗಳುಳ್ಳವು ತೀರ ಕಡಿಮೆ.

ಈ ಸಾಹಿತ್ಯ ಪ್ರಕಾರದಲ್ಲಿ ವಿಡಂಬನೆ ಅದೆಂತು ವಿಜೃಂಭಿಸುವದೆನ್ನುವುದಕ್ಕೆ ವಿ. ಜಿ. ಭಟ್ಟರ ಈ ಹನಿಗತೆಯನ್ನು ನೋಡಬಹುದು :

"ಎಂಜಲು ಬೋರೆ

ಶ್ರೀರಾಮಚಂದ್ರ ದೇವರು ಶಬರಿಯು ಕೊಟ್ಟ ಎಂಜಲು ಬೋರೆಯನ್ನು ತಿಂದ ಸುದ್ದಿಯು ಅರಣ್ಯ ಪ್ರದೇಶದಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ಕೇಳುವದೇನು ? ಬುಟ್ಟಿ ತುಂಬ ಎಂಜಲು ಬೋರೆಯನ್ನು ಹೊತ್ತುಕೊಂಡು, ಬೇಡತಿಯರ ಹಿಂಡೇ ಅವರ ಪರ್ಣಶಾಲೆಗೆ ಬಂದು ಆ ಹಣ್ಣನ್ನು ತಿನ್ನಲು ಪ್ರಾರ್ಥಿಸಿಕೊಂಡಿತು. 'ಶಬರಿಯು ಕೊಟ್ಟದ್ದನ್ನು ಮಾತ್ರ ತಿನ್ನಬೇಕೆ' ಎಂದವರು ಬೇಡಿಕೊಂಡರು. ಶ್ರೀ ರಾಮಚಂದ್ರ ನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಹೇಗಾದರೂ ಅವರನ್ನು ಕಳಿಸುವ ಯತ್ನ ಮಾಡಿದನು. ಆದರೆ ಬೇಡತಿಯರು ಬಿಡುತ್ತಾರೆಯೆ ? 'ನೀವು ನಮ್ಮ ಕಾಣಿಕೆಯನ್ನು ಸ್ವೀಕರಿಸದಿದ್ದರೆ ಇಲ್ಲೇ ಸಾಲು ಹಿಡಿದು ಕುಳಿತು ನಿಮ್ಮ ಹೆಸರನ್ನು ಭಜಿಸುತ್ತ ಕಾಲ ಕಳೆಯುವೆವು.' ಎಂದರು.

ಬೋರೆಗಳನ್ನು ಪರ್ಣಶಾಲೆಯೊಳಗೆ ಇಟ್ಟು ಹೋಗೆಂದು ಸೀತಾಪತಿಯು ಸೂಚಿಸಲು, ಒಬ್ಬೊಬ್ಬರ ಬುಟ್ಟಿಯಿಂದ ಒಂದೊಂದಾದರೂ ಬೋರೆಯನ್ನು ತಿನ್ನಲೇ ಬೇಕೆಂದು ಬೇಡತಿಯರು ಹಟಹಿಡಿದರು. ಅವರ ಸತ್ಯಾಗ್ರಹಕ್ಕೆ ಸೋತು ದಶರಥ ತನಯನು ಒಂದೊಂದು ಬೋರೆಯನ್ನು ತಿನ್ನಹತ್ತಿದನು. ಅದನ್ನು ಕಂಡು ಸೀತಾದೇವಿ 'ಬೇಡ' ಅಂದಳು. ಲಕ್ಷ್ಮಣನೂ ಅದೇ ಅಭಿಪ್ರಾಯ ವ್ಯಕ್ತಪಡಿಸಿದನು. ಆದರೆ ಭಕ್ತ ವತ್ಸಲನಾದ ರಾಮಚಂದ್ರನು ಕೇಳಲಿಲ್ಲ. ಎಲ್ಲ ಬುಟ್ಟಿಗಳಿಂದಲೂ ಒಂದೊಂದು ಎಂಜಲು ಬೋರೆಯನ್ನು ತಿಂದು ಮುಗಿಸಿದನು.

ಸಂಜೆಯ ಹೊತ್ತಿಗೆ ಶ್ರೀ ರಘುಪತಿಯ ಮುಖ ಕಮಲವು ತುರಿಸಹತ್ತಿತು ! 'ನಾವು ಹೇಳಲಿಲ್ಲವೆ ?' ಎಂದು ಸೀತಾದೇವಿಯು ಕೇಳಿದಳು. 'ಅವುಗಳನ್ನು ತಿಂದುದ ರಿಂದಲೇ ಹೀಗೆ ತುರಿಸುತ್ತಿದೆಯೆಂದು ನಿಮ್ಮ ಅಭಿಪ್ರಾಯವೇ ? ಛೇ. ಆತ್ಮಾರ್ಪಣೆಯ ಭಾವದಿಂದ ನಿರ್ಮಲ ಹೃದಯದ ಬೇಡತಿಯರು ಕೊಟ್ಟ ಹಣ್ಣಿನಿಂದ ಇಂಥ ಅನಿಷ್ಟ ವಾಗಲು ಸಾಧ್ಯವೇ ಇಲ್ಲ.' ಎಂದನು. ಆದರೇನು ? ಮರು ದಿನ ಆತನ ತುಟಿಗಳು ಬಾತು ಅವುಗಳಲ್ಲಿ ಬೊಕ್ಕೆಗಳು ಕಾಣಿಸಿಕೊಂಡವು.

ಗಿಡಮೂಲಿಕೆಯನ್ನು ಅರೆಯುತ್ತ ಲಕ್ಷ್ಮಣನು ಅಂದುಕೊಂಡನು : 'ಬೇಡತಿಯರ ಹೃದಯವೇನೊ ನಿರ್ಮಲ. ಆದರೆ ಅವರ ಎಂಜಲು ಬೋರೆ ? ಅದರ ಅಂಟುರೋಗವು

ಹೃದಯ ನೈರ್ಮಲ್ಯಕ್ಕೆ ಹೆದರುತ್ತದೆಯೆ? ಭಾವನೆಯ ಜೊತೆಗೆ ಬುದ್ಧಿಯನ್ನೂ ಒಂದಿಷ್ಟು....'

ಸೀತಾಮಾತೆಯು ಈ ಪಾಠವನ್ನು ತನ್ನ ಪತಿದೇವನಿಗೆ ಇರುಳಿನಲ್ಲಿ 'ಕಾಂತಾ ಸಮ್ಮಿತತಯಾ' ತಿಳಿಸಿ ಹೇಳಿದಳು. ಅಂದಿನಿಂದ ಶ್ರೀರಾಮಚಂದ್ರದೇವರು ಭಕ್ತರ ಎಂಜಲು ಗಿಂಜಲು ತಿಂದ ಉದಾಹರಣೆ ಇಲ್ಲ.''

ಕನ್ನಡದಲ್ಲಿ ಹನಿಗತೆಗಳನ್ನು ಬರೆದವರು ಯಾರು ಯಾರು ಮೊತ್ತ ಮೊದಲಿನ ಹೆಸರು ರಾಜರತ್ನಂ ಅವರದು, ಎಂದು ಹೇಳಿಯೇ ಇದೆ. ಅವರ ಹನಿಗಳು 'ಮನಸ್ಸಿನ ವಿಚಿತ್ರ ವ್ಯಾಪಾರ ಚಕ್ರದಿಂದ ಹುಟ್ಟಿದವುಗಳು.' ಅವರ 'ಎಡಬಿಡಂಗಿ'ಯಲ್ಲಿ ಕಂಡುಬರುವ ಧಾರ್ಮಿಕ ವೃತ್ತಿಯ ದ್ವಂದ್ವವನ್ನು ಅವರ ಇನ್ನು ಹಲವು ಹನಿಗತೆಗಳಲ್ಲಿಯೂ ಕಾಣುತ್ತೇವೆ. 'ಜಮೀನುದಾರರ ಧರ್ಮ' ದಲ್ಲಿ, ಹಿಂದಕ್ಕೆ ಯಾರೋ ಒಬ್ಬ ಪುಣ್ಯಾತ್ಮರು ದೊಡ್ಡ ಕೆರೆ ಕಟ್ಟಿಸಿ 'ಕಿರು ಗಂಟೆ' ಎಂಬ ಸಾದಾ ಹೆಸರನ್ನಿಟ್ಟರು. ಆದರೆ ಜಮೀನುದಾರರೊಬ್ಬರು ಆ ಕೆರೆಗೆ ಕಲ್ಲಿನ ಗೋಡೆಯನ್ನು ಮಾತ್ರ ನಿಲ್ಲಿಸಿ, ಅಲ್ಲಿ ತಮ್ಮ ಹೆಸರನ್ನು ದೊಡ್ಡದಾಗಿ ಕೆತ್ತಿಸಿದುದರ ಪ್ರಸ್ತಾಪವಿದೆ. ಬಡವಿಯಾದ ನಿಂಗಿ ತನ್ನ ಮಗ ಕಾಲೆರಾದಿಂದ ತೀರಿದಾಗ ಪುರೋಹಿತರು 'ಜಾತಸ್ಯ ಮರಣಂ ಧ್ರುವಂ' ಎಂದು ಉಪದೇಶಿಸುತ್ತಾರೆ. ಮುಂದೆ ತಮ್ಮ ಮಗನಿಗೇ ಕಾಲೆರಾ ವಿಪತ್ತು ಬಂದಾಗ....? ಹಳ್ಳಿಯ ಜನರ ಮೌಢ್ಯದ ಕುರಿತ ಹನಿಗತೆಗಳು ಕೆಲವಿವೆ. ಯಾರಿಗಾದರೂ ಸೀನು ಬಂದರೆ 'ಶತಾಯುಸ್, ದೀರ್ಘಾಯುಸ್' ಹೇಳಬೇಕಂತೆ. ಅಂದರೆ ಆಯುಷ್ಯ ಕಡಿಮೆಯಾಗುವದಿಲ್ಲವಂತೆ. ಸರಿ; ಆದರೆ ಮಗ ಮನೆಬಿಟ್ಟು ಹೊರಗೆ ಇದ್ದ ಕಾಲದಲ್ಲಿ ಸೀತರೆ? ಅವನ ಆಯುಷ್ಯ ಕಡಿಮೆಯಾಗಬಾರದೆಂದು ಮುದುಕಿಯೊಬ್ಬಳು ಸದಾ 'ಶತಾಯುಸ್, ದೀರ್ಘಾಯುಸ್' ಎಂದು ವಟಗುಟ್ಟುತ್ತಿದ್ದುದು ಮತ್ತೊಂದು ಕತೆಯಲ್ಲಿ ಬಂದಿದೆ. 'ಆರು ದೋಸೆ, ಆರು ಇಡ್ಲಿ, ಆರು ಕಾಫಿ' ಎಂಬುದು ಘಟನಾತ್ಮಕ ಸ್ವಾರಸ್ಯವುಳ್ಳ ಕತೆ. ಸ್ನೇಹಿತ ದೋಸೆ–ಇಡ್ಲಿ–ಕಾಫಿ ಕೊಡಿಸಿದರೆ ಯಾರಿಗೂ ಖುಶಿ. ಆದರೆ ಒಂದೇ ದಿನಕ್ಕೆ ೬ ಜನ ಸ್ನೇಹಿತರು ಹಾಗೆ ಮಾಡಿದ್ದಾದರೆ? ಅಂತೂ ತಿಂದದ್ದನ್ನು ಜೀರ್ಣಿಸಲಾರದೆ ತೂರಾಡಿಕೊಂಡು ಒಬ್ಬ ಮನೆಗೆ ಬಂದ. ಮರುದಿನ ಡಾಕ್ಟರರೂ ಬಂದು ಹೋದರು. ಆದಾಗಿ ಒಂದು ದಿನ ಅವರ ಬಿಲ್ ಕೂಡಾ ಬಂದು ಹೋಯಿತು—ಅವನು ತಿಂದ ೩ × ೬ ಪದಾರ್ಥಗಳ ಬೆಲೆಗಿಂತ ಹೆಚ್ಚಾಗಿ!

ರಾಜರತ್ನಂ ತಾತ್ವಿಕ ತಳಹದಿಯುಳ್ಳ ಕತೆಗಳನ್ನೂ ಬರೆದಿದ್ದಾರೆ. ಬದುಕಿನ ಮರ್ಮ ಎಲ್ಲಿದೆ–ಎಂಬುದನ್ನು ತಿಳಿಸುವ ಒಂದು ಹನಿಗತೆಯ ಸಾರ ಹೀಗಿದೆ: ''ಅನ್ನ ಕುದಿಯುತ್ತಿತ್ತು. ಕುದಿಯುತ್ತಿದ್ದ ಅಕ್ಕಿಯ ಕಾಳುಗಳು, ಉರಿಯುತ್ತಿದ್ದ ನೆಲ್ಲು–ಹೊಟ್ಟುಗಳಿಗೆ ಹೇಳಿದುವು: 'ನೀವೇ ತಿನಿಸಿ, ಬೆಳಿಸಿ ನಮ್ಮನ್ನು ಹೀಗೆ ಕುದಿಸುವುದು ನ್ಯಾಯವೆ?' ಅದಕ್ಕೆ ನೆಲ್ಲು–ಹೊಟ್ಟುಗಳ ಅಂದವು: 'ನಮಗೇನು ಹೀಗೆ ಹತ್ತಿ ಉರಿಯುವುದು ಪ್ರಿಯ

ಪಾದ ಕೆಲಸವಲ್ಲ. ಇಕೋ ಇಲ್ಲಿ ಕುಳಿತಿದ್ದಾನಲ್ಲ, ಅವನದು ಈ ಕೆಲಸ.' ಈ ಸಂಭಾಷಣೆಯನ್ನು ಕೇಳಿಸಿಕೊಂಡ ಆ ವ್ಯಕ್ತಿ ಉರಿಯನ್ನು ಆರಿಸಿದ. ಅನ್ನದ ಪಾತ್ರೆಯನ್ನು ಕೆಳಗಿಳಿಸಿದ. ಕುದಿಯುವುದು ನಿಂತಿತು. ಆದರೆ ಅವನ ಹೊಟ್ಟೆ ಕುದಿಯತೊಡಗಿತು! ಆದ್ದರಿಂದ ಮತ್ತೆ ಉರಿಮಾಡಿದ....'' 'ಹನಿಗಳು' ಹೊಸಗನ್ನಡ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲು. ಅದರಲ್ಲಿಯ ಕತೆಗಳಲ್ಲಿ ಯಾವ ಕಾಲಕ್ಕೂ ಹೊಸತನ ತೋರಿಬಂದೀತು. ದುರ್ದೈವಕ್ಕೆ ರಾಜರತ್ನಂ ಇಂಥ ಕತೆಗಳನ್ನು ಮುಂದಕ್ಕೆ ಹೆಚ್ಚಾಗಿ ಬರೆಯಲಿಲ್ಲ. ಅವರ ಪ್ರಯೋಗಶೀಲ ವೃತ್ತಿ ಬೇರೊಂದು ದಿಕ್ಕಿನಲ್ಲಿ ಹರಿದಿರಬೇಕು.

ಮುಂದೆ ಹಲವಾರು ವರ್ಷಗಳು ಸಂದ ಮೇಲೆ ಎನ್. ಪ್ರಹ್ಲಾದರಾಯರ 'ಅವತಾರ'ದ ಅವತಾರವಾಯಿತು (೧೯೪೬). ಅದರಲ್ಲಿ ಕೆಲವು ಮಾತ್ರ ಹನಿಗತೆಗಳೆನಿಸಿಕೊಳ್ಳಲು ಯೋಗ್ಯವಾಗಿವೆ. ಪುಸ್ತಕದ್ದೇ ಹೆಸರಿನ 'ಅವತಾರ' ಕತೆಯಲ್ಲಿ ಅಮೃತ–ವಿಷಗಳ ಸ್ನೇಹದ ರೂಪಕಾತ್ಮಕವಾದ ವಿವೇಚನೆ ಇದೆ. ಅಮೃತವು ವಿಷದ ಸ್ನೇಹ ಹಸ್ತವನ್ನು ತಿರಸ್ಕರಿಸುತ್ತದೆ. ಆಗ ಒಬ್ಬ ಎರಡನ್ನೂ ಒಂದೊಂದು ಕೈಯಲ್ಲಿ ಹಿಡಿದುಕೊಂಡು ಬೆರಸಿ ಕುಡಿದು ಬಿಟ್ಟನಂತೆ. ಅವನು ವಾಸ್ತವವಾಗಿ ಕುಡಿದದ್ದು—ಕಾಫಿ! ಕಾಫಿಯ ಹನಿಸಮೂಹ ಇನ್ನೊಂದು ಹನಿಗತೆಗೆ ಕಾರಣವಾಗಿದೆ. ಅದರಲ್ಲಿ ಕಾಫಿಗೆ ಸಕ್ಕರೆಯನ್ನೇ ಹಾಕದಿದ್ದರೂ ಸಕ್ಕರೆ ಜಾಸ್ತಿ–ಎಂದು ಎಗರಾಡುವ ಗಂಡಸಿಗೆ ಅವನ ಹೆಂಡತಿ ಪಾಠಕಲಿಸುವ ಸಂದರ್ಭವಿದೆ. ವಿವರಗಳಿಗೆ ಆ ಸಂಗ್ರಹದಲ್ಲಿಯ 'ಹುಲಿ ಜಾತಿಗೆ ಸೇರ್ದೆನೆಂದು-'ಹನಿಗತೆಯನ್ನು ನೋಡಬಹುದು. ಪ್ರಹ್ಲಾದರಾಯರು ಇಂಥ ಹನಿಯ ಗಾತ್ರದ ಕೃತಿಗಳನ್ನು ರಚಿಸಬಲ್ಲವರಾಗಿದ್ದರೆನ್ನುವುದಕ್ಕೆ ಈಚಿನ ಅವರ 'ಅಮಲಿನ ವಚನಗಳು' ಎಂಬ ಸೂಕ್ತಿ–ಕಾವ್ಯವನ್ನು ಜ್ಞಾಪಿಸಿಕೊಳ್ಳಬಹುದು.

ಬೀಚಿಯವರ ಮೊದಲ ಪುಸ್ತಕವೇ ಹನಿಗತೆಗಳ ಸಂಕಲನವಾಗಿದೆ. ಅವರ 'ಮಾತ್ರೆಗಳು' ೧೯೪೬ರಲ್ಲಿಯೇ ಪ್ರಕಟವಾಯಿತು. ಅವೆಲ್ಲ ಸತ್ಯದ ಕಹಿಮಾತ್ರೆಗಳು. ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ–ಈ ಮೂರೂ ರಂಗಗಳಲ್ಲಿ ಸತ್ಯಕ್ಕೆ ಚ್ಯುತಿ ಬಂದುದರ ಹಾಗೂ ನಮ್ಮ ಬದುಕಿನ ವಿರೋಧಾಭಾಸದ ಚಿತ್ರಣಗಳು ಇಲ್ಲಿವೆ. ಮನುಷ್ಯ ಧರ್ಮದ ಮೇಲೆ ಉಪನ್ಯಾಸ ಕೊಡುತ್ತಲಿದ್ದ ಸ್ವಾಮಿಗಳು ಗೂರಲು ಹಿಡಿದು ಕೆಮ್ಮುತ್ತಿದ್ದ ಮುದುಕನೊಬ್ಬನನ್ನು ಸಭಾಗೃಹದಿಂದ ಹೊರಗೆ ಹಾಕಿಸುತ್ತಾರೆ. ಲಂಚ ಭೋಕ್ಷ್ಯಗಳಿಂದ ಬೊಜ್ಜು ಬೆಳೆಸಿಕೊಂಡ ಕಾರಕೂನ–ಭಟ್ಟರು ಮಡಿಯಲ್ಲೇ ಸಾಬಿಯ ಕೈಯಿಂದ ರೂಪಾಯಿ ಇಸಿದುಕೊಳ್ಳುತ್ತಾರೆ. ಆದರೆ ತಮ್ಮ ಮಗ, ಸಾಬಿಯು ಕುಳಿತ ಬೆಂಚಿನ ಮೇಲೆ ತಾನೂ ಕುಳಿತು ಒಟ್ಟೊಟ್ಟಿಗೆ ಕಾಫಿ ಕುಡಿದನಲ್ಲ—ಎಂದು ಎಗರಾಡುತ್ತಾರೆ. ಇಂಥ ನಡೆವಳಿಕೆ ಅತಿ ಸಹಜ ಎನ್ನುವಷ್ಟು ನಮ್ಮ ಜೀವನದಲ್ಲಿ ಒಂದಾಗಿಬಿಟ್ಟಿದೆ. ಬದುಕಿ ಇದ್ದಾಗ ಮುದಿ ತಾಯಿಯನ್ನು ಮನೆಯ ಹೊರಗಿಟ್ಟು ಒಬ್ಬ ಪ್ರತಿಷ್ಠಿತನು ಅವಳು ಸತ್ತ ಮೇಲೆ, ದೊಡ್ಡದಾಗಿ ಅವಳ ಫೋಟೋ ಮನೆಯಲ್ಲಿ ತೂಗಹಾಕಿದನಂತೆ. ಹೀಗೆ ಮುಪ್ಪಿನ ತಂದೆ ತಾಯಿಯನ್ನು ಅನೇಕ ಶಿಕ್ಷಣವಂತರು ಅಲಕ್ಷ್ಯ ಮಾಡುವದನ್ನು ನಿತ್ಯವೂ ನಾವು

ಕಾಣುತ್ತೇವೆ. ಹೀಗೆಯೇ ಪಾನನಿರೋಧ, ಸಮತಾವಾದ ಮುಂತಾದ ರಾಜಕೀಯ ವಿಷಯಗಳ ಬಗ್ಗೆಯೂ ಬೀಚಿ ತಮ್ಮ ಕೊಂಕುನೋಟವನ್ನು ಹರಿಯಿಸಿದ್ದಾರೆ.

'ಒಳಗೊಂದು ಹೊರಗೊಂದು' ಎಂಬ ಈ ನಡತೆಯನ್ನು ಎದುರು ಬದುರಾಗಿ ಚಿತ್ರಿಸುವಲ್ಲಿ ಸೂಚ್ಯತೆಗೆ ಗಮನ ಕೊಡಬೇಕು. ಅದರಂತೆ ವಿಡಂಬನೆ ಅತಿಯಾಗಿ ಬರಬಾರದು. ಹಾಗೆ ಅದೇ ಪ್ರಾಧಾನ್ಯವಾಗಿ ಬಂದರೆ, ಅದು ವಿಡಂಬನಾತ್ಮಕ ಪ್ರಬಂಧ/ಘಟನೆಯಾದೀತಲ್ಲದೆ ಹನಿಗತೆಯಲ್ಲ. ಇಂಥ ಕೆಲವು ಕಥನಗಳನ್ನೂ 'ಮಾತ್ರೆಗಳು' ಒಳಗೊಂಡಿದೆ. ಆದರೂ ಜೀವನದ ಸಣ್ಣ ತಿರುವು ತೊಡಕುಗಳನ್ನು ಕಾಣುವ ಸೂಕ್ಷ್ಮದೃಷ್ಟಿ ಅವರಿಗೆ ಇತ್ತು. ಹಾಗೂ ಅದನ್ನು ಮಾರ್ಮಿಕವಾಗಿ ಕಥನಿಸುವುದರಲ್ಲಿ ಅವರು ಸಿದ್ಧಹಸ್ತರಾಗಿದ್ದರು. ಅವರ ಮುಂದಿನ ಸಣ್ಣಕತೆಗಳ ಸಂಕಲನಗಳಲ್ಲಿ ಕೆಲವಾದರೂ ಹನಿಗತೆಗಳು ಹಣಿಕಿ ಹಾಕಿವೆ. ಉದಾಹರಣೆಯಾಗಿ, ಸಂಶಯಖೋರ ಹೆಂಡತಿಯೊಬ್ಬಳು, ತನ್ನ ಗಂಡನ ಕಿಸೆಯಲ್ಲಿದ್ದ ರಿಬ್ಬನ್ ಖರೀದಿಯ ಒಂದು ರಸೀದಿ ನೋಡಿ, ಅದಾವ ಪ್ರಿಯತಮೆಗಾಗಿ ಅದನ್ನು ತಂದುದೆಂದು ಗಲಾಟೆ ಮಾಡುತ್ತಾಳೆ. ಆ ರಸೀದಿಯೋ, ಟೈಪರೈಟರಿನ ರಿಬ್ಬನ್ನಿನದು !

ವಕ್ರಕವಿ ವಿ. ಜಿ. ಭಟ್ಟರು ಮಾತ್ರ ನೂರಕ್ಕೆ ನೂರು ಪೈಸೆ ಹನಿಗತೆಗಾರರು. ಅವರಿಗೆ ನಿಯಮಿತವಾದ ಸಣ್ಣಕತೆಗಳನ್ನು ಬರೆಯಲಿಕ್ಕೆ ಬರುವುದೇ ಇಲ್ಲ–ಎನ್ನುವ ಹಾಗೆ ಹನಿಗತೆಗಳನ್ನು ರಚಿಸಿದರು. ೧೯೫೦ನೆಯ ದಶಕದಲ್ಲಿ, ಅಂಥ ಸಂಗ್ರಹಗಳು—'ಬುರಕಿ' 'ದಿವ್ಯಕತೆಗಳು' 'ಪೆದ್ದಂಕತೆಗಳು' ಮತ್ತು 'ಸಹ್ಯಾದ್ರಿ'—ಒಂದರ ಮೇಲೊಂದು ಹೊರ ಬಂದವು. (ಆಮೇಲೆ ಅವರು ಬರೆಯಲೇ ಇಲ್ಲ !) ಹನಿಗತೆಯ ಚಾತುರ್ಯ ಅವರ ಕವನಗಳಲ್ಲಿಯೂ ಆಗಾಗ ಕಾಣಿಸಿಕೊಂಡಿದ್ದಿತು.

ನಿರೂಪಣೆಯಲ್ಲಿ ಅವರು ಹೊಸ ವಿಧಾನಗಳನ್ನು ರೂಪಿಸಿಕೊಂಡಿದ್ದಾರೆ. ಅವೆಂದರೆ ಮಗು, ಪ್ರಾಣಿ ಮತ್ತು ಪೌರಾಣಿಕ ಘಟನೆಗಳು. ಮಗುವಿನ ಮುಗ್ಧ ಪ್ರಶ್ನೆಗಳ ಮೂಲಕ ಭಟ್ಟರು ಬದುಕನ್ನು ಕೆಣಕಿ ನೋಡಿದ್ದಾರೆ. ಸಾಮಾಜಿಕ ವಿಡಂಬನೆಗೆ 'ಮಗು'ವನ್ನು ತಂದಿದ್ದರೆ, ರಾಜಕೀಯ ಶ್ಲೇಷೆಗಾಗಿ ಪಶು–ಪಕ್ಷಿಗಳ ಅರಣ್ಯ ರಾಜ್ಯವನ್ನು ಸೃಷ್ಟಿಸಿದ್ದಾರೆ. ಆಗಿನ ಕಾಲದಲ್ಲಿ ನಡೆದ ಭಾಷಾವಾರು ಪ್ರಾಂತರಚನೆಯ ಕುರಿತು ಕನ್ನಡಿಗರ ಗೊಳ್ಳು ಕೂಗನ್ನು ಪ್ರಾಣಿ ಲೋಕದ ಮೂಲಕ ವಿಡಂಬಿಸುವ ಒಂದು ಕತೆಯ ಸಾರ ಹೀಗಿದೆ :

ವಿಕಾಸಕ್ರಮದಲ್ಲಿ ಕತ್ತೆಯ ಕಿವಿಗಳು ಕುಳ್ಳ ಆದವು. ಆಗ ಅರಣ್ಯರಾಜ್ಯದಲ್ಲಿ ಕಿವಿವಾರು–ಪ್ರಾಂತ ರಚನೆಯ ಚಳುವಳಿ ಎದ್ದಿತು. ಉಳಿದ ಪ್ರಾಣಿ ವರ್ಗಗಳು ತಂತಮ್ಮ ಕಿವಿಗಳನ್ನು ಎಳೆದು ಉದ್ದಮಾಡಿಕೊಂಡು 'ನಮ್ಮ ಜಾಗ ಇಷ್ಟು' ಎಂದು ಕೇಳಿದುವು. ಇತ್ತ ಕತ್ತೆಗಳು, 'ರಾಮಾಯಣ'ದ ಕಾಲದಲ್ಲಿ ತಮ್ಮ ಕಿವಿಗಳೂ ಉದ್ದವಾಗಿದ್ದುವು-ಎಂದೆನ್ನುತ್ತ ಹೆಚ್ಚಿನ ಪ್ರದೇಶವನ್ನು ಕೇಳಿದುವು. ಆ ಕಿರಿಚುವ ಆವೇಶಕ್ಕೆ ಕತ್ತೆಗಳ ಕಿವಿಗಳು ಉದ್ದವಾಗಿಬಿಟ್ಟವು! ಆಗ ಇತರ ಪ್ರಾಣಿಗಳ ಮುಂದಾಳುಗಳು ಹೆದರಿದವು. ಆದರೆ ಕಿರಿಚುವ ಆವೇಶ ತಗ್ಗಿದಾಗ ಕತ್ತೆಗಳ ಕಿವಿಗಳ ಗಾತ್ರ ಮೊದಲಿನಷ್ಟೇ! ಹೀಗಾಗಿ ಕತ್ತೆಗಳಿಗೆ ಸಿಗ

ಬೇಕಾದಷ್ಟೇ ಜಾಗ ಸಿಕ್ಕಿತು. ಮೋಜೆಂದರೆ, ಆ ಮೊದಲು ಕಿರಿಚಿದಾಗ ತಮ್ಮ ಕಿವಿಯೂ ಉದ್ದವಾಗಿ, ತಾವು ಇತರ ಪ್ರಾಣಿಗಳನ್ನು ಹೆದರಿಸಬಹುದೆಂಬುದು ಕತ್ತೆಗಳಿಗೆ ತಿಳಿದಿರಲಿಲ್ಲವಂತೆ! ಹೀಗೆ ಕನ್ನಡಿಗರ ಬಾಯಿಬಡಾಯಿಯ ಗೊಳ್ಳು ಪರಿಣಾಮವನ್ನೂ ಗತಕಾಲದ ಹಿರಿಮೆಯನ್ನು ನಾವು ಎತ್ತಿಹೇಳುವುದಕ್ಕೆ ಇತರರು ಆದೆಷ್ಟರ ಮಟ್ಟಿಗೆ ಬೆಲೆ ಕೊಟ್ಟಾರೆಂಬುದನ್ನೂ ಇಲ್ಲಿ ಕಟುವಾಗಿ ಟೀಕಿಸಿದ್ದಾಗಿದೆ. ಅದರ ನಿರೂಪಣೆ ಹನಿಗತೆಯ ನೇರ ಹಾದಿಯಲ್ಲೇ ಸಾಗಿದೆ. ಅದರಂತೆ ಪರದೇಶಗಳಿಗೆ ಹೋಗಿ ಇಲ್ಲದ, ಸಲ್ಲದ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ಬರುವ ಡೌಲಿನ 'ಪ್ರಾಣಿ' ಗಳನ್ನೂ 'ಬ್ರಾಹ್ಮಣ' 'ಅಬ್ರಾಹ್ಮಣ ಎಂಬ ಬಟ್ಟೆಯ ಗಂಟುಗಳನ್ನು ಹೊತ್ತುಕೊಂಡಿದ್ದ ಅಗಸರ ಕತ್ತೆಗಳನ್ನೂ 'ಆದರ್ಶ', 'ಸಭ್ಯತೆ'ಗಳ ಹೆಸರಿನಲ್ಲಿ ಮೇಲಿಂದ ಮೇಲೆ ಕಾಯದೆಗಳನ್ನು ಮಾಡಿ ಮುರಿಯುತ್ತ ಹೋಗುವ ಹಿಂಸ್ರಪಶುಗಳನ್ನೂ ಭಟ್ಟರು ಸೃಷ್ಟಿಮಾಡಿದ್ದಾರೆ,

ಪೌರಾಣಿಕ ಪರಿಸರಕ್ಕೆ ಅವರು ರಾಮಾಯಣವನ್ನು ಆಯ್ದುಕೊಂಡಿದ್ದಾರೆ. ಅದರಲ್ಲಿಯ ಘಟನೆ ಹಾಗೂ ಪಾತ್ರಕಲ್ಪನೆಗಳನ್ನು ವಿಪರ್ಯಸ್ತಗೊಳಿಸಿ ಇಂದಿನ ಪರಿಸರಕ್ಕೆ ಮತ್ತು ಸಾಮಾನ್ಯ ಮಾನವರಿಗೆ ಅನುಗುಣವಾಗಿ ಚಿತ್ರಿಸಿದ್ದಾರೆ. ಪಂಚವಟಿಯಲ್ಲಿ ರಾಮಸೀತೆಯರ ಕುಟೀರದಲ್ಲಿ ತಿಗಣೆ ಸುಳಿದಾಗಿನ ವೈಪರೀತ್ಯ, ಲವಕುಶರ ಅನಂತರ ಸೀತಾದೇವಿಗೆ ಮಕ್ಕಳಾಗದಿದ್ದುದರ ಕಾರಣ ಮೀಮಾಂಸೆ, ಶಬರಿಯ ಎಂಜಲನ್ನು ತಿಂದ ಮೇಲೆ ಇತರರ ಪ್ರತಿಕ್ರಿಯೆ—ಇವೇ ಭಟ್ಟರ ಹನಿಗತೆಗಳಲ್ಲಿ ಬಂದ ವಿಷಯಗಳ ಮಾದರಿಗಳು (ಅವುಗಳಲ್ಲಿ 'ಎಂಜಲು ಬೋರೆ' ಎಂಬುದನ್ನು ಮೇಲೆ ಕೊಡಲಾಗಿದೆ).

ಪ್ರಾಣಿ ಲೋಕವನ್ನು ಇಲ್ಲವೆ ಪೌರಾಣಿಕ ಪರಿಸರವನ್ನು ತಾರದೇ ರಚಿತವಾದ ಹತ್ತಾರು ಹನಿಗತೆಗಳಿವೆ—ಭಟ್ಟರ ಸಂಗ್ರಹಗಳಲ್ಲಿ. ಹನಿಗತೆಗಳಿಗೆ ಅನಿರೀಕ್ಷಿತ ಮುಕ್ತಾಯವೇ ಬೇಕಾಗದೆನ್ನುವುದಕ್ಕೆ 'ಬುರುಕಿ' ಎನ್ನುವ ಹನಿಗತೆ ಉದಾಹರಣೆಯಾಗಬಲ್ಲುದು' ಓರ್ವ ಸ್ತ್ರೀಯ ಹಿಂಭಾಗವನ್ನು ನೋಡಿ ಅವಳು ರೂಪವತಿಯೇ ಇರಬೇಕೆಂದು ಒಬ್ಬ ತರ್ಕಿಸಿದ. ಮನಸ್ಸಿನಲ್ಲಿ ಆ ಭಾವನೆಯನ್ನು ಬಲಿಯಗೊಟ್ಟ. ಅವಳ ಮುಖವನ್ನು ನೋಡಿದಾಗ ಹೇಸಿಗೆ ಬರುವಂತಾಯ್ತು. ಆದರೇನು ಅದರಲ್ಲಿ ಇಲ್ಲದ ಚೆಲುವನ್ನು ಕಂಡಕೊಂಡು ಸುಖಿಸಿದನಂತೆ. 'ಕಾಣದ ಚೆಲುವಿಗಾಗಿ ಪ್ರೀತಿಯೆಂಬ ಉರಲಿಗೆ ಕೊರಳು ಕೊಟ್ಟ ರಾತ್ರಿಯೂ ಆಗಿತ್ತು.' ಎಂದು ಕತೆ ಕೊನೆಗೊಳ್ಳುತ್ತದೆ. ಪ್ರೇಮದ ಹೆಸರಿನಲ್ಲಿ ಎಳಹರೆದವರ ಕಾಮುಕ ಭಾವನೆಯನ್ನು ಈ ಹನಿಗತೆ ಹೆಚ್ಚು ಮಾರ್ಮಿಕವಾಗಿ ಪ್ರಕಟಿಸಿದೆ ಅಂತೂ ರಾಜರತ್ನಂ, ಬೀಚಿಯವರು ವಿಶೇಷವಾಗಿ ತಂದಿರದ, ಪ್ರೇಮ-ಕಾಮದ ಹಿನ್ನೆಲೆಯಲ್ಲಿ ಭಟ್ಟರು ಇನ್ನೂ ಅನೇಕ ಕತೆಗಳನ್ನು ಕೊಟ್ಟಿದ್ದಾರೆ.

"ಇಲ್ಲಿಯ ಕಿರುಗತೆಗಳಲ್ಲಿ ಒಂದು ನೀತಿ ಇದೆ. ಆದರೆ ಅದನ್ನು ಹೇಳುವ ರೀತಿ-ಬುದ್ಧಿಯನ್ನು ಕೆಣಕುವಂತಹದು. ಅವಮಾನಗೊಳಿಸುವಂತಹದಲ್ಲ. ಶ್ರೀ ಭಟ್ಟರಿಗೆ ಜೀವನದ ವಿಷಯವಾಗಿ ಒಂದು ತಾತ್ವಿಕ ಕಳಕಳಿ ಇದೆ." ಎಂದು 'ಬುರುಕಿ' ಪುಸ್ತಕದ ಮುನ್ನುಡಿಯಲ್ಲಿ ಹೇಳಲಾಗಿದೆ. ಆದರೆ ಬುದ್ಧಿಗೆ ಅಪಮಾನವಾಗುವಂಥ ಮತ್ತು ತಾತ್ವಿಕ

ಕಳಕಳಿಯು ಗೌಣವಾಗಿರುವ ಹಲವು ಕಥೆಗಳು ಭಟ್ಟರಿಂದ ರಚಿತವಾಗಿವೆ. ಸತ್ತ ಹೆಂಡತಿಗಾಗಿ ಒಬ್ಬ ಶೋಕಿಸುತ್ತಿದ್ದಾಗ ಗೆಳೆಯ ಸಮಾಧಾನ ಹೇಳುತ್ತ 'ಕೆಲವು ಕಾಲದ ಮೇಲೆ ಈ ಪತ್ನೀವಿಯೋಗ ಸಹ್ಯವಾಗುವುದು. ನೀನಿನ್ನೂ ಮೂವತ್ತು ವರುಷದ ತರುಣ. ಯಾರು ವಿಧುರರಾಗುತ್ತಾರೆಂದು ಕಾಯುವ ಕನ್ಯಾಪಿತೃಗಳಿಗೆ ಕೊರತೆಯಿಲ್ಲ. ಒಂದೆರಡು ವರ್ಷ ತಡೆ.' ಎಂದನಂತೆ. 'ಒಂದೆರಡು ವರ್ಷ? ಒಂದೆರಡು ದಿನ ಹೆಂಡತಿ ಇಲ್ಲದೆ ತಡೆಯುವುದು ಹೇಗೆಂದು ನನ್ನ ಚಿಂತೆ.' ಎಂದನಂತೆ. ಇದು ಅತ್ಯಂತ ಒರಟಾದ ನಿರೂಪಣೆಯೆನಿಸುವುದು. ಇದನ್ನೇ ಸೂಚ್ಯವಾಗಿ ಹೇಳುವುದು ಸಾಧ್ಯವಿತ್ತು. ಭಟ್ಟರ ಅತಿ ವಕ್ರತೆಗೆ ಇನ್ನೊಂದು ಉದಾಹರಣೆಯಾಗಿ, 'ಬೀಜ' ಎನ್ನುವ ಕತೆಯನ್ನು ಗಮನಿಸಬಹುದು. ಗರ್ಭಪಾತದ ಶಿಶುಪಿಂಡವನ್ನು ತಂದೆಯು ತೋಟದಲ್ಲಿ ಹುಗಿದು ಬಂದ. ಅವನ ಇನ್ನೊಬ್ಬ ಚಿಕ್ಕಮಗ, ಅದೇನೆಂದು ತಿಳಿಯದೆ, 'ಸಸಿ ಬೆಳೆಯಲಿ' ಎಂದು ನೀರು ಹಾಕಿ ಬಂದನಂತೆ!

ಏನಿದ್ದರೂ ಬಾಳಹೊಳೆಯಿಂದ ಹನಿಗಳನ್ನು ಎತ್ತಿಕೊಳ್ಳುವ ಹದ ಭಟ್ಟರಿಗೆ ಇತರರಿಗಿಂತ ಚೆನ್ನಾಗಿ ಸಾಧಿಸಿದೆ. ಕೆಲವೆಡೆಗೆ ಮಾತ್ರ, ಅವರು ಹಿಡಿದ, ವಕ್ರತೆಯ ದುರ್ಬೀನಿಂದಾಗಿ ಹನಿಯ ಗಾತ್ರ, ರೂಪ ವಿಕೃತಗೊಂಡಿದೆ. ಅವರು ಆ ಮುಂದೆ ಹನಿಗತೆಗಳನ್ನು ಬರೆಯಲೇ ಇಲ್ಲ ಎನ್ನುವುದು ವಿಷಾದನೀಯ.

ಇಷ್ಟೇ ಅಲ್ಲ. ಇನ್ನಾರೂ ಹನಿಗತೆಗಳ ಸಂಗ್ರಹವನ್ನು ಇದುವರೆಗೆ ಹೊರತಂದೇ ಇಲ್ಲ. ಅಲ್ಲಿ ಇಲ್ಲಿಯ ಕಥಾ ಸಂಗ್ರಹಗಳಲ್ಲಿಯೋ, ವಾರಪತ್ರಿಕೆಗಳಲ್ಲಿಯೋ ಹನಿಗತೆಗಳು ಕಂಡು ಬಂದಾವಲ್ಲದೆ, ಇದೊಂದು ಸಾಹಿತ್ಯ ಪ್ರಕಾರವೆಂದು ಯಾರೂ ಬೆಳೆಯಿಸಿಕೊಂಡು ಬರಲಿಲ್ಲ. ಕಸ್ತೂರಿಯ 'ಇದುವೆ ಜೀವ, ಇದು ಜೀವನ'ದ ಶೀರ್ಷಿಕೆಯಡಿ ಹನಿಗತೆಗಳೆಂದು ಕರೆಯಬಹುದಾದ ಜೀವನಾನುಭವಗಳು ಕಂಡುಬರುತ್ತವೆ. ಒಂದೆರಡನ್ನು ಮೇಲೆ ಉದಾಹರಿಸಿದ್ದಾಗಿದೆ. ಅದರ ಬೇರೊಂದು ಸಂಚಿಕೆಯಲ್ಲಿ ಬಂದ ಅನುಭವ ಕಥನ ಹನಿಗತೆಯಾಗಬಹುದು. ಅದರ ಸಾರ ಹೀಗಿದೆ:

'ಬೆಂಗಳೂರಿನಿಂದ ತುಮಕೂರಿಗೆ ತುಂಬಿದ ಬಸ್ಸು ಹೊರಟಿತ್ತು. ನಡುದಾರಿಯ ಹಳ್ಳಿಯೊಂದರಿಂದ ಇಬ್ಬರು ಬಸ್ ಹತ್ತಿದರು. ಒಬ್ಬ ಅಧಿಕಾರಿಯಂತಿದ್ದ. ಅವನಿಗೆ ಕಂಡಕ್ಟರ್ ಜಾಗ ಮಾಡಿಸಿಕೊಟ್ಟ. ಇನ್ನೊಬ್ಬವ ಮುದುಕ. ತನ್ನ ಶಕ್ತಿಯುಡಿಗಿದ್ದ ಕಾಲುಗಳ ಮೇಲೆ ನಿಂತೇ ಇದ್ದ. ಮೂರು ಜನ ಕೂಡ್ರುವ ಸೀಟಿನ ಮೇಲೆ ಒಬ್ಬ ತನ್ನ ಪಾವು, ಅರ್ಧಪಾವು, ಚಟಾಕುಗಳಂಥ ಮಕ್ಕಳನ್ನು ಕೂಡ್ರಿಸಿಕೊಂಡು ಕುಳಿತಿದ್ದ. ಯಾರೊ ಒಬ್ಬರು, ಆ ಮುದುಕನಿಗೆ ಜಾಗ ಮಾಡಲು ಸೂಚಿಸಿದರು. ಅದಕ್ಕೆ ಆ ತಂದೆ 'ಅಷ್ಟು ಕರುಣೆ ಇದ್ದರೆ ನೀವೇ ಬಿಟ್ಟುಕೊಡ್ರೀ ಸೀಟನ್ನ.' ಎಂದ. ಆಗ ಒಬ್ಬ ಪಾವು ಇನ್ನೊಂದು ಅರ್ಧಪಾವು ಎದ್ದು ಜಾಗ ಬಿಟ್ಟುಕೊಟ್ಟವು! ಅವರನ್ನು ತೊಡೆಯ ಮೇಲೆ ಕೂಡ್ರಿಸಿಕೊಂಡು ಮುದುಕ ಕೇಳಿದ, 'ಮಗೂ, ಏನು ಕಲೀತಿದ್ದೀ?' ಒಂದು ಮಗು

ಹೇಳಿತು : 'ಮೂರನೇ ಕ್ಲಾಸ್.' ಇನ್ನೊಂದಕ್ಕೆ ಅದೇ ಪ್ರಶ್ನೆ ಕೇಳಿದಾಗ 'ಅ ಆ ಇ ಈ ಬರೀಲಿಕ್ಕೆ ಬತ್ತದೆ' ಎಂದು ಉತ್ತರ ಬಂತಂತೆ.*

ಇದಿಷ್ಟೇ ಕನ್ನಡದ ಹನಿಗತೆಗಳ ಬಂಡವಲು. ನನಗಿದೇ ಆಶ್ಚರ್ಯ. ಮಿನಿ-ಭಾವಗೀತವೆಂಬಂತೆ ಚುಟುಕಗಳ ಸೃಷ್ಟಿಯಾಯಿತು. ಬಲುಬೇಗ ನಮ್ಮಲ್ಲಿ ವಿಸ್ತಾರಗೊಂಡಿತು. ಆದರೆ ಆ ರೀತಿಯಾಗಿ ಹನಿಗತೆ ಬೆಳೆಯಲಿ ಇಲ್ಲ. ಹನಿಗತೆಗೆ ಮೂಲದ್ರವ್ಯವಾದ ದ್ವಂದ್ವ ಮನೋಭಾವವು ನಮ್ಮ ಇಂದಿನ ಜಟಿಲ ಜೀವನ ಕ್ರಮದಲ್ಲಿ ಅವ್ಯಾಹತವಾಗಿ ಕಂಡುಬರುವಾಗ ನಮ್ಮ ಕತೆಗಾರರು ಇದರತ್ತ ಗಮನಹರಿಸಲಿಲ್ಲ. ಅವರ ಗಮನ ಸೆಳೆಯುವ ಉದ್ದೇಶದಿಂದಲೇ ಈ ಲೇಖನವನ್ನು ಬರೆದುದಾಗಿದೆ.

---

*ಕಸ್ತೂರಿಯಂತೆಯೇ 'ಉದಯವಾಣಿ'ಯೂ ಈಚೆಗೆ ಪಂಚತಂತ್ರ ಮಾದರಿಯ ಆದರೆ ಆಧುನಿಕ ಜೀವನವನ್ನು ಪರ್ಯಾಯವಾಗಿ ವಿಡಂಬಿಸಿದ ಕತೆಗಳನ್ನು ಪ್ರಕಟಿಸಿತು. ಲೇಖಕರಾದ ಭಟ್ಟರು ಮೂಲತಃ ಅವನ್ನು ಸಂಸ್ಕೃತದಲ್ಲಿ ಬರೆದು ಪುಸ್ತಕವಾಗಿ ಪ್ರಕಟಿಸಿದ್ದರು.

ಕಾವ್ಯಾಭ್ಯಾಸಕ್ಕೆ ಕಂಪ್ಯೂಟರ್ ಸಹಾಯ

(ಬೇಂದ್ರೆಯವರಿಗೆ ಅನ್ವಯಿಸಿ)

ಬರುವ ಸೃಷ್ಟಿಯ ಬೇಳೆಯೊಡದಿದೆ
ಶಬ್ದವಾಗದೆ! ಶಬ್ದ ಕೇಳಣ್ಣಾ.

– ದ. ರಾ. ಬೇಂದ್ರೆ

ಕನ್ನಡ ಕಾವ್ಯ ವಿಮರ್ಶೆ ಆರಂಭವಾಗಿ ನೂರು ವರ್ಷಗಳಾಗುತ್ತ ಬಂದಿವೆ. ಒಂದು ಕಾಲಕ್ಕೆ ವಿಮರ್ಶೆಯೆಂದರೆ, ಕವಿಯ ಜೀವನ ಚರಿತ್ರೆ, ಕಾಲ, ಮತ ವಿಚಾರ, ಕಥಾಸಾರ ಮತ್ತು ಆಕರಗಳು, ಪಾತ್ರಪರಿಚಯ, ಒಂದಷ್ಟು ವರ್ಣನೆಗಳ ಹೃದ್ಯತೆ ಹಾಗೂ ರಸಾಲಂಕಾರ—ಇವಿಷ್ಟನ್ನು ಮಾತ್ರ ಒಳಗೊಂಡಿದ್ದಿತು—ಈ ಶತಕದ ಪೂರ್ವಾರ್ಧದಲ್ಲಿ. ಇಂದು ಕಾವ್ಯವಿಮರ್ಶೆಯ ಸ್ವರೂಪ ವಿಸ್ತಾರಗೊಳ್ಳುತ್ತ ನಡೆದಿದೆ. ಆದಕ್ಕೆ ಹೊಸ ಆಯಾಮಗಳು ಮೂಡಿವೆ. ವಿಶೇಷತಃ ತೌಲನಿಕವಾಗಿ ಕಾವ್ಯಾಭ್ಯಾಸ ಮಾಡುವುದಕ್ಕೆ ಹೆಚ್ಚು ಮಹತ್ವ ಬಂದಿದೆ. ಕಥೆಯ ಆಕರಗಳನ್ನು, ವಿವಿಧ ವರ್ಣನೆಗಳನ್ನು ಗಮನಿಸುವಾಗ ಇತರರ ಪ್ರಭಾವವೆಷ್ಟು, ಈ ಕವಿಯ ಸ್ವೋಪಜ್ಞತೆಯ ಅಂಶಗಳಾವುವು—ಎಂಬುದನ್ನು ಹೆಚ್ಚೆಚ್ಚಾಗಿ ತಿಳಿಯಬಯಸುತ್ತೇವೆ. ಅದರಂತೆ ಕವಿಯ ನುಡಿಕಟ್ಟನ್ನು, ಆ ಮೂಲಕ ಆಗಿನ ಕಾಲದ ಭಾಷಾಸ್ವರೂಪವನ್ನು ಗಮನಿಸುತ್ತೇವೆ. ಕಾವ್ಯದಲ್ಲಿಯ ಇತಿಹಾಸದ ಎಳೆಗಳನ್ನು, ಸಾಂಸ್ಕೃತಿಕ ಪರಿಸರವನ್ನು ಮತ್ತು ಸಾಮಾಜಿಕ ಸಂವೇದನೆಯನ್ನು ಹುಡುಕಿಕೊಂಡು ಹೋಗುತ್ತೇವೆ. ಇನ್ನೂ ಏನೆಲ್ಲ....

ಇಷ್ಟೊಂದು ವ್ಯಾಪಕ ಹಾಗೂ ಸೂಕ್ಷ್ಮವಾದ ಕಾವ್ಯಾಭ್ಯಾಸಕ್ಕೆ ಆ ಕವಿಯ ಕೃತಿಗಳನ್ನು ಆಳವಾಗಿ, ಮತ್ತೆ ಮತ್ತೆ ಮನನಮಾಡಬೇಕಾಗುವುದು. ಅವನ ಕೃತಿ ಸಮುದಾಯ ದೊಡ್ಡದಿದ್ದರೆ ಅದು ಇನ್ನಷ್ಟು ಶ್ರಮಸಾಧ್ಯದ ಕೆಲಸ. ಹಾಗೆ ಮಾಡದಿದ್ದರೆ, ವಿಮರ್ಶನ ವಿಚಾರಗಳು ಅರೆಕೊರೆಯಾಗುತ್ತವೆ; ಅನೇಕ ಬಾರಿ ವಿಮರ್ಶಕನ ವೈಯಕ್ತಿಕ ಅನಿಸಿಕೆಗಳಾಗುತ್ತವೆ; ನಿರ್ದುಷ್ಟವೂ ವಸ್ತುನಿಷ್ಠವೂ ಆಗಿರುವುದಿಲ್ಲ. ಶೆಕ್ಸಪಿಯರನ ಸುನೀತವೊಂದರ ಈ ಕೆಲವು ಸಾಲುಗಳನ್ನು ಗಮನಿಸಿರಿ :

Let me not to the marriage of true mindes
Admit impediments, love is not love

Which alters when it alteration findes,
Or bends with the remover to remove.

ಸುಲಭವಾಗಿ ಅರ್ಥವಾಗದ ಈ ಸಾಲುಗಳನ್ನು ಕುರಿತು ಓರ್ವ ಪ್ರಸಿದ್ಧ ವಿಮರ್ಶಕನು They have precision, simplicity and dignity ಎಂದು ಹೊಗಳಿದ್ದಾನೆ! ಹಾಗೆ ಇದ್ದಿರಲೂಬಹುದು, ಅವನ ದೃಷ್ಟಿಯಲ್ಲಿ. ಆದರೆ ಅವನ ಈ ಹೇಳಿಕೆ ವೈಯಕ್ತಿಕವಾಗುವುದಲ್ಲದೆ ವಸ್ತುನಿಷ್ಠ ವಿಮರ್ಶೆ ಅನಿಸುವುದಿಲ್ಲ. ನಮ್ಮ ಸಮಕಾಲೀನ ನವೋದಯ ಮತ್ತು ನವ್ಯ ಲೇಖಕ-ಕವಿಗಳ ವಿಮರ್ಶೆಯ ಕಾಲದಲ್ಲಿಯೂ ಕೆಲವರು ಈ ಬಗೆಯ ವ್ಯಕ್ತಿಗತವೂ, ಅಸ್ಪಷ್ಟವೂ ಆದ ಅಭಿಪ್ರಾಯಗಳನ್ನು ವ್ಯಕ್ತ ಮಾಡಿಯೇ ಇದ್ದಾರೆ. (ಉದಾಹರಣೆಗಳನ್ನೇನು ಕೊಡುವುದಿಲ್ಲ!)

ಕೀಟ್ಸ್‌ನಿಗೆ ಪ್ರಿಯವಾದ ಬಣ್ಣಗಳಾವವು? ಇಂಗ್ಲೆಂಡಿನ ನವೋದಯ ಕವಿಗಳ ವರ್ಣವಿಲಾಸವನ್ನು ಕುರಿತು ಒಂದು ಗ್ರಂಥ ಪ್ರಕಟವಾಗಿದ್ದು (Use of colours in the verse of English poets), ಅದರಲ್ಲಿ ಕೀಟ್ಸ್‌ನಿಗೆ ಇಂತಿಂಥ ಬಣ್ಣಗಳು ಪ್ರಿಯ ವೆಂದು ಹೇಳಲಾಯಿತು. ಆದರೆ ಕೀಟ್ಸ್‌ನ ಕವನಗಳಲ್ಲಿ ಬರುವ ಎಲ್ಲ ವರ್ಣವಾಚೀ ಶಬ್ದಗಳ ಪಟ್ಟಿ ಮಾಡಿ, ಬೇರೊಬ್ಬರು ವಿಶ್ಲೇಷಿಸಿದಾಗ, ಅವನ ನೆಚ್ಚಿನ ಬಣ್ಣಗಳು ಬೇರೆಯೇ ಇದ್ದುವಾಗಿ ಕಂಡುಬಂದಿತು.

ಎಮಿಲಿ ಡಿಕಿನ್ಸನ್ ಅಮೇರಿಕದ ಓರ್ವ ಪ್ರಸಿದ್ಧ ಕವಯಿತ್ರಿ. ಅವಳ ಭಾವ ಗೀತಗಳಲ್ಲಿ ಆಗೀಗ ಆತ್ಮನಿವೇದನೆಯ ಅಂಶ ಕಂಡುಬರುತ್ತದೆಂದು ವಿಮರ್ಶಕರು ಹೇಳಿದ್ದರು. 'ಆಗೀಗ' ಮಾತ್ರವೇ? ಅದು ಎಲ್ಲ ಕವಿಗಳಲ್ಲೂ ಕಂಡುಬರುವಂತಹದೇ ತಾನೆ. ಆದರೆ ಒಬ್ಬ ವಿಮರ್ಶಕ ಆಕೆ ಉಪಯೋಗಿಸಿದ ಎಲ್ಲಾ ಶಬ್ದಗಳ ಪಟ್ಟಿ ಮಾಡಿದ. ಆಗ 'ನಾನು' 'ನನ್ನ' 'ನನಗೆ' ಎಂಬೀ ಪ್ರಥಮ ಪುರುಷದ ಸರ್ವನಾಮಗಳು ಇತರ ಯಾವವೇ ಶಬ್ದಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದವು. ಅವನ್ನೆಲ್ಲ ಆ ಆ ಸಂದರ್ಭಗಳಲ್ಲಿ ವಿಶ್ಲೇಷಿಸಿದಾಗ ಆಕೆಯ ಜೀವನ ದರ್ಶನ ಅತ್ಯಂತ ನಿಚ್ಚಳವಾಗಿ ತೋರಿಬಂದಿತು.

ಡಬ್ಲ್ಯೂ. ಬಿ. ಯೀಟ್ಸ್ ಕವಿ, ಪ್ರತಿಮಾವಿಧಾನದ ಆದ್ಯ ಪ್ರವರ್ತಕರಲ್ಲಿ ಒಬ್ಬ. ಅನೇಕ ಪಶು-ಪ್ರಾಣಿಗಳನ್ನು ಸಾಂಕೇತಿಕ ಅರ್ಥದಲ್ಲಿ ಧಾರಾಳವಾಗಿ ಬಳಸಿದ್ದಾನೆ. ಅದು ಗೊತ್ತಿದ್ದ ಮಾತೇ. ತಮಗೆ ಎಷ್ಟು ಬೇಕೋ ಅಷ್ಟರವಟ್ಟಿಗೆ ಅವುಗಳ ಪ್ರಸ್ತಾಪ ಮಾಡಿ ವಿಮರ್ಶಕರು ಆ ಕುರಿತು ಬರೆದದ್ದೂ ಇದೆ. ಆದರೂ ಓರ್ವ ವಿಮರ್ಶಕನಿಗೆ ಏನೋ ಕೊರತೆ ಅನಿಸಿತು. ಯೀಟ್ಸ್ ತನ್ನ ಕಾವ್ಯದಲ್ಲಿ ತಂದಿರುವ ಪ್ರಾಣಿಗಳಾದರೂ ಯಾವವು, ಎಷ್ಟು ಸಲ ಯಾವ ಸಂದರ್ಭಗಳಲ್ಲಿ ಬಂದಿವೆ—ಎಂಬುದರ ಪಟ್ಟಿಮಾಡಿದ :

ಕುದುರೆ ೭೨ ಸಲ, ಮೊಲ ೨೩, ಸಿಂಹ ೨೦, ತೋಳ ೯,
ಚಿರ್ಚೆ ೯, ಕರಡಿ ೩, ಚಿರತೆ ೩, ಕತ್ತೆ ೨ —ಇತ್ಯಾದಿ.

ಈ ವಿಶ್ಲೇಷಣೆಯಲ್ಲಿ ಹಿಂಸ್ರ ಪಶುಗಳ ಬಾಹುಳ್ಯ ಕಂಡುಬಂದಿತು. ವಿಮರ್ಶಕರು, ಆ

ದೃಷ್ಟಿಯಿಂದ ಕವಿಯ ಜೀವನದ ದೃಷ್ಟಿಯನ್ನು ವಿಮರ್ಶಿಸಿ ಖಚಿತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅವನ ಕಾವ್ಯ ವಿಮರ್ಶೆಯ ಆಯಾಮವನ್ನು ಹಿಗ್ಗಿಸಿದರು.

ಏನು ಹೇಳುವುದಕ್ಕೆ ಬಂದೆ ಎಂದರೆ— ಕಾವ್ಯವೊಂದರ ಕುರಿತು "ಆಹಾ ! ಈ ಕಲ್ಪನೆ ಎಷ್ಟೊಂದು ಸೊಗಸಾಗಿದೆ !" ಎಂದುಬಿಟ್ಟರೆ ಅದರ ವಿಮರ್ಶೆ ಮುಗಿಯಲಿಲ್ಲ. ಅದಕ್ಕೂ ಹೆಚ್ಚಿನ ರಸಗ್ರಹಣ ಮಾಡುವಾಗ, ಮೊತ್ತದ (quantum) ದೃಷ್ಟಿಯಿಂದ ಸಾಮಗ್ರಿಯನ್ನು ವಿಂಗಡಿಸಿಕೊಂಡು ಅಧ್ಯಯನಕ್ಕೆ ತೊಡಗಿದರೆ ವಿಮರ್ಶೆ ಪರಿಪೂರ್ಣವಾಗಬಹುದು. ವಸ್ತುನಿಷ್ಠತೆ (objectivity) ಯು ಮೇಲುಗೈ ಆಗಬಹುದು.

ಕನ್ನಡದ್ದೇ ಒಂದು ಉದಾಹರಣೆ ನೋಡೋಣ. ನಾನು ಬೇರೊಂದು ಅಭ್ಯಾಸಕ್ಕಾಗಿ ಮುದ್ದಣ ಉಪಯೋಗಿಸಿದ ಸ್ತ್ರೀವಾಚಿ ಶಬ್ದಗಳ ಪಟ್ಟಿ ಮಾಡಿದೆ (ಸು. ೯೦೦). ಕಮಲ, ಚಂದ್ರ ಮುಂತಾದ ಹಳೆಯ ಕ್ರಮದ ಹೋಲಿಕೆಗಳಿರುವವನ್ನು ಬೇರೆ ಮಾಡಿದೆ. ಹೆಣ್ಣಿನ ಕೇಶ, ಕಣ್ಣು, ಮುಖ, ಗಾತ್ರ— ಮೊದಲಾದ ಅಂಗಾಂಗಗಳನ್ನು ಹೇಳುವ ಶಬ್ದಗಳ ಪಟ್ಟಿಯನ್ನೂ ಬೇರೆಯಾಗಿ ಮಾಡಿದೆ(ಛೀ, ಏನನ್ಯಾಯ ಎನ್ನ ಬೇಡಿ!). ಅದರಂತೆ ಸ್ತ್ರೀಯ ಸ್ವಭಾವಾದಿ ಲಕ್ಷಣಗಳನ್ನು ಹೇಳುವಂತಹ ಶಬ್ದಗಳನ್ನೂ ಪ್ರತ್ಯೇಕಿಸಲಾಯಿತು (ಗಡಸುಗಾರ್ತಿ ಇ.). ಈ ಕೊನೆಯ ಪಟ್ಟಿಯಲ್ಲಿಯ ಶಬ್ದಗಳನ್ನು ವಿಶ್ಲೇಷಿಸಿದಾಗ ಮುದ್ದಣನು ಸ್ತ್ರೀಯನ್ನು ಎಷ್ಟೊಂದು ಆತ್ಮೀಯವಾಗಿ, ಆಳವಾಗಿ, ಪರಿಭಾವಿಸಬಲ್ಲ— ಎಂಬುದು ಗೋಚರವಾಯಿತು. ಇನ್ನು ಸ್ತ್ರೀಯ ಅಂಗಾಂಗಗಳನ್ನು ವರ್ಣಿಸುವಾಗ, ನಿತಂಬ, ಸ್ತನ ಬರಬೇಕು. ಗಂಡಹೆಂಡತಿಯರ ಸರಸ ಸಲ್ಲಾಪವನ್ನು ಧಾರಾಳವಾಗಿ ವರ್ಣಿಸಿದ ತರುಣವಯದ ಮುದ್ದಣ ಅಂಥ ಪದಗಳನ್ನು ಎಷ್ಟು ಸಲ ತಂದಿದ್ದಾನೆನ್ನುತ್ತೀರಿ? ೯೦೦ ರಲ್ಲಿ ಕೇವಲ ೭ ಸಲ! 'ಲಿಕುಚಸ್ತನಿ' ಎಂಬೊಂದು ಪದವನ್ನು ಬಿಟ್ಟರೆ ಉಳಿದ ಆರು ಶಬ್ದಗಳು ಸವಕಲು ನಾಣ್ಯಗಳೇ. ಎಂದರೆ ಮುದ್ದಣಪೂರ್ವದ ಹಳೆಯ ಕವಿಗಳು ಬೇಸರ ಬರುವಷ್ಟು ಬಳಸಿದವುಗಳು. (ಕಾಳಿದಾಸನು ಪಾರ್ವತಿಯಂತಹಳನ್ನು, ವರ್ಣನಾವಸರದಲ್ಲಿ ನಿತಂಬಿನಿ ಎಂದು ಕರೆದಿದ್ದಾನೆಂಬುದನ್ನು ನೆನೆಯಬಹುದು.)

ಈ ಏಳರ ಸಂಖ್ಯೆಯಿಂದ ಏನು ಕಂಡುಬರಬಹುದು ? ಮುದ್ದಣ ಎಷ್ಟೊಂದು ಸಂಕೋಚದ ಪ್ರಕೃತಿಯವ, ರುಚಿಶುದ್ಧಿಯುಳ್ಳವ—ಎಂದು ಹೇಳಬೇಕು. ಮುದ್ದಣ ಹೋಟೆಲು ಮಾಲಿಕನ ಮಗಳ ಮೇಲೆ ಮೋಹಗೊಂಡು ಮಹಾಲಕ್ಷ್ಮಿ ಎಂಬ ಅವಳ ಹೆಸರನ್ನೆ ತನ್ನ ಕಾವ್ಯವೊಂದಕ್ಕೆ ಇರಿಸಿದ—ಎಂದು ಒಂದೆಡೆ ಹೇಳಲಾಗಿದ್ದು, ಅದನ್ನು ನಾವೀಗ ನೂರಕ್ಕೆ ನೂರು ಪೈಸೆ ಸತ್ಯ ದೂರವಾದದ್ದು—ಎಂದು ಹೇಳಬಹುದಲ್ಲವೆ ?

ಮೊತ್ತದ ಮೂಲಕವಾದ ಈ ಬಗೆಯ ಅಭ್ಯಾಸದಿಂದ, ಕೆಲವು ಸಂಪೂರ್ಣವಾದ ಹೊಸ ಅಂಶಗಳು ಅಕಸ್ಮಾತ್ ಹೊರಬರುವವು. ಇದೇ ಅಭ್ಯಾಸದಲ್ಲಿ ಮುದ್ದಣ ಉಪಯೋಗಿಸಿದ ರಾಮವಾಚಿ ಮತ್ತು ಶಿವವಾಚಿ ಶಬ್ದಗಳ ಪಟ್ಟಿ ಮಾಡಿದಾಗ, ಶಿವವಾಚಿ ಶಬ್ದಗಳು ಒಂದೂವರೆ ಪಟ್ಟು ಹೆಚ್ಚಾಗಿ ಇದ್ದದ್ದು ಕಂಡುಬಂತು. (೯೧ : ೩೦೫)

ಒಂದಲ್ಲ ಮೂರು ಕೃತಿಗಳಲ್ಲಿ ಶ್ರೀರಾಮಚಂದ್ರನೇ ಕಥಾನಾಯಕನಾಗಿರುತ್ತ, ಶಿವನು ಒಂದರಲ್ಲೂ ಹಾಗಿಲ್ಲದಾಗ ಏಕೆ ಈ ಬಾಹುಲ್ಯ ? ಕಂಪ್ಯೂಟರ್ ಒದಗಿಸಿದ್ದ ಶಿವಪ್ರಸ್ತಾಪದ ಸಂದರ್ಭಗಳನ್ನು ಒಂದೊಂದಾಗಿ ಹೆಕ್ಕಿ ನೋಡಿದಾಗ, ಅವಶ್ಯ ಇರಲಿ ಬಿಡಲಿ, ಮುದ್ದಣನು ಶಿವನನ್ನು, ಅದೂ ಮಂಗಳಕರನಾದವನನ್ನು ಮೇಲಿಂದ ಮೇಲೆ ತರುತ್ತಿದ್ದುದು ಕಂಡುಬಂದಿತು. ಆಗ ಶಿವನೇ ಈ ಕವಿಯ ಆರಾಧ್ಯದೈವತ ಎಂದು ನಿರ್ಣಯಿಸಲಾಯಿತು.* ಇದು ವರೆಗೆ ವಿಮರ್ಶಕರಿಗೆ ಎಳ್ಳಷ್ಟೂ ಸುಳುಹು ಕೊಟ್ಟಿರದ ಈ ಅಂಶವನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ— ಏಕೆಂದರೆ ಅಂಕಿ ಸಂಖ್ಯೆಗಳ, ನಿಚ್ಚಳ ಉದಾಹರಣೆಗಳ ಬೆಂಬಲವಿದೆಯಲ್ಲ !

ಇಷ್ಟೆಲ್ಲ ವಿವರಿಸುವದರ ತಾತ್ಪರ್ಯವೆಂದರೆ, ಯಾರೊಬ್ಬ ಕವಿಯ ಶಬ್ದಗಳನ್ನು ಅದು ಬಂದ ಪ್ರಯೋಗವಾಕ್ಯದೊಂದಿಗೆ, ಒಂದೆಡೆ ಪಟ್ಟಿ ಮಾಡಿಕೊಂಡರೆ, ಆ ಕಾವ್ಯದ ಅಭ್ಯಾಸವು ಹೆಚ್ಚು ಪರಿಪೂರ್ಣವಾಗುತ್ತದೆ. ಅದರಿಂದ ಯಾವದೊಂದು ಶಬ್ದವನ್ನು ಎಷ್ಟು ವಿವಿಧ ರೀತಿಯಲ್ಲಿ, ಕವಿ ಬಳಸಿದ್ದಾನೆಂಬುದು ಬೇಗ ಸುವ್ಯಕ್ತವಾಗುತ್ತದೆ. ಹಾಗೂ ಕವಿಯ ಯಾವೊಂದು ಆಶಯವನ್ನು ತಿಳಿಯಬೇಕಾದರೆ, ಆ ಸಂದರ್ಭದ ಹುಡುಕಾಟದ ಶ್ರಮ ಉಳಿಯುತ್ತದೆ. ಶಬ್ದ ಮತ್ತು ಅದನ್ನೊಳಗೊಂಡಿರುವ ವಾಕ್ಯಸಹಿತವಾದ ಇಂಥ ಅಕಾರಾದಿ ಸೂಚಿಗೆ Concordance ಎಂದು ಹೆಸರು. ಕನ್ನಡದಲ್ಲಿ ಅದನ್ನು 'ಶಬ್ದಪ್ರಯೋಗ ಕೋಶ' ಎಂದು ಕರೆಯೋಣ.

ಇಂಥ ಕೋಶವನ್ನು ತಯಾರಿಸುವ ಸದ್ಯದ ಕ್ರಮವೆಂದರೆ, ಮೊದಲಿಗೆ ಒಂದೊಂದಾಗಿ ಕವಿ ಬಳಸಿದ ಶಬ್ದವನ್ನು ಒಂದು ಪಟ್ಟಿಕೆಯಲ್ಲಿ (slip) ಬರೆದು, ಅದರ ಬುಡದಲ್ಲಿ ಆ ಶಬ್ದ ಬಂದಿರುವ ಪದ್ಯದ ಸಾಲನ್ನು ಕಾಣಿಸಬೇಕು. ಅನಂತರ ಅವೆಲ್ಲ ಪಟ್ಟಿಕೆಗಳನ್ನು ಅಕಾರಾದಿಯಾಗಿ ಹೊಂದಿಸಬೇಕು. ಯಾವುದೊಂದು ಶಬ್ದವನ್ನು ಕವಿ ಹಲವಾರು ಸಲ ಬಳಸಿರಬಹುದು. ಆಗ ಅವೆಲ್ಲ ಸಂದರ್ಭಗಳು ಈ ಅಕಾರಾದಿ ಕ್ರಮದಲ್ಲಿ ಒಂದೇ ಕಡೆಗೆ ದೊರೆಯುವವು.

'ನನ್ನ ಹರಣ ನಿನಗೆ ಶರಣ, ಸಕಲ ಕಾರ್ಯ ಕಾರಣ' ಎಂಬ ಸಾಲನ್ನು ತೆಗೆದುಕೊಳ್ಳೋಣ. ಇದರಲ್ಲಿ ೭ ಶಬ್ದಗಳಿದ್ದು, ಅವುಗಳ ಅಕಾರಾದಿ ಶಬ್ದಪ್ರಯೋಗ ಕೋಶ ಈ ರೀತಿ ಆಗುವುದು :

ಕಾರಣ
ನನ್ನ ಹರಣ ನಿನಗೆ ಶರಣ, ಸಕಲ ಕಾರ್ಯ ಕಾರಣ.
ಕಾರ್ಯ
ನನ್ನ ಹರಣ ನಿನಗೆ ಶರಣ, ಸಕಲ ಕಾರ್ಯ ಕಾರಣ.
ನನ್ನ
ನನ್ನ ಹರಣ ನಿನಗೆ ಶರಣ, ಸಕಲ ಕಾರ್ಯ ಕಾರಣ.

---

* ಈ ಪ್ರಬಂಧ ಸಂಕಲನದ 'ಮುದ್ದಣ ಕಂಡ ಶಿವ' ಎಂಬ ಲೇಖದಲ್ಲಿ ವಿವರಗಳಿವೆ.

ನಿನಗೆ

ನನ್ನ ಹರಣ ನಿನಗೆ ಶರಣ, ಸಕಲ ಕಾರ್ಯ ಕಾರಣ.

....

—ಇದರಂತೆ ಶರಣ, ಹರಣ, ಮತ್ತು ಸಕಲ ಶಬ್ದಗಳು ಬರುತ್ತವೆ. ಹೀಗೆಯೇ ಬೇಂದ್ರೆಯವರ ಸಮಸ್ತ ಕವನಗಳಲ್ಲಿಯ ಪ್ರತಿಯೊಂದು ಶಬ್ದವನ್ನು ಪ್ರಯೋಗ ವಾಕ್ಯದೊಡನೆ ಬರೆದು ಆಮೇಲೆ ಅವನ್ನು ಅಕಾರಾದಿಯಾಗಿ ಹೊಂದಿಸಿದಾಗ ಬೇಂದ್ರೆ ಕಾವ್ಯದ ಶ. ಪ್ರ. ಕೋಶ ಸಿದ್ಧವಾಗುವುದು.

ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸನಾಗಿದ್ದ ಬ್ಲೂಮ್‌ಫೀಲ್ಡ್ ವೇದಗಳ ಶಬ್ದಪ್ರಯೋಗ ಕೋಶವನ್ನು ಏಳು ದಶಕಗಳ ಹಿಂದೆ ತಯಾರಿಸಿದ. (Vedic Concordance). ಅದರಿಂದಾಗಿ ಇಂದ್ರ ಮೊದಲಾದ ದೇವತೆಗಳ ಉಲ್ಲೇಖ ಎಲ್ಲೆಲ್ಲಿ ಮತ್ತು ಯಾವ ರೀತಿಯಾಗಿ ಬಂದಿದೆ ಎಂಬುದು ತಿಳಿದು ಬರುತ್ತದೆ. ವೇದ ಕಾಲದಲ್ಲಿ ಯಾವ ಯಾವ ದೇವತೆಗಳಿಗೆ ವಿಶೇಷ ಮಹತ್ವವಿತ್ತೆಂಬುದು ಥಟ್ಟನೆ ಗೊತ್ತಾಗುವುದು. ಇಂದಿಗೂ ಯಾರೊಬ್ಬ ದೇವತೆಯ ಕುರಿತು ಅಭ್ಯಾಸ ಮಾಡುವಾಗ ಈ ಶ.ಪ್ರ.ಕೋಶವನ್ನು ನೋಡಿಯೆ ಮುಂದೆ ಸಾಗಬೇಕು. ಈ ಕೋಶದಿಂದಾಗಿ, ನಿಷೇಧಾರ್ಥದ ಮಾ, ಶಬ್ದವು ಹೆಚ್ಚಾಗಿ ಕಂಡುಬಂದು, ವೇದಗಳ ಅಧಿಕಾರವಾಣಿಯ ಸ್ವರೂಪವನ್ನು ತಿಳಿಯುವಂತಾಯ್ತು.

ಸರ್ವನಾಮದಂತಹ ಸಾಮಾನ್ಯ ಶಬ್ದಗಳ ಪಟ್ಟಿ ಮಾಡುವಲ್ಲಿಯೂ ಪ್ರಯೋಜನ ವಿದೆಯೆಂಬುದನ್ನು ಡಿಕಿನ್ಸನ್‌ಳ ಕೋಶದಿಂದ ಮನಗಂಡಿದ್ದೇವೆ. ಇಂಥ ಇನ್ನೂ ಹಲವಾರು ಪ್ರಯೋಜನಗಳಿವೆ. ಕವಿಯ ಒಟ್ಟಿನ ಶಬ್ದ ಸಂಪತ್ತು ಒಂದೆಡೆ ದೊರೆ ಯುವುದರಿಂದ ಅವನ ಭಾವಸಂಪತ್ತನ್ನು ರೂಪಿಸಬಹುದು. ಅವನ ಭಾಷಾ ಪ್ರಭುತ್ವ ವನ್ನು ಒಟ್ಟಂದದಲ್ಲಿ ಕಾಣಬಹುದು. ಆ ಕವಿಯ mannerism — ಎಂದರೆ ಅವನ ಒಲವಿನ ಕೆಲವೊಂದು ವಿಶಿಷ್ಟ ಶಬ್ದಪ್ರಯೋಗಗಳನ್ನು ಕಂಡುಕೊಳ್ಳಬಹುದು. ಯಾವ ದೊಂದು ಶಬ್ದದ ಒಂದಕ್ಕಿಂತ ಹೆಚ್ಚಿನ ಅರ್ಥಗಳನ್ನೂ ಅರ್ಥದ ಛಾಯೆಗಳನ್ನೂ ಪರಿ ಶೀಲಿಸಬಹುದು.

ನಿಸರ್ಗ ವರ್ಣನೆ, ದೈವಭಕ್ತಿ, ದೇಶಾಭಿಮಾನ, ಸಾಮಾಜಿಕ ಪ್ರಜ್ಞೆ, ಸ್ವಭಾವ ಚಿತ್ರಣ—ಮುಂತಾದ ಅಂಶಗಳನ್ನೆತ್ತಿಕೊಂಡು ಓರ್ವ ಕವಿಯ ಕಾವ್ಯ ಸಂಪದವನ್ನು ಅಭ್ಯಾಸಿಸುವುದಿದ್ದಾಗ, ಅವನ್ನು ಸೂಚಿಸುವ ಶಬ್ದಗಳನ್ನು ಹುಡುಕಿಕೊಂಡು ಹೋದ ರಾಯಿತು. ಆಗ ಕವಿಯ ಯಾವುದೇ ಬಿಡದೇನೆ, ಪರಿಪೂರ್ಣವಾದ ವಿವೇಚನೆಯನ್ನು ಮಾಡಬಹುದು.

ಹೀಗೆ ಒಬ್ಬ ಪ್ರಮುಖ ಕವಿಗೆ ಸಂಬಂಧಿಸಿದ ಶ. ಪ್ರ. ಕೋಶವು ಸಿದ್ಧವಾದರೆ

ಅದರ ಸಹಾಯದಿಂದ, ಆ ಕವಿಯ ಪ್ರಭಾವ ಇತರರ ಮೇಲೆ ಎಷ್ಟರ ಮಟ್ಟಿಗೆ ಆಗಿದೆ ಯೆಂಬುದನ್ನೂ ತಿಳಿಯಬಹುದು. ಗೋಕಾಕ, ಮುಗಳಿ, ಮಧುರಚೆನ್ನ, ಕಂಬಾರ ಇವರು ಬೇಂದ್ರೆಯವರಿಂದ ಪ್ರಭಾವಿತರಾದರೆ ? ಆಗಿದ್ದರೆ ಎಷ್ಟರಮಟ್ಟಿಗೆ ? ಆ ಪ್ರಭಾವಿತ ಕವಿಗಳ ಯಾವದೊಂದು ಭಾವವನ್ನು ಅದು ವ್ಯಕ್ತವಾದ ಶಬ್ದಗಳ ಮೂಲಕ, ಬೇಂದ್ರೆ ಶ.ಪ್ರ.ಕೋಶವದಲ್ಲಿ ಹುಡುಕಿದರೆ ಸೈ. ಆಗ, ಆ ಭಾವವನ್ನು ಈ ಕವಿ ಬೇಂದ್ರೆಯವರಿಗಿಂತ ಹೇಗೆ ಮಾರ್ಪಡಿಸಿಕೊಂಡಿದ್ದಾನೆಂಬುದನ್ನು ಸಹ ತಿಳಿಯಬಹುದು. ಇನ್ನು ಇಬ್ಬರು ಕವಿಗಳಿಗೆ ಪ್ರತ್ಯೇಕ ಶ.ಪ್ರ.ಕೋಶಗಳಿದ್ದರಂತೂ ಅವರ ಪರಸ್ಪರ ತೌಲನಿಕ ಅಭ್ಯಾಸವು ಅತ್ಯಂತ ಸುಗಮವಾಗುವುದು.

ಶಬ್ದ–ಪ್ರಯೋಗ ಕೋಶಗಳನ್ನು ಗದ್ಯ, ನಾಟಕ ಗ್ರಂಥಗಳಿಗೂ ತಯಾರಿಸ ಬಹುದು. ಆದರೆ ಅದು ಹೆಚ್ಚು ಪ್ರಯೋಜನಕ್ಕೆ ಬೀಳುವುದು — ಕಾವ್ಯಭ್ಯಾಸ ದಲ್ಲಿಯೇ. ಕವಿಗಳು ಎಷ್ಟೆಂದರೂ ಕಿರಿದರಲ್ಲಿ ಪಿರಿದರ್ಥವನ್ನು ಹೇಳುವವರು. ಶಬ್ದ ಗಳನ್ನು ವಿಶೇಷ ಗಮನವಿತ್ತು ಬಳಸುವವರು. ಶಬ್ದವು ತನ್ನ ವಾಚ್ಯಾರ್ಥವನ್ನು ಮೀರಿ, ಲಾಕ್ಷಣಿಕಕು ಹೇಳುವ ವ್ಯಂಗ್ಯಾರ್ಥ, ಧ್ವನ್ಯಾರ್ಥಗಳನ್ನು ನುಡಿಸುವ ಪ್ರಸಂಗ ಬರುವುದು ಕಾವ್ಯದಲ್ಲಿಯೇ. ಒಂದು ಶಬ್ದಕ್ಕೆ ವಿವಿಧ ಅರ್ಥಚ್ಛಾಯೆಗಳೂ ಹೊರಡ ಬಹುದು. ಹೀಗೆ ಕವಿಯದು ವಿಶಿಷ್ಟ ಭಾಷೆ. ಅದಕ್ಕೆ ವಾಹಕವಾದದ್ದು ಶಬ್ದ, ಶಬ್ದವು ಎಂದಿಗೂ ಅಮೂರ್ತವಲ್ಲವೆಂದು ಬೇಂದ್ರೆಯವರು ಒಂದೆಡೆ ಹೇಳಿದ್ದಾರೆ. ಶ.ಪ್ರ.ಕೋಶವು ಇಂಥ ಪ್ರತಿಯೊಂದು ಶಬ್ದವನ್ನು, ಅದು ಪ್ರಯೋಗಿತವಾದ ಎಲ್ಲ ಸಂದರ್ಭಗಳೊಡನೆ ವ್ಯವಸ್ಥಿತ ರೂಪದಲ್ಲಿ ಕೊಡುವುದರಿಂದ ಕವಿಯ ಭಾವವನ್ನು ಸಂಪೂರ್ಣವಾಗಿ ಅರಿತುಕೊಳ್ಳುವುದು ಸಾಧ್ಯವಾಗುತ್ತದೆ. ಮುಖ್ಯ ಮಾತೆಂದರೆ, ಶಬ್ದ ಪ್ರಯೋಗ ಕೋಶವು ಅಭ್ಯಾಸಿಗಳ ವೇಳೆ ಮತ್ತು ಶ್ರಮವನ್ನು ಉಳಿಸುತ್ತದೆ. ಅವರ ನೆನಪಿನ ಶಕ್ತಿಗೆ ವಿಶೇಷ ಭಾರವನ್ನು ಹಾಕಬೇಕಾದ್ದೇ ಇಲ್ಲ.

ಹೀಗೆ ಶ.ಪ್ರ.ಕೋಶವು ಬಹು ಪ್ರಯೋಜಕವೂ ಸಾರ್ವಕಾಲಿಕವೂ ಆಗಿರುವುದ ರಿಂದ ಈಗಾಗಲೇ ಜಾಗತಿಕ ಮಟ್ಟದಲ್ಲಿ ನೂರಾರು ಸಿದ್ಧವಾಗಿವೆ. ಅದರ ಇತಿಹಾಸವು ೧೩ನೆಯ ಶತಮಾನದಷ್ಟು ಹಿಂದೆ ಹೋಗುವುದಾದರೂ, ಅದು ಇಂದಿನ ಸ್ವರೂಪದಲ್ಲಿ ಕಾಣಿಸಿಕೊಳ್ಳತೊಡಗಿದುದು ಈಚಿನ ನೂರು ವರ್ಷಗಳಲ್ಲಿ. ಶೆಕ್ಸಪಿಯರ್, ಮಿಲ್ಟನ್ ಮುಂತಾದ ಎಲ್ಲ ಪ್ರಮುಖ ಆಂಗ್ಲ ಕವಿಗಳ ಕೃತಿಗಳಿಗೆ ಶ.ಪ್ರ.ಕೋಶಗಳಿವೆ. ಪುರಾತನ ಗ್ರಂಥಗಳಾದ ವೇದ, ಉಪನಿಷತ್ತು, ಬೈಬಲ್, ಭಗವದ್ಗೀತೆಗಳಿಂದ ಹಿಡಿದು ಆಧುನಿಕ ಕೃತಿಗಳಿಗೂ ಶ. ಪ್ರ.ಕೋಶಗಳಿವೆ — ಮಾವೋನ ಸೂತ್ರಗಳಿಗೆ ಸಹಿತ ! ಅಮೇರಿಕೆ ಯಲ್ಲಿ Concordance ತಯಾರಿಸುವವರ ಒಂದು ಸೊಸೈಟಿಯೇ ಅಸ್ತಿತ್ವದಲ್ಲಿದೆ.

ಕನ್ನಡದಲ್ಲಿ ? ಎಸ್. ಆರ್. ಗುಂಜಾಳರು ಸಿದ್ಧಪಡಿಸಿದ 'ಬಸವಣ್ಣನವರ ವಚನ ಪದಪ್ರಯೋಗಕೋಶ' ಮೊತ್ತ ಮೊದಲಿನದಾಗಿದೆ.* (೧೯೩೭) ವೇ ಸುಮಾರು

* ಅನಂತರ ೧೯೭೬ ರಲ್ಲಿ, ತೋಂಟದ ಸಿದ್ಧಲಿಂಗೇಶ್ವರರ ವಚನಗಳನ್ನು ಬಾಡ್ಯಗಿ/ ಗುಂಜಾಳರು ಇದೇ ರೀತಿ ಅಕಾರಾದಿಯಾಗಿ Concordance ರೂಪದಲ್ಲಿ ಸಿದ್ಧಪಡಿಸಿದ್ದಾರೆ.

೧೨೦೦ ಪುಟಗಳ ಈ ಕೋಶವು ಬಸವಣ್ಣನವರ ವಚನಗಳನ್ನು ಅಭ್ಯಾಸ ಮಾಡು ವವರಿಗೆ ಅಥವಾ ಅವುಗಳಲ್ಲಿಯ ಯಾವದೊಂದು ಅಂಶವನ್ನು ನೋಡಬಯಸುವವರಿಗೆ ಅತ್ಯುಪಯುಕ್ತವೆನಿಸಿದೆ. ವಚನ ಸಾಹಿತ್ಯದ, ಅದರಂತೆ ವೀರಶೈವ ಧರ್ಮದ ಪ್ರಮೇಯವೊಂದನ್ನು ತಿಳಿಯಬಯಸುವವರಿಗೂ ಅದು ಅದು ನೆರವಾಗಬಲ್ಲುದು. ಈ ಕೋಶದ ಪ್ರಯೋಜನದ ಬಗ್ಗೆ ವ್ಯಕ್ತಮಾಡಲಾದ ಒಂದು ಒಕ್ಕಣಿಕೆಯನ್ನು ಗಮನಿಸ ಬೇಕು :

" ನಮಗೆ ಇಷ್ಟಲಿಂಗದ ಕಲ್ಪನೆಯಾಗಲಿ, ಅದರ ವೈವಿಧ್ಯಮಯ ಪ್ರಯೋಗ ಗಳಾಗಲಿ ಬೇಕೆಂದರೆ ಇಲ್ಲಿಯ ತನಕ ನಾವು ಹಾಳೆ – ಲೇಖನಿಗಳನ್ನು ಹಿಡಿದು ಬಸವಣ್ಣನವರ ಪ್ರತಿ ವಚನವನ್ನು ಓದಿ, ಗುರುತು ಹಾಕಿಕೊಂಡು ವರ್ಗೀಕರಿಸಿ ಅಭ್ಯಸಿಸಬೇಕಾಗುತ್ತಿತ್ತು .... ಈಗ ಮಾತ್ರ ನಮ್ಮ ಶ್ರಮ ಮತ್ತು ವೇಳೆಗಳೆರಡರ ಉಳಿತಾಯ. ಒಂದು ಪದದ ವೈವಿಧ್ಯಮಯ ಪ್ರಯೋಗಗಳು ವಿವಿಧಾರ್ಥಗಳನ್ನೊಳ ಗೊಂಡು ಒತ್ತಟ್ಟಿಗೇ ಸಿಕ್ಕುಬಿಡುತ್ತವೆ. ಮಾತ್ರವಲ್ಲದೆ ಎಲ್ಲ ಪದಗಳು ಒಂದರ ಅನಂತರ ಒಂದಾಗಿ ಒಂದೆಡೆಯಲ್ಲಿ ದೊರಕುವುದರಿಂದ ಪದವು ಗರ್ಭೀಕರಿಸಿಕೊಂಡಿರುವ ವಿಶಿಷ್ಟ ತತ್ವಗಳ ಸಮಗ್ರ ಕಲ್ಪನೆ ಕಣ್ಣ ಮುಂದೆ ಬರುವುದು. ಇದರಿಂದಾಗಿ ಬಿಡಿ ಬಿಡಿಯಾಗಿ ಅಭ್ಯಸಿಸಿ ಹಲವು ಬಾರಿ ಮರೆತು, ಮತ್ತೆ ಮತ್ತೆ ಓದುವ ಕಷ್ಟ ಈಗಿಲ್ಲ. " (ಡಾ. ಚಿದಾನಂದಮೂರ್ತಿಯವರ ಮುನ್ನುಡಿಯಿಂದ).

ಮೇಲೆ ಕಾಣಿಸಿದ ಅನುಕೂಲತೆಯು ಇತರ ಎಲ್ಲ ಶಬ್ದ ಪ್ರಯೋಗ ಕೋಶಗಳಿಗೂ ಅನ್ವಯಿಸುವಂತಹದು.

ಇಷ್ಟೊಂದು ಬಹುಮುಖ ಪ್ರಯೋಜನದ ಶ. ಪ್ರ. ಕೋಶ ತಯಾರಿಕೆಯಲ್ಲಿ ಕನ್ನಡಿಗರು ಏಕೆ ಮನಸ್ಸುಗೊಟ್ಟಿಲ್ಲ ? ಎಂದರೆ, ಅನೇಕರಿಗೆ ಇದರ ಉಪಯುಕ್ತತೆಯ ಕಲ್ಪನೆಯೇ ಇಲ್ಲ. ಕೆಲವರಿಗೆ ಗೊತ್ತಿದ್ದರೂ ಅಷ್ಟೊಂದು ಮನವರಿಕೆಯಾಗಿಲ್ಲ. ಅಲ್ಲದೆ, ಇದರ ತಯಾರಿಕೆಯೋ ಅತ್ಯಂತ ಪರಿಶ್ರಮದ್ದು. ದೀರ್ಘಕಾಲವನ್ನು ತೆಗೆದು ಕೊಳ್ಳುವಂತಹದು. ಹಾಗೂ ಅದರ ಸಂಕಲನ ಕಾರ್ಯ ಅತೀವ ಬೇಸರ – ದಣಿ ವನ್ನುಂಟುಮಾಡುವಂತಹದಾಗಿದೆ. ಒಂದು ವಾಕ್ಯ ಅಥವಾ ಪದ್ಯದ ಸಾಲಿನಲ್ಲಿ ೬–೭ ಶಬ್ದಗಳಿವೆಯೆಂದಾದರೆ ಅಷ್ಟು ಸಲವೂ ಅದನ್ನು ಪಟ್ಟಿಕೆಯಲ್ಲಿ ಬರೆದುಕೊಳ್ಳಬೇಕು. ಆಮೇಲೆ ಆ ಶಬ್ದಗಳನ್ನು ಅಕಾರಾದಿಯಾಗಿ ಜೋಡಿಸಬೇಕು. ಒಂದು ಶಬ್ದ ಪತ್ತೈವತ್ತು ಕಡೆಗೆ ಬರುತ್ತದಷ್ಟೆ. ಒಂದೇ ಶಬ್ದದ ಎಲ್ಲ ಪಟ್ಟಿಕೆಗಳನ್ನು, ಅವುಗಳ ಪ್ರಯೋಗ ವಾಕ್ಯದ ಅಕಾರಾದಿ ಇಲ್ಲವೆ ಪುಟಸಂಖ್ಯೆಯ ಕ್ರಮದಲ್ಲಿ ಮತ್ತೆ ಹೊಂದಿಸಿ ಕೊಳ್ಳಬೇಕು. ಕೊನೆಗೆ ಯಾವ ತಪ್ಪೂ ಉಳಿಯದಂತೆ, ಯಾವುದೂ ಬಿಟ್ಟು ಹೋಗ ದಂತೆ ಮತ್ತೆ ಮತ್ತೆ ಚೆಕ್ ಮಾಡಬೇಕು.

ಬಸವಣ್ಣನವರ ೯೫೯ ವಚನಗಳಲ್ಲಿಯ ಶಬ್ದಗಳ ಪಟ್ಟಿಕೆಯನ್ನು ಸಿದ್ಧಪಡಿಸಲು ಗುಂಜಾಳರಿಗೆ ೭ ವರ್ಷ ತಗುಲಿತು. ಆ ಪಟ್ಟಿಕೆಗಳನ್ನು ಹೊಂದಿಸಲು ಮತ್ತೆರಡು ವರ್ಷಗಳು. ಬೈರನ್ನನ ಕಾವ್ಯಸಂಪದದ ಶ. ಪ್ರ. ಕೋಶ ತಯಾರಿಸಲು ಶ್ರೀಮತಿ ಯಂಗ್ ಎಂಬಾಕೆ ಅದನ್ನು ಕೈಗೊಂಡ ೨೫ ವರ್ಷಗಳ ಮೇಲೆ ಮುಗಿಸಿದಳಂತೆ. 'ಈ ತಾಪತ್ರಯ ನನ್ನ ವೈರಿಗಳಿಗೂ ಬರೋದು ಬೇಡ' ಎಂಬ ಆಶಯವನ್ನು ಆಕೆ ತನ್ನ ಪೀಠಿಕೆಯಲ್ಲಿ ಹೇಳಿದ್ದಾಳೆ.

ಒಂದೆಡೆ ಶ. ಪ್ರ. ಕೋಶದ ಅನನ್ವಿತ ಪ್ರಯೋಜನಗಳು; ಇನ್ನೊಂದೆಡೆ ಅದರ ತಯಾರಿಕೆಯಲ್ಲಿಯ ಅತಿ ಶ್ರಮ, ಆಪತ್ತುಗಳು. ಇದಕ್ಕೆ ಪರಿಹಾರ ಇಲ್ಲವೆ ? ಇದೆ:

ಅದುವೆ ಕಂಪ್ಯೂಟರ್ ! ಬರಿಯ ಗಣಿತ-ಗುಣಿತಗಳಲ್ಲಿ ತೊಡಗಿರುವ ಕಂಪ್ಯೂಟರಿಗೂ ನಮ್ಮ ಸಾಹಿತ್ಯಕ್ಕೂ ಅದಾವ ಸಂಬಂಧ—ಎಂದು ಅನಿಸಬಹುದು. ಕಂಪ್ಯೂಟರ್ ಚಂದ್ರ, ಮಂಗಳ ಗ್ರಹಗಳ ಯಾನವನ್ನು ನಿರ್ದೇಶಿಸಬಲ್ಲುದು, ಭಾರೀ ಎಂಜಿನಿಯರಿಂಗ್ ಸಮಸ್ಯೆಗಳನ್ನು ಬಿಡಿಸಬಲ್ಲುದು; ಆದರೆ ಸಾಹಿತ್ಯ ಸಂಶೋಧನೆಗೆ ಅಂದೆತು ನೆರವಾದೀತು—ಎಂಬ ಸಂದೇಹ ಮೂಡುವುದು ಸಹಜವೇ. ಆದರೆ ವಿಶ್ವವ್ಯಾಪಿಯಾಗ ತೊಡಗಿರುವ ಕಂಪ್ಯೂಟರ್ ಈಗ ಪ್ರವೇಶಿಸದ ಕ್ಷೇತ್ರವೇ ಇಲ್ಲ. ಅದು ಸಂಗೀತವನ್ನು ನುಡಿಸುತ್ತದೆ. ವಧು-ವರರ ಜೋಡಣೆಯನ್ನು ಮಾಡಿಕೊಡುತ್ತದೆ. ಈಚೆಗೆ ಜರ್ಮನಿಯಲ್ಲಿ ಅಡಿಗೆ ಮಾಡುವ ಕಂಪ್ಯೂಟರ್ ಯಂತ್ರವು ಸಹ ಸಿದ್ಧವಾಗಿದೆಯೆಂದಾಗ, ಸಾಹಿತ್ಯ ಕ್ಷೇತ್ರದಲ್ಲಿಯೂ ಅದರ ಸಹಾಯವನ್ನು ಪಡೆಯಬಹುದು. ಪಡೆಯತೊಡಗಿದ್ದಾರೆ.

ಸಾಹಿತ್ಯ ರಂಗದಲ್ಲಿ ಅದರ ಬಳಕೆ ಮೇಲೆ ಹೇಳಿದ ಡಿಕಿನ್ಸಳ ಶಬ್ದಪ್ರಯೋಗ ಕೋಶದ ರಚನೆಯಿಂದ ಮೊದಲಾಯಿತು. (ಕಾರ್ನೆಲ್ ವಿಶ್ವವಿದ್ಯಾಲಯ, ೧೯೫೯). ಗ್ರಂಥಕತೃತ್ವ ನಿರ್ಣಯ, ಶೈಲಿ, ಭಾಷಾಭ್ಯಾಸ, ಗ್ರಂಥಸಂಪಾದನ ಕಾರ್ಯ ಮುಂತಾದ ರಂಗಗಳಲ್ಲಿ ಅದು ಈಗಾಗಲೇ ಧಾರಾಳವಾಗಿ ನೆರವಾಗಿದೆ. ಅದು ಸ್ವಯಂಸಂಶೋಧನೆಯನ್ನೇನು ಮಾಡುವುದಿಲ್ಲ. ಸಾಹಿತ್ಯಿಕ ಕೃತಿಗಳನ್ನು, ಶಬ್ದಗಳ ಪಟ್ಟಿ ಅಥವಾ ಪ್ರಯೋಗ ಸಹಿತವಾದವುಗಳನ್ನು ಕೊಟ್ಟು ಸಂಶೋಧನೆಗೆ ನೆರವಾಗುತ್ತದೆ.

ಕೈಯಿಂದ ಈ ಕೆಲಸ ಮಾಡುವಾಗಿನ ಒದ್ದಾಟವನ್ನು ನಾವು ನೋಡಿದ್ದೇವೆ. ಕಂಪ್ಯೂಟರಿಗೊ ಅದು ನೀರು ಕುಡಿದಷ್ಟು ಸುಲಭ. ಕವಿಯ ಕಾವ್ಯ ಸಮುದಾಯವನ್ನು ಇದ್ದಕ್ಕಿದ್ದಂತೆ ಬರೆದು ಗಣಕ ಯಂತ್ರದ ಬಾಯಿಗೆ ಕೊಟ್ಟುಬಿಟ್ಟರಾಯಿತು. ಅದು ಒಂದೊಂದು ಶಬ್ದವನ್ನು ತಾನೇ ಆಯ್ದುಕೊಂಡು, ಪ್ರಯೋಗ ವಾಕ್ಯವನ್ನು ಕೊಡುವುದಲ್ಲದೆ, ಅಕಾರಾದಿಯಾಗಿ ಜೋಡಿಸಿ ಮುದ್ರಿಸಿ ಬಿಡುವುದು! ನೆನಪಿಡಿ, ನೀವು ಸ್ವಪರಿಶ್ರಮದಿಂದ ಮಾಡುವಾಗ ತಪ್ಪಾಗಬಹುದು. ಕಂಪ್ಯೂಟರ್ ಮಾತ್ರ ಈ ವಿಚಾರದಲ್ಲಿ ಎಡಹುವುದಿಲ್ಲ. *

* ಪದ್ಯದ ಸಾಲನ್ನು ಬರೆಯುವಾಗ ನೀವೇ ತಪ್ಪು ಮಾಡಿದರೆ, ಅದೂ ಮಾಡುತ್ತದೆ, ಆಗ ತಪ್ಪಿನ ಹೊಣೆ ನಿಮ್ಮದು ತಾನೇ !

ಶಬ್ದ–ಪ್ರಯೋಗ ಕೋಶವು ಸಿದ್ಧವಾದರೆ ಎಷ್ಟೊಂದು ವೇಳೆ ಮತ್ತು ಶ್ರಮ ಉಳಿಯುವದೆಂಬುದನ್ನು ಯೋಚಿಸೋಣ. ಕ್ರೈಸ್ತ ತತ್ವಜ್ಞಾನವನ್ನು ಕುರಿತು ಥಾಮಸ್ ಎಕ್ವಿನಾ ಎಂಬ ಮಹಾ ಭಾಷ್ಯಕಾರ (೧೩ ನೆಯ ಶತ.) ಅನೇಕ ಗ್ರಂಥಗಳನ್ನು ಬರೆದ. ಅವನು ಒಟ್ಟು ಬಳಸಿದ ಶಬ್ದಗಳ ಸಂಖ್ಯೆ ಸುಮಾರು ೧॥ ಕೋಟಿ ! ಆದರೂ ಅವುಗಳ ಶ. ಪ್ರ. ಕೋಶ ತಯಾರಿಸುವ ಸಾಹಸಕ್ಕಿಳಿದವ, ರಾಬರ್ಟ್ ಬೂಸಾ ಎಂಬ ಪಾದ್ರಿ. ಐವತ್ತು ಜನ ವಿದ್ವಾಂಸರು ಈ ಕೆಲಸಕ್ಕೆ ಪೂರ್ಣಾವಧಿ ತೊಡಗಿದರೆ ಅದನ್ನು ಮುಗಿಸಲು ೪೦ ವರ್ಷಗಳು ಬೇಕಾಗುವವೆಂದು ಬೂಸಾ ಅಂದಾಜು ಮಾಡಿ ೧೯೩೮ ರ ಸುಮಾರಿಗೆ ಆರಂಭಿಸಿದ. ಅಷ್ಟರಲ್ಲಿ ಕಂಪ್ಯೂಟರಿನ ಆವಿರ್ಭಾವವಾಯಿತು. ಕೈಯಿಂದ ಪಟ್ಟಿಕೆಗಳನ್ನು ಬರೆಯುವ ಕೆಲಸವನ್ನು ಬದಿಗಿರಿಸಿ, ಕಂಪ್ಯೂಟರಿಗೆ ಸಾಮಗ್ರಿಯನ್ನು ಪೂರೈಸತೊಡಗಿದ — ೧೯೪೮ ರಿಂದ. ಆಗ ಅದಕ್ಕೆ ತಗುಲಿದ ವರ್ಷ ೫ ಮಾತ್ರ.

ಕಂಪ್ಯೂಟರಿಗೆ ಪದ–ಸಮೂಹವೊಂದನ್ನು ಪೂರೈಸಿದ ಮೇಲೆ ಇನ್ನೂ ಹಲವು ಪ್ರಯೋಜನಗಳನ್ನು ಪಡೆಯಬಹುದು. ಅಕಾರಾದಿಯಾಗಿ ಅದು ತಾನೇ ಹೊಂದಿಸಿ ಕೊಡುವುದೆಂಬುದನ್ನು ಗಮನಿಸಿದ್ದೇವೆ. ಹಾಗೆ ಹೊಂದಿಸಿದ ಕೆಲವು ಶಬ್ದಗಳಿವು:

ಅಬ್ರಹಾಮ, ಇಮಾಮ, ಸಿದ್ಧರಾಮ, ಸೀತಾರಾಮ.

ಇಲ್ಲಿಯ ಅನುಕ್ರಮ ಅ, ಇ, ಸಿ, ಸೀ ಎಂಬುದಾಗಿ ಇದೆಯಷ್ಟೆ. ಕಂಪ್ಯೂಟರ್ ವಿರುದ್ಧ ದಿಕ್ಕಿನ ಅನುಕ್ರಮವನ್ನೂ (Reverse indexing) ಮಾಡಿಕೊಡಬಲ್ಲುದು —'ಮ' ದಿಂದ ಆರಂಭಿಸಿ. ಮ ಅಕ್ಷರ ನಾಲ್ಕರಲ್ಲಿಯೂ ಇದೆಯಾದ್ದರಿಂದ ಅದನ್ನು ಬಿಡೋಣ. ಅದರ ಹಿಂದಿನ ಅಕ್ಷರಗಳೆಂದರೆ, ಹಾ ಮಾ ರಾ (ದ್ಧ) ಮತ್ತು ರಾ (ತಾ). ವಿರುದ್ಧಾನುಕ್ರಮದಲ್ಲಿ ಈ ಶಬ್ದಗಳು ಹೊಂದಿಕೊಳ್ಳುತ್ತವೆ:

ಇಮಾಮ (ಮಮಾಇ)

ಸೀತಾರಾಮ (ಮರಾತಾಸೀ)

ಸಿದ್ಧರಾಮ (ಮರಾದ್ಧಸಿ)

ಅಬ್ರಹಾಮ (ಮಹಾಬ್ರಅ)

ಈ ಬಗೆಯ ಅನುಕ್ರಮದಿಂದ ಕಾವ್ಯಾಭ್ಯಾಸಕ್ಕೆ ಏನು ಪ್ರಯೋಜನವೆಂದು ಕೇಳಬಹುದು. ಕನ್ನಡ ಮತ್ತು ಇತರ ಭಾರತೀಯ ಸಾಹಿತ್ಯಗಳಲ್ಲಿ ಇದರಿಂದ ವಿಶೇಷ ಪ್ರಯೋಜನವಿದೆ: ಇಂಗ್ಲಿಶ್‌ಗಿಂತ ನಮ್ಮಲ್ಲಿ ಕೂಡುನುಡಿಗಳು ಬಹು ದೊಡ್ಡ ಸಂಖ್ಯೆಯಲ್ಲಿರುತ್ತವೆ. ಅನೇಕ ಸಲ, ಉತ್ತರಪದಕ್ಕೆ ವಿಶೇಷ ಮಹತ್ವವಿರುವುದರಿಂದ, ಉತ್ತರ ಪದಗಳೆಲ್ಲ ಪ್ರತ್ಯೇಕವಾಗಿ ಒಂದೆಡೆ ಸಿಕ್ಕುತ್ತವೆ. ಆಗ ಅದರ ಪ್ರಯೋಜನವನ್ನು ನೀವು ಪಡೆಯುವ ಅವಕಾಶ ದೊರೆಯುತ್ತದೆ. ಒಂದು ಉದಾಹರಣೆಯನ್ನು ಕೊಡುವೆ. ಮುದ್ದಣನ ಗ್ರಂಥ ಪಂಚಕದ ಕರ್ತೃತ್ವ ಇಂದು ಒಪ್ಪಿತವಾಗಿದ್ದರೂ, ಅವನ ಹಳಗನ್ನಡ ಕೃತಿಗಳ ಪ್ರಕಾಶಕರಾಗಿದ್ದ ರಾಮಾನುಜಯ್ಯಂಗಾರರು "ಯಾರು

ಏನೇ ಹೇಳಿದರೂ, ಶ್ರೀರಾಮಪಟ್ಟಾಭಿಷೇಕವನ್ನು ಸಹ ಅವನೇ ಬರೆದಿದ್ದಾನೆಂಬುದನ್ನು ನಾನು ಎಷ್ಟು ಮಾತ್ರಕ್ಕೂ ಒಪ್ಪಲಾರೆ.'' ಎಂದು ಕೊನೆವರೆಗೂ ಅಭಿಪ್ರಾಯ ತಳೆದಿದ್ದರು. ಅವನ ಗ್ರಂಥಕರ್ತೃತ್ವವನ್ನು ಸಿದ್ಧಪಡಿಸಲು, ನಮಗಿದ್ದ ಒಂದು ಆಂತರಿಕ ಪುರಾವೆ ಎಂದರೆ ಆತ ಕೂಡುನುಡಿಗಳನ್ನು ಮಾಡಿಕೊಳ್ಳುತ್ತಿದ್ದ ರೀತಿ. 'ಒಡೆಯ' 'ರಾಮ' ಎಂಬ ಪದಗಳನ್ನು ಆತ ಜೋಡಿಸುವುದು ಅವನ Mannerism ಗಳಲ್ಲಿ ಒಂದಾಗಿತ್ತು. (ಅಲರ್ವೊಡೆಯ, ಸಗ್ಗಿಗರೊಡೆಯ, ಭೂತಳದೊಡೆಯ ಇ. ಇ.) ಸಾಮಾನ್ಯ ಅಕಾರಾದಿಯಲ್ಲಿ ಉತ್ತರಪದಗಳು ನಮ್ಮ ಕೈಗೆ ಸಿಕ್ಕುವುದಿಲ್ಲ. ವಿರುದ್ಧ ಅನುಕ್ರಮದ ಅಕಾರಾದಿಯಲ್ಲಿ ಅವನ್ನೆಲ್ಲ ನಾವು ಒಂದೆಡೆಯಲ್ಲಿಯೆ ಕಂಡುಕೊಳ್ಳಬಹುದು.

ಕಾವ್ಯಭ್ಯಾಸದಲ್ಲಿ ಕಂಪ್ಯೂಟರ್ ಸಹಾಯದ ವಿಚಾರ ತೀರ ಹೊಸತಾದ್ದರಿಂದ ಇಷ್ಟೊಂದು ವಿವರವಾಗಿ ವಿವರಿಸಬೇಕಾಯಿತು. ಅದು ಸಿದ್ಧಪಡಿಸುವ ಶ. ಪ್ರ. ಕೋಶದ ಪ್ರಯೋಜನ ಮನದಟ್ಟಾಗಿದೆಯೆಂದು ಭಾವಿಸಿ ಕನ್ನಡ ಕಾವ್ಯದ ದೃಷ್ಟಿಯಿಂದ ವಿಚಾರ ಮಾಡೋಣ. ಅದಕ್ಕಾಗಿ ಸುಸಂಘಟಿತ ಯೋಜನೆ ರೂಪುಗೊಳ್ಳಬೇಕಾಗಿದೆ. ಮೊದಲಲ್ಲಿ ಪಂಪ, ರನ್ನ, ಹರಿಹರ, ಕುಮಾರವ್ಯಾಸ, ರತ್ನಾಕರವರ್ಣಿ, ಸರ್ವಜ್ಞ, ಮುದ್ದಣ, ಗೋವಿಂದ ಪೈ — ಮುಂತಾದ ಪ್ರಮುಖ ಕವಿಗಳ ಶ. ಪ್ರ. ಕೋಶ ಸಿದ್ಧವಾಗಬೇಕು. ದ್ವಿತೀಯ ಘಟ್ಟದಲ್ಲಿ ಆಯ್ದ ಶಾಸನಗಳನ್ನು, ವಚನ, ದಾಸವಾಙ್ಮಯಗಳನ್ನು ಕೈಗೆತ್ತಿಕೊಳ್ಳಬೇಕು.

ಹಳಗನ್ನಡ ಸಾಹಿತ್ಯದಷ್ಟೇ ಆಧುನಿಕ ಕಾವ್ಯಗಳಿಗೂ ಇಂಥ ಕೋಶಗಳ ರಚನೆ ಹೆಚ್ಚು ಅಗತ್ಯದ್ದಾಗಿದೆ; ತುಸು ಮಟ್ಟಿಗೆ ಅನಿವಾರ್ಯವೂ ಅಹುದು. ಏಕೆಂದರೆ ಇಂದಿನ ಕವಿಗಳ ವಿಮರ್ಶೆ ಮಾಡುವಾಗ, ತಮ್ಮವರೆನ್ನುವವರನ್ನು ಅತಿಯಾಗಿ ಹೊಗಳುವುದುಂಟು. ಇನ್ನು ತಮಗೆ ಬೇಡವಾದವರು ಅಥವಾ ಎದುರು ಗುಂಪು, ಜಾತಿಯವರಿದ್ದರೆ ಅತಿಯಾಗಿ ತೆಗಳುವುದು ಅಷ್ಟೇ ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತದೆ. ಅದರಿಂದಾಗಿ ವಿಮರ್ಶೆ ಅತಿರೇಕದ ಅಂಚನ್ನು ಮುಟ್ಟುವುದು. 'ಕುವೆಂಪು ಅವರ ಕಾವ್ಯವೆಲ್ಲ ಸಂಸ್ಕೃತಮಯ' — ಎಂದು ಹೇಳುವವರು ಇದ್ದಾರೆ. ಅದು ಎಷ್ಟರ ಮಟ್ಟಿಗೆ ನಿಜ? ಅಥವಾ ಅವರು ಉಪಯೋಗಿಸಿದ ಸಂಸ್ಕೃತ ಶಬ್ದಗಳಲ್ಲಿ ಎಷ್ಟೊಂದು ಅರ್ಥಪೂರ್ಣ ಇಲ್ಲವೆ ಅರ್ಥಹೀನ? ಇದನ್ನು ಖಚಿತವಾಗಿ ಹೇಳಲು ಅದಾವ ಪುರಾವೆ ಇದೆ?

ಬೇಂದ್ರೆಯವರ ಕಾವ್ಯದ ಬಗ್ಗೆಯೂ ಇಂಥದೇ ಬೇರೊಂದು ಟೀಕೆಯಿದೆ. 'ಬೇಂದ್ರೆ ಒಂದು ಕಾಲಕ್ಕೆ ಸಮರ್ಥ ಕವಿಗಳಿದ್ದರೇನೊ ನಿಜ. ಈಗ ಮಾತ್ರ ಅವರು ಬರಿಯ ಶಬ್ದಗಳ ಡೊಂಬರಾಟದಲ್ಲಿ ತೊಡಗಿದ್ದಾರೆ' — ಎಂಬ ಅಭಿಪ್ರಾಯ ಘಂಟಾಘೋಷವಾಗಿ ಕೇಳಬರುತ್ತದೆ. ಇದನ್ನು ಅಧಿಕಾರವಾಣಿಯಿಂದ ನಿರ್ಣಯಿಸುವವರಾರು? ಮತ್ತು ಹೇಗೆ? ಅವರ ಕವನಗಳ ಶಬ್ದ – ಪ್ರಯೋಗಕೋಶ ಸಿದ್ಧವಾದರೆ ಮಾತ್ರ ಇದು ಸಾಧ್ಯ.

ಇದು ಹೇಗೇ ಇರಲಿ, ಬೇಂದ್ರೆಯವರು ಹೊಸಗನ್ನಡದ ಶಬ್ದ ಬ್ರಹ್ಮರೆಂಬುದು ನಿಸ್ಸಂದಿಗ್ಧವಾದುದು. ಅವರು ಶಬ್ದಗಳಿಗೆ ಹೊಸ ಅರ್ಥಗಳನ್ನು ಕಲ್ಪಿಸುತ್ತಾರೆ. ಒಂದು ಶಬ್ದವು ವಾಚ್ಯಾರ್ಥ ಮಾತ್ರವಲ್ಲದೆ, ವ್ಯಂಗ್ಯಾರ್ಥ, ವಿರೋಧಾರ್ಥ, ಗೂಢಾರ್ಥ, ಮಂತ್ರಾರ್ಥ—ಏನೆಲ್ಲವನ್ನೂ ಹೊರಡಿಸಬಹುದು. ಮೇಲುನೋಟಕ್ಕೆ ಬಳಕೆಯ ನುಡಿಯೆಂದು ಕಂಡರೂ, ಮಹೋನ್ನತವಾದ ತಾತ್ವಿಕ ದರ್ಶನವು ಆ ಶಬ್ದದಲ್ಲಿ ವ್ಯಕ್ತವಾಗಬಹುದು. ಅವರ ಕಾವ್ಯದಲ್ಲಿ ರಮ್ಯ ಸಂಸ್ಕೃತ ಪದಗಳಿವೆ, ಉತ್ತರ ಕರ್ನಾಟಕದ ದೇಶಿ ಇದೆ. ಹಳಗನ್ನಡ ಶಬ್ದಗಳಿಗೆ ಹೊಸ ಅರ್ಥ ಬಂದಿದೆ. ನಿಸರ್ಗ ವರ್ಣನೆ ಇರಲಿ, ಸಾಮಾಜಿಕ ಸನ್ನಿವೇಶಗಳಿರಲಿ, ಅಂತರಂಗದ ಭಾವೋನ್ಮಾದವಿರಲಿ, ಬೇಂದ್ರೆಯವರು ಅದಕ್ಕೆ ಸೂಕ್ತವಾದ ಶಬ್ದ ಶರೀರವನ್ನು, ಉಸಿರಾಡುವಷ್ಟು ಸಹಜ ರೀತಿಯಲ್ಲಿ ಒದಗಿಸುತ್ತಾರೆ. ಈ ಅಭಿವ್ಯಕ್ತಿಯಲ್ಲಿ ರೂಪಕಶಕ್ತಿಯದೇ ಮೇಲುಗೈ. ಗಿಡಗಂಟೆಯಾ ಕೊರಳು, ಕಣ್ಣ ಕಡೆಗೋಲು, ಎವಿ ದುಡುಕತಾವ, ತುಳುಕ್ಯಾಡತಾವ ತೂಕಡಿಕಿ ನೀರೊಡೆದುವೆಲ್ಲ ಕಲ್ಲಿಗೆ—ಎಂಬಂಥ ಪದಗುಂಫನಗಳ ಲೀಲಾಜಾಲವಾದ ಸೃಷ್ಟಿ ಬೇಂದ್ರೆಯವರಿಗೆ ಮಾತ್ರ ಮೀಸಲು. ಶಬ್ದಗಳನ್ನು ಅವರಷ್ಟು ಮೈಮುರಿದು ದುಡಿಸಿಕೊಂಡವರು ಹೊಸಗನ್ನಡದಲ್ಲಿ ಬೇರೊಬ್ಬರು ಕಂಡುಬರಲಾರರು. ಆದಕಾರಣ ಬೇಂದ್ರೆ ಕಾವ್ಯದಲ್ಲಿ ಬರುವ ಶಬ್ದಗಳ ಅರ್ಥವಿಶೇಷವನ್ನು ಕಂಡುಕೊಳ್ಳುವುದು ಉಚ್ಚ ಮಟ್ಟದ ಕಾವ್ಯಾಭ್ಯಾಸವೆನಿಸುವುದರಲ್ಲಿ ಸಂದೇಹವಿಲ್ಲ.* ಇದನ್ನು ತೋರ್ಪಡಿಸಲು, ಅವರ ಸಮಗ್ರ ಕಾವ್ಯದ ಶ. ಪ್ರ. ಕೋಶ ಸಿದ್ಧವಾಗಬೇಕು—ಕಂಪ್ಯೂಟರ್ ಸಹಾಯದಿಂದ.

ಆದರೆ ಕಂಪ್ಯೂಟರಿಗೆ ಕನ್ನಡ ತಿಳಿಯುವದಿಲ್ಲವಲ್ಲ ! ಆದ್ದರಿಂದ ಮೂಲಕೃತಿಯನ್ನು ನಾವು ರೋಮನ್ ಲಿಪಿಯಲ್ಲಿ ಬರೆಯಬೇಕು. ರೋಮನ್ ಲಿಪಿಗೆ ಲಿಪ್ಯಂತರ ಮಾಡಲು ಕೆಲವು ಉಚ್ಚಾರಣ ಚಿಹ್ನೆಗಳು (diacritical marks) ಇರುತ್ತವಷ್ಟೇ, ಮೇಲೆ ಮತ್ತು ಕೆಳಗಿರುವ (— ·) ಇಂಥ ಚಿಹ್ನೆಗಳು ಭಾರತದಲ್ಲಿರುವ ಇಂದಿನ ಅನೇಕ ಗಣಕಯಂತ್ರಗಳಲ್ಲಿ ಮೂಡಿಸಬರುವುದಿಲ್ಲ. ಆದ್ದರಿಂದ ಕೆಲವು ವ್ಯತ್ಯಾಸಗಳನ್ನು ಮಾಡಬೇಕಾಗುತ್ತದೆ. ಉದಾಹರಣೆಗೆ, Ā = AA ; Ṣ = XS, ಇತ್ಯಾದಿ.†

---

* ಬೇಂದ್ರೆಯವರ ಗದ್ಯವಾದರೂ ಅಷ್ಟೇ ಅರ್ಥಗರ್ಭಿತ ಹಾಗೂ ಕಾವ್ಯಮಯ. ಅಲ್ಲಿಯೂ ಕೂಡ ಅವರು ಶಬ್ದಗಳನ್ನು ಬಗೆಬಗೆಯಾಗಿ ಮಣಿಸುತ್ತಾರೆ. ವಿಶೇಷಾರ್ಥವನ್ನು ಹೊರಡಿಸುತ್ತಾರೆ. ಮಾದರಿಯೆಂದು 'ಮಾತುಗಾರಿಕೆ' ಯನ್ನು ಕುರಿತ ಅವರ ಪ್ರಬಂಧವನ್ನು ಗಮನಿಸಬಹುದು. (ಸಾಹಿತ್ಯದ ವಿರಾಟ್ ಸ್ವರೂಪ, ಪು. ೯೩೧).

† ಕೆಲವು ಮುಂದುವರಿದ ಕಂಪ್ಯೂಟರ್‌ಗಳು ಉಚ್ಚಾರಣ ಚಿಹ್ನೆಗಳನ್ನು ಮೇಲೆ, ಕೆಳಗೆ ಕೊಡಬಲ್ಲವಾಗಿವೆ.

ಇಂಗ್ಲಿಶ್‌ನಲ್ಲಿ ಶಬ್ದಗಳು, ಪತ್ಯಯಗಳು ಬಿಡಿ ಬಿಡಿಯಾಗಿರುತ್ತವೆ. ಆಗ ಒಂದೊಂದು ಶಬ್ದವನ್ನೆತ್ತಿಕೊಂಡು Concordance ರಚಿಸುವುದು ಸುಲಭ. ಭಾರತೀಯ ಭಾಷೆಗಳಲ್ಲಿ ಹಾಗೆಲ್ಲಿದೆ ? ತದ್ಧಿತ, ಕೃದಂತ ಶಬ್ದಗಳು ಪ್ರತ್ಯಯಗಳನ್ನೊಳಗೊಂಡಿರುತ್ತವೆ. (ಹೋಲಿಸಿರಿ : In Calcutta = ಕಲಕತ್ತೆಯಲ್ಲಿ) ಅಲ್ಲದೆ ಎರಡು ಮೂರು ನಾಮಪದಗಳು, ಸಂಧಿ, ಸಮಾಸಗಳು ನಿಯಮಾನುಸಾರ ಕೂಡುನುಡಿಯಾಗಿ ಬರುತ್ತವೆ. ಬಾಣನಂತಹರ ಗದ್ಯದಲ್ಲಿ ಶಬ್ದಗಳು ಒಂದಕ್ಕೊಂದು ಹೆಣೆದುಕೊಂಡು ಸಾಲುಗಟ್ಟಲೆ ಮುಂದುವರಿಯುತ್ತವೆ. ಬಹುವ್ರೀಹಿ ಸಮಾಸಪದವಿದ್ದರಂತೂ, ಆ ಎರಡು ಶಬ್ದಾರ್ಥ ಬಿಟ್ಟು ಮೂರನೆಯ ಅರ್ಥವೇ ಹೊರಡುವುದು. ಆದ್ದರಿಂದ ಕನ್ನಡ ಕಾವ್ಯವೊಂದರ ಶ. ಪ್ರ. ಕೋಶವನ್ನು ತಯಾರಿಸುವಾಗ ಕೂಡುನುಡಿಗಳನ್ನು ಒಡೆಯಬೇಕಾಗುವುದು. ಮತ್ತು ಕೂಡುನುಡಿಯಲ್ಲಿ ಬರುವ ಶಬ್ದಗಳನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳುವುದರ ಜೊತೆಗೆ ಇಡಿಯಾಗಿಯೂ ಅದನ್ನು ಗಮನಿಸಬೇಕಾಗುವುದು. ಕಂಪ್ಯೂಟರ್ ತಾನಾಗಿಯೇ ಈ ಕಾರ್ಯವನ್ನು ನಿರ್ವಹಿಸಬೇಕಾದರೆ, ಕೆಲವು ವಿಶಿಷ್ಟ ಚಿಹ್ನೆಗಳನ್ನು ಬಳಸಿ, ಶಬ್ದಗಳನ್ನು ಬೇರ್ಪಡಿಸಲು ಸೂಚಿಸಬೇಕಾಗುವುದು. ಈ ದಿಶೆಯಲ್ಲಿ ನಾವು ಮಾಡಿಕೊಂಡ ವಿಧಾನಗಳು ಇಂತಿವೆ :

ಎರಡು ಶಬ್ದಗಳನ್ನು ಬೇರ್ಪಡಿಸುವುದರ ಸಂಕೇತವಾಗಿ / ಈ ಚಿಹ್ನೆಯನ್ನು ಬಳಸಿದ್ದುದು. ಶಬ್ದಗಳೆರಡು ಕೂಡಿ ಸಂಧಿಯಾಗುವಾಗ ಕೆಲ ಅಕ್ಷರ ಸಂಜ್ಞೆಗಳು ಲೋಪ ಇಲ್ಲವೆ ಆಗಮವಾಗುತ್ತವೆ. ಲೋಪವನ್ನು = = ಈ ಚಿಹ್ನೆಗಳಲ್ಲಿಯೂ, ಆಗಮವನ್ನು ≠ ≠ ಈ ಚಿಹ್ನೆಗಳಲ್ಲಿಯೂ ಅಡಕಗೊಳಿಸುವುದು. ಉದಾ. ಗೆ— 'ಮರೆತೇವದನ → ಮರತೇವ್ = ಉ = /ಅದನ.'ಹೂವರಳಿ' → ಹೂ/ ≠ ವ್ ≠ ಅರಳಿ. (ಆದೇಶಕ್ಕೆ ಬೇರೆ ಸಂಜ್ಞೆಯಿಲ್ಲ. ಏಕೆಂದರೆ ಅದರಲ್ಲಿ ಒಂದು ಲೋಪವಾಗಿ, ಇನ್ನೊಂದು ಆಗಮವಾಗಿ ಬಂದಿರುತ್ತದೆ. ಉದಾ· ಗೆ ಹಾಡುಗಬ್ಬ → ಹಾಡಂ / = ಕ = ≠ ಗ ≠ ಬ್ಬ. ಈ ರೀತಿಯಾಗಿ ವಿಭಜಿಸಿ ಶಬ್ದಗಳನ್ನು ಬರೆದಾಗ ಕಂಪ್ಯೂಟರ್ ಕೂಡುನುಡಿಯನ್ನಂತೂ ಕೊಟ್ಟೇಕೊಡುತ್ತದೆ. ಜೊತೆಗೆ ಲೋಪ, ಆಗಮುಗಳನ್ನು ಗಮನಿಸಿಕೊಂಡು ಈ ಶಬ್ದಗಳನ್ನೂ ಪ್ರತ್ಯೇಕವಾಗಿ ಕೊಡುತ್ತದೆ. (ಹಾಡುಗಬ್ಬ, ಹಾಡು, ಕಬ್ಬ). ಈ ವಿಧಿಯಿಂದ ಬೇಂದ್ರೆ ಸಮಗ್ರ ಕಾವ್ಯಸಂಪದವನ್ನು ಕಂಪ್ಯೂಟರಿಗೆ ಪೂರೈಸಿದಾಗ ಅನೇಕಾನೇಕ ಅರ್ಥ ವಿಷಯಗಳು, ಮತ್ತು ನವೀನ ಕಾವ್ಯಾಂಶಗಳು ದ್ರಾಕ್ಷಾಪಾಕದಷ್ಟು ಸುಲಭವಾಗಿ ಕೈಗೆಟಕುವುದರಲ್ಲಿ ಸಂದೇಹವಿಲ್ಲ.

ಒಂದು ಲಕ್ಷ ಶಬ್ದಗಳಿರುವ ಬೇಂದ್ರೆ ಕವನ ಸಂಗ್ರಹಗಳ ಪುಟಸಂಖ್ಯೆ ಸುಮಾರು ೧೩೦೦. (ಅಪ್ರಕಟಿತ ಕವನಗಳನ್ನು ಸೇರಿಸಿದರೆ, ಇದರ ಎರಡು ಪಟ್ಟು ಆದೀತು !) ಅದರ ಶ, ಪ್ರ ಕೋಶವು ಹತ್ತು ಸಾವಿರ ಪುಟಗಳನ್ನು ಮಿಕ್ಕಬಹುದು. ಅಷ್ಟನ್ನು ಮುದ್ರಿಸುವುದಕ್ಕೆ ತುಂಬಾ ಹಣ, ತುಂಬಾ ಸಮಯಬೇಕು. ಅಲ್ಲದೆ ಹೆಚ್ಚಿಗೆ ಮಾರಾಟವಾಗುವ ಗ್ರಂಥವೂ ಅದಾಗದು. ಆದರೆ ಶ. ಪ್ರ. ಕೋಶವನ್ನು ಅಚ್ಚಿನ

ಮೊಳೆಗಳಿಂದಲೇ ಮುದ್ರಿಸಬೇಕೆಂಬ ಅಗತ್ಯವಿಲ್ಲ. ಕಂಪ್ಯೂಟರಿನ ಟೆಲಿಪ್ರಿಂಟರ್ ಯಂತ್ರ ದಿಂದ, ಆಗಿಂದಾಗ ಶಬ್ದಪ್ರಯೋಗ ಕೋಶವನ್ನು ಮುದ್ರಿಸಿಕೊಳ್ಳಬಹುದು.


ಗಣಕಯಂತ್ರವು ಇದೆಲ್ಲ ಕೆಲಸವನ್ನು ಹೇಗೆ ನಿಭಾಯಿಸುತ್ತದೆಂಬ ಕುತೂಹಲ ಉಂಟಾಗುವುದು ಸಹಜ. ಸ್ಥೂಲವಾಗಿ ಹೀಗೆ ಹೇಳಬಹುದು. ಕಂಪ್ಯೂಟರ್ ಕಾರ್ಯದಲ್ಲಿ ಮೂರು ಅಂಗಗಳಿರುತ್ತವೆ. ೧) ಮಾಹಿತಿಯನ್ನು ಪೂರೈಸುವುದು. ೨) ಅದನ್ನು ಹಿಡಿದಿಟ್ಟುಕೊಳ್ಳುವುದು. ೩) ಅದನ್ನು ನಮಗೆ ಬೇಕಾದ ಸ್ವರೂಪ ದಲ್ಲಿ ಸಂಯೋಜಿಸುವುದು.

ಕಂಪ್ಯೂಟರಿಗೆ ಏನು ಮಾಹಿತಿಯನ್ನು ಪೂರೈಸಿದರೂ ಅದು ಅಂಕಿಗಳಿಗೆ ತಿರುಗಿಸಿ ಕೊಳ್ಳುತ್ತದೆ. B ׀ E ׀ N ׀ D ׀ R ׀ E ಎಂಬುದು ಕಂಪ್ಯೂಟರಿನಲ್ಲಿ 2 ׀ 5 ׀ 05 ׀ 4 ׀ 09 ׀ 5 ಆಗುತ್ತದೆ ! ಒಂದು ನಿರ್ದಿಷ್ಟವಾದ ಕಾರ್ಡಿನಲ್ಲಿ ಈ ಅಂಕಿಗಳನ್ನು punch ಮಾಡಬೇಕಾಗುವುದು. ಇಲ್ಲವೆ ಟೈಪರೈಟರ್ ಮಾದರಿಯ ಯಂತ್ರದಲ್ಲಿ ಮಾಹಿತಿಯನ್ನು ನೇರವಾಗಿ ಕಂಪ್ಯೂಟರಿಗೆ ಪೂರೈಸಬಹುದು. ಆಗ ನೀವು ಏನೇನು ಮಾಹಿತಿ ಒದಗಿಸುವಿರೋ, ಅದು ಟಿ. ವಿ. ಗೆ ಇರುವಂತಹ ಸ್ಕ್ರೀನ್ ಮೇಲೆ ಆ ಕ್ಷಣಕ್ಕೆ ಮೂಡಿಸುತ್ತದೆ. ಅದರಿಂದ ತಪ್ಪುಗಳೇನಾದರೂ ಇದ್ದರೆ ತಿದ್ದಿಕೊಳ್ಳುವುದು ಸಾಧ್ಯ.

ಹೀಗೆ ಹಿಡಿದಿಟ್ಟ ಮಾಹಿತಿಯ ವಿಶ್ಲೇಷಣೆಯನ್ನು ಯಾವ ರೀತಿಯಾಗಿ ಮಾಡಬೇಕೆಂಬುದನ್ನು ಅದಕ್ಕೆ ವಿಧಿಸಬೇಕಾಗುವುದು. ಇದಕ್ಕೆ programming ಎನ್ನುವರು. ಈ ವಿಧಿನಿಯಮಗಳ ಪ್ರಕಾರ ಕಂಪ್ಯೂಟರ್ ಅತ್ಯಂತ ವೇಗದಿಂದ ಕೆಲಸ ಮುಗಿಸಿ, ಟೆಲಿಪ್ರಿಂಟರ್‌ನಿಂದ, ಪಟಪಟನೆ ಅಕಾರಾದಿ ಮೂಡಿಸುತ್ತದೆ. ಆಮೇಲೆ ಬೇಕೆಂದರೆ ಅದನ್ನೇ ಫೋಟೋ ಕಂಪೋಸಿಂಗ್‌ನಿಂದ ಮುದ್ರಿಸಿ ನೂರಾರು ಪ್ರತಿಗಳನ್ನು ಹೊರತರಲೂಬಹುದು.

ಅತ್ಯಂತ ವೇಗ! ಹೌದು. ಆ ವೇಗ ನಿಮ್ಮ ಅಂದಾಜನ್ನು ಮೀರುವಂತಹದು. ನಮಗೆ ಒಂದು ತಾಸು ತಗಲುವ ಕೆಲಸವನ್ನು ಅದು ಒಂದು ಸೆಕಂದಿನಲ್ಲಿ (೧/೩೬೦೦) ಮುಗಿಸಬಲ್ಲುದು! ಇನ್ನೊಂದು ಮಾತೆಂದರೆ ನಾವು ಕೈಯಿಂದ ಬರೆಯತೊಡಗಿದಾಗ ತಪ್ಪುಗಳು ನುಸುಳುವ ಸಂಭವವಿದ್ದರೆ, ಕಂಪ್ಯೂಟರ್ ಅಣುಮಾತ್ರವೂ ತಪ್ಪಿಲ್ಲದೆ ಶ. ಪ್ರ. ಕೋಶವನ್ನು ಅಣಿಗೊಳಿಸುತ್ತದೆ.

ಸಾಹಿತ್ಯ ಕಾರ್ಯಕ್ಕೆ ಕಂಪ್ಯೂಟರನ್ನು ಬಳಸುವ ಈ ಎತ್ತುಗಡೆಯು ಕನ್ನಡದಲ್ಲಿ ಅಷ್ಟೇ ಅಲ್ಲ, ಭಾರತದಲ್ಲಿಯೇ ಪ್ರಥಮತಃ ನಡೆಯುತ್ತಿದೆ—ಕನ್ನಡ ಕವಿಗಳ ಮೂಲಕ. (ಭಾರತದ ಇತರ ಯಾವದೇ ಸಾಹಿತ್ಯ ಕ್ಷೇತ್ರದಲ್ಲಿ ಇಂಥ ಕೆಲಸ ನಡೆದಿಲ್ಲ.) ಪ್ರಯೋಗಾರ್ಥವಾಗಿ, ಈಗಾಗಲೇ ಮುದ್ದಣನ ವಿಶಿಷ್ಟ ಶಬ್ದಗಳನ್ನು, ದಾಸರ ಕೆಲವು ಉಗಾಭೋಗಗಳನ್ನು ಹಾಗೂ ಬೇಂದ್ರೆಯವರ ಕೆಲವು ಕವನಗಳನ್ನು ಗಣಕ ಯಂತ್ರಕ್ಕೆ ಅಳವಡಿಸಲಾಗಿದೆ. ಅಲ್ಲದೆ ದೇವರ ದಾಸಿಮಯ್ಯನ ಸಮಗ್ರ ವಚನಗಳನ್ನು ಮತ್ತು


श्री गणेशायनमः ओम् नमः सरस्वत्यैः

रत्नाकर धौत पदाम् हिमालय किरीटिणीम्
ब्रह्मराजर्षि रत्नाढ्याम् वन्दे भारत मातरम्।

या कुन्देन्दु तुषार हार धवला या शुभ्रवस्त्रावृता
या वीणा वरदण्ड मंडितकरा याश्वेत पद्मासना
या ब्रह्माच्युतशंकर प्रभृतिभिर्देवैः सदावन्दिता
सा मां पातु सरस्वती भगवती निः शेष जाड्याप

ಕಂಪ್ಯೂಟರ್ ಮೂಡಿಸಿದ ಭಾರತೀಯ (ದೇವನಾಗಿರಿ) ಲಿಪಿ. ಇದನ್ನು ಯೋಜಿಸಿ ಕಂಪ್ಯೂಟರಿಗೆ ಅಳವಡಿಸಿದವರು, ಕನ್ನಡಿಗರೇ ಆದ ಡಾ. ಎಸ್. ಪಿ. ಮುದ್ದೂರ್. ಬೆರಳಚ್ಚಿನಂತೆಯೇ ಇಲ್ಲಿಯೂ ಹಾಗೆ ಮೂಡಿಸಬಹುದು. ಇಲ್ಲಿ ಕಾಗದವಿಲ್ಲ. ಬದಲಿಗೆ ಟಿ. ವಿ.ಯಂತಹ ಸ್ಕ್ರೀನ್. ಆ ಮೂಲಕ, ತಪ್ಪನ್ನೂ ತಿದ್ದಬಹುದು—ಆ ಕ್ಷಣದಲ್ಲಿ.

ಕಾಳಿದಾಸನ ಮೇಘದೂತವನ್ನು ಕಂಪ್ಯೂಟರಿನಲ್ಲಿ ಶೇಖರಿಸಿ ಇಡಲಾಗಿದೆ. ಅದರಿಂದ ಶ. ಪ್ರ. ಕೋಶವನ್ನು ಇಲ್ಲವೆ ನಿರ್ದಿಷ್ಟ ಶಬ್ದ ಅಥವಾ ಪ್ರತ್ಯಯಗಳನ್ನಷ್ಟೆ ಪಡೆಯಬಹುದು. ಉದಾಹರಣೆಗೆ, ಹಳಗನ್ನಡ ಱ, ೞ ಗಳು ದೇವರ ದಾಸಿಮಯ್ಯನ ವಚನಗಳಲ್ಲಿ ಎಷ್ಟರ ಮಟ್ಟಿಗೆ ಬಂದಿವೆಯೆಂದು ತಿಳಿಯುವ ದೃಷ್ಟಿಯಿಂದ ಅವಷ್ಟನ್ನೇ ಪಟ್ಟಿ ಮಾಡಲು ಹೇಳಿದಾಗ ಕಂಪ್ಯೂಟರ್ ಕ್ಷಣಾರ್ಧದಲ್ಲಿ ಹಾಗೆ ಮಾಡಿಕೊಟ್ಟಿತು.

ಕಂಪ್ಯೂಟರ್ ಸಹಾಯದಿಂದ ಕನ್ನಡದ ಅಭ್ಯಾಸಕ್ಕೆ ತುಂಬಾ ಪ್ರಯೋಜನವಿದೆ. ಕಾವ್ಯವೊಂದೇ ಅಲ್ಲದೆ, ಭಾಷಾಪ್ರಕ್ರಿಯೆ, ಜಾನಪದ ಸಾಹಿತ್ಯ, ಶಾಸನಗಳು—ಇವುಗಳ ವ್ಯಾಸಂಗಕ್ಕೂ ಕಂಪ್ಯೂಟರನ್ನು ಬಳಸಬಹುದು. ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿಯ ಕನ್ನಡ ಕೇಂದ್ರಗಳು, ಮತ್ತು ಇತರ ಕನ್ನಡ ವಿದ್ವಾಂಸರು ಈ ಕ್ರಾಂತಿಕಾರೀ ಸಾಧನದತ್ತ ತಮ್ಮ ಗಮನ ಹರಿಸಲಿ; ಸಾಹಿತ್ಯ ಸಂಶೋಧನೆಗೆ ಹೊಸ ಆಯಾಮಗಳನ್ನೂ, ಖಚಿತತೆಯನ್ನೂ ತಂದು ಕೊಡುವಂತಾಗಲಿ.

RUDE+VA *0401,000
SDIDU BE+SATTA+GA DUSDI/DUSDIDU SATTA+GA *0401,001
NAKA SHIGGINA SHA+SDU NI+SDA+MVA+ *0401,002
N[NA]/SHA+NGA A+SDA+KA NIN[NA]/SHA+NGA SHA+SDA+KA *0401,003
SDEDU BANDAVA BE+KO GURUDE+VA+ *0401,004
KASLA+GI[I]@Y@/A+SDI+DI SHAKYA+GI SHA+SDI+DI *0401,005
KYA+GI NO+SDI+DI GURUDE+VA+ *0401,006
SLLYA+GA KUSNIDI+DI BESLAKINYA+GA TASNIDI+DI *0401,007
HU+VA+GI ARASLI+DI GURUDE+VA+ *0401,008
SLIYA+G[A]/I+SA+SDIDI GA+SLYA+GA BI+SA+SDI+DI *0401,009
SLIYA+GA KU+S[U]/A+SDI+DI GURUDE+VA+ *0401,010
SIL[U]/SHASNNU UNSDI+DI BESLADINGASLA KANSDI+DI *0401,011
SLI/MUDDU KONSDI+DI GURUDE+VA+ *0401,012
+SDALAKA MU+SDI+DI PASDUVALAKA O+SDI+DI *0401,013
KKELLA KU+SDI+DI GURUDE+VA+ *0401,014
HA+SDI SHASNNA+DI NI+ JAGADA KASNNA+DI NI+ *0401,015
SDIDU SASNNA+DI NI+ GURUDE+VA+ *0401,016
HA+SDU PA+SDU *0801,000
+Y ENUTITTU KA+VANA/BASLLI *0801,001
[S]N/KANGASLOSLU+ SHU+/@V@ARASLI *0801,002
EVASDE PA+SDU OLAVINA SHA+SDU *0801,003
HASNNALI TUMBITU RASA MARASLI *0801,004
E RASA/NIDHIYE+ SHA+ SHATA VIDHIYE+ *0801,005
E/TUMBIDE SELE/SELEYA+GI *0801,006
RAKADALLI SVARGA *0802,000
RUGE TIRUGUTTIRUVA KASNNU MISTUKUTTISHAVU, *0802,001
SRUDUSTI KECCANEYE ARASLUTISHAVU, *0802,002
SLLE SHA+SDUTTA ASDDA+SDUTIVE EDE SHAIAVU, *0802,003
BBU/[K]@G@AVIYUTISHAVU *0802,004
+VA YAKSSISNI MA+YE YA+VA LO+KADA RU+PO *0802,005
LPANEYA NILUKISIYU SHE+SLAL[U]/ARIYE. *0802,006
TTARADA O+KUSLIYE APPUGSE/[T]@D@O+STIYE+ *0802,007
SHA SVARGAVE ENDE NARAKA IEREYE. *0802,008
+VU BARATE+VINNA *0811,000
+VU BARATE+VINNA NENAPIRALI TA+YI *0811,001
M/NAMASKA+RA NIMAGA *0811,002
+YDIRI=/KU+SINSHA+NGA NAMAGA= *0811,003
+VU BARATE+VINNA... *0811,004
GADA KU+SDA BANDEVU JAGASLA+SDI, *0811,005
STTIRI NIMMA TOSDI, *0811,006
LI NIDDE MA+SDI =EDDEVI+GA *0811,007
+VUDO+ SHOSA+ NASUKINYA+GA, *0811,008
+VU= TA+YITANA NASDISIDIRI *0811,009
HA+LA KUSDISIDIRI *0811,010
ARASLU A+SDISIDIRI KANASINYA+GA *0811,011
SLAGU A+TU BHA+SLA BYA+GA, *0811,012
ASNNA MUCCIKOSLLATA+VA CIKKI *0811,013
IVUGUSDATA+VA SHAKKI *0811,014
ATTALI TALI KUKKI BA+NAMYA+GA, *0811,015
ESLAKU SHA+RYA+VA MU+SDALADA+GA *0811,016
IMMA SERAGA MARI+ MA+SDIDIRI, *0811,017
A+LI SHA+SDIRI *0811,018
A+STA A+SDIDIRI E+NO+ SHA+NGA@ *0811,019
ARETEVU KASLEDA JANMADSHA+NGA *0811,020
O+LI SHO+DA+GA A+DIRI KO+LU *0811,021
SHISDIDIRI NAMMA TO+LU *0811,022
+NU NIMMA MU+LU LO+KADA+GA? *0811,023
A+VU MARATE+VI[U]/ADANA SHYA+NGA? *0811,024
KKA=/TANGI=/MAGASLU=/TA+YI= SHASDEDA TA+YI *0811,025

TUMBIDE
NSE/TŨMBIDE SELE/SELEYA+GI *0801,
TEREYE
A+SHA SVARGAVE ENDE NARAKA TEREYE. *0802,
TOSDI
KOsTTIRI NIMMA TOSDI, *0811,
TO+STIYE+
NETTARADA O+KUsLIYE APPUGsE/[T]@D@O+STIYE+ *0802,
TO+RISIDIRI
MAKKASLA+STA TO+RISIDIRI SHA+RISIDIRI *0811,
TO+RISIDIRI
TO+RISIDIRI MIsNUKU *0811,
TO+LU
SHIsDIDIRI NAMMA TO+LU *0811,
TAMAGA@
YA+KO+ KARUSNA BANTU TAMAGA@ *0811,
DA+YI
KANNI-/GEsLAII-/MAsDADI-/DA+YI- SA+KU/DA+YI *0811,
DIKKELLA
DIKKELLA KU+sDI+DI GURUDE+VA+ *0401,
DI+PADA+GA
MIsNU[KU]/MIsNUKU DI+PADA+GA *0811,
DUsDI
NUsDIDU BE+SATTA+GA DUsDI/DUsDIDU SATTA+GA *0401
DUsDIDU
DUsDIDU SASNNA+DI NI+ GURUDE+VA+ *0401
DUsDIDU
NUsDIDU BE+SATTA+GA DUsDI/DUsDIDU SATTA+GA *0401
DUsDIDUsDIDU
NUsDIDU BE+SATTA+GA DUsDI/DUsDIDU SATTA+GA *0401
DHURANDHURI
SHAGALA+GALI DHURANDHURI JA+TRI *0811
DHYA+NA
MU+RU+ SHOTTINYA+GA NIMMA DHYA+NA *0811
NASDISIDIRI
NI+VU- TA+YITANA NASDISIDIRI *0811
NASDI+TIRALI
KA+RYA SUSU+TRA NAsDI+TIRALI *0811
NARAKA
SVARGA NARAKA YA+VUDU+ IRALI *0811
NARAKA
A+SHA SVARGAVE ENDE NARAKA TEREYE. *0802
NARAKADALLI
NARAKADALLI SVARGA *0802
NASUKINYA+GA
YA+VUDO+ SHOSA+ NASUKINYA+GA. *0811
NA+VU
NA+VU BARATE+VINNA *0811
NA+VU
NA+VU BARATE+ṼINNA NENAPIRALI TA+YI *0811
NA+VU
NA+VU BARATE+VINNA *0811
NA+VU
NA+VU BARATE+ṼINNA... *0811
NA+VU
NA+VU SHARASNA BARALILLA SUMAGA@ *0811
NA+VU
NA+ṼU BARATE+VINNA... *081
NA+VU
NA+VU BARATE+V[U]/ADANA SHYA+NGA? *081

ಅಕಾರಾದಿ

ನಮ್ಮ ಪ್ರಕಟಣೆಗಳು

೧.	ಪ್ರತೀಕ್ಷೆ : ಕಾವ್ಯ	
	ಸಿದ್ಧಲಿಂಗ ಪಟ್ಟಣಶೆಟ್ಟಿ	೭-೦೦
೨.	ಕೋಗಿಲೆಯ ಚಿಕ್ಕವ್ವ : ಮಕ್ಕಳ ಕಥೆಗಳು	
	ಮ. ಸು. ಕೃಷ್ಣಮೂರ್ತಿ	೨-೦೦
೩.	ಸೂರ್ಯಾಸ್ತದಿಂದ ಸೂರ್ಯೋದಯದ ವರೆಗೆ : ನಾಟಕ	
	ಸುರೇಂದ್ರ ವರ್ಮಾ/ಸಿದ್ಧಲಿಂಗ ಪಟ್ಟಣಶೆಟ್ಟಿ	೮-೦೦
೪.	ಪರದೇಸಿ ಹಾಡುಗಳು : ಕಾವ್ಯ	
	ಸಿದ್ಧಲಿಂಗ ಪಟ್ಟಣಶೆಟ್ಟಿ	೬-೦೦
೫.	ಸಮಕ್ಷಮ : ಲೇಖನಗಳು	
	ಯು. ಆರ್. ಅನಂತಮೂರ್ತಿ	೨೦-೦೦
೬.	ಅಲೆಗಳಲ್ಲಿ ರಾಜಹಂಸಗಳು : ನಾಟಕ	
	ಮೋಹನ್ ರಾಕೇಶ್/ಸಿದ್ಧಲಿಂಗ ಪಟ್ಟಣಶೆಟ್ಟಿ	೮-೦೦
೭.	ಆತ್ಮಭಾರತ : ಕಾವ್ಯ	
	ಅರವಿಂದ ನಾಡಕರ್ಣಿ	೭-೦೦
೮.	ಬಸವಣ್ಣನ ಬಯ್ಗುಳಗಳು? : ವಿಮರ್ಶೆ	
	ಸಿದ್ಧಣ್ಣ ಲಂಗೋಟಿ	೩-೦೦
೯.	ಮಾವ ಮತ್ತು ಇತರ ಕತೆಗಳು	
	ಸಿದ್ಧಲಿಂಗ ಪಟ್ಟಣಶೆಟ್ಟಿ	೬-೦೦
೧೦.	ಹೊನ್ನಪುರ : ಸ್ಮರಣ ಗ್ರಂಥ	
	ಸಂ : ಹೇಮಾ	೨೪-೦೦
೧೧.	ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್, ಇತ್ಯಾದಿ	
	ಶ್ರೀನಿವಾಸ ಹಾವನೂರ	೧೬-೦೦
೧೨.	ಗೋಪಾಲಗೌಡ ಶಾಂತವೇರಿ	
	ಎಚ್. ಸಿ. ವಿಷ್ಣುಮೂರ್ತಿ	೮-೦೦
೧೩.	ಗೋಪಾಲಗೌಡರ ಡೈರಿ, ಪತ್ರಗಳು ಇತ್ಯಾದಿ	
	ಸಂ : ಎಚ್. ಸಿ. ವಿಷ್ಣುಮೂರ್ತಿ	೭-೦೦

ಅನನ್ಯ ಪ್ರಕಾಶನ

೪೧/೧, ಥಿಯೋಬಾಲ್ಡ್ ರಸ್ತೆ,

ನಜರಾಬಾದ, ಮೈಸೂರು-೫೭೦ ೦೧೦

ಅಚ್ಚಿನಲ್ಲಿ

೧. ಪರಿವರ್ತನೆ : ಕತೆಗಳು
ಶಾಂತಿನಾಥ ದೇಸಾಯಿ

೨. ಅನುಶೀಲನ : ವಿಮರ್ಶೆ
ಸಿದ್ಧಲಿಂಗ ಪಟ್ಟಣಶೆಟ್ಟಿ

೩. ತೆರೆದಷ್ಟೇ ಬಾಗಿಲು : ಕತೆಗಳು
ಜಯಂತ ಕಾಯ್ಕಿಣಿ

೪. ಜಾತಿಯೇ ಸರ್ವಸ್ವ ಸಜ್ಜನರಿಗೆ : ನಾಟಕ
ವಿಜಯ ತೆಂಡೂಲಕರ್/ಹೇಮಾ

೫. ಅಂಜಿ : ನಾಟಕ
ವಿಜಯ ತೆಂಡುಲಕರ್/ಸಿದ್ಧಲಿಂಗ ಪಟ್ಟಣಶೆಟ್ಟಿ



ಪ್ರೊಫೆಸರ್ ಡಾಕ್ಟರ್ ಶ್ರೀನಿವಾಸ ಹಾವನೂರ ತಮ್ಮ ಸಂಪರ್ಕದಲ್ಲಿ ಬಂದ ಯಾವುದೇ ವಸ್ತು ವಿಷಯ ವ್ಯಕ್ತಿಗೂ ತಮ್ಮ ಹಾವನೂರತ್ವದ ಮುದ್ರೆಯನ್ನು ಒತ್ತದೇ ಬಿಡರು. ನನ್ನ ದೃಷ್ಟಿಯಲ್ಲಿ ಬೇಂದ್ರೆಯವರ ನಂತರ ಸಿರಗ್ಗಳ ಅಪ್ಪಟ ಉತ್ತರ ಕನ್ನಡತ್ವವನ್ನು ಎಲ್ಲೆಲ್ಲಿಯೂ ಉಳಿಸಿಕೊಂಡು ಬಂದಿರುವ ನಿಗರ್ವಿ ವಿದ್ವಾಂಸ ಈ ಹಾವನೂರ ಒಬ್ಬರೇ.

ಕಳೆದ ಎರಡು ದಶಕಗಳಿಂದ ಸಂಶೋಧನದ ಶ್ರೀಮಂತಿಕೆಗೆ ತಮ್ಮ ಬೌದ್ಧಿಕ ಹಾಗೂ ದೈಹಿಕ ಶಕ್ತಿಯನ್ನು ಧಾರೆಯೆರೆದ ಹಾವನೂರರ ನಿರಂತರ ಶ್ರಮದ ಶ್ರೇಷ್ಠ ಫಲಶ್ರುತಿ 'ಹೊಸಗನ್ನಡದ ಅರುಣೋದಯ'. ಏನೇ ಬರೆದರೂ ಆಳವಾದ ವ್ಯಾಸಂಗ ಮಾಡಿ ಮೌಲಿಕ ಅಂಶಗಳನ್ನು ಹೊರಗೆಡಹುವ ಪ್ರವೃತ್ತಿಯ ಇವರು ಬರೆದ. ಪ್ರಕಟಿಸಿದ ಮಹತ್ವದ ಲೇಖನಗಳು ಅಸಂಖ್ಯ. ಬಹುಶ್ರುತರಾದ ಹಾವನೂರರು ನೂರುನೂರು ಮಾಹಿತಿಗಳ ಪ್ರಾಮಾಣಿಕ ಆಗರ. ಕನ್ನಡದ ಕೆಲಸಕ್ಕೆಂದೇ ಎರಡು ಮೂರು ಬಾರಿ ವಿದೇಶ ಪ್ರವಾಸ ಮಾಡಿದ್ದಾರೆ. ಕಂಪ್ಯೂಟರನ್ನು ಕನ್ನಡ ಸಾಹಿತ್ಯದ ಕೈಂಕರ್ಯಕ್ಕೆ ಹೆದೆಗೂಡಿಸಿದ್ದು ಅವರ ವಿಶಿಷ್ಟ ಕಾಣಿಕೆ. ಈ ವಿಷಯದಲ್ಲಿ ಸಮಗ್ರ ಭಾರತಕ್ಕೇ ಅವರು ನೇತಾರರು.

ಹಲವು ಸಂಸ್ಥೆಗಳನ್ನು ತಮ್ಮ ಸಮರ್ಥ ಸೇವೆಯಿಂದ ಸುಸಜ್ಜಿತಗೊಳಿಸಿದ್ದ ಶ್ರೀನಿವಾಸರು ಈಗ ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರು. ಕನ್ನಡದ ಸರ್ವಾಂಗೀಣ ಪ್ರಗತಿ ಕಾರ್ಯದ ದೃಷ್ಟಿಯಿಂದ ಹಾವನೂರರ ನೇತೃತ್ವದಲ್ಲಿ ಮಂಗಳೂರು ವಿಶ್ವವಿದ್ಯಾಲಯ ಅಲ್ಪಾವಧಿಯಲ್ಲೆ ಎಲ್ಲರ ಗಮನ ಸೆಳೆಯಬಲ್ಲುದೆಂಬ ವಿಶ್ವಾಸ ನನಗಿದೆ.

ನಾವೀನ್ಯ. ಮೌಲಿಕತೆ ಹಾಗೂ ಸ್ವೋಪಜ್ಞತೆಯಿಂದ ಕೂಡಿದ ಹಾವನೂರರ ಹತ್ತೈವತ್ತು ಸಂಶೋಧನ ಲೇಖನಗಳಲ್ಲಿ ಕೆಲವನ್ನೆ ಒಳಗೊಂಡ ಈ ಸಂಕಲನ ಸಹ ಅವರ ವ್ಯಕ್ತಿತ್ವದ ಆಳ ವಿಸ್ತಾರ ಘನತೆಗಳನ್ನು ಸಹಜವಾಗಿಯೇ ತೋರುವಂತಿದೆ.

ವಿದ್ವಾಂಸರನ್ನೂ ದಂಗುಬಡಿಸುವ ವಿದ್ವತ್ತು, ಎಲ್ಲವನ್ನೂ ಒಳಬಾಚಿಕೊಳ್ಳುವ ಮಾನವೀಯತೆ. ಎಲ್ಲರನ್ನೂ ಬೆರಗುಗೊಳಿಸುವ ಅದ್ಭುತ ಶಿಶುಸಹಜ ಸಾರಳ್ಯ ಹೊಂದಿದ ಹಾವನೂರರು ಕನ್ನಡದ ಮುಖ್ಯರಲ್ಲಿ ಮುಖ್ಯರು.

— ಸಿದ್ಧಲಿಂಗ ಪಟ್ಟಣಶೆಟ್ಟಿ